ಲಿಂಗ-ಜಾತಿ ಹಿನ್ನೆಲೆಯಲ್ಲಿ ಪ್ರಾತಿನಿಧಿಕ ಆತ್ಮಕಥೆಗಳ ಸಾಮಾಜಿಕ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.)ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಹೇಮಾವತಿ ಸಿ.ಎಚ್.

ಮಾರ್ಗದರ್ಶಕರು
ಡಾ.ಸಾಂಬಮೂರ್ತಿ
ಸಹಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೫

ಲಿಂಗ-ಜಾತಿ ಹಿನ್ನೆಲೆಯಲ್ಲಿ ಪ್ರಾತಿನಿಧಿಕ ಆತ್ಮಕಥೆಗಳ ಸಾಮಾಜಿಕ ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.)ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಹೇಮಾವತಿ ಸಿ.ಎಚ್.

ಮಾರ್ಗದರ್ಶಕರು
ಡಾ.ಸಾಂಬಮೂರ್ತಿ
ಸಹಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೪

ಘೋಷಣಾ ಪತ್ರ

ಡಾ.ಸಾಂಬಮೂರ್ತಿ, ಸಹ ಪ್ರಾಧ್ಯಾಪಕರು, ಕನ್ನಡ ಭಾಷಾಧ್ಯಯನ ವಿಭಾಗ ಇವರ ಮಾರ್ಗದರ್ಶನದಲ್ಲಿ **'ಲಿಂಗ-ಜಾತಿ ಹಿನ್ನೆಲೆಯಲ್ಲಿ ಪ್ರಾತಿನಿಧಿಕ ಆತ್ಮಕಥೆಗಳ ಸಾಮಾಜಿಕ ವಿಶ್ಲೇಷಣೆ'** ಎಂಬ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ **ಕನ್ನಡ ಸಾಹಿತ್ಯ ಅಧ್ಯಯನ** ವಿಭಾಗಕ್ಕೆ ಸಾದರಪಡಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಹೇಮಾವತಿ ಸಿ.ಎಚ್.
ಸಂಶೋಧನ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : 30/1/15

ಮಾರ್ಗದರ್ಶಕರ ಪ್ರಮಾಣ ಪತ್ರ

ಹೇಮಾವತಿ ಸಿ.ಎಚ್. ಅವರು ನನ್ನ ಮಾರ್ಗದರ್ಶನದಲ್ಲಿ **ಕರ್ನಾಟಕದ 'ಲಿಂಗ-ಜಾತಿ ಹಿನ್ನೆಲೆಯಲ್ಲಿ ಪ್ರಾತಿನಿಧಿಕ ಆತ್ಮಕಥೆಗಳ ಸಾಮಾಜಿಕ ವಿಶ್ಲೇಷಣೆ'** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ.ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಸಾಂಬಮೂರ್ತಿ
ಮಾರ್ಗದರ್ಶಕರು ಹಾಗೂ ಸಹ ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: 30.1.2015

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವೈಧಾನಿಕತೆ

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

೧.೫. ಈವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧.ಪೀಠಿಕೆ

ವಿಶ್ವಕೋಶವು ಆತ್ಮಕಥೆಯ ಬಗ್ಗೆ ತನ್ನ ಬಗ್ಗೆ ಬರೆದ ಚರಿತ್ರೆ ಎನ್ನುತ್ತದೆ. ಆತ್ಮಕಥೆ ಎಂದರೆ ಸ್ವ-ಕಥೆ. ಜೀವನದ ವಿವಿಧ ಅನುಭವಗಳ ಕತೆ. ವ್ಯಕ್ತಿಗಳ ವ್ಯಕ್ತಿತ್ವಕ್ಕನುಗುಣವಾಗಿ ನಿರೂಪಣೆಯಾಗಿರುವ ಕಥೆ. ಮೇಲ್ನೋಟಕ್ಕೆ ಸ್ವ-ಕಥೆಯಾದರೂ ಆತ್ಮದ ಕಥೆಯೇ ಆಗಿದೆ. ಆತ್ಮ ಅಮೂರ್ತವಾದದ್ದು. ಇಲ್ಲಿ ಆತ್ಮ ಎಂದ ಕೂಡಲೇ ಅದನ್ನು ಆಧ್ಯಾತ್ಮ ಎಂದು ಭಾವಿಸ ಬೇಕಾಗಿಲ್ಲ. ಏಕೆಂದರೆ ಆತ್ಮಹತ್ಯೆ, ಆತ್ಮವಿಮರ್ಶೆ ಇವೆಲ್ಲವೂ ಸಮಾಜದಲ್ಲಿ ಬಳಸುವ ಸಾಮಾಜಿಕ ಪದಗಳೇ ಆಗಿವೆ. ಆತ್ಮದ ಜೊತೆಗೆ ಇರುವ ಕೆಲವು ಪದಗಳಿಂದ ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಉದಾಹರಣೆಗೆ ಆತ್ಮಹತ್ಯೆ ತನಗೆ ತಾನೇ ಕೇಡು ಮಾಡುವುದು. ಆತ್ಮ ಕೌಶಲ-ಜಾಣತನ, ಆತ್ಮಗೌರವ-ಸ್ವಾಭಿಮಾನ, ಆತ್ಮ ದರ್ಶನ-ಸಾಕ್ಷಾತ್ಕಾರ, ಆತ್ಮ ನಿರ್ವಾಣ-ಮೋಕ್ಷ, ಆತ್ಮ ನಿವೇದನೆ-ಭಗವಂತನಲ್ಲಿ ತನ್ನನ್ನು ಅರ್ಪಿಸಿಕೊಳ್ಳುವುದು, ಆತ್ಮ ರಕ್ಷಣೆ, ಆತ್ಮ ವಂಚನೆ, ಆತ್ಮೋನ್ನತಿ ಇತ್ಯಾದಿ.

ಆತ್ಮ ಒಂದು ಶಕ್ತಿ, ಹೇಗೆಂದರೆ ಮುಪ್ಪು ಸಾವುಗಳಿಂದ ಅತೀತವಾದದ್ದು. ಆತ್ಮ ಎಂದರೆ ಶರೀರದಲ್ಲಿದ್ದು, ಶರೀರಕ್ಕಿಂತ ಭಿನ್ನವಾಗಿದ್ದು, ಶರೀರವನ್ನು ಮುನ್ನಡೆಸುವಂಥದ್ದು. ಪ್ರತಿಯೊಂದು ಕಣಕಣವೂ ಆತ್ಮವೇ. ಅಹಲ್ಯೆ ಕಲ್ಲಾಗಿದ್ದಳು ಅನ್ನುತ್ತದೆ ಪುರಾಣ. ಹಾಗಾದರೆ ಕಲ್ಲಲ್ಲೂ ಒಂದು ಆತ್ಮ ಇತ್ತು ಎಂದು ನಮಗರ್ಥವಾಗುತ್ತದೆ. ನಾವು ನಮಗೆ ಕಂಡಷ್ಟು ಮಾತ್ರ ಸತ್ಯ ಎಂದು ಒಪ್ಪಿಕೊಳ್ಳುತ್ತೇವೆ. ಕಾಣುವ ಸಂಗತಿಗಳು ನಮ್ಮ ಜೀವನವನ್ನು ಹೇಗೆ ರೂಪಿಸುತ್ತವೋ ಹಾಗೆಯೇ ಕಾಣದಿರುವ ಸಂಗತಿಗಳು, ಅರಿವಿಗೆ ಬಾರದಿರುವ ಸಂಗತಿಗಳು ಬೇಕಾದಷ್ಟು ನಮ್ಮ ಜೀವನವನ್ನು ರೂಪಿಸುತ್ತವೆ. ಹೇಗೆಂದರೆ ನಾವು ಮುಂಬೈಯನ್ನು ನೋಡಿಲ್ಲ ಎಂದ ಮಾತ್ರಕ್ಕೆ ಮುಂಬೈ

ಅಂತ ಊರಿಲ್ಲ ಎಂದರೆ ಹೇಗೋ ಹಾಗೆ. ಅದೇ ರೀತಿ ಭಾವನೆಗಳು ಅಮೂರ್ತವಾಗಿರುತ್ತದೆ. ಈ ಅಮೂರ್ತವಾದದ್ದು ವ್ಯಕ್ತಿ ಸನ್ನಿವೇಶ, ಸಂದರ್ಭಕ್ಕನುಗುಣವಾಗಿ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗಿರುತ್ತದೆ.

ದೇಹಕ್ಕೆ ಪೋಷಣೆ ಬೇಕಾಗಿರುವುದು ನಮಗೆಲ್ಲಾ ಗೊತ್ತಿದೆ. ಅದೇ ರೀತಿ ಮನಸ್ಸು ಮತ್ತು ಆತ್ಮಕ್ಕೆ ಪೋಷಣೆಯ ಅಗತ್ಯವಿದೆ. ಆತ್ಮ ದೇಹದಿಂದ ಮಾತ್ರವಲ್ಲ ಮನಸ್ಸಿನಿಂದಲೂ ಬೇರೆಯಾಗಿದೆ. ನೈತಿಕ ಜೀವನ ಮತ್ತು ಆಧ್ಯಾತ್ಮಿಕ ಸಾಧನೆಗಳನ್ನು ಮಾಡುತ್ತಾ ಹೋದಾಗ ಆತ್ಮವು ದೇಹದಿಂದ ಬೇರೆಯೆಂಬುದರ ಸೂಕ್ಷ್ಮ ಪ್ರಜ್ಞೆ ಉಂಟಾಗುತ್ತದೆ. ಮನಸ್ಸು, ಹೃದಯಗಳ ಪವಿತ್ರತೆ ದೇಹದ ಮೂಲಕ ಬೆಳಗುತ್ತದೆ. ಇದು ವ್ಯಕ್ತಿಯ ವ್ಯಕ್ತಿತ್ವವನ್ನು ಹೇಳುತ್ತದೆ. ಅದೇ ರೀತಿ ವ್ಯಕ್ತಿಯ ಬರವಣಿಗೆಗೂ ವ್ಯಕ್ತಿತ್ವಕ್ಕೂ ಸಂಬಂಧವಿದೆ. ಆತ್ಮಕಥೆಯ ಮೂಲಕ ವ್ಯಕ್ತಿಯ ವ್ಯಕ್ತಿತ್ವ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ದೇಹ ಮತ್ತು ಮನಸ್ಸಿನ ಮೂಲಕ ಸ್ವೀಕರಿಸುವ ಆಹಾರ, ಆಹಾರಕ್ಕನುಗುಣವಾಗಿ ದೇಹ ಮತ್ತು ಸೂಕ್ಷ್ಮ ಶರೀರದ ನಿರ್ಮಾಣವಾಗುತ್ತದೆ. ಧ್ಯಾನ ಮತ್ತು ಜಪ ಮನಸ್ಸಿಗೆ ವಿಶ್ರಾಂತಿಯನ್ನು ಕೊಡುತ್ತದೆ. ಇದರಿಂದ ಮನಸ್ಸು ಎಲ್ಲಾ ಶಕ್ತಿಗಳ ಮೂಲವಾದ ಆತ್ಮನೆಡೆಗೆ ಹರಿಯುತ್ತದೆ.

ಕೆಲವೊಮ್ಮೆ ನಾವು ದೇಹ ಎಂದು ಭಾವಿಸಿ ಅಲ್ಲಿ ನೋವಾಗುತ್ತದೆ, ಇಲ್ಲಿ ನೋವಾಗುತ್ತದೆ ಎಂದು ಹೇಳುತ್ತೇವೆ. ನಾವು ಮನಸ್ಸು ಎಂದು ಭಾವಿಸಿ ನನಗೆ ಚಿಂತೆಯಾಗಿದೆ, ವ್ಯಥೆಯಾಗಿದೆ ಎಂದೆಲ್ಲಾ ಹೇಳುತ್ತೇವೆ. ಆತ್ಮ ಎಂದು ತಿಳಿದವರು ಎಲ್ಲಾ ಭಗವದಿಚ್ಛೆ ಎಂದು ಹೇಳುತ್ತೇವೆ. ಆತ್ಮ, ದೇಹ, ಮನಸ್ಸಿನ ಸಮತೋಲನವಿದ್ದಾಗ ವಿವೇಕಾನಂದರಂಥಹ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಉತ್ತಮ ವ್ಯಕ್ತಿತ್ವದಿಂದ ಸ್ವಾಸ್ಥ್ಯ ಸಮಾಜ ನಿರ್ಮಾಣವಾಗುತ್ತದೆ. ನೈತಿಕತೆ ಅಧಃಪತನಗೊಳ್ಳಲು ಆತ್ಮವನ್ನು ಕಡೆಗಣಿಸಿರುವುದು ಒಂದು ಕಾರಣವಾಗಿದೆ. ಇದರ ಆತ್ಮಾವಲೋಕನದ ಅಗತ್ಯವಿದೆ. ಕೇವಲ ದೇಹದ ಆರೋಗ್ಯಕ್ಕೆ ಮಾತ್ರ ಗಮನ ಕೊಟ್ಟಾಗ ಮನಸ್ಸು ಮತ್ತು ಆತ್ಮದ ಆರೋಗ್ಯ ಗೌಣವಾಗುತ್ತದೆ. ಆತ್ಮವನ್ನು ನಂಬದವರು ಅಥವಾ ಆತ್ಮವೇ ಇಲ್ಲ ಎನ್ನುವವರು ಹೇಗೆ ಅದನ್ನು ಪೋಷಿಸಲು ಸಾಧ್ಯ. ಆದರೆ ವಾಸ್ತವದಲ್ಲಿ ಆತ್ಮವನ್ನು ನಂಬದವರೂ ಕೂಡ ದೇಹದಿಂದ ಆತ್ಮ ಬೇರೆಯಾದ ಸಂದರ್ಭದಲ್ಲಿ ಆತ್ಮಕ್ಕೆ ಶಾಂತಿ ಸಿಗಲಿ ಎಂಬ ಮಾತಾಡುತ್ತಾರೆ. ವ್ಯಕ್ತಿತ್ವ–ದೇಹ, ಮನಸ್ಸು, ಬರವಣಿಗೆ ಹೇಗೆ ಒಂದಕ್ಕೊಂದು ಅಂತರಸಂಬಂಧವಿದೆ. ಈ ಅಂತರಸಂಬಂಧ ಯಾವ ರೀತಿಯಲ್ಲಿದೆ, ಸಮತೋಲನದಲ್ಲಿಯೇ? ಅಥವಾ ಇಲ್ಲವೆ ಎಂಬುದೂ ಬರವಣಿಗೆಯಲ್ಲಿ ವ್ಯಕ್ತವಾಗುತ್ತದೆ. ವಿವೇಕಾನಂದರಂಥವರು ತಮ್ಮ ಆತ್ಮ, ದೇಪ ಮತ್ತು ಮನಸ್ಸನ್ನು ಸಮತೋಲನದಲ್ಲಿ ಇಟ್ಟು ಕೊಂಡಿರುವುದು ಕಂಡುಬರುತ್ತದೆ.

ಆತ್ಮೋದ್ಧಾರ ಎಂದರೇನು?ಅದನ್ನು ಮೊದಲು ಅರ್ಥಮಾಡಿಕೊಳ್ಳಬಹುದಾದರೆ, ತನ್ನನ್ನು ತಾನು ಉದ್ಧಾರ ಮಾಡಿಕೊಳ್ಳುವುದು ಹಾಗೆಂದರೆ ದೇಹಕ್ಕೋ? ಮನಸ್ಸಿಗೋ? ಆತ್ಮಕ್ಕೋ?

ನಿತ್ಯ ಜೀವನದಲ್ಲಿ ನಾವು ಅದೆಷ್ಟೋ ವೇಳೆ ನಾನು ಚೆನ್ನಾಗಿದ್ದೇನೆ, ನಾನು ಕಷ್ಟದಲ್ಲಿ ಸಿಲುಕಿದ್ದೇನೆ, ನಾನು ಏನನ್ನೂ ಮಾಡಬಲ್ಲೆ ಎಂದೆಲ್ಲ ಹೇಳುತ್ತೇವೆ. ಆಗೆಲ್ಲ ಉಲ್ಲೇಖಿಸುವ 'ನಾನು' ಯಾರು? ಅಪರಾಧದ ತನಿಖೆ ನಡೆಸುವ ಪೋಲಿಸರು ದೊರೆತ ಯಾವುದೇ ಸುಳಿವಿನ ಜಾಡನ್ನು ಹಿಡಿದು ಅಪರಾಧಿಯನ್ನು ಪತ್ತೆ ಹಚ್ಚುವಂತೆ ನಾವು ಈ ರೀತಿ ಪತ್ತೇದಾರಿಕೆಗೆ ಹೊರಟರೆ ನಾವು ತಲುಪುವುದು ನಮ್ಮ ಜೀವನಲೀಲೆ ನಡೆಸುವ ನಮ್ಮ ಆಂತರ್ಯದಲ್ಲಿನ ಚೈತನ್ಯದ ನೆಲೆಯನ್ನೇ. ಈ ಚೈತನ್ಯ ನಮಗೆ ಗೊತ್ತಿಲ್ಲದೆ ನಮ್ಮ ದೇಹದ ಕೆಲಸಗಳನ್ನು ಮಾಡುತ್ತದೆ. ಎಂಜಲು ನುಂಗುವ, ಕಣ್ಣು ರೆಪ್ಪೆ ಬಡಿಯುವ, ಜೀರ್ಣಕ್ರಿಯೆ ಮಾಡುವ/ ಹೃದಯದ ಬಡಿತ ಹೀಗೇ ಎಷ್ಟೋ ಕ್ರಿಯೆಗಳಿಂದ ದೇಹವನ್ನು ಮುನ್ನಡೆಸುತ್ತಿರುತ್ತದೆ.

ಮನುಷ್ಯನಲ್ಲಿ ದೇಹ, ಮನಸ್ಸು, ಆತ್ಮ ಮೂರು ಇದೆ. ಆತ್ಮ ಶಾಶ್ವತವಾದದ್ದು. ದೇಹ ಮನಸ್ಸು ನಶ್ವರವಾದದ್ದು ಜಡವಾದದ್ದು. ಆತ್ಮ ಚೈತನ್ಯಯುಕ್ತವಾದದ್ದು. ದೇಹ ಮನಸ್ಸು ಜಡವಾದದ್ದು. ಆತ್ಮಕ್ಕೆ ದೇಹದ ಹಂಗಿಲ್ಲ. ದೇಹವಿಲ್ಲದೆ ಮನಸ್ಸನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯವಾದುದು. ದೇಹ ಮತ್ತು ಆತ್ಮದ ಸಂಬಂಧ ನಮಗೆಲ್ಲ ಗೊತ್ತಿದೆ. ಭಾರತೀಯ ಸಂಸ್ಕೃತಿ ಆತ್ಮನ ಮಟ್ಟಕ್ಕೆ ಏರಿದುದು. ಅದಕ್ಕೇ ಭಾರತ ಯೋಗ ಭೂಮಿ ಎಂತಲೂ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಭೋಗ ಭೂಮಿಯೆಂತಲೂ ಕರೆಯುತ್ತಾರೆ. ವಿದೇಶಿ ಸಂಸ್ಕೃತಿ ಕೇವಲ ದೇಹ ಕೇಂದ್ರಿತವಾದದ್ದು (ವ್ಯಕ್ತಿ ಕೇಂದ್ರಿತ), ಆತ್ಮನ ಮಟ್ಟಕ್ಕೆ ಏರಿದಾಗ ಮನುಷ್ಯನ ಅಹಂ ನಾಶವಾಗುತ್ತದೆ. ಈ ಅಹಂ ನಾಶವಾದಾಗ ವ್ಯಕ್ತಿಯನ್ನು ಮೀರಿದ ಅಗೋಚರ ಶಕ್ತಿ ಅಂದರೆ ಆತ್ಮ ಮುನ್ನಡೆಸುವುದು ಗೊತ್ತಾಗುತ್ತದೆ. ಅಂತಹ ಸಂದರ್ಭದಲ್ಲಿ 'ವೀರನಾರಾಯಣನೇ ಕವಿ', 'ಲಿಪಿಕಾರ ಕುಮಾರವ್ಯಾಸ ದಂತಹ' ಮಾತುಗಳು ಬರುತ್ತದೆ. ಇದನ್ನು ಇನ್ನೂ ಸರಳೀಕರಿಸುವುದಾದರೆ ನಮಗೆ ಬರೆಯಲು ಪೆನ್ನು ಮುಖ್ಯ ಆದರೆ ಕೇವಲ ಪೆನ್ನಿನಿಂದ ಏನೂ ಸಾಧ್ಯವಿಲ್ಲ. ಇದನ್ನು ಬರೆಯುವ ಕೈ ಅಂದರೆ ವ್ಯಕ್ತಿ ಬೇಕಾಗುತ್ತದೆ. ಇಲ್ಲಿ ಪೆನ್ನು ಮತ್ತು ವ್ಯಕ್ತಿಯಲ್ಲಿ ಯಾವುದು ಮುಖ್ಯ ಎಂಬ ಪ್ರಶ್ನೆಗೆ ಬರೆಯುವ ಕೈ ಇದ್ದರೆ ಪೆನ್ನು ಇಲ್ಲದಿದ್ದರೂ ಪೆನ್ಸಿಲ್‌ನಲ್ಲೂ ಬರೆಯಬಹುದು. ಇದು ಅರಿವಾದವರು 'ವೀರನಾರಾಯಣನೇ ಕವಿ', 'ಲಿಪಿಕಾರ ಕುಮಾರವ್ಯಾಸದಂತಹ' ಸಾಲು ಬರೆಯಲು ಸಾಧ್ಯವಾಗುವುದು. ವ್ಯಕ್ತಿ ಇಲ್ಲದೇ ಪೆನ್ನು ತಾನೇ ಬರೆದೆ ಎಂದರೆ ಎಷ್ಟು ಹಾಸ್ಯಾಸ್ಪದವೋ ಹಾಗೆಯೇ. ಆತ್ಮನ ಹಂತಕ್ಕೇರಿದವರು ತನ್ನ ಅಹಂ ಕಳೆದುಕೊಳ್ಳಲು ಕಂಡುಕೊಂಡ ಮಾರ್ಗ ಎಂಬುದು ನನ್ನ ಅಭಿಪ್ರಾಯ.

ಆತ್ಮಾನುಭವ: ಒಂದೇ ತಾಯಿಯ ಮಕ್ಕಳಾದರೂ ಗಂಡು ಅಥವಾ ಹೆಣ್ಣು ಒಂದೇ ಪರಿಸ್ಥಿತಿಯಲ್ಲಿದ್ದರೂ, ಒಬ್ಬರ ಅನುಭವ ಮತ್ತೊಬ್ಬರದಂತಿಲ್ಲ. ಒಂದೇ ತಾಯಿಯ ಎರಡು ಹೆಣ್ಣಿನ ಅನುಭವಗಳು ಬೇರೆಯಾಗಿರುವುದನ್ನು ನೋಡುತ್ತೇವೆ. ಅದಕ್ಕೆ ಒಂದೇ ಪರಿಸ್ಥಿತಿ (ಶಾಲೆ) ಒಂದೇ ಜಾತಿಯ ಇಬ್ಬರು ಮಕ್ಕಳ ಅನುಭವಗಳು ಬೇರೆ. ದೇಹದಲ್ಲಿ ಆತ್ಮ ಇದ್ದಾಗಲೇ ಅದಕ್ಕೆ ಬೆಲೆ ಅದೂ ಮನುಷ್ಯ ಜನ್ಮದಲ್ಲಿ. ಆತ್ಮ ಇಲ್ಲದ ದೇಹಕ್ಕೆ ಬೆಲೆಯಿಲ್ಲ ಆದ್ದರಿಂದ ಅದನ್ನು ಸಂಸ್ಕಾರ (ಸುಡುವುದು/ಹೂಳುವುದು) ಮಾಡಬೇಕೆಂಬ ಕಾರಣಕ್ಕೆ ಸತ್ತವರು ದೇವರ ಸಮಾನ ಎಂಬ ನಂಬಿಕೆ ನಮ್ಮಲ್ಲಿದೆ. ಇಲ್ಲಿ ಆತ್ಮಾನುಭವ ಎಂದು ಹೇಳಿದರೂ ಇದು ಸಾಮಾಜಿಕವೇ ಆಗಿದೆ. ಈ ಅನುಭವ ಕೂಡ ಸಮಾಜದಿಂದಲೇ ಬರುವುದಾಗಿದೆ.

ಈ ದೇಹ ಜಡವಾದದ್ದು ಮತ್ತು ಸುಖವನ್ನು ಬಯಸುವಂಥದ್ದು. ಹೇಗೆಂದರೆ ನಿಂತರೆ ಕುಳಿತುಕೊಳ್ಳಲು ಆಸೆ ಪಡುವ, ಕೂತರೆ ಒರಗುವ, ಒರಗಿದರೆ ಮಲಗುವ, ಮಲಗಿದರೆ ಚಾಪೆಯನ್ನು ಬೇಡುವ, ಚಾಪೆ ಸಿಕ್ಕರೆ ಹಾಸಿಗೆ ಬೇಡುವಂತದ್ದು. ದೇಹದಲ್ಲಿ ಚೈತನ್ಯ ಯಾವಾಗ ಸೇರಿಕೊಳ್ಳುತ್ತೋ ಅದೇ ಮನುಷ್ಯ. ಅದಲ್ಲದಿದ್ದರೆ ಅದು ಶವ. ಈ ಜೀವದಲ್ಲಿ ಮನಸ್ಸು ಇದೆ. ಇದರ ಗುಣಗಳೆಂದರೆ ಅತ್ಯಂತ ವೇಗವಾಗಿಯೂ, ಸೂಕ್ಷ್ಮವಾಗಿಯೂ, ಚಂಚಲವಾಗಿಯೂ ಇದೆ. ಇದನ್ನೇ ಕೆಲವರು 'ಮಾಯೆ' ಎಂದು ಕರೆದರು. ಈ ಮಾಯೆ ಹೊರಗಡೆ ಇರುವುದಲ್ಲ. ನಮ್ಮೊಳಗೇ ಇರುತ್ತದೆ. ನಮ್ಮ ಮನಸ್ಸು ಚಂಚಲವಾಗಿರುವುದರಿಂದ ಜಗತ್ತು ಆಕರ್ಷಕವಾಗಿ ಕಾಣುತ್ತದೆ. ಎಲ್ಲರೂ ಜಗತ್ತು ಮಾಯೆ ಎಂದರು. ಹೂವು ದೇಹವಾದರೆ ಅದರಲ್ಲಿರುವ ಸುಗಂಧ ಮನಸ್ಸಿನಂತೆ. ಸುಗಂಧ ಹೂವಿನಲ್ಲೂ ಇರುತ್ತೆ. ಹೂವಿನಿಂದ ಹೊರಗಡೆಯೂ ಇರುತ್ತೆ. ಈ ಜ್ಞಾನದ ಅಭಾವ ಇರುವುದರಿಂದ ದೇಹ ಜಡವಾದ ಹಾಗೆ ಅನ್ನಿಸುತ್ತದೆ. ಜ್ಞಾನಪೂರ್ಣವಾದ ಆತ್ಮನು ಚೈತನ್ಯನಾಗಿದ್ದಾನೆ. ದೇಹವು ಎಂದೂ ಆತ್ಮವಲ್ಲ. ಆತ್ಮೋದ್ಧಾರಕ್ಕೆ ದೇಹ ಬೇಕಾಗುತ್ತದೆ. ದೇಹದಿಂದ ದೂರಾದ ಆತ್ಮಗಳು ಇವೆ. ಅದನ್ನೇ ಪ್ರೇತ ಎನ್ನುತ್ತೇವೆ. ಪ್ರೇತ ಸಮಾಜದಿಂದಲೇ ನಿರ್ಮಾಣವಾಗಿ ಅದರ ಪ್ರಭಾವ ಅಥವಾ ಪರಿಣಾಮ ಸಮಾಜದ ಮೇಲೆಯೇ ಆಗುತ್ತದೆ.

ಮಣ್ಣಿನ ಮೂರ್ತಿಗಳಿಗೆ ಹೆಣ್ಣು ಗಂಡು ರೂಪವಿದೆ. ಆದರೆ ಮೂರ್ತಿಗೆ ಆಧಾರವಾದ ಮಣ್ಣಿಗೆ ಹೇಗೆ ರೂಪವಿಲ್ಲವೋ ಹಾಗೆ ಆತ್ಮಕ್ಕೂ ರೂಪವಿಲ್ಲ. ದೇಹದ ರೂಪವನ್ನೇ ಆತ್ಮದ ರೂಪ ಎಂದು ತಿಳಿದಿದ್ದೇವೆ. ಮನಸ್ಸಿಗೆ ದೇಹದಂತೆ ನಿರ್ದಿಷ್ಟ ರೂಪವಿಲ್ಲದಿದ್ದರೂ ಸೂಕ್ಷ್ಮ ರೂಪ ಇದ್ದೇ ಇದೆ. ಮನಸ್ಸು ದೇಹದಂತೆ ವಿಕಾರಕ್ಕೆ ಒಳಗಾಗುತ್ತದೆ. ದೇಹ ಮತ್ತು ಮನಸ್ಸು ಎರಡೂ ಜಡವಾಗಿರುವುದರಿಂದ ಒಂದರ ಪರಿಣಾಮ ಇನ್ನೊಂದರ ಮೇಲಾಗುತ್ತಿರುತ್ತದೆ.

ದೇಹಕ್ಕೆ ರೋಗ ರುಜಿನಗಳಾದರೆ ಮನಸ್ಸಿಗೆ ವೇದನೆಯಾಗುತ್ತದೆ. ಮನಸ್ಸಿನ ಚಿಂತೆಗಳು ಕಾಯಿಲೆಗಳಾಗಿ ಕಾಡುವುದು ಎಲ್ಲರ ಅನುಭವವಾಗಿದೆ. ಅವೆಲ್ಲವೂ ಭಾವನಾತ್ಮಕವಾದದ್ದು. ಖ್ಯಾತ ಮನೋವಿಜ್ಞಾನಿ ವಿಕ್ಟರ್ ಫ್ರಾಂಕ್ಲಿನ್ ನಾಜಿ ಶಿಬಿರದ ತಮ್ಮ ಅನುಭವ ಕಥನದಲ್ಲಿ, ಶಿಬಿರಾರ್ಥಿಗಳು ಅವರ ನಿರಾಸೆಗೊಂಡ ಮನಸ್ಸಿನ ಕಾರಣವಾಗಿ ಟೈಫಾಯಿಡ್ ಮತ್ತು ಇನ್ನಿತರ ರೋಗಗಳಿಂದ ಸಾವನ್ನಪ್ಪುತ್ತಿದ್ದರು' ಎಂದು ಉಲ್ಲೇಖಿಸುತ್ತಾರೆ. ನಾವು ಮನದ ಹಂತದಲ್ಲಿ ಇರುವವರೆಗೆ ನಮಗೆ ಪ್ರಾಪಂಚಿಕ ವೇದನೆಯು ಇರುತ್ತದೆ. ಆತ್ಮನ ಹಂತಕ್ಕೆ ಏರಿದಾಗ ಅಲ್ಲಿ ನೋವಿಲ್ಲ. ಇರುವುದೆಲ್ಲಾ ನಲಿವೇ.

ಮನಸ್ಸಿನ ಸಂಸ್ಕಾರಕ್ಕೆ ಅನುಸರಿಸಿ ಅವರವರ ಜೀವನದ ರೀತಿ–ನೀತಿ, ನಡೆ ನುಡಿ ರೂಪುಗೊಳ್ಳುತ್ತದೆ. ಘಟನೆ ಒಂದೇ ಆದರೂ ಅವರವರ ಸಂಸ್ಕಾರಕ್ಕೆ ತಕ್ಕಂತೆ ಅವರು ಗ್ರಹಿಸುತ್ತಾರೆ. ಅಧ್ಯಾತ್ಮ ಎಂದರೆ ಪ್ರಪಂಚವನ್ನು ತೊರೆಯುವುದಲ್ಲ. ಪ್ರಪಂಚದಲ್ಲಿ ತೇಲುವುದು ಅಥವಾ ತಾವರೆ ಎಲೆಯ ಹಾಗೆ ನೀರಿಗೆ ಅಂಟಿಕೊಳ್ಳದಿರುವುದು. ಈ ಪ್ರಪಂಚದಲ್ಲಿ ಅವರವರಿಗೆ ಅನುಗುಣವಾಗಿ ತೇಲಿದರೂ ಸುಖ (ಲೌಕಿಕ/ಆಧ್ಯಾತ್ಮ) ಸಿಗಬಹುದು. ಆದರೆ ನೆಮ್ಮದಿ ಮನಃಶಾಂತಿ ಅಲ್ಲ. ಸುಖ ಬೇರೆ ನೆಮ್ಮದಿ ಬೇರೆ. ನೆಮ್ಮದಿ ಇರುವವರಿಗೆ ಸುಖ ಇರುತ್ತದೆ. ಸುಖ ಇದ್ದವರಿಗೆ ನೆಮ್ಮದಿ ಇರಬೇಕೆಂದೇನಿಲ್ಲ. ಹೀಗೆ ಒಬ್ಬ ವ್ಯಕ್ತಿಯ ಮನಸ್ಥಿತಿಗೂ ವ್ಯಕ್ತಿತ್ವಕ್ಕೂ ಸಂಬಂಧವಿದೆ. ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವ ಹಾಗೆ ಇಂದಿನ ನಡೆ–ನುಡಿ ಮುಂದಿನ ವ್ಯಕ್ತಿತ್ವಕ್ಕೆ ನಾಂದಿಯಾಗುತ್ತದೆ. ಈ ವ್ಯಕ್ತಿತ್ವದ ಪರಿಣಾಮ ಸಮಾಜದ ಮೇಲೆ ನೇರವಾಗಿ ಪರಿಣಾಮ ಉಂಟು ಮಾಡುತ್ತದೆ. ವ್ಯಕ್ತಿತ್ವಕ್ಕೂ ಸಮಾಜದ ಸ್ವಾಸ್ಥ್ಯಕ್ಕೂ ಅಂತರ್ ಸಂಬಂಧವಿದೆ.

ಮನುಷ್ಯ ಕೂಡ ಪ್ರಕೃತಿಯ ಒಂದು ಭಾಗ. ಈ ಇಡೀ ಪ್ರಕೃತಿಯನ್ನು ಒಂದು ಅಗೋಚರ ಶಕ್ತಿ ಮುನ್ನಡೆಸುತ್ತಿರುತ್ತದೆ. ಎಲ್ಲವೂ ನಾವೆಂದುಕೊಂಡ ಹಾಗೆ ನಡೆದರೆ ನಾವೇ ಮಾಡುತ್ತೇವೆ. ನನ್ನಿಂದ ನಡೆಯುತ್ತದೆ ಎನ್ನುವ ಭ್ರಮೆಯಲ್ಲಿ ಮನುಷ್ಯ ಇರುತ್ತಾನೆ. ಅವನನ್ನು ಮೀರಿ ಯಾವ ಘಟನೆ ನಡೆಯುತ್ತೋ ಆಗ ಅಗೋಚರ ಶಕ್ತಿಯನ್ನು ನಂಬುತ್ತಾನೆ. ಎಲ್ಲಾ ಘಟನೆಯ ಅಧಿಪತಿ ಆ ಶಕ್ತಿ. ಈ ಆತ್ಮ ಮತ್ತು ದೇಹದ ಮೀಮಾಂಸೆಯ ಹಿನ್ನಲೆಯಲ್ಲಿ ಹೀಗೆ ಹೇಳಬಹುದು. ಎಲ್ಲಾ ಜೀವಿ ಮತ್ತು ಮನುಷ್ಯರ ಆತ್ಮಗಳೂ ಆತ್ಮಕಥೆ ಬರೆಯಬೇಕೆಂದೇನೂ ಇಲ್ಲ. ಬರೆಯದಿದ್ದರೂ ಆತ್ಮಕ್ಕೆ ಕಥೆ ಇದೆ.

* ಕೆಲವು ಆತ್ಮಗಳು ಕಥೆ ಬರೆಯುತ್ತವೆ (ಆತ್ಮಕಥೆ)

* ಕೆಲವು ಆತ್ಮಗಳು ಕಥೆ ಹೇಳುತ್ತವೆ (ನಿರೂಪಣಾತ್ಮಕ ಆತ್ಮಕಥೆ)

* ಕೆಲವು ಆತ್ಮಗಳು ತಮ್ಮ ಕಥೆಯನ್ನು ಅನುಭವಿಸುತ್ತವೆ ಮಾಧ್ಯಮದಲ್ಲಿ ಪ್ರಕಟವಾಗುವ ವಿಷಯಗಳು ಮತ್ತು ಘಟನೆಗಳು
* ಹೇಳುವುದು, ಬರೆಯುವುದು, ಅನುಭವಿಸುವುದು ಈ ಮೂರು ಸ್ವರೂಪವೂ ಆತ್ಮಕಥೆಗಳೇ.

ಬರವಣಿಗೆ ಮೂರ್ತವಾದರೆ ಹೇಳುವುದು, ಅನುಭವಿಸುವುದು, ಒಂದು ದೃಷ್ಟಿಯಲ್ಲಿ ಆತ್ಮಕಥೆಯೇ. ಹೇಳುವ ಆತ್ಮಕಥೆಗಳು ಬರವಣಿಗೆಯ ರೂಪದಲ್ಲಿ ಇದ್ದಾಗ ಅದನ್ನು ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ. ಬೇರೆಯವರು ನಿರೂಪಣೆ ಮಾಡಿ ಬರೆದ ಆತ್ಮಕಥೆಗಳು ಹೇಳಿರುವುದಾಗಲಿ, ಬರೆದಿದ್ದಾಗಲಿ ಇವೆರಡನ್ನೂ ಮುಖ್ಯವಾಗಿ ಅಧ್ಯಯನಕ್ಕೆ ತೆಗೆದುಕೊಂಡು ಅನುಭವಿಸಿದ ಆತ್ಮಕಥೆಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಉದಾಹರಣೆಗೆ ಪತ್ರಿಕೆಯಲ್ಲಿ ಬರುವ ಕೆಲವು ಘಟನೆಗಳು ಮಾಧ್ಯಮಗಳಲ್ಲಿ ಪ್ರಸಾರವಾಗುವ ವಿಷಯಗಳೂ ಇಲ್ಲಿ ಸೇರಬಹುದು.

ಧರ್ಮ, ಜಾತಿ, ಲಿಂಗ, ವರ್ಗಗಳನ್ನು ಮೀರಿ ಮನುಷ್ಯನಲ್ಲಿರುವ ಅರಿಷಡ್ವರ್ಗಗಳು ಜೊತೆಗೆ ಅಹಂಕಾರ, ಮಮಕಾರ, ಸಂಶಯಗಳು, ನೋವು, ಹತಾಶೆ, ಅಪಮಾನ ತಲ್ಲಣಗಳೆಲ್ಲ ಇಂದ್ರಿಯ ಕೇಂದ್ರಿತವಾದಾಗ ಮನುಷ್ಯನಲ್ಲಿ ತೊಂದರೆಯನ್ನುಂಟು ಮಾಡುತ್ತವೆ. ಇವು ಮನಸ್ಸಿನಲ್ಲಿದ್ದು ವಿಕಾರವನ್ನುಂಟು ಮಾಡುತ್ತವೆ. ಈ ಆಂತರಿಕ ವಿಕಾರಗಳೇ ಕಾಯಿಲೆಗಳಾಗುತ್ತವೆ. ಅದೇ ದಾರಿಯಲ್ಲಿದ್ದರೆ ಮನುಷ್ಯನ ವರ್ತನೆಗಳು, ಮಾತು, ನಡತೆ, ನೇತ್ಯಾತ್ಮಕವಾಗಿ ರೂಪುಗೊಂಡು ಇಡೀ ವ್ಯಕ್ತಿತ್ವ ನೇತ್ಯಾತ್ಮಕವಾಗಿ ರೂಪುಗೊಳ್ಳುತ್ತದೆ. ಈ ನೇತ್ಯಾತ್ಮಕ ಅಂಶಗಳನ್ನು ಸಕಾರಾತ್ಮಕವಾಗಿ ಬಳಸಿಕೊಂಡು ಬೆಳೆಯಬಹುದಾಗಿದೆ. ಇದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಅವುಗಳಲ್ಲಿ ತಿಂಗುಲಿಮಾ. ವಾಲ್ಮೀಕಿ ಇತ್ಯಾದಿ.

ಜವರೇಗೌಡರು ಹೇಳುವ ಈ ಮಾತನ್ನು ಗಮನಿಸಿದರೆ, "ವಾಸ್ತವವಾಗಿ ಕಾವ್ಯ, ಕಾದಂಬರಿ, ಕಥೆ, ನಾಟಕಗಳೆಲ್ಲಾ ಜೀವನ ಚರಿತ್ರೆಗಳೆ. ಒಂದಲ್ಲ ಒಂದು ರೀತಿಯಲ್ಲಿ ಅವು ಪುನರ್ ನಿರ್ಮಾಣಗೊಂಡ ಜೀವಂತ ವ್ಯಕ್ತಿಗಳು, ಕವಿಯಾಗಲೀ, ಕಾದಂಬರಿಗಾರನಾಗಲೀ ಅಥವಾ ನಾಟಕಕಾರನಾಗಲಿ ತಾನು ಕಂಡ ತನ್ನ ಸುತ್ತಮುತ್ತ ಜೀವಿಸುವ ವ್ಯಕ್ತಿಗಳ ಮಾದರಿಗಳನ್ನು ತನ್ನ ಕೃತಿಯಲ್ಲಿ ಸೃಷ್ಟಿಸುತ್ತಾನೆ. ಆ ಮಾದರಿಗಳಿಗೆ ಮೂಲಗಳು ಜೀವನದಲ್ಲಿದೆಯೆಂಬುದು ಮಾತ್ರ ಸುಸ್ಪಷ್ಟ"[೧] ಈ ಮಾತನ್ನು ಆತ್ಮಕಥೆಗಳಿಗೂ ಅನ್ವಯಿಸಿ ಹೇಳಬಹುದು. ಎಸ್.ಎಲ್ ಭೈರಪ್ಪನವರು "ನಮ್ಮಪ್ಪನಂತೂ ಗೃಹಭಂಗದ ಚೆನ್ನಿಗರಾಯರೆ. ಅವರಿಗೆ ಸಂಬಂಧಿಸಿ ಕಾದಂಬರಿಯಲ್ಲಿ ಬಂದಿರುವ ಯಾವ ಘಟನೆಯೂ ಸುಳ್ಳಲ್ಲ. ಕಾದಂಬರಿಯಲ್ಲಿ ಸ್ಥಳ ಸಿಗದೆ ಉಳಿದ ನೂರಾರು ಘಟನೆಗಳು ಇನ್ನೂ ನೆನಪಿನಲ್ಲಿವೆ."[೨] ಇದನ್ನೇ ಕಾದಂಬರಿಯೂ ಆತ್ಮಕಥೆಗಿಂತ ಭಿನ್ನವಾಗಿಲ್ಲ ಎಂಬ ಮಾತನ್ನು ಚದುರಂಗರು ಹೀಗೆ ಹೇಳುತ್ತಾರೆ. "ಈ ಬರೆಯುವ ಪ್ರಕ್ರಿಯೆಯಲ್ಲಿ

ನೋವು, ನಲಿವು, ನೋವಿನಿಂದ ಕೂಡಿದ ನಲಿವು, ಎಲ್ಲವನ್ನೂ ಅನುಭವಿಸಿದ್ದೇನೆ. ನನ್ನ ಒಳಗನ್ನು ತೋಡಿಕೊಳ್ಳುತ್ತಿರುವೆ ಎನ್ನುವ ತೃಪ್ತಿಯ ಜೊತೆಜೊತೆಗೆ ಈವರೆಗೆ ಗುರುತಿಸಿಕೊಂಡಿರದೇ ಇದ್ದುದ್ದನ್ನು ಹಠಾತ್ತನೆ ಕಂಡಂತಾಗಿ ಚಕಿತಗೊಂಡಿದ್ದೇನೆ. ಈ ರೀತಿಯಲ್ಲಿ ಪಡೆದ ಸಂತೋಷ ಒಂದು ಅನನ್ಯವಾದ ಬಿಡುಗಡೆಯ ಭಾವನೆಯನ್ನು ನನಗೆ ತಂದು ಕೊಟ್ಟಿದೆ. ಯಾವ ಯಾವುದೋ ಪಾತ್ರ, ಯಾವ ಯಾವದೋ ಸನ್ನಿವೇಶಗಳ ಚಿತ್ರಣ ಇಲ್ಲಿದೆಯಾದರೂ ಇಡಿಯಾಗಿ ನೋಡಿದಾಗ ನನ್ನನ್ನು ನಾನೇ ಇಲ್ಲಿ ಕಂಡುಕೊಳ್ಳುತ್ತಿದ್ದೇನೆ ಎಂದು ನನಗೆ ಅನಿಸಿದ್ದುಂಟು. ಬರಹಗಾರನಾದ ನನಗೆ ಇದಕ್ಕಿಂತ ಮಿಗಿಲಾದ ಆತ್ಮ ಸುಖ ಬೇರೆ ಏನೂ ಕಾಣದು. ಈ ಕಾದಂಬರಿಯಲ್ಲಿ ಬಂದ ಪಾತ್ರಗಳು, ಸನ್ನಿವೇಶಗಳು ನಾನು ಎಲ್ಲೋ, ಯಾವಾಗಲೋ ಕಂಡವು; ಹೇಗೋ, ಏಕೋ, ಅನುಭವಿಸಿದವು. ಅವೆಲ್ಲಾ ಒಂದು ಬಂಧನದಲ್ಲಿ ಒಂದು ಅರ್ಥವಂತಿಕೆಯಲ್ಲಿ ಕಾಣಿಸಿ ಕೊಂಡು ನನ್ನನ್ನು ಮುದಗೊಳಿಸುತ್ತಿರುವ ಬಗೆ ನನ್ನನ್ನು ವಿಸ್ಮಯವನ್ನುಂಟು ಮಾಡಿದೆ. ಬದುಕಿನ ನೋವು ನಲಿವುಗಳ ಆ ಮುಖ ಈ ಮುಖಗಳಿಗೆ ನಾನೆಂದೂ ಋಣಿಯಾಗಿದ್ದೇನೆ. ನಾನು ಪಡೆದ ಅನುಭವದ ಒಂದಂಶವಾದರೂ ಓದುಗರಿಗೆ ಆತ್ಮೀಯವೆಂಬಂತೆ ಆಗುವುದಾದರೆ ಈ ಕೃತಿ ಸಾರ್ಥಕವೆಂದು ಭಾವಿಸುತ್ತೇನೆ"[೩]

ಚದುರಂಗ, ಜವರೇಗೌಡ ಅವರ ಅಭಿಪ್ರಾಯದಂತೆ ಕಥೆ, ಕಾದಂಬರಿ, ನಾಟಕಗಳಾಗಲಿ ಆತ್ಮಕಥೆಯಾಗಲಿ ಅಂತಹ ವ್ಯತ್ಯಾಸವೇನಿಲ್ಲ ಎಂಬ ಮಾತನ್ನು ಹೇಳುತ್ತಾರೆ.

ಡಿ.ಆರ್.ನಾಗರಾಜ್‌ರವರು "ಮರಳಿ ಮಣ್ಣಿಗೆ ಕಾದಂಬರಿಯ ಮೊದಲ ಮುದ್ರಣದಲ್ಲಿ ನನ್ನ ಜನರ ಬಡತನದ ಬಾಳ್ವೆಯೇ ಈ ಕೃತಿಯ ವಸ್ತು" ಎಂಬರ್ಥದ ಮಾತುಗಳನ್ನು ಶಿವರಾಮ ಕಾರಂತರು ಬರೆಯುತ್ತಾರೆ. ಆದರೆ, "ಮರಳಿ ಮಣ್ಣಿಗೆ" ಕಾದಂಬರಿಯ ವಸ್ತು ಬಡತನಕ್ಕಷ್ಟೇ ನಿಲ್ಲುತ್ತದೆ ಎಂದು ಯಾರಾದರೂ ಹೇಳಿದರೆ, ಅದು ಹಾಸ್ಯದ ಮಾತಾಗುತ್ತದೆ. ಆ ಬಡತನ ಭೂಮಿಯೊಳಗೆ ಎಷ್ಟು ನಿಗೂಢಗಳು ಸಾಧ್ಯ "ಅರವಿಂದ ಮಾಲಗತ್ತಿಯವರ ಆತ್ಮಕಥನಕ್ಕಿಂತ ಅವರ ಕಾದಂಬರಿ 'ಕೌರ್ಯ' ಹೆಚ್ಚು ಆಳವಾಗಿದೆ, ಬಿಗಿಯಾಗಿದೆ. ಆತ್ಮಕಥೆಯ ದ್ರವ್ಯಗಳೇ ಅಂತಿಮವಾಗಿ ಕಥೆ ಕಾದಂಬರಿಗಳ ಸರಕು ಎಂಬುದು ಇನ್ನೂ ಅಷ್ಟಾಗಿ ದಲಿತ ಸಾಹಿತ್ಯ ಸಂವೇದನೆಗೆ ಒಪ್ಪಿಗೆಯಾಗಿಲ್ಲ. ದಲಿತ ಪ್ರತಿಭೆಯ ಮೇಲಿರುವ ಸಾಹಿತ್ಯೇತರ ಒತ್ತಡಗಳ ಪರಿಣಾಮ ಇರಬೇಕು ಇದು"[೪] ಎನ್ನುತ್ತಾರೆ.

ಡಿ.ಆರ್.ನಾಗರಾಜ್‌ರವರ ಈ ಮಾತುಗಳು ಕಥೆ, ಕಾದಂಬರಿ, ಆತ್ಮಕಥೆ ಎಲ್ಲವೂ ಸೃಜನಶೀಲವೇ ಎಂಬ ಮಾತನ್ನು ಪುಷ್ಟೀಕರಿಸುತ್ತದೆ. ಅಂದರೆ ಕಥೆ, ಕಾದಂಬರಿ, ನಾಟಕಗಳೂ ಹೇಗೆ ಸೃಜನಶೀಲವೋ ಹಾಗೆಯೇ ಆತ್ಮಕಥೆಯೂ ಸೃಜನಶೀಲ ಎಂಬ ಮಾತನ್ನು ಇವರೂ ಹೇಳುತ್ತಾರೆ.

ದಲಿತ ಕಥನಗಳು ಪಡೆದುಕೊಂಡ ಸ್ಥಿತ್ಯಂತರಗಳನ್ನು ಮೂಡ್ನಾಕೂಡು ಚಿನ್ನಸ್ವಾಮಿ ಹೀಗೆ ಹೇಳುತ್ತಾರೆ. "ಕಾಲದ ಪಯಣದಲ್ಲಿ ಸುದೀರ್ಘಾವಧಿಯನ್ನು ಆವರಿಸಿಕೊಂಡಿರುವ ದಲಿತ ಕಾವ್ಯ ಪ್ರಕಾರ ಬಹುಪಾತಳಿಗಳಲ್ಲಿ ತನ್ನ ಸ್ಥಿತ್ಯಂತರಗಳನ್ನು ಕಂಡಿದೆ. ಅದು ಈಗ ತನ್ನ ಆಧ್ಯಾತ್ಮಿಕ ನೆಲೆಯನ್ನು ಹುಡುಕಿಕೊಳ್ಳುವ ತವಕದಲ್ಲಿದೆ. ಈ ನನ್ನ ಕವಿತೆಯಲ್ಲಿ ಅದರ ಸೂಕ್ಷ್ಮಶರೀರದ ನೆರಳು ಕಾಣಿಸಬಹುದೆಂದು ನನ್ನ ನಂಬುಗೆ. ಆಧ್ಯಾತ್ಮಿಕ ನೆಲೆಯೆಂದರೆ ಧಾರ್ಮಿಕ ನೆಲೆಯಿಂದ ಹೊರತಾದುದು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರವೇ. ಧರ್ಮಾತೀತವಾದ ಆಧ್ಯಾತ್ಮಿಕ ನೆಲೆಯನ್ನು ಕಂಡುಕೊಳ್ಳುವುದು ಇಂದಿನ ಸಮಾಜಕ್ಕೆ ಮುಖ್ಯವಾಗಿದೆ."[೫] ಎನ್ನುತ್ತಾರೆ.

ಮೂಡ್ನಾಕೂಡು ಚಿನ್ನಸ್ವಾಮಿಯವರು ದಲಿತರ ಬರವಣಿಗೆಯ ಬಗ್ಗೆ ಹೇಳುವ ಮಾತುಗಳು, ತುಂಬಾಡಿ ರಾಮಯ್ಯನವರ 'ಮಣೆಗಾರ' ಕೃತಿಯಲ್ಲಿಯೂ ಮತ್ತು ಪರಶಿವಮೂರ್ತಿಯವರ 'ಗೆರೆ ದಾಟಿದ ಮೇಲೆ' ಕೃತಿಯಲ್ಲಿಯೂ ಆಕ್ರೋಶದಿಂದ ಮುಕ್ತವಾದ ಮಾನವೀಯ ನೆಲೆಗಟ್ಟಿನ ಮೇಲೆ ಕೃತಿ ಮೂಡಿರುವುದನ್ನು ಗುರುತಿಸಬಹುದು.

ಪುರುಷ, ಮಹಿಳೆ ಅಥವಾ ಮಂಗಳಮುಖಿಯರು (ತೃತೀಯ ಲಿಂಗ) ಯಾರೇ ಆಗಲಿ ಹೆಚ್ಚಿನ ಆತ್ಮಕಥೆಗಳು ತನ್ನ ನೋವು ಹೇಳಿಕೊಳ್ಳುವುದೇ ಆಗಿದೆ. ಇದು ಜೀವನದ ಹಲವು ಘಟನೆಯ ವಿವರಣೆಯೂ ಇರಬಹುದು ಅಥವಾ ಒಂದು ಘಟನೆಯ ವಿವರಣೆಯೂ ಇರಬಹುದು. ನೋವು ಹಂಚಿದಷ್ಟು ಕಡಿಮೆಯಾಗುತ್ತೆ. ಸಂತೋಷ ಹಂಚಿದಷ್ಟೂ ಹೆಚ್ಚಾಗುತ್ತೆ. ಭಾವನೆಗಳನ್ನು ಹಂಚಿಕೊಳ್ಳಲು ಕತೆ, ಕಾದಂಬರಿ ಸಾಹಿತ್ಯ ಪ್ರಕಾರಗಳು ಇವೆಯಾದರೂ ಆತ್ಮಕಥೆ ನೇರದಾರಿ ಎನ್ನಬಹುದಾಗಿದೆ. ತನ್ನನ್ನು ತಾನು ಕಂಡುಕೊಳ್ಳುವುದೇ ಆತ್ಮಕಥೆ. ತನ್ನನ್ನು ತಾನು ಕಂಡುಕೊಳ್ಳುವ ರೀತಿ ದಾರಿ ಬೇರೆ ಬೇರೆಯಾಗಿರಬಹುದು. ಆದರೆ ಗುರಿಯೆಲ್ಲ ಒಂದೇ. ಭಾವನೆಗಳನ್ನು ಹಂಚಿಕೊಳ್ಳುವುದು ಆತ್ಮಕಥೆಯ ಉದ್ದೇಶವಾಗಿದೆ.

ದೇಹ ಮನಸ್ಸಿನ ಸಮತೋಲನವಿದ್ದಾಗ ಎಂಥ ಆತ್ಮಕಥೆಗಳು ಸೃಷ್ಟಿಯಾಗುತ್ತದೆ. ಸಕಾರತ್ಮಕವಾಗಿ ಯೋಚಿಸಿದಾಗ, ಅದೇ ರೀತಿ ನಕಾರಾತ್ಮಕವಾಗಿ ಬದುಕಿದ್ದಾಗ ಎಂಥ ಆತ್ಮಕಥೆಗಳು ಹುಟ್ಟಿಕೊಳ್ಳುತ್ತವೆ ಮತ್ತು ವ್ಯಕ್ತಿತ್ವದ ಸಮತೋಲನಕ್ಕೆ ಯಾವ ಯಾವ ಅಂಶಗಳು ಮುಖ್ಯ ಎಂಬುದಕ್ಕೆ ಈ ಪೀಠಿಕೆ ಬಳಸಲಾಗಿದೆ.

೧.೨. ಅಧ್ಯಯನದ ಉದ್ದೇಶ

ಕನ್ನಡದಲ್ಲಿ ಆತ್ಮಕಥೆಗಳನ್ನು ಕುರಿತ ಅಧ್ಯಯನಗಳು ಅತ್ಯಂತ ವಿರಳ. 'ಲಿಂಗ ಜಾತಿ ಹಿನ್ನಲೆಯಲ್ಲಿ ಆತ್ಮಕಥೆಗಳ ಅಧ್ಯಯನ' ನಡೆದಿಲ್ಲವಾದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಈ

ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಅಧ್ಯಯನವು ಆತ್ಮಕಥೆಗಳಲ್ಲಿ 'ಲಿಂಗ-ಜಾತಿ'ಯನ್ನು ಹಿನ್ನೆಲೆಯಾಗಿಟ್ಟುಕೊಂಡು ಸಾಮಾಜಿಕವಾಗಿ ವಿಶ್ಲೇಷಿಸುವ ಒಂದು ಪ್ರಯತ್ನವಾಗಿದೆ. ಮೊದಲಿಗೆ ಆತ್ಮಕಥೆಗಳು ಯಾಕಾಗಿ ಹುಟ್ಟಿಕೊಳ್ಳುತ್ತವೆ? ಅವುಗಳ ಹಿಂದಿನ ಒತ್ತಡಗಳೇನು? ಸಮಾಜದಲ್ಲಿ ಅವುಗಳ ಪಾತ್ರಗಳೇನು? ಇದೊಂದು ಸೃಜನಶೀಲ ಸಾಹಿತ್ಯ ಪ್ರಕಾರವೇ? ಅಥವಾ ವ್ಯಕ್ತಿ ಬದುಕಿನ ನಿತ್ಯಸತ್ಯಗಳ ಕಲಾತ್ಮಕ ನಿರೂಪಣೆಯೇ? ಮಹಿಳೆಯರ ಮತ್ತು ಪುರುಷರ ಆತ್ಮಕಥೆಗಳ ಭಾಷೆ ಮತ್ತು ಸ್ವರೂಪಗಳಲ್ಲಿ ವ್ಯತ್ಯಾಸಗಳಿವೆಯೇ? ಮಹಿಳೆಯರ ಬರೆವಣಿಗೆಯಲ್ಲೂ ಭಾಷೆ ಪುರುಷ ಪ್ರಧಾನವಾಗಿದೆಯೇ? ಪುರುಷರ ಆತ್ಮಕಥೆಗಳಿಗೆ ಹೋಲಿಸಿದರೆ ಮಹಿಳೆಯರ ಆತ್ಮಕಥೆಗಳು ಪ್ರಮಾಣದಲ್ಲಿ ಕಡಿಮೆ ಯಾಕೆ? ಆತ್ಮಕಥೆ ವ್ಯಕ್ತಿ ಅನುಭವದ ಕಥನವೇ ಅಥವಾ ಸಮಷ್ಟಿ ಜೀವನದ ಗತಿಯನ್ನು ವ್ಯಕ್ತಿಯು ಗ್ರಹಿಸಿಕೊಂಡು ವ್ಯಾಖ್ಯಾನಿಸಿ ನಿರೂಪಿಸಿದ ಕಥನವೇ? ಸಮಾಜವೇ ವ್ಯಕ್ತಿಯನ್ನು ರೂಪಿಸಿದೆಯೇ? ವ್ಯಕ್ತಿ ಅಥವಾ ವ್ಯಕ್ತಿತ್ವವನ್ನು ಸಮಾಜ ರೂಪಿಸುತ್ತದೆಯೇ? ಚಾರಿತ್ರಿಕ ಅಭಿವ್ಯಕ್ತಿಯ ಕ್ರಮವೇ? ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆಗಳು ಆತ್ಮಕಥೆಯ ಸ್ವರೂಪದ ಮೇಲೆ ಪರಿಣಾಮ ಬೀರಿವೆಯೆ? ಇದುವರೆಗೂ ಹೆಚ್ಚು ಚರ್ಚೆಯಾಗದ ತೃತೀಯ ಲಿಂಗವೆಂದು ಗುರುತಿಸಲಾಗಿರುವ ಮಂಗಳ ಮುಖಿಯರ ಆತ್ಮಕಥೆಗಳ ಸ್ವರೂಪವೇನು? ಜಾತಿ ಹಿನ್ನಲೆಯಲ್ಲಿ ಆತ್ಮಕಥೆಗಳ ಸ್ವರೂಪವೇನು? ದಲಿತ ಮತ್ತು ದಲಿತೇತರ ಆತ್ಮಕಥೆಗಳ ಸ್ವರೂಪ ಹಾಗೂ ವ್ಯತ್ಯಾಸಗಳೇನು? ಶೋಷಿತ ವರ್ಗದಿಂದ ಬಂದು ವಿದ್ಯೆ ಅಧಿಕಾರ, ಸ್ಥಾನಮಾನ, ಹಣಬಲ ಗಳಿಸಿದ ಬರಹಗಾರರ ಸಾಮಾಜಿಕ ಸಾಮರಸ್ಯ ಅಥವಾ ಆಕ್ರೋಶಭರಿತ ಆತ್ಮಕಥೆಗಳ ನಿಲುವುಗಳಲ್ಲಿ ಭಿನ್ನತೆಯ ನೆಲೆಗಳ ವೈಶಿಷ್ಟವೇನು? ಇವೇ ಮುಂತಾದುವುಗಳನ್ನು ಕುರಿತು ಚರ್ಚಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಆತ್ಮಕಥೆಗಳಿಗೂ, 'ಲಿಂಗ-ಜಾತಿಗೂ' ಅಂತರ್ ಸಂಬಂಧವಿದೆ ಎಂಬುದು ಇಲ್ಲಿಯ ಮೂಲಭೂತ ತಾತ್ವಿಕ ನಿಲುವು. ಜಾತಿಯನ್ನು ವಿವರಿಸಿಕೊಳ್ಳುವಾಗ ಏಕಕಾಲಕ್ಕೆ ಸಹಜವಾಗಿಯೇ ಲಿಂಗವನ್ನು ವಿವರಿಸಿಕೊಳ್ಳಬೇಕಾಗುತ್ತದೆ. ಅಧ್ಯಯನದ ಅನುಕೂಲಕ್ಕಾಗಿ ಪೂರಕವಾಗಿರುವ ಇವುಗಳನ್ನು ಪ್ರತ್ಯೇಕವಾಗಿಯೆ ಚರ್ಚಿಸಲಾಗುವುದು.

ತಾತ್ವಿಕ ನಿಲುವುಗಳನ್ನು 'ಲಿಂಗ-ಜಾತಿ'ಯ ನೆಲೆಯಲ್ಲಿ ಸಾಮಾಜಿಕವಾಗಿ ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಲಿಖಿತ ಆತ್ಮಕಥೆಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಪ್ರಾರಂಭದಲ್ಲಿ ವಿವರಿಸಿಕೊಂಡಂತೆ ನಿರೂಪಣಾತ್ಮಕ ಆತ್ಮಕಥೆಗಳನ್ನು ಬಳಸಿಕೊಳ್ಳಲಾಗಿದೆ. ಅಲ್ಲದೇ ದೃಶ್ಯ ಮಾಧ್ಯಮ ವಾದ 'ಝೀ' ಕನ್ನಡ ವಾಹಿನಿಯಲ್ಲಿ ಪ್ರಸಾರವಾದ 'ವೀಕೆಂಡ್ ವಿತ್ ರಮೇಶ್'ನ್ನು ಆತ್ಮಕಥೆಯಲ್ಲ ಎಂದು ಹೇಳುವುದು ಕಷ್ಟವಾಗುತ್ತದೆ. ಆದರೆ ನಿರೂಪಣಾ ವಿಧಾನ ಮಾತ್ರ ಬೇರೆಯಾಗಿದೆ.

ವಿವಿಧ ಲಿಂಗ-ಜಾತಿಗಳ ಹಿನ್ನಲೆಯುಳ್ಳ ಆತ್ಮಕಥೆಗಳನ್ನು ಪ್ರಾತಿನಿಧಿಕವಾಗಿ ಆರಿಸಿಕೊಂಡು ಕರ್ನಾಟಕದ ಜಾತಿ ಪ್ರತಿನಿಧೀಕರಣದ ಅಸಮಾನತೆಯ ಒಳವಿನ್ಯಾಸವನ್ನು ಸಾಮಾಜಿಕ ರಚನೆಯನ್ನಾಗಿ ಗ್ರಹಿಸಿ ಸಾಂಸ್ಕೃತಿಕ ಜಗತ್ತನ್ನು ವಿವರಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಆತ್ಮಕಥೆಗಳನ್ನು ಅಧ್ಯಯನ ಮಾಡುವ ನನ್ನ ಉದ್ದೇಶವನ್ನು ಇನ್ನಷ್ಟು ಸ್ಪಷ್ಟಪಡಿಸ ಬಯಸುತ್ತೇನೆ. 'ಆತ್ಮಕಥೆ' ಯನ್ನು 'ಆತ್ಮ ಚರಿತ್ರೆ' ಎಂಬುದಾಗಿಯೂ ಬಳಸುವುದಿದೆ. ಆದರೆ ಇವೆರಡರಲ್ಲಿ ಯಾವುದು ಸೂಕ್ತ ಎಂಬ ಪ್ರಶ್ನೆಗೆ ಒಬ್ಬ ವ್ಯಕ್ತಿಯ ಆತ್ಮಕಥೆ ಅವನ ಚರಿತ್ರೆಯಾದರೂ ಬರವಣಿಗೆಯಲ್ಲಿ ತರುವಾಗ ಅವರವರ ದೃಷ್ಟಿಕೋನವಾಗಿದೆ. ಆತ್ಮಕಥನಕಾರರ ಆಯ್ಕೆ ಮತ್ತು ನಿರಾಕರಣೆಗಳೆರಡೂ ಕಾಣಬರುತ್ತದೆ. ಇದು ವೈಯಕ್ತಿಕವಾಗಿರುವುದರಿಂದ ಈ ಅಧ್ಯಯನದಲ್ಲಿ ಆತ್ಮ ಚರಿತ್ರೆಯೆನ್ನದೆ ಆತ್ಮಕಥೆಯೆಂದೇ ಬಳಸಿದ್ದೇನೆ. ಸಾಹಿತ್ಯದ ಇತರ ಸೃಜನಶೀಲ ಪ್ರಕಾರಗಳಲ್ಲಿ ಒಬ್ಬ ವ್ಯಕ್ತಿಯ ಬದುಕಿನ ಅನೇಕ ಸೂಕ್ಷ್ಮಗಳನ್ನು ನೇರವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಏನೇ ಅಂದರೂ ಅದೊಂದು ಪ್ರತಿಬಿಂಬ ಅಷ್ಟೆ ಜೀವನಾನುಭವ ಎನ್ನುವುದು ಕತೆ ಕಾದಂಬರಿಗಳಲ್ಲಿ ನಾಟಕಗಳಲ್ಲಿ ಕೃತಿಕಾರನ ಸಾಮರ್ಥ್ಯಕ್ಕೆ ಅನುಗುಣವಾಗಿ ಪರೋಕ್ಷ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಆದರೆ ಆತ್ಮಕಥೆ ಹಾಗಲ್ಲ. ಒಬ್ಬ ವ್ಯಕ್ತಿ ತನ್ನ ಅನುಭವ ತಳಮಳಗಳನ್ನು ಎಲ್ಲಾ ಸೂಕ್ಷ್ಮತೆಗಳೊಡನೆ ವಾಸ್ತವ ಸ್ವರೂಪದಲ್ಲಿ ನೇರವಾಗಿ ಅಭಿವ್ಯಕ್ತಿಸುತ್ತಾನೆ. ಓದುಗರು ಕೂಡ ಇದೊಂದು ನಿಜದ ಬದುಕು ಎಂದು ನಂಬುತ್ತಾರೆ. ಕತೆ ಕಾದಂಬರಿ ಸನ್ನಿವೇಶಗಳನ್ನು ಮರೆಯಬಹುದು. ಆದರೆ ಆತ್ಮಕಥೆಗಳಲ್ಲಿ ಬರುವ ಸನ್ನಿವೇಶಗಳು ಮರೆಯುವಂಥಹವುಗಳಲ್ಲ. ಈ ದೃಷ್ಟಿಯಿಂದ ಒಬ್ಬ ಆತ್ಮಕಥನಕಾರ ತನ್ನ ವ್ಯಕ್ತಿತ್ವಕ್ಕೆ ಹಾಗೂ ಸಮಾಜಕ್ಕೆ ನೇರವಾಗಿ ಸ್ಪಂದಿಸುತ್ತಿರುತ್ತಾನೆ. ಇಂಥಹ ಆತ್ಮಕಥೆಯನ್ನು ಅಧ್ಯಯನ ಮಾಡುವ ಮೂಲಕ ವ್ಯಕ್ತಿ ಮತ್ತು ಸಮಾಜವನ್ನು ಏಕಕಾಲದಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯ. ಹೀಗೆಯೇ ಆತ್ಮಕಥೆಯ ಮೂಲಕ ಸಮಾಜವನ್ನು ಅರ್ಥೈಸುವುದೇ ನನ್ನ ಪ್ರಮುಖ ಉದ್ದೇಶವಾಗಿದೆ.

ಯಾವುದೇ ಸಮಾಜ ತನ್ನ ಒಡಲಾಳದಲ್ಲಿ 'ಲಿಂಗ-ಜಾತಿ'ಯ ತಾರತಮ್ಯಗಳನ್ನು ಇಟ್ಟುಕೊಂಡೇ ಮುಂದುವರೆಯುತ್ತಿರುತ್ತದೆ. ಅದರಲ್ಲಿಯೂ ಭಾರತದಂಥಹ ದೇಶ ಜಾತಿ ಮತ್ತು ಲಿಂಗ ವ್ಯವಸ್ಥೆಯ ಅನೇಕ ಸಂಕೀರ್ಣತೆಗಳನ್ನು ತನ್ನ ಒಡಲಲ್ಲಿ ಕಟ್ಟಿಕೊಂಡಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರು, ದಲಿತರು, ಅಲೆಮಾರಿಗಳು ಹಾಗೆಯೇ ಸಮಾಜದಲ್ಲಿ ಸ್ಥಾನಮಾನ ಗಳಿಸಿದವರು, ಉಳ್ಳವರು ಮತ್ತು ಇಲ್ಲದವರು ಇಂಥವರೆಲ್ಲರ ಸಾಮಾಜಿಕ ಸ್ಪಂದನೆಯನ್ನು ಅವರು ತೋರುವ 'ಲಿಂಗ-ಜಾತಿ'ಯನ್ನು ಕುರಿತ ನೋಟಗಳನ್ನು ಅರ್ಥೈಸಿಕೊಳ್ಳುವ ಮೂಲಕ ವ್ಯವಸ್ಥೆಯಲ್ಲಿನ ಸತ್ಯಗಳನ್ನು, ಸೂಕ್ಷ್ಮ ಒಳನೋಟಗಳನ್ನು ವಿವರಿಸಲು ಸಾಧ್ಯ. ಇದೂ ಕೂಡ ನನ್ನ ಅಧ್ಯಯನ ಉದ್ದೇಶವಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಇದು ಆತ್ಮಕಥೆಗಳನ್ನು ಕುರಿತ ಅಧ್ಯಯನವಾಗಿದೆ. ಕನ್ನಡದಲ್ಲಿ ಪ್ರಕಟವಾಗಿರುವ ಆತ್ಮಕಥೆಗಳನ್ನು ಈ ಅಧ್ಯಯನಕ್ಕೆ ಮೂಲ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಇವುಗಳ ವ್ಯಾಪ್ತಿ ಬಹಳ ದೊಡ್ಡದು. ಕುವೆಂಪು, ಕಾರಂತ, ಮಾಸ್ತಿ, ಎ.ಎನ್. ಮೂರ್ತಿರಾವ್ ಮೊದಲಾದವರ ಆತ್ಮಕಥೆಗಳಿಂದ ಮೊದಲುಗೊಂಡು ಇತ್ತೀಚೆಗೆ ಬರೆದಿರುವ ಆತ್ಮಕಥೆಗಳನ್ನೂ ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಆತ್ಮಕಥೆಗಳ ವ್ಯಾಪ್ತಿಯು ದೊಡ್ಡದಾಗಿದ್ದು ಜೊತೆಗೆ ಅವು ವೈವಿಧ್ಯಮಯವಾಗಿಯೂ ಇವೆ. ಕುವೆಂಪು, ಕಾರಂತ ಮುಂತಾದ ಕನ್ನಡದ ಬರಹಗಾರರ ಆತ್ಮಕಥೆಗಳು ತಮ್ಮ ವೈಯಕ್ತಿಕ ಬದುಕಿನ ವಿವರಗಳನ್ನು ಖಾಸಗಿ ಅನುಭವಗಳಾಗಿ ಮಾತ್ರ ನಿರೂಪಿಸದೆ ನಾಡಿನ ಸಾಂಸ್ಕೃತಿಕ ಆಗುಹೋಗುಗಳ ಭಾಗವಾಗಿರವುದನ್ನು ಆತ್ಮಕಥೆಯಲ್ಲಿ ಗಮನಿಸಬಹುದಾಗಿದೆ. ಅಧ್ಯಯನಕ್ಕೆ ಇಂತಹ ವಿಶಾಲ ಭಿತ್ತಿಯುಳ್ಳ ಅನೇಕ ವೈವಿಧ್ಯಮಯ ಆತ್ಮಕಥೆಗಳು ಆಕರಗಳಾಗಿವೆ. ವೃತ್ತಿಯಲ್ಲಿ ಅಂಚೆಪೇದೆಯಾಗಿದ್ದು ವಿಡಂಬಾರಿ ಅವರು ಬರೆದಿರುವ 'ಅಂಚೆ ಪೇದೆಯ ಆತ್ಮಕಥೆ'ಯಂತಹ ಆತ್ಮಕಥೆಗಳೂ ಪ್ರಕಟವಾಗಿವೆ. ಅಂದರೆ ಕೇವಲ ಸಾಹಿತ್ಯಕ ವಲಯದವರು ಮಾತ್ರ ಆತ್ಮಕಥೆ ಬರೆದಿದ್ದಾರೆ ಎಂದು ಹೇಳುವಂತಿಲ್ಲ. ಸಾಹಿತಿಗಳಲ್ಲದ ವಿಡಂಬಾರಿಯಂತಹ ಅಂಚೆಪೇದೆಯ ಹಾಗೆಯೇ ಸ್ವಾತಂತ್ರ್ಯ ಹೋರಾಟಗಾರರು, ಸಾಮಾಜಿಕ ಹೋರಾಟಗಾರರು, ರಾಜಕಾರಣಿಗಳು, ಸಿನಿಮಾ ನಟರು, ಜನಪದ ಕಲಾವಿದರು, ಸಂಗೀತಗಾರರು ಹಾಗೂ ಸಾಮಾನ್ಯ ದುಡಿಮೆಗಾರರು ಬೇರೆ ಬೇರೆ ವೃತ್ತಿ ಮಾಡುವ ಉದಾ;ಡಾಕ್ಟರ್, ಪೋಲೀಸ್ ಮತ್ತು ಪತ್ರಿಕಾ ಬರಹಗಾರರು ಮುಂತಾದವರು ಬರೆದಿರುವ ಆತ್ಮಕಥೆಗಳನ್ನು ಇಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಮೇಲೆ ಉಲ್ಲೇಖಿಸಿದ ವಿವರಗಳು ಕೇವಲ ಪುರುಷ ಲೋಕದ್ದು. ಆದರೆ ಮಹಿಳಾ ಲೋಕದಲ್ಲಿಯೂ ಕೆಲವರು ಆತ್ಮಕಥೆಗಳನ್ನು ಬರೆದಿದ್ದಾರೆ. ಅವರಲ್ಲಿಯೂ ಬೇರೆ ಬೇರೆ ವೃತ್ತಿ ಮಾಡುವ ಉದಾ; ನಟಿ, ಬರಹಗಾರ್ತಿ, ಬ್ಯಾಂಕ್ ಉದ್ಯೋಗಿ, ಗೃಹಿಣಿ, ಹೋರಾಟಗಾರ್ತಿ, ಮುಂತಾದವರ ಆತ್ಮಕಥೆಗಳನ್ನೂ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅದೇ ರೀತಿಯಲ್ಲಿ ತೃತೀಯ ಲಿಂಗಿಗಳು ಬರೆದಿರುವ ಆತ್ಮಕಥೆಯನ್ನು ಪ್ರಸ್ತುತ ಅಧ್ಯಯನದ ಕಕ್ಷೆಗೆ ತೆಗೆದುಕೊಳ್ಳಲಾಗಿದೆ.

ಸಾಮಾಜಿಕ ಶ್ರೇಣೀಕರಣಗಳಿಗೆ ಸಂಬಂಧಿಸಿ, ಸಾಮಾಜಿಕವಾಗಿ ಮೇಲ್ತುದಿಯಲ್ಲಿರುವ ಬರಹಗಾರರು ಬರೆದಿರುವ ಆತ್ಮಕಥೆಗಳನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅದೇ ಕಾಲಕ್ಕೆ ಸಾಮಾಜಿಕ ಶ್ರೇಣೀಕರಣದ ಅತ್ಯಂತ ಕೆಳತುದಿ ಎಂದು ಕರೆಯಲಾಗುವ

ಕೆಳಸ್ತರದವರು ಶ್ರೀ ಸಾಮಾನ್ಯರು ಬರೆದಿರುವ ಆತ್ಮಕಥೆಗಳನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಸಮಾಜದಲ್ಲಿ ಬೇರೆ ಬೇರೆ ವೃತ್ತಿ ಮಾಡುವವರು, ಸಮಾಜದ ಬೇರೆ ಬೇರೆ ವಲಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ಸಾಮಾನ್ಯ ದುಡಿಮೆಗಾರರು ತಮ್ಮ ಆತ್ಮಕಥೆಗಳನ್ನು ಬರೆದಿದ್ದಾರೆ. ಅಂತಹವರು ಬರೆದಿರುವ ಆತ್ಮಕಥೆಗಳನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಕನ್ನಡದಲ್ಲಿ ಬರೆದಿರುವ ಆತ್ಮಕಥೆಗಳನ್ನು ಮಾತ್ರ ಈ ಅಧ್ಯಯನವು ಒಳಗೊಂಡಿಲ್ಲ. ಅವುಗಳ ಜೊತೆಗೆ ಬೇರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಗಳಾಗಿ ಬಂದಿರುವ ಕೆಲವು ಆತ್ಮಕಥೆಗಳನ್ನು ಈ ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ. ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದವಾಗಿ ಬಂದಿರುವ ಆತ್ಮಕಥೆಗಳನ್ನು ಆಯ್ಕೆ ಮಾಡಿಕೊಳ್ಳಲು ಒಂದು ನಿರ್ದಿಷ್ಟ ಮಾನದಂಡವನ್ನೇನೂ ಬಳಸಿಲ್ಲ. ಬೇರೆ ಭಾಷೆಗಳಿಂದ ಕನ್ನಡಕ್ಕೆ ಬಂದಿರುವ ಆತ್ಮಕಥೆಗಳನ್ನು ಕುರಿತೇ ಒಂದು ಸ್ವತಂತ್ರ ಸಂಶೋಧನೆ ಮಾಡುವಷ್ಟು ಅವುಗಳ ಪ್ರಮಾಣ ದೊಡ್ಡದಿದೆ. ಹೀಗಿರುವಾಗ ಪ್ರಸ್ತುತ ಅಧ್ಯಯನವು ತನ್ನ ಆಯ್ಕೆಗೆ ಸಿಕ್ಕಿದ ಕೆಲವು ಆತ್ಮಕಥೆಗಳನ್ನು ಬಳಸಿಕೊಂಡಿದೆ. ಆದರೆ ಇವುಗಳನ್ನು ಕುರಿತು ಪ್ರತ್ಯೇಕ ಅಧ್ಯಾಯವನ್ನು ಮಾಡಿಲ್ಲ.

'ಲಿಂಗ-ಜಾತಿ ಹಿನ್ನೆಲೆಯಲ್ಲಿ ಪ್ರಾತಿನಿಧಿಕ ಆತ್ಮಕಥೆಗಳ ಸಾಮಾಜಿಕ ವಿಶ್ಲೇಷಣೆ' ಎಂಬುದು ಪ್ರಸ್ತುತ ಅಧ್ಯಯನದ ಶೀರ್ಷಿಕೆ. ಹಾಗಾಗಿ ಈ ಅಧ್ಯಯನಕ್ಕೆ ಆತ್ಮಕಥೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಪ್ರಾತಿನಿಧಿಕ ಸ್ವರೂಪದಲ್ಲೆ ಆಯ್ಕೆಮಾಡಿಕೊಳ್ಳಲಾಗಿದೆ. ಅದರಿಂದ ಕನ್ನಡದಲ್ಲಿ ಲಭ್ಯವಿರುವ ಇಲ್ಲವೆ ಪ್ರಕಟವಾಗಿರುವ ಎಲ್ಲಾ ಆತ್ಮಕಥೆಗಳನ್ನೂ ಇಲ್ಲಿ ಅಧ್ಯಯನಕ್ಕೆ ಆಕರಗಳನ್ನಾಗಿ ತೆಗೆದುಕೊಂಡಿಲ್ಲ. ಶೀರ್ಷಿಕೆಗೆ ಸಂಬಂಧಿಸಿದಂತೆ ವಿಷಯಗಳು ಅಡಕವಾಗಿರುವ ಆತ್ಮಕಥೆಗಳನ್ನು ಪರಿಗಣಿಸಲಾಗಿದೆ.

ಆತ್ಮಕಥೆಗಳನ್ನು ಕುರಿತ ಈ ಅಧ್ಯಯನವು ಪ್ರಧಾನವಾಗಿ ಆತ್ಮಕಥೆಗಳನ್ನು ತನ್ನ ಮೂಲ ಆಕರಗಳನ್ನಾಗಿ ಪರಿಗಣಿಸಿದೆ. ಇವುಗಳ ಜೊತೆಗೆ, ಇದುವರೆಗೆ ಆತ್ಮಕಥೆಗಳನ್ನು ಕುರಿತು ಕನ್ನಡದಲ್ಲಿ ನಡೆದಿರುವ ಅಧ್ಯಯನಗಳನ್ನು ತನ್ನ ವ್ಯಾಪ್ತಿಯಲ್ಲಿ ಅನುಷಂಗಿಕ ಆಕರವನ್ನಾಗಿ ಭಾವಿಸಿದೆ. ಹಾಗಾಗಿ ಆತ್ಮಕಥೆಗಳನ್ನು ಕುರಿತು ಪ್ರಕಟವಾಗಿರುವ ಬಿಡಿ ಲೇಖನಗಳು, ಸ್ವತಂತ್ರ ಅಧ್ಯಯನಗಳು, ಕೆಲವು ಎಂ.ಫಿಲ್. ಸಂಪ್ರಬಂಧಗಳು ಮತ್ತು ಕೆಲವು ಪ್ರಕಟಿತ ಹಾಗೂ ಅಪ್ರಕಟಿತ ಪಿಎಚ್.ಡಿ. ಸಂಶೋಧನಾ ಬರವಣಿಗೆಗಳನ್ನು ಇದಕ್ಕೆ ಪೂರಕ ಆಕರಗಳೆಂದು ಪರಿಗಣಿಸಲಾಗಿದೆ. ಈ ಎಲ್ಲಾ ಬಗೆಯ ಪೂರಕ ಇಲ್ಲವೆ ಅನುಷಂಗಿಕ ಆಕರಗಳನ್ನು ಆಯಾ ಅಧ್ಯಯನಗಳ ವಿಮರ್ಶಾತ್ಮಕ ಸಮೀಕ್ಷೆ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಎಲ್ಲಾ ಅಧ್ಯಯನಗಳಿಗೂ ಒಂದು ಮಿತಿ ಇದ್ದೇ ಇರುತ್ತದೆ. ಹಾಗೇ ಈ ಅಧ್ಯಯನಕ್ಕೂ ಒಂದು ಮಿತಿ ಇದೆ. ಆತ್ಮಕಥೆಗಳನ್ನು ಕುರಿತು ಇನ್ನೂ ಅನೇಕ ಆಯಾಮಗಳಲ್ಲಿ ಅಧ್ಯಯನ ಮಾಡುವ ಸಾಧ್ಯತೆಗಳಿವೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪರಿಕಲ್ಪನೆಗಳ ಹಿನ್ನಲೆಯಲ್ಲಿ ಆತ್ಮಕಥೆಯ ಅಧ್ಯಯನ ಮಾಡಬಹುದು. ಆದರೆ ನಾನು 'ಲಿಂಗ-ಜಾತಿ' ಹಿನ್ನಲೆಯಲ್ಲಿ ಆತ್ಮಕಥೆಗಳು ನಿರೂಪಿಸುವ ಸಾಮಾಜಿಕ ಸಂಗತಿಗಳನ್ನಷ್ಟೇ ಅಧ್ಯಯನಕ್ಕೆ ಒಳಗು ಮಾಡಿಕೊಂಡಿದ್ದೇನೆ. ಯಾಕೆಂದರೆ ಇವತ್ತು ಸಮಾಜವನ್ನು ಅನೇಕ ದೃಷ್ಟಿಗಳಿಂದ ಪ್ರಭಾವಿಸುತ್ತಿರುವ ಈ ಎರಡು ಅಂಶಗಳು ಇದುವರೆಗಿನ ಯಾವುದೇ ಅಧ್ಯಯನದಲ್ಲಿ ಸ್ಪಷ್ಟವಾಗಿ ನಿರೂಪಿತಗೊಂಡಿಲ್ಲ. ಆದ್ದರಿಂದ ಇಷ್ಟು ಪರಿಮಿತಿಯಲ್ಲಿ ನನ್ನ ಅಧ್ಯಯನ ಕೈಗೊಳ್ಳುವ ಮೂಲಕ ಈ ಎರಡು ಪ್ರಮುಖ ಸಂಗತಿಗಳನ್ನು ಸೂಕ್ಷ್ಮ ದೃಷ್ಟಿಯಿಂದ ನೋಡುವ ಪ್ರಯತ್ನ ಮಾಡಲಾಗಿದೆ.

೧.೪. ಅಧ್ಯಯನದ ವಿಧಾನ

ಆತ್ಮಕಥೆಗಳನ್ನು ಕುರಿತ ಈ ನನ್ನ ಸಂಶೋಧನಾ ಪ್ರಬಂಧದಲ್ಲಿ ಅನುಸರಿಸಿರುವ ವಿಧಾನಗಳು ಈಗಾಗಲೇ ಕನ್ನಡ ಸಾಹಿತ್ಯ ಸಂಶೋಧನೆಯಲ್ಲಿ ಪ್ರಚಲಿತವಿರುವ ವಿಧಾನಗಳೇ ಆಗಿವೆ. ಆತ್ಮಕಥೆಗಳ ಅಧ್ಯಯನ ಸಂಶೋಧನಾ ಲೋಕದಲ್ಲಿ ಇತ್ತೀಚಿನ ಪ್ರವೃತ್ತಿಯಾಗಿದೆ. ಹಾಗಾಗಿ ಇದಕ್ಕೆ ಹೆಚ್ಚಿನ ಮಾದರಿಗಳು ಇಲ್ಲ. ಆದರೂ ಕನ್ನಡ ಸಾಹಿತ್ಯದಲ್ಲಿ ಪ್ರಕಟವಾಗಿರುವ ಹಲವಾರು ಬಗೆಯ ಆತ್ಮಕಥೆಗಳನ್ನು ಅವಲೋಕಿಸುವ ಮೂಲಕ ವಿಶ್ಲೇಷಣಾ ವಿಧಾನವನ್ನು ರೂಪಿಸಿಕೊಳ್ಳಲಾಗಿದೆ. ಕನ್ನಡದಲ್ಲಿ ನೂರಾರು ಆತ್ಮಕಥನಗಳು ಪ್ರಕಟಗೊಂಡಿದೆ. ಆದರೆ ನನ್ನ ವಿಷಯಕ್ಕೆ ಅನುಗುಣವಾಗಿ ಹಾಗೂ ನಾನು ಮಾಡಿಕೊಂಡಿರುವ ಅಧ್ಯಾಯಗಳ ವಿಭಾಗಕ್ಕೆ ಅನುಗುಣವಾಗಿ ಪ್ರಾತಿನಿಧಿಕವಾದ ಕೆಲವು ಆತ್ಮಕಥೆಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗೆ ಆಯ್ಕೆ ಮಾಡಿಕೊಂಡ ಆತ್ಮಕಥೆಗಳನ್ನು ಸವಿವರವಾಗಿ ಅಧ್ಯಯನ ಮಾಡಿ ಸುದೀರ್ಘ ಟಿಪ್ಪಣಿ ಮಾಡಿಕೊಳ್ಳಲಾಗಿದೆ. ವಿವಿಧ ಸಾಮಾಜಿಕ ಸ್ತರ-ವಿನ್ಯಾಸಗಳಿಗೆ ಅನುಗುಣವಾಗಿ ಆತ್ಮಕಥೆಗಳನ್ನು ವಿಂಗಡನೆ ಮಾಡಿಕೊಳ್ಳಲಾಗಿದೆ. ಹೀಗೆ ಅಧ್ಯಯನ ಮಾಡಿದ ವಿವರಗಳನ್ನು ಈಗಾಗಲೇ ಆತ್ಮಕಥೆಗಳನ್ನು ಕುರಿತು ವಿಶ್ಲೇಷಣೆ ಅಥವಾ ವಿಮರ್ಶೆ ಮಾಡಿರುವ ಲೇಖಕರ ಬರಹಗಳೊಡನೆ ತುಲನೆ ಮಾಡಲಾಗಿದೆ. ಆಯಾ ಆತ್ಮಕಥೆಗಳಿಗೆ ಬರುವ ಸನ್ನಿವೇಶಗಳನ್ನು ಕನ್ನಡದ ವಿಮರ್ಶಕರು ಅರ್ಥೈಸಿದ್ದಾರೆ ಎಂಬುದನ್ನು ಉಲ್ಲೇಖಿಸುತ್ತಾ ಅದಕ್ಕೆ ನನ್ನ ಪ್ರತಿಕ್ರಿಯೆಯನ್ನು ನೀಡಿದ್ದೇನೆ. ಹೀಗೆ ಮೂಲ ಕೃತಿ ಮತ್ತು ಕೃತಿಯ ಕುರಿತು ವಿಮರ್ಶೆ ಹಾಗೂ ಪ್ರಬಂಧಕಾರರಾದ ನನ್ನ ವಿಶ್ಲೇಷಣೆಯನ್ನು ಒಟ್ಟು ಮಾಡಿ ನನ್ನ ಅಧ್ಯಾಯಗಳಿಗೆ ಅನುಗುಣವಾಗಿ ಒಂದೊಂದು ಸಂಕಥನವನ್ನು ರೂಪಿಸುವ ಪ್ರಯತ್ನ ಮಾಡಲಾಗಿದೆ. 'ಜಾತಿ ಮತ್ತು ಲಿಂಗ' ನನ್ನ ಪ್ರಬಂಧದ

ಬಹು ಮುಖ್ಯ ವಿಷಯವಾಗಿದೆ. ಈ ಅಧ್ಯಾಯಗಳನ್ನು ಬರೆಯುವ ಸಂದರ್ಭದಲ್ಲಿ ಶ್ರೇಣೀಕರಣದ ವಿವಿಧ ಮಜಲುಗಳನ್ನು ಹಾಗೂ ಮಹಿಳೆಯ ಪರಂಪರಾಗತ ಬದುಕಿನ ಶೋಷಣಾಯುಕ್ತ ವಿಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಅನ್ವಯಿಕ ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನ ಮಾಡಿದ್ದೇನೆ. ಸಂದರ್ಭಾನುಸಾರ ಕೊನೆ ಟಿಪ್ಪಣಿಗಳನ್ನು, ಪರಾಮರ್ಶನ ಗ್ರಂಥಗಳನ್ನು ನೀಡಿದ್ದೇನೆ. ಒಟ್ಟಿನಲ್ಲಿ ಆತ್ಮಕಥೆಗಳ ಆಂತರ್ಯದಲ್ಲಿ ಪ್ರಮುಖ ಪಾತ್ರ ವಹಿಸುವ ಲಿಂಗ–ಜಾತಿ ವ್ಯವಸ್ಥೆಗಳ ಒಳಸುಳಿಗಳು ಮತ್ತು ಒಳ ನೋಟಗಳನ್ನು ಕಟ್ಟಿ ಕೊಡುವ ಮೂಲಕ ಮುಂದಿನ ಸಂಶೋಧನೆಗೆ ಒಂದಿಷ್ಟು ಆಕರಗಳನ್ನು ಹಾಗೂ ಚಿಂತನೆಗಳನ್ನು ಒದಗಿಸುವುದು ನನ್ನ ಇಡೀ ಪ್ರಬಂಧದ ಅಧ್ಯಯನ ವಿಧಾನದಲ್ಲಿ ಅಡಕಗೊಂಡಿದೆ.

೧.೫. ಅಧ್ಯಯನದ ಸ್ವರೂಪ

'ಲಿಂಗ–ಜಾತಿ' ಹಿನ್ನೆಲೆಯಲ್ಲಿ ಪ್ರಾತಿನಿಧಿಕ ಆತ್ಮಕಥೆಗಳ ಸಾಮಾಜಿಕ ವಿಶ್ಲೇಷಣೆ' ಎಂಬುದು ಪ್ರಸ್ತುತ ಸಂಶೋಧನೆಯ ಶೀರ್ಷಿಕೆ. ಕನ್ನಡದಲ್ಲಿ ಪ್ರಕಟವಾಗಿರುವ ಆತ್ಮಕಥೆಗಳು ಮತ್ತು ಅವುಗಳನ್ನು ಕುರಿತು ನಡೆದಿರುವ ಅಧ್ಯಯನಗಳು ಈ ಸಂಶೋಧನೆಗೆ ಮೂಲ ಹಾಗೂ ಪೂರಕ ಆಕರಗಳು. ಪ್ರಸ್ತುತ ಸಂಶೋಧನೆಯು ಸಾಮಾಜಿಕ ವಿಶ್ಲೇಷಣೆಯ ಮೂಲಕ ಇವುಗಳನ್ನು ಅಧ್ಯಯನ ಮಾಡುತ್ತದೆ.

ಆತ್ಮಕಥೆಗಳಲ್ಲಿ ಅವುಗಳನ್ನು ಬರೆದವರ ಅನುಭವಗಳು, ಆಲೋಚನೆಗಳು ನಿರೂಪಣೆ ಗೊಂಡಿರುತ್ತವೆ. ಆ ನಿರೂಪಣೆಯು ಭಾಷಿಕವಾಗಿರುತ್ತದೆ. ಈ ಭಾಷಿಕ ನಿರೂಪಣೆಯು ಆಯಾ ಆತ್ಮಕಥನಕಾರರ ಸಾಮಾಜಿಕ ಗ್ರಹಿಕೆಯ ಪ್ರತಿಫಲನಗಳಾಗಿರುತ್ತವೆ. ಆತ್ಮಕಥನಕಾರರು ಸಾಮಾಜಿಕವಾಗಿ ವಿವಿಧ ಶ್ರೇಣೀಕರಣಗಳಿಗೆ ಮತ್ತು ವಿವಿಧ ವಲಯಗಳಿಗೆ ಸೇರಿದವರಾಗಿದ್ದಾರೆ. ಅವರ ಮೂಲಕ ಆಯಾ ಸಾಮಾಜಿಕ ವಲಯಗಳ ಹಾಗೂ ಸಾಮಾಜಿಕ ಸ್ತರಗಳ ಅನುಭವ ಲೋಕಗಳು ಪ್ರಕಟವಾಗಿವೆ. ಅವುಗಳಲ್ಲಿ ಏಕರೂಪತೆ ಇಲ್ಲ. ಆ ಅನುಭವಗಳ ಜಗತ್ತಿನಲ್ಲಿ ಸಾಮಾಜಿಕ ಸ್ತರವಿನ್ಯಾಸಗಳು ಇರುವ ಹಾಗೆಯೇ ವಿಭಿನ್ನ ಪಾತಳಿಗಳಿವೆ.

ಆತ್ಮಕಥೆಗಳಲ್ಲಿ ಏಕಘನಾಕೃತಿಯ ಸಾಮಾಜಿಕ ವಿನ್ಯಾಸವಿಲ್ಲ. ಅದರಲ್ಲಿ ಅನೇಕ ಪದರಗಳು, ಸ್ತರ ವಿನ್ಯಾಸಗಳು, ಏಣಿಶ್ರೇಣಿಗಳು, ಅಸಮಾನ ನೆಲೆಗಳೂ ನಿರೂಪಣೆಯಾಗಿವೆ.

ಸಾಮಾಜಿಕ ಸ್ತರ ವಿನ್ಯಾಸಗಳಿಗೆ ಸಂಬಂಧಿಸಿ ಕೆಲವು ಆತ್ಮಕಥನಕಾರರಿಗೆ ತಮ್ಮ ಅನುಭವ ಗಳನ್ನು ಬರೆಯಲು ಸಾಮಾಜಿಕ ಇಲ್ಲವೆ ಸಾಮುದಾಯಿಕ ನಿರ್ಬಂಧಗಳು ಇಲ್ಲದಿರಬಹುದು. ಆದರೆ ಮತ್ತೆ ಕೆಲವರಿಗೆ ಈ ಬಗೆಯ ನಿರ್ಬಂಧಗಳಿವೆ. ಉದಾ: ಮಹಿಳೆ ಮತ್ತು ಕೆಳಜಾತಿ

ಈ ಬಗೆಯ ನಿರ್ಬಂಧ ಮತ್ತು ಮುಕ್ತತೆಗಳೇ ಆತ್ಮಕಥನಗಳ ಅನುಭವ ಲೋಕವನ್ನೂ, ಆ ಅನುಭವ ಲೋಕದ ಆಳ ಮತ್ತು ಅಗಲಗಳನ್ನೂ ನಿರ್ಧರಿಸುತ್ತವೆ. ಈ ಕಾರಣದಿಂದ ಆತ್ಮಕಥೆಗಳ ಬರವಣಿಗೆಯಲ್ಲಿ ಅನುಭವಗಳ ಆಯ್ಕೆ ಮತ್ತು ನಿರಾಕರಣೆಗಳು ನಡೆಯುತ್ತವೆ. ಈ ಆಯ್ಕೆ ಮತ್ತು ನಿರಾಕರಣೆಗಳು ಆತ್ಮಕಥನಕಾರರಿಗೆ ಪ್ರಜ್ಞಾಪೂರ್ವಕ ನೆಲೆಯದ್ದಾಗಿರಬಹುದು ಇಲ್ಲವೆ ಅಪ್ರಜ್ಞಾಪೂರ್ವಕ ನೆಲೆಯದ್ದಾಗಿರಬಹುದು.

ಆತ್ಮಕಥನಗಳ ಭಾಷಿಕ ಭಿತ್ತಿಯೊಳಗೆ ಜಾಗ ಪಡೆಯುವ ಪ್ರತಿಯೊಂದು ಅನುಭವವೂ, ವಿವರವೂ ಆಯಾ ಆತ್ಮಕಥನಕಾರರ ಸಾಮಾಜಿಕ ಹಿನ್ನೆಲೆಗಳು, ಸಾಮಾಜಿಕ ನಿರ್ಬಂಧಗಳು ಮತ್ತು ಸಾಮಾಜಿಕ ಅನುಭವಗಳ ಫಲಿತಗಳೇ ಆಗಿರುತ್ತವೆ. ಹಾಗಾಗಿ ಆತ್ಮಕಥನಗಳ ಭಾಷಿಕ ಭಿತ್ತಿಯನ್ನು ಓದುವುದೆಂದರೆ ಅಥವಾ ಅವಲೋಕಿಸುವುದು ಎಂದರೆ ಅದು ಆತ್ಮಕಥನಗಳಲ್ಲಿ ಮೂಡಿರುವ ಸಾಮಾಜಿಕ ಲೋಕದ ಅವಲೋಕನವೇ ಆಗುತ್ತದೆ.

ಆತ್ಮಕಥನಗಳಲ್ಲಿ ವಿವಿಧ ಸಮುದಾಯಗಳ ವಿವರಗಳು/ ಅನುಭವಗಳು, ವಿವಿಧ ವೃತ್ತಿಯವರ ವಿವರಗಳು ಅಥವಾ ಅನುಭವಗಳು ಇರುತ್ತವೆ. ಅದೇ ರೀತಿಯಲ್ಲಿ ಆತ್ಮಕಥನಕಾರರು ಪುರುಷರಾಗಿದ್ದರೆ ಪುರುಷರ ಅನುಭವಗಳೂ, ಆತ್ಮಕಥನಕಾರರು ಮಹಿಳೆಯರಾಗಿದ್ದರೆ ಮಹಿಳೆಯರ ಅನುಭವಗಳೂ, ಆತ್ಮಕಥನಕಾರರು ತೃತೀಯ ಲಿಂಗಿಗಳಾಗಿದ್ದರೆ ಮುಖ್ಯವಾಹಿನಿಗೆ ಸೇರುವ ತವಕದ ಅವರ ಅನುಭವಗಳೂ ದಾಖಲಾಗಿರುತ್ತವೆ.

ಆತ್ಮಕಥನಗಳಲ್ಲಿ ಸಾಮುದಾಯಿಕ ಇಲ್ಲವೆ ಸಾಮಾಜಿಕ ಅನುಭವಗಳು ಕೇವಲ ಏಕಮುಖವಾಗಿರುವುದಿಲ್ಲ. ಆ ಕಾರಣದಿಂದ ಅವು ಏಕಮುಖವಾಗಿ ಅನಾವರಣಗೊಳ್ಳುವುದಿಲ್ಲ. ಅದೇ ರೀತಿಯಲ್ಲಿ ಆತ್ಮಕಥನಗಳ ಅನುಭವ ಜಗತ್ತು ಸ್ಥೂಲವಾಗಿರುವುದಿಲ್ಲ. ಅವು ಬಹಳ ಸಂಕೀರ್ಣವಾಗಿರುತ್ತವೆ. ಜೊತೆಗೆ ಅತ್ಯಂತ ಸೂಕ್ಷ್ಮವಾಗಿರುತ್ತವೆ. ಹಾಗಾಗಿ ಆತ್ಮಕಥನಗಳನ್ನು ಓದುವುದು ಎಂದರೆ ಅಥವಾ ಆತ್ಮಕಥನಗಳನ್ನು ಕುರಿತು ಅಧ್ಯಯನ ಮಾಡುವುದು ಎಂದರೆ ಆತ್ಮಕಥನಕಾರರ ವೈಯಕ್ತಿಕ, ಸಾಮುದಾಯಿಕ ಮತ್ತು ಸಾಮಾಜಿಕ ಅನುಭವಗಳ ಸಂಕೀರ್ಣಗಳನ್ನು ಮತ್ತು ಅವುಗಳ ಸೂಕ್ಷ್ಮಗಳನ್ನು ಕುರಿತು ಅಧ್ಯಯನ ಮಾಡುವುದೇ ಆಗಿದೆ.

ಈ ಮೇಲಿನ ಪ್ರಮುಖ ಅಂಶಗಳ ಹಿನ್ನೆಲೆಯಲ್ಲಿ ನನ್ನ ಅಧ್ಯಯನದ ಸ್ವರೂಪವನ್ನು ನಿರ್ವಚಿಸಿ ಕೊಳ್ಳಲಾಗಿದೆ. ಸಮಾಜಕ್ಕೂ ಮತ್ತು ಸಮಾಜದೊಳಗಿನ ವ್ಯಕ್ತಿಗಳಿಗೂ ಹಾಗೂ ನಿರೂಪಿಸುವ ಆತ್ಮಕಥೆಗಳಿಗೂ ಅವಿನಾಭಾವ ಸಂಬಂಧವಿದೆ. ಆ ಹಿನ್ನೆಲೆಯಲ್ಲಿ ಸಾಮಾಜಿಕ ಸಂಗತಿಗಳನ್ನು ಹಾಗೆಯೇ ವಿಸಂಗತಿಗಳನ್ನು ಈ ಕಥನದ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ವಿಷಯದ ಪ್ರಸ್ತುತತೆಯನ್ನು ಮತ್ತು ಅಧ್ಯಯನದ ವ್ಯಾಪ್ತಿಯನ್ನು ಚರ್ಚಿಸಲಾಗಿದೆ. ಅದರ ಜೊತೆಗೆ ವೈಧಾನಿಕತೆಯನ್ನು ಕುರಿತು ಹೇಳಲಾಗಿದೆ. ಅಲ್ಲದೇ ಈ ವರೆಗೆ ಆತ್ಮಕಥೆಯ ಬಗ್ಗೆ ಬಂದ ಪಿಎಚ್.ಡಿ ಪ್ರಬಂಧಗಳನ್ನು, ಪುಸ್ತಕಗಳನ್ನು ಹಾಗೂ ಲೇಖನಗಳ ಸಮೀಕ್ಷೆ ಮಾಡಲಾಗಿದೆ. ಕೆಲವು ಆತ್ಮಕಥೆಗಳ ಮುನ್ನುಡಿಗಳು ಕೂಡಾ ಬಿಡಿ ಲೇಖನಗಳಂತೆಯೇ ಉತ್ತಮ ವಿಮರ್ಶೆಗಳಾಗಿವೆ. ಅವುಗಳನ್ನು ಸಮೀಕ್ಷೆಗೊಳ ಪಡಿಸಲಾಗಿದೆ. ಆತ್ಮಕಥೆಗಳನ್ನು ವೈಯಕ್ತಕವೆಂದು ಗುರುತಿಸಲಾಗುತ್ತದೆ. ಆದರೆ ಆತ್ಮಕಥೆ ಎನ್ನುವುದು ಒಬ್ಬ ವ್ಯಕ್ತಿಯ ಬರೆವಣಿಗೆಯಾದರೂ ಆ ಬರಹ ಸಮಾಜದ ನಡುವೆ ಹುಟ್ಟುವುದರಿಂದ ವೈಯಕ್ತಿಕಕ್ಕಿಂತ ಸಾಮಾಜಿಕ ಆಯಾಮವೇ ಮುಖ್ಯವಾಗುತ್ತದೆ ಎನ್ನುವುದು ಇಲ್ಲಿನ ಮೂಲಭೂತ ತಾತ್ವಿಕ ನಿಲುವು. ಇವುಗಳನ್ನೆಲ್ಲ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯ ಆತ್ಮಕಥೆಯ ಉಗಮ ಮತ್ತು ವಿಕಾಸದಲ್ಲಿ ಆತ್ಮಕಥೆಗಳ ಸ್ವರೂಪ ಮತ್ತು ಸಾಹಿತ್ಯಿಕ ಸ್ವರೂಪಗಳನ್ನು ಕುರಿತು ಚರ್ಚಿಸಲಾಗಿದೆ. ಆತ್ಮಕಥೆ ಹುಟ್ಟಲು ಹದಿನೆಂಟನೇ ಶತಮಾನದ ನಂತರ ಅನೇಕ ಸಾಮಾಜಿಕ ಆರ್ಥಿಕ ರಾಜಕೀಯ ಮತ್ತು ಸಾಂಸ್ಕೃತಿಕ ಪ್ರೇರಣೆಗಳು ಕಾರಣವಾಗಿವೆ. ಪಾಶ್ಚಾತ್ಯರಲ್ಲಿ ಪ್ರಾರಂಭವಾದ ಆತ್ಮಕಥೆಯ ಬೆಳವಣಿಗೆ ಭಾರತೀಯರಲ್ಲೂ ಬಂತು. ಆತ್ಮಕಥೆಯು ಪ್ರಾಚೀನ ಭಾರತೀಯ ಸಾಹಿತ್ಯದ ಸಂದರ್ಭಕ್ಕೆ ಸೇರಿಕೊಂಡ ಅಂಶವಾಗಿರಲಿಲ್ಲ. ಏಕೆಂದರೆ ಭಾರತೀಯ ಪರಂಪರೆಯಲ್ಲಿ ಕಲಾವಿದನ ವ್ಯಕ್ತಿತ್ವಕ್ಕಿಂತ ಅವನು ರಚಿಸಿದ ಕೃತಿಯೇ ಮುಖ್ಯವಾಗಿತ್ತು. ಆತ್ಮಕಥೆಯ ಪ್ರಕಾರ ಪಾಶ್ಚಾತ್ಯರಿಂದ ಬಳುವಳಿಯಾಗಿ ಬಂದರೂ ಸೂಕ್ಷ್ಮವಾಗಿ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಆತ್ಮಕಥೆಯ ಅಂಶಗಳನ್ನು ಕಾಣುತ್ತೇವೆ. ಭಾರತೀಯ ಸಾಹಿತ್ಯದಲ್ಲಿ ಆತ್ಮಕಥೆಯ ಎಳೆಗಳಿದ್ದರೂ, ಅದು ಒಂದು ಪ್ರಕಾರವಾಗಿ ಬೆಳೆದು ಬಂದಿದ್ದು ಪಾಶ್ಚಾತ್ಯರಿಂದಲೇ ಎನ್ನಬಹುದು. ಆತ್ಮಕಥೆಯ ಮೂಲಕ ವ್ಯಕ್ತಿ ಮತ್ತು ಸಮಾಜದ ವಿವಿಧ ಆಯಾಮ, ಸಮಾಜದ ಅಂತರ್‌ಸಂಬಂಧ ಮತ್ತು ಬಾಹ್ಯ ಸಂಬಂಧಗಳನ್ನು ವಿವರಿಸುವ ಬಗೆಯನ್ನು ಚರ್ಚಿಸಲಾಗಿದೆ. ಸಾಹಿತ್ಯದ ಸ್ವರೂಪದಲ್ಲಿ ಆತ್ಮಕಥೆಯಲ್ಲಿ ಒಬ್ಬ ವ್ಯಕ್ತಿ ತನ್ನ ಅನುಭವ ಹಂಚಿಕೊಳ್ಳುವಲ್ಲಿ ಬೇರೆಯವರ ಪಾತ್ರ ಎಷ್ಟಿದೆ ಮತ್ತು ಆತ್ಮಕಥೆ ಬರೆದವರ ಕಥೆಯೇ? ಒಬ್ಬರ ಕಥೆಯಾಗಲು ಸಾಧ್ಯವೇ? ಎಂಬುದಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಇಲ್ಲಿ ಆತ್ಮಕಥನವು ಪೂರ್ವಜರ ಚರಿತ್ರೆ, ಜೀವನಚರಿತ್ರೆ ಪ್ರವಾಸ ಕಥನ ಸಾಂಸ್ಕೃತಿಕ ಚರಿತ್ರೆಯೂ ಆಗಿದೆ. ಆತ್ಮಕಥೆಯು ಸೃಜನಶೀಲ ಪ್ರಕಾರವೇ ಎಂಬುದಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಆತ್ಮಕಥೆಯನ್ನು ಬರೆಯುವಾಗ ಯಾಕೆ ಇದನ್ನು ಬರೆದೆ ಎಂಬುದನ್ನು ಲೇಖಕರೇ ಸ್ವತಃ ಹೇಳಿಕೊಂಡಿದ್ದಾರೆ. ಈ ಬರೆವಣಿಗೆಯಲ್ಲಿ ಬರಹಗಾರರು

ಈ ಪ್ರಶ್ನೆಯನ್ನು ಎದುರಿಸುವ ರೀತಿ ಬೇರೆ ಬೇರೆಯಾಗಿದೆ. ಆತ್ಮಕಥೆ ಬರೆಯುವ ಸಂದರ್ಭದಲ್ಲಿ ಈ ಪ್ರಶ್ನೆ ಪ್ರಜ್ಞಾಪೂರ್ವಕವಾಗಿ ಕಾಡಿದಂತಿದೆ. ಇದಕ್ಕೆ ಉತ್ತರವೆಂಬಂತೆ ಆತ್ಮಕಥನಕಾರರು ತಮ್ಮ ಬರೆವಣಿಗೆಯ ಉದ್ದೇಶವನ್ನು ಹೇಳಿದ್ದಾರೆ. ಇಂತಹ ಒಂದು ಸಮಸ್ಯೆ ಪ್ರಶ್ನೆ ಬರಹಗಾರರನ್ನು ಏಕೆ ಕಾಡುತ್ತದೆ ಎಂಬುದು ಆಸಕ್ತಿಯ ವಿಷಯವಾಗಿದೆ. ಕೆಲವು ಆತ್ಮಕಥನಕಾರರು ತಾನು ಏಕೆ ಬರೆದೆ ಎಂಬ ಪ್ರಶ್ನೆಯ ಗೋಜಿಗೆ ಹೋಗದೆ ಆತ್ಮಕಥೆಗಳೇ ಈ ವಿಷಯವನ್ನು ಹೇಳುತ್ತವೆ. ಆತ್ಮಕಥೆ ಎಂದರೆ ತನ್ನನ್ನು ತಾನು ಕಂಡುಕೊಳ್ಳುವುದು.ತನ್ನನ್ನು ಕಾಣುತ್ತಾಹೋದ ಹಾಗೆಲ್ಲ ನಮ್ಮ ದೌರ್ಬಲ್ಯ/ಶಕ್ತಿಗಳು ನಮಗೇ ಗೋಚರವಾಗಿ ಅದನ್ನು ಮೀರಿ ಬೆಳೆಯಲು ಸಾಧ್ಯವಾಗುತ್ತಿದೆ. ತನ್ನನ್ನು ಕಾಣಲು ಕನ್ನಡಿ ಬೇಕಾಗುತ್ತದೆ. ಆ ಕನ್ನಡಿಯೇ ಇತರ ವ್ಯಕ್ತಿಗಳು. ಇತರ ವ್ಯಕ್ತಿಗಳ ಜೊತೆ ಹೇಗೆ ಒಡನಾಡಿದ್ದೇವೆ, ಹೇಗೆ ವ್ಯವಹರಿಸಿದ್ದೇವೆ ಎನ್ನುವುದರ ಮೂಲಕ ವ್ಯಕ್ತಿಯ ವ್ಯಕ್ತಿತ್ವ ಗೋಚರವಾಗುತ್ತದೆ. ಆತ್ಮಕಥೆ ಎಂಬುದು ಒಬ್ಬ ವ್ಯಕ್ತಿಯ ಜೀವಮಾನದ ಸಾಧನೆ ಅಥವಾ ಕೇವಲ ವ್ಯಕ್ತಿ ಚಿತ್ರಣವಾಗಿರದೆ ಸಂಕೀರ್ಣ ಸ್ವರೂಪದ ವ್ಯಕ್ತಿ ಮತ್ತು ಸಮಾಜಗಳೆರಡನ್ನು ಏಕಕಾಲದಲ್ಲಿ ಸುಸಂಘಟಿತವಾಗಿ ಕಟ್ಟಿಕೊಡುವ ಒಂದು ಸಂಕೀರ್ಣ ಕಥನವಾಗಿ ಕಾಣಿಸುತ್ತದೆ. ಇವುಗಳನ್ನು ಈ ಅಧ್ಯಾಯದಲ್ಲಿ ಕಲೆ ಹಾಕಲಾಗಿದೆ.

ಅಧ್ಯಾಯ ನಾಲ್ಕರಲ್ಲಿ, ವ್ಯಕ್ತಿ ಮತ್ತು ಸಮಾಜದ ಕ್ರಿಯೆ ಮತ್ತು ಪ್ರತಿಕ್ರಿಯೆಗಳ ಫಲಶ್ರುತಿಯೇ ಸಾಮಾಜಿಕ ಜೀವನವಾಗಿದೆ. ಈ ಸಾಮಾಜೀಕರಣದಲ್ಲಿ ಜಾತಿಯಿಂದಾದ ಸಮಸ್ಯೆಗಳು, ಅಪಮಾನಗಳು ಹೇಗೆ ಆತ್ಮಕಥೆಯಲ್ಲಿ ವ್ಯಕ್ತವಾಗಿದೆ ಎಂದು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಭಾರತ ಜಾತ್ಯತೀತ ರಾಷ್ಟ್ರೆಂದು ಹೇಳುತ್ತಿದ್ದರೂ ಒಂದಲ್ಲ ಒಂದು ರೀತಿಯಲ್ಲಿ ಜಾತಿಯ ಚೌಕಟ್ಟಿನೊಳಗೆ ಇರಬೇಕಾದ ಪರಿಸ್ಥಿತಿಯನ್ನು ಆತ್ಮಕಥೆಗಳ ಮೂಲಕ ಗ್ರಹಿಸಲಾಗಿದೆ. ಸಾಮಾಜಿಕ ಸಂದರ್ಭಕ್ಕನುಸಾರವಾಗಿ ಜಾತಿ ಹೇಗೆ ಮೇಲರಿಮೆ ಮತ್ತು ಕೀಳರಿಮೆಯನ್ನು ಹುಟ್ಟಿಸಿದೆ? ಅವರ ಮನೋಭಾವ ಮತ್ತು ಸಾಮಾಜಿಕ ಹೋರಾಟಗಳ ಸ್ವರೂಪವನ್ನು ಆತ್ಮಕಥೆಯ ಮೂಲಕ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ವಸಾಹತೀಕರಣದಿಂದ ಮೇಲ್ಜಾತಿಯಿಂದ ಆದ ಬದಲಾವಣೆ ಒಂದು ರೀತಿಯಾದರೆ, ಕೆಳಜಾತಿಗಳು ಮತಾಂತರ ಹೊಂದುವುದರ ಮೂಲಕ ಮುಖ್ಯವಾಹಿನಿಗೆ ಸೇರಿಕೊಳ್ಳುವ ತವಕ ಎದ್ದು ಕಾಣುತ್ತದೆ. ಪುರುಷನಿಗೆ ಜಾತಿ ಹೇಗೆ ಅನುಕೂವಾಗಿದೆ. ಮಹಿಳೆಗೆ ಜಾತಿ ಯಾವ ರೀತಿ ರಕ್ಷಣೆ ಕೊಟ್ಟಿದೆ ಹಾಗೂ ಅಂತರ್ ಜಾತೀಯ ವಿವಾಹವಾದ ಸಂದರ್ಭದಲ್ಲಿ ಮಹಿಳೆಗೆ ಜಾತಿ ಯಾವ ರೀತಿ ಮಾರಕವಾಗಿದೆ ಎಂಬುದನ್ನೆಲ್ಲ ಆತ್ಮಕಥೆಗಳ ಮೂಲಕ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿದ್ದ ಅಸಮಾನತೆ, ಅನ್ಯಾಯ, ಅಸಮಾನತೆಯ ಸ್ವರೂಪಗಳನ್ನು ಕೆಲವು ಆತ್ಮಕಥೆಯ ಮೂಲಕ

ಗ್ರಹಿಸಲಾಗಿದೆ. ಕನ್ನಡದಲ್ಲಿ ಪ್ರಕಟವಾಗಿರುವ ಆತ್ಮಕಥೆಗಳನ್ನು ಕೆಲವು ಅನುವಾದಗಳನ್ನು ಕಲೆಹಾಕಿಕೊಂಡು ಅಧ್ಯಯನ ಮಾಡಿ ಅವುಗಳಲ್ಲಿ ಲಿಂಗಭಿನ್ನತೆಯ ಪ್ರತಿನಿಧೀಕರಣವನ್ನು ಗುರುತಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಮಹಿಳೆಯ ಆತ್ಮಕಥೆಯಲ್ಲಿ ಪುರುಷ ಪಾತ್ರಗಳು ಹೇಗೆ ಚಿತ್ರಿತವಾಗಿದೆ. ಮಹಿಳೆಯ ಆತ್ಮಕಥೆಯಲ್ಲಿ ಮಹಿಳೆಯರು ಹೇಗೆ ಚಿತ್ರಿತವಾಗಿದ್ದಾರೆ. ಅದೇ ರೀತಿ ಪುರುಷರ ಆತ್ಮಕಥೆಯಲ್ಲಿ ಮಹಿಳೆಯರು ಹಾಗೂ ಪುರುಷರ ಪಾತ್ರಗಳು ಹೇಗೆ ರೂಪುಗೊಂಡಿದ್ದಾರೆ ಎಂಬುದನ್ನು ಕೆಲವು ಆತ್ಮಕಥೆಗಳ ಮೂಲಕ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಮಹಿಳೆಯರ ಆತ್ಮಕಥೆಗಳು ಪ್ರಮಾಣದಲ್ಲಿ ಕಡಿಮೆ ಯಾಕೆ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ತೃತೀಯ ಲಿಂಗದವರಿಗೆ ಜಾತಿ ಮತ್ತು ಲಿಂಗಗಳಲ್ಲಿ ಯಾವುದು ಮುಖ್ಯವಾಗಿದೆ ಎಂಬುದನ್ನು ಆತ್ಮಕಥೆಯ ಮೂಲಕ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಕೊನೆಯದಾಗಿ ಸಮಾರೋಪದಲ್ಲಿ ಈ ಎಲ್ಲಾ ಅಧ್ಯಾಯದಲ್ಲಿ ಕಂಡುಕೊಂಡ ಫಲಿತಗಳನ್ನು ಕ್ರೋಢೀಕರಿಸಲಾಗಿದೆ.

ಪ್ರತಿ ಅಧ್ಯಾಯದ ಕೊನೆಯಲ್ಲಿ ಕೊನೆಟಿಪ್ಪಣೆಗಳನ್ನು ನೀಡಲಾಗಿದೆ. ಗ್ರಂಥ ಋಣದಲ್ಲಿ ಈ ಅಧ್ಯಯನಕ್ಕೆ ಬಳಸಿಕೊಳ್ಳಲಾದ ವಿವಿಧ ಆಕರಗ್ರಂಥಗಳನ್ನು ಲೇಖನಗಳನ್ನು ಅಕಾರಾದಿಯಲ್ಲಿ ನೀಡಲಾಗಿದೆ.

೧.೬. ಈವರೆಗಿನ ಅಧ್ಯಯನಗಳ ಸಮೀಕ್ಷೆ

ಆತ್ಮಕಥೆಗಳ ಅಧ್ಯಯನಗಳ ಕುರಿತು

- ಸಂಶೋಧನಾ ಪ್ರಬಂಧಗಳ ಸಮೀಕ್ಷೆ
    - ಸವಿತಾ ಒಡೆಯರ್
    - ಶರಣಮ್ಮ ಗೊರೇಬಾಳ್
    - ಸುಮಂಗಲ
- ಪ್ರಕಟಗೊಂಡ ಪುಸ್ತಕಗಳ ಸಮೀಕ್ಷೆ
    - ಬಿ. ಎಂ. ಪುಟ್ಟಯ್ಯ
    - ಸವಿತಾ ದೇಶಮಾನೆ
- ಲೇಖನಗಳ ಸಮೀಕ್ಷೆ
    - ಬಸವರಾಜ್ ಕಲ್ಗುಡಿ
    - ರಹಮತ್ ತರೀಕೆರೆ

- ಸೋಮಯಾಜಿ
- ಸಿ.ಎನ್.ರಾಮಚಂದ್ರನ್
- ಹೆಚ್.ಎಸ್.ರಾಘವೇಂದ್ರರಾವ್
- ಕೃಷ್ಣಮೂರ್ತಿ ಹನೂರು ಮತ್ತು ಇತರರು

ಮುನ್ನುಡಿಗಳೂ ಕೂಡ ಆತ್ಮಕಥೆಗಳನ್ನು ಕುರಿತ ಲೇಖನಗಳೇ ಆಗಿವೆ. ಕನ್ನಡ ವಿಶ್ವವಿದ್ಯಾನಿಲಯದ ಕನ್ನಡ ವಾರ್ಷಿಕ ಮತ್ತು ಬೆಂಗಳೂರು ವಿಶ್ವ ವಿದ್ಯಾಲಯದ ಸಾಹಿತ್ಯ ವಾರ್ಷಿಕಗಳ ಸಮೀಕ್ಷೆ ಗಮನಿಸಿದ್ದೇನೆ.

ಸವಿತಾ ಎನ್.ಒಡೆಯರ್ ಮಾರ್ಗದರ್ಶಕರು ಮಧುವೆಂಕಾರೆಡ್ಡಿ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ **ಆತ್ಮಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನ** ಎಂಬ ಸಂಶೋಧನಾ ಮಹಾಪ್ರಬಂಧ ಉತ್ತರ ಕರ್ನಾಟಕದ ಚರಿತ್ರೆಕಾರರ ಪ್ರೊಫೆಸರ ಸ.ಸ. ಮಾಳವಾಡ–ದಾರಿ ಸಾಗಿದೆ.

ಡಾ.ಆರ್.ಸಿ.ಹೀರೇಮಠ–ಉರಿ ಬರಲಿ ಸಿರಿ ಬರಲಿ

ಬಸವರಾಜ ಕಟ್ಟೀಮನಿ–ಕಾದಂಬರಿಕಾರನ ಕಥೆ

ಜೋಳದ ರಾಶಿ ದೊಡ್ಡನಗೌಡ–ನಂದೇ ನಾನೋದಿದೆ ಆತ್ಮಕಥೆಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸವಿತಾ ತಮ್ಮ ಪ್ರಬಂಧದಲ್ಲಿ ಆತ್ಮಚರಿತ್ರೆ ಸಾಹಿತ್ಯದ ಒಂದು ಪ್ರಕಾರ. ಆತ್ಮಚರಿತ್ರೆಯು ಜೀವನ ಚರಿತ್ರೆಗಳಿಗಿಂತ ಹೆಚ್ಚು ಅಥೆಂಟಿಕ್ ಆದದ್ದು ಎನ್ನುತ್ತಾರೆ. ಆತ್ಮಚರಿತ್ರೆಗಳ ಸಂಖ್ಯೆ ನಲವತ್ತು ವರ್ಷಗಳ ಹಿಂದಿನಿಂದ ಹುಲುಸಾಗಿಯೇ ಬೆಳೆದು ಬಂದಿದೆ. ಗಣ್ಯ ಸಾಹಿತಿಗಳಾದ ಜೆ.ಪಿ.ರಾಜರತ್ನಂ, ಮಾಸ್ತಿ, ಕುವೆಂಪು, ಬೀಚಿ, ಶಿವರಾಮ ಕಾರಂತ್, ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್, ವೀಣಾ ದೊರೆಸ್ವಾಮಿ ಅಯ್ಯಂಗಾರರಂಥ ಸಂಗೀತತಜ್ಞ, ಸರದಾರ ಎಚ್.ಕೆ.ವೀರಣ್ಣಗೌಡರಂಥ ರಾಜಕಾರಣಿ, ಗುಬ್ಬಿ ವೀರಣ್ಣ, ಆರ್.ನಾಗೇಂದ್ರರಾವ್, ಗರೂಡ ಸದಾಶಿವರಾಯರಂಥವರು ತಮ್ಮ ಆತ್ಮಕಥೆಯನ್ನು ಬರೆದಿದ್ದಾರೆ. ಒಬ್ಬೊಬ್ಬ ಖ್ಯಾತ ವ್ಯಕ್ತಿಯ ಆತ್ಮಕಥೆಯು ತೀವ್ರ ಸಂವೇದನಾಶೀಲವಾದ ಚಿಂತನೆ ಪ್ರತಿಕ್ರಿಯೆಗಳಿಂದ ಕೂಡಿರುತ್ತದೆ. ಅಂಥ ಒಬ್ಬೊಬ್ಬ ಪ್ರತಿಭಾವಂತನು ಬಹುವಿಶಾಲ ಸಮುದಾಯವೊಂದರ ಪ್ರಜ್ಞೆಯನ್ನು ಪ್ರತಿನಿಧಿಸುತ್ತಾನೆ. ಆದರೆ ಈತನ ಪ್ರತಿನಿಧಿತ್ವ ಕೇವಲ ಕನ್ನಡಿಯ ಪ್ರತಿಬಿಂಬದಂತಲ್ಲ. ಅದು ಸಮುದಾಯದ ಮನಸ್ಸು ಹಾಗೂ ಸ್ವಂತ ಚಿಂತನೆಯ ಜೊತೆಗೆ ಪ್ರತಿಬಿಂಬಿಸುವಂಥ ಒಂದು ವಿಶಿಷ್ಟ ವ್ಯಕ್ತಿತ್ವ

ಆದ್ದರಿಂದಲೇ ಇವರ ಬರಹಗಳಲ್ಲಿ ಸ್ವಂತ ವಿಶ್ಲೇಷಣೆಯ ಅವರ ಸಮುದಾಯ ಪ್ರದೇಶಗಳ ಸಂಸ್ಕೃತಿ ಹಾಗೂ ಚಿಂತನೆಗಳು ಅಭಿವ್ಯಕ್ತವಾಗಿರುತ್ತವೆ ಎಂದು ಪ್ರಬಂಧಕಾರರು ಗುರುತಿಸಿದ್ದಾರೆ.

ಇವರ ಪ್ರಕಾರ ಉಳಿದ ಬರಹಗಳಿಗಿಂತ ಅತ್ಮಚರಿತ್ರೆ ಹೆಚ್ಚು ಗಮನಾರ್ಹ ದಾಖಲೆಯಾಗಿದೆ. ಯಾಕೆಂದರೆ ಇಲ್ಲಿ ಲೇಖಕರಿಗೆ ನೇರವಾದ ವಿಶ್ಲೇಷಣೆ ದಾಖಲಿಸಲು ವಿಪುಲ ಅವಕಾಶವಿರುತ್ತದೆ. ಅಲ್ಲದೇ ಆಯಾ ಲೇಖಕರ ಬಾಲ್ಯ ಪರಿಸರದ ಅಂದರೆ ಆ ಕಾಲಕ್ಕೆ ತಕ್ಕ ಮಟ್ಟಿಗೆ ಮರೆಯಾಗಿರಬಹುದಾದ ಸಾಂಸ್ಕೃತಿಕ ವಿವರಗಳನ್ನೂ ಕಾಣಬಹುದು ಎನ್ನುತ್ತಾರೆ. ಆತ್ಮಚರಿತ್ರೆಯನ್ನು ಸಾಂಸ್ಕೃತಿಕ ದೃಷ್ಟಿಯಿಂದ ಅಧ್ಯಯನ ಮಾಡುವ ಅನುಕೂಲವನ್ನು ಇವರು ಹೀಗೆ ಹೇಳುತ್ತಾರೆ. 'ಆಯಾ ಲೇಖಕನ ಜೀವಿತ ಕಾಲದಲ್ಲಿ ನಡೆದ ಮಹತ್ವದ ಸಾಂಸ್ಕೃತಿಕ ಬೆಳವಣಿಗೆಗಳನ್ನು ಹಾಗೂ ಘಟನೆಗಳನ್ನು ನೇರ ಸಂಪರ್ಕದ ಕಾರಣವಾಗಿ ಆ ಲೇಖಕ ಆತ್ಮಚರಿತ್ರೆಯಲ್ಲಿ ದಾಖಲಿಸಿರುವ ಸಾಧ್ಯತೆಗಳಿರುತ್ತದೆ. ಇಂಥ ಪ್ರಥಮ ಪುರುಷ ಮಾಹಿತಿ ಅನ್ಯತ್ರ ಸಿಗುವುದು ದುರ್ಲಭ. ಸಮಕಾಲೀನ ಸಾಂಸ್ಕೃತಿಕ ಇತಿಹಾಸವನ್ನು ಪುನರ್‌ರಚಿಸುವಲ್ಲಿ ಇಂಥ ಮಾಹಿತಿಗಳು ತುಂಬ ಪ್ರಯೋಜನಕಾರಿಯಾಗಬಲ್ಲದು. ಚೆನ್ನಬಸವನಾಯಕನ ಅನುವಾದದ ವಿರುದ್ಧ ನಡೆದ ಪ್ರತಿಭಟನೆಯನ್ನು ಕುರಿತಂತೆ ಪ್ರೊ॥ ಸ. ಸ. ಮಾಳವಾಡರ ಆತ್ಮಕಥೆಯಲ್ಲಿ ಸಿಗುವ ವಿವರಗಳು, ಅದೇ ರೀತಿ ಕರ್ನಾಟಕ ವಿಶ್ವವಿದ್ಯಾಲಯದ ಬೆಳವಣಿಗೆ ಕುರಿತಂತೆ ಕಟ್ಟೀಮನಿ, ಮಾಳವಾಡ ಹಾಗೂ ಆರ್.ಸಿ.ಹಿರೇಮಠಸ ಆತ್ಮಕಥೆಗಳಲ್ಲಿ ಸಿಗುವ ಮಾಹಿತಿಗಳು ಇವು ಎರಡು ಉದಾಹರಣೆಗಳು ಮಾತ್ರ.ಈ ಎಲ್ಲ ಕಾರಣಗಳಿಂದ ಆತ್ಮಚರಿತ್ರೆಯನ್ನು ಸಾಂಸ್ಕೃತಿಕ ದೃಷ್ಟಿಯಿಂದ ಅಧ್ಯಯನ ಮಾಡಬೇಕಾದ ಅಗತ್ಯವಿದೆ' ಎನ್ನುತ್ತಾರೆ. ಕನ್ನಡದಲ್ಲಿ ಸಾಕಷ್ಟು ಆತ್ಮಚರಿತ್ರೆಗಳು ಈಗಾಗಲೇ ಬಂದಿದ್ದರೂ ಅವುಗಳನ್ನು ಸಾಹಿತ್ಯ ಕೃತಿಯಾಗಿ, ಇತಿಹಾಸದ ಮಾಹಿತಿ ಕೋಶಗಳಾಗಿ ನೋಡಲಾಗಿದೆಯೇ ಹೊರತು ಸಾಂಸ್ಕೃತಿಕ ದೃಷ್ಟಿಯಿಂದ ಗಂಭೀರ ಅಧ್ಯಯನ ನಡೆದಿಲ್ಲ ಎಂದು ಅಧ್ಯಯನದ ಪ್ರಸ್ತುತತೆಯ ಬಗ್ಗೆ ಹೇಳುತ್ತಾರೆ. ಇವರು ನಾಲ್ವರೂ ಹಿರಿಯರ ಆತ್ಮಚರಿತ್ರೆಯನ್ನು ಆರಿಸಿಕೊಂಡು ಸಾಂಸ್ಕೃತಿಕ ದೃಷ್ಟಿಯಿಂದ ಅಧ್ಯಯನ ಮಾಡಿದ್ದಾರೆ. ಹೀಗೆ ಮಾಡುವಾಗ ಅಧ್ಯಯನಕ್ಕಿರುವ ಕಾಲಮಿತಿ ಹಾಗೂ ಪ್ರದೇಶ ವಿಸ್ತಾರವನ್ನು ಸೀಮಿತಗೊಳಿಸಿ ಕೊಳ್ಳಬೇಕಾದ ಅನಿವಾರ್ಯತೆಯನ್ನು ಗಮನಿಸಿ ಈ ಸಂಶೋಧನಾ ವಿದ್ಯಾರ್ಥಿಯು ಉತ್ತರ ಕರ್ನಾಟಕಕ್ಕೆ ಸೀಮಿತಗೊಳಿಸಿಕೊಂಡು ಈ ಆತ್ಮಕಥೆಯ ಅಧ್ಯಯನವನ್ನು ಮಾಡಿದ್ದಾರೆ.

ಇವರು ತಮ್ಮ ಅಧ್ಯಯನ ಮಿತಿಗಳನ್ನು ಕುರಿತು, "ವಿವಿಧ ಧಾರ್ಮಿಕ ಸಮುದಾಯಗಳಿಗೆ ಸೇರಿದ ವ್ಯಕ್ತಿಗಳ ಆತ್ಮಚರಿತ್ರೆಗಳನ್ನು ಆಯ್ದುಕೊಳ್ಳಲು ಸಾಧ್ಯವಾಗಿಲ್ಲ. ಇಲ್ಲಿ ಆರಿಸಿಕೊಂಡಿರುವ ನಾಲ್ವರೂ ಜನ್ಮತಃ ವೀರಶೈವ, ಬ್ರಾಹ್ಮಣ, ಜೈನ, ಶೂದ್ರ ಸಮುದಾಯಕ್ಕೆ ಸೇರಿದ ಉತ್ತರ ಕರ್ನಾಟಕದ ಯಾರಾದರೂ ಪ್ರತಿಭಾವಂತರ ಆತ್ಮಕಥೆಯನ್ನು ಸಮಾವೇಶಗೊಳಿಸಿಕೊಳ್ಳಲು

ಸಾಧ್ಯವಾಗಿದ್ದರೆ ಈ ಅಧ್ಯಯನಕ್ಕೆ ಹೆಚ್ಚಿನ ಪ್ರಾತಿನಿಧಿಕತೆ ಒದಗುತ್ತಿತ್ತು. ಅಂಥ ಕೃತಿಗಳು ಲಭ್ಯವಾಗಿಲ್ಲ. ಅದರಿಂದ ಸಾಧ್ಯವಾಗಿಲ್ಲ. ಆಲೂರು ವೆಂಕಟರಾಯರ ನನ್ನ ಜೀವನದ ಸ್ಮೃತಿಗಳು, ಕೃತಿಯನ್ನು ಸೇರಿಸಿಕೊಳ್ಳಲು ಸಾಧ್ಯವಿತ್ತೇನೋ ನಿಜ. ಆದರೆ ಅದು ತುಂಬ ಕಡಿಮೆ ಗಾತ್ರದ್ದು (೨೦೦ ಪುಟದ್ದು) ಅದು ನೀಡುವ ವಿವರ ಕಡಿಮೆ. ಅದು ನೀಡುವ ಮುಖ್ಯ ವಿವರಗಳು ಕರ್ನಾಟಕದ ಏಕೀಕರಣ ಹಾಗೂ ಕರ್ನಾಟಕ ಕಾಲೇಜಿನ ಸ್ಥಾಪನೆಗೆ ಸಂಬಂಧಿಸಿದವು. ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ವಿವರ ಅಲ್ಲಿವೆ. ಆದರೆ ಜನರ ಜಾನಪದ, ನಂಬಿಕೆ, ಆಚರಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಬೆಲೆಯುಳ್ಳ ವಿವರಗಳು ಅಲ್ಲಿಲ್ಲ. ಅಲ್ಲಿ ಸಿಗುವ ಹೆಚ್ಚಿನ ವಿವರಗಳ ಆಕರವಾದ ಅನ್ಯ ಆತ್ಮಕಥೆಗಳನ್ನು ಬಿಟ್ಟು ಆಲೂರರ ಆತ್ಮಕಥೆಯನ್ನು ಸೇರಿಸಿಕೊಳ್ಳಲು ಸಾಧ್ಯವಾಗಿಲ್ಲವಾದ್ದರಿಂದ ಅದನ್ನು ಕೈಬಿಡಬೇಕಾಯಿತು. ಅನ್ಯ ಸಮುದಾಯದವರ ವಿಸ್ತೃತ ಆತ್ಮಕಥೆ ಕೂಡ ಪ್ರಕಟವಾಗಿಲ್ಲ. ಡಾ.ಅರವಿಂದ ಮಾಲಗತ್ತಿ ಅವರ ಗೌರ್ಮೆಂಟ್ ಬ್ರಾಹ್ಮಣ ಕೂಡ ತುಂಬ ಕಡಿಮೆ ವಿವರಗಳನ್ನು ನೀಡುವ ಒಂದು ಆತ್ಮಕಥೆ. ಈ ಕಾರಣದಿಂದ ವಿವಿಧ ಜನಾಂಗಗಳವರಿಗೆ ಪ್ರಾತಿನಿಧ್ಯ ನೀಡಲು ಸಾಧ್ಯವಾಗಿಲ್ಲ” ಎನ್ನುತ್ತಾರೆ.

ಉತ್ತರ ಕರ್ನಾಟಕದ ಪ್ರತಿಭಾವಂತರ ಆತ್ಮಕಥೆಯನ್ನು ಸೇರಿಸಲು ಸಾಧ್ಯವಾಗಿದ್ದರೆ ಹೆಚ್ಚಿನ ಪ್ರಾತಿನಿಧಿಕತೆ ದೊರಕುತ್ತಿತ್ತು ಎಂದು ಹೇಳುವಲ್ಲಿ ಇವರ ಪ್ರಕಾರ ಪ್ರತಿಭಾವಂತರು ಅಂದರೆ ಯಾರು? ಎಂಬ ಪ್ರಶ್ನೆ ಹುಟ್ಟುತ್ತದೆ. ಆಲೂರು ವೆಂಕಟರಾಯರ ಕೃತಿಯನ್ನು ತೆಗೆದುಕೊಳ್ಳಲಾಗದ ಕಾರಣವನ್ನು ಕೇವಲ ಇನ್ನೂರು ಪುಟದ್ದು ಹಾಗೂ ಗಾತ್ರದಲ್ಲಿ ಚಿಕ್ಕದು ಎನ್ನುತ್ತಾರೆ. ಆತ್ಮಕಥೆಯನ್ನು ಕೇವಲ ಪುಟಗಳಿಂದ ಅಳೆಯಲಾಗಿದೆಯೇ?ಅದನ್ನು ಸಮರ್ಥಿಸಲು ಎಂಬಂತೆ ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ ತುಂಬ ಕಡಿಮೆ ವಿವರಗಳನ್ನು ನೀಡುತ್ತದೆ ಎನ್ನುವಲ್ಲಿ ಇವರ ಸಂಕುಚಿತ ದೃಷ್ಟಿಕೋನ ವ್ಯಕ್ತವಾಗುತ್ತದೆ. ಅಲ್ಲದೇ ಆಲೂರರಲ್ಲಿ ಬರುವ 'ಕರ್ನಾಟಕದ ಏಕೀಕರಣ' ಹಾಗೂ 'ಕರ್ನಾಟಕ ಕಾಲೇಜಿನ ಸ್ಥಾಪನೆಗೆ ಸಂಬಂಧಿಸಿದ ವಿವರಗಳು' ಅಲ್ಲದೇ 'ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ವಿವರ'ಗಳೆಲ್ಲ ಸಾಂಸ್ಕೃತಿಕ ಚರಿತ್ರೆಗಳಲ್ಲವೇ? ಹಾಗೆಯೇ ಅರವಿಂದ ಮಾಲಗತ್ತಿಯವರಲ್ಲಿ ಬರುವ ದಲಿತರ ಜೀವನದ ವಿವರಗಳಾದ 'ಹೆಣದ ದುಡ್ಡು ಮತ್ತು ಮದುವೆ ಊಟ', 'ಬಾಡಿಗೆ ಬ್ರಾಹ್ಮಣನಾದ ಪ್ರಸಂಗ', 'ಸತ್ತ ಕುರಿಗಳು ಮತ್ತು ಮಾಂಸದ ಗುಪ್ಪೆ'ಗಳೆಲ್ಲ ದಲಿತರ ಸಾಂಸ್ಕೃತಿಕ ಚರಿತ್ರೆಗಳೇ ಆಗಿದೆ.ಇದು ಅಧ್ಯಯನದ ಮಿತಿಗಿಂತ ಅಧ್ಯಯನಕಾರರ ಮಿತಿಯೇ ಆಗಿದೆ.

ಆಲೂರರಲ್ಲಿ 'ಜನರ ಜಾನಪದ ನಂಬಿಕೆ, ಆಚರಣೆ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಬೆಲೆಯುಳ್ಳ ವಿವರಗಳಿಲ್ಲ'ಎನ್ನುತ್ತಾರೆ. ಒಂದು ಸಾಹಿತ್ಯ ಕೃತಿಯು ಕಾಲ, ಪರಿಸರ, ಸನ್ನಿವೇಶಕ್ಕೆ

ತಕ್ಕಂತೆ ರೂಪುಗೊಂಡಿರುತ್ತದೆ. ಅವುಗಳಲ್ಲಿ ಈ ವಿವರಗಳಿಲ್ಲ ಅವೆಲ್ಲವೂ ಬರಬೇಕಿತ್ತು ಎಂದು ನಿರೀಕ್ಷಿಸುವುದೇ ಸರಿಯಾದ ವಿಮರ್ಶೆಯಲ್ಲ ಎನ್ನಿಸುತ್ತದೆ. ಒಂದು ಕೃತಿಯಲ್ಲಿ ಬಂದಿರುವ ವಿವರಗಳ ಆಧಾರದ ಮೇಲೆ ಸಾಂಸ್ಕೃತಿಕ ಚರಿತ್ರೆ ಕಟ್ಟಬೇಕೇ ವಿನಃ ಬರೆಯದಿರುವುದನ್ನು ಬರೆಯಬೇಕೆಂದು ನಿರೀಕ್ಷಿಸುವುದರಿಂದಲ್ಲ. ಈ ಸಂದರ್ಭದಲ್ಲಿ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ ಕೃತಿಯನ್ನು ಕುರಿತು ಡಾ.ರಹಮತ್ ತರೀಕರೆಯವರು ವ್ಯಕ್ತಪಡಿಸಿರುವ ಈ ಅಭಿಪ್ರಾಯವನ್ನು ಇಲ್ಲಿ ಉಲ್ಲೇಖಿಸವುದು ಸೂಕ್ತ ಎಂದು ಅನ್ನಿಸುತ್ತದೆ. "ಗೌರ್ಮೆಂಟ್ ಬ್ರಾಹ್ಮಣ: ಒಬ್ಬ ವ್ಯಕ್ತಿಯ ಚರಿತ್ರೆಯಲ್ಲ, ಸಮಾಜವೊಂದರ ಚರಿತ್ರೆ"ಎನ್ನುವ ಶೀರ್ಷಿಕೆಯಡಿಯಲ್ಲಿ ಹೀಗೆ ಪ್ರತಿಕ್ರಿಯಿಸುತ್ತಾರೆ. ಕನ್ನಡದಲ್ಲಿ ನಡೆಯುತ್ತಿರುವ ಸಂಸ್ಕೃತಿ ಚಿಂತನೆಯಲ್ಲಿ ಅನೇಕ ಚಲನೆಗಳನ್ನು ಮಾಡುವಷ್ಟು ಗೌರ್ಮೆಂಟ್ ಬ್ರಾಹ್ಮಣ ಕೃತಿಯು ಸಮರ್ಥವಾಗಿದೆ. ಒಬ್ಬ ಅಸ್ಪೃಶ್ಯ ವ್ಯಕ್ತಿ ತನ್ನ ಆತ್ಮಕಥೆ ಬರೆದಾಗ ಅದು ಒಬ್ಬ ವ್ಯಕ್ತಿಯ ಕಥನವಾಗಿರುವುದಿಲ್ಲ. ಇಡೀ ಒಂದು ಸಮುದಾಯವೇ ಚರಿತ್ರೆಯಲ್ಲಿ ಅಪಮಾನದ, ಬದುಕುಳಿಯಲು ಮಾಡಿದ ಸೆಣೆಸಾಡಿದ ಕಥಾನಕವಾಗಿರುತ್ತದೆ. ಈ ಅರ್ಥದಲ್ಲಿ 'ಗೌರ್ಮೆಂಟ್ ಬ್ರಾಹ್ಮಣ' ಕೂಡ ಒಬ್ಬ 'ವ್ಯಕ್ತಿಯ ಚರಿತ್ರೆಯಲ್ಲ. ಮನುಷ್ಯರ ಹಸಿವನ್ನು ಹಸಿವೆಯಂದರಿಯದ ಅವರ ಭಾವನೆಗಳನ್ನು ಭಾವನೆಗಳೆಂದು ಗುರುತಿಸಲಾಗದ ಅವರ ಪ್ರೇಮವನ್ನು ಪ್ರೇಮವೆಂದು ಒಪ್ಪಿಕೊಳ್ಳದ ಸಮಾಜವೊಂದರ ನಂಬಿಕೆ ಆಚರಣೆಗಳ ಚರಿತ್ರೆ' ಎಂದು ಸರಿಯಾಗಿಯೇ ಗುರುತಿಸಿದ್ದಾರೆ.

ಇದೇ ಗೌರ್ಮೆಂಟ್ ಬ್ರಾಹ್ಮಣ ಕೃತಿಯ ಬಗ್ಗೆ ಡಾ. ಬಿ.ಎಂ. ಪುಟ್ಟಯ್ಯನವರು "ಇಲ್ಲಿ ಅನೇಕ ಅನುಭವಗಳು ವಿವರಗಳು ಹೊರಗೆ ಬರಲೇ, ಬೇಡವೆ ಎಂಬ ತೊಯ್ದಾಟದಲ್ಲಿ ಯಾತನೆ ವೇದನೆ ಅನುಭವಿಸಿದೆ. ಇಂಥ ಸಂಕೀರ್ಣತೆಯ ಸಂದಿಗ್ಧತೆ ವ್ಯಕ್ತಿ ಕೇಂದ್ರಿತ ನೆಲೆಯದೋ ಅಥವಾ ಸಮಾಜ ಕೇಂದ್ರಿತ ನೆಲೆಯದೋ ಜೊತೆಗೆ ಇದರಲ್ಲಿ ಯಾವುದು ಪ್ರಧಾನ, ಯಾವುದು ಅನುಷಂಗಿಕ. ಈ ದಿಕ್ಕಿನಲ್ಲಿ ಗಂಭೀರ ಚರ್ಚೆಯ ಆವಶ್ಯಕತೆ ಇದೆ." ಎನ್ನುತ್ತಾರೆ. ಇದಕ್ಕೆ ಪ್ರತಿಕ್ರಿಯಿಸುವುದಾದರೆ ಇಲ್ಲಿ

ಸಮಷ್ಟಿಯೇ ವ್ಯಷ್ಟಿ (ವ್ಯಕ್ತಿ)ಯನ್ನು ರೂಪಿಸುವುದರಿಂದ ಇಲ್ಲಿ ಸಮಾಜಕೇಂದ್ರಿತ ನೆಲೆಯೇ ಪ್ರಧಾನವಾಗಿ ವ್ಯಕ್ತಿ ಕೇಂದ್ರಿತ ನೆಲೆಯು ಆನುಷಂಗಿಕವಾಗಿದೆ.

ಸವಿತಾ ಅವರು ಹೇಳುವ ಹಾಗೆ, "ಗುಲ್ಬರ್ಗಾ ಹಾಗೂ ಬೀದರ್ ಜಿಲ್ಲೆಗಳಲ್ಲಿ ಇಲ್ಲಿ ಪ್ರಾತಿನಿಧ್ಯ ನೀಡಿದಂತಾಗಿಲ್ಲ ಎಂಬುದು ಅಧ್ಯಯನಕ್ಕೆ ಇರುವ ಇನ್ನೊಂದು ಮಿತಿಯಾಗಿದೆ. ಈ ಪ್ರದೇಶದ ಗಮನಾರ್ಹ ವ್ಯಕ್ತಿಯಿಂದ ವಿವರಪೂರ್ಣವಾದ ಆತ್ಮಚರಿತ್ರೆ ಪ್ರಕಟವಾಗದಿರುವುದೇ ಇದಕ್ಕೆ ಪ್ರಮುಖ ಕಾರಣ."[೭]

ಅವರೇ ಹೇಳುವ ಹಾಗೆ ಗುಲ್ಬರ್ಗಾ ಹಾಗೂ ಬೀದರ್ ಜಿಲ್ಲೆಯ ಪ್ರದೇಶದ ಗಮನಾರ್ಹ ವ್ಯಕ್ತಿಯಿಂದ ವಿವರಪೂರ್ಣವಾದ ಆತ್ಮಚರಿತ್ರೆ ಪ್ರಕಟವಾಗಲಿಲ್ಲ ಎನ್ನುತ್ತಾರೆ. ಇವರ ಪ್ರಕಾರ 'ಗಮನಾರ್ಹ ವ್ಯಕ್ತಿ' ಮತ್ತು 'ವಿವರಪೂರ್ಣವಾದ ಆತ್ಮಚರಿತ್ರೆ' ಎರಡೂ ಕೂಡ ಪ್ರಶ್ನಾರ್ಹ ಸಂಗತಿಯಾಗಿದೆ. ಬೀದರ್ ಜಿಲ್ಲೆಯ ಮಧುರಚೆನ್ನರ ಆತ್ಮಕಥೆಯಾದ 'ಆತ್ಮಶೋಧ' ೧೯೫೮ರಲ್ಲೇ ಪ್ರಕಟವಾಗಿದೆ. ಇದೇ ರೀತಿ ಅರವಿಂದ ಮಾಲಗತ್ತಿಯವರ ಗೌರ್ಮೆಂಟ್ ಬ್ರಾಹ್ಮಣ ೧೯೯೪ರಲ್ಲಿ ಪ್ರಕಟವಾಗಿದೆ.ಸವಿತ ಅವರು ಮಹಾಪ್ರಬಂಧವನ್ನು ೨೦೦೧ರಲ್ಲಿ ಸಾದರಪಡಿಸಿದ್ದಾರೆ.

ಶರಣಮ್ಮ ಗೋರೆಬಾಳ್ ಅವರ **'ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ'** ಎಂಬ ಮಹಾ ಪ್ರಬಂಧವು ಪ್ರಕಟವಾಗಿದೆ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಈ ಮಹಾಪ್ರಬಂಧದ ಮೊದಲ ಶೀರ್ಷಿಕೆ 'ಇದೇ ಆಗಿತ್ತಾದರೂ ಪ್ರಬಂಧ ಬರೆದವರ ಹೆಸರು ಎಸ್.ಕೆ.ಕೆಂಗಾಪೂರ ಆಗಿತ್ತು.ಅದು ಪ್ರಕಟವಾಗುವ ಸಂದರ್ಭಕ್ಕೆ ಪ್ರಬಂಧ ಬರೆದವರ ಹೆಸರು ಶರಣಮ್ಮ ಗೋರೇಬಾಳ ಎಂದಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ಆತ್ಮಚರಿತ್ರೆಯ ಪರಿಕಲ್ಪನೆ ಸ್ವರೂಪ ಆತ್ಮಚರಿತ್ರೆ ಮತ್ತು ಜೀವನಚರಿತ್ರೆ, ಇವುಗಳ ವ್ಯತ್ಯಾಸಗಳನ್ನು ಗಮನಿಸಿ, ಪಾಶ್ಚಾತ್ಯದಲ್ಲಿ ಆತ್ಮಚರಿತ್ರೆ ಇವುಗಳನ್ನು ಅವಲೋಕಿಸಿದ್ದಾರೆ.ಆತ್ಮಕಥೆಯನ್ನು ಆತ್ಮಾವಲೋಕನ ಎಂದು ಸರಿಯಾಗಿಯೇ ಗುರುತಿಸಿದ್ದಾರೆ.

ಪ್ರಬಂಧದ ಮೊದಲ ಅಧ್ಯಯನದಲ್ಲಿ ಆತ್ಮಚರಿತ್ರೆಯ ಹುಟ್ಟು ಮತ್ತು ಬೆಳವಣಿಗೆಯ ಸ್ವರೂಪದ ಬಗ್ಗೆ ವಿವರಣೆ ಕೊಡಲಾಗಿದೆ. ಇವರ ಪ್ರಕಾರ ಇಲ್ಲಿಯವರೆಗೆ ಆತ್ಮಚರಿತ್ರೆ ಜೀವನ ಚರಿತ್ರೆಯಲ್ಲಿಯೇ ಸೇರಿಹೋಗಿತ್ತು. ಆದರೆ ಆತ್ಮಕಥನ ತನ್ನದೇ ಆದ ರಚನೆ ಸ್ವರೂಪ ಹೊಂದಿ ಪ್ರತ್ಯೇಕ ಅಸ್ತಿತ್ವ ಪಡೆದು ಕೊಳ್ಳುತ್ತಿದೆ. ಅಂತೆಯೇ ಆತ್ಮಚರಿತ್ರೆಗೂ ಜೀವನಚರಿತ್ರೆಗೂ ಇರುವ ವ್ಯತ್ಯಾಸ ಹಾಗೂ ಸಾಮ್ಯತೆಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಆತ್ಮಕಥನ ಯಾವುದೇ ಸಾಹಿತಿಯ ಸಾಹಿತ್ಯ ಕೃತಿಗಿಂತ ಕಡಿಮೆಯೇನಿಲ್ಲ. ಹೀಗಾಗಿ ಆತ್ಮಚರಿತ್ರೆಯು ಸಾಹಿತ್ಯಪ್ರಕಾರವೆಂದು ಗುರುತಿಸಲಾಗಿದೆ ಎನ್ನುತ್ತಾರೆ.

ಆತ್ಮಚರಿತ್ರೆಯ ಸ್ವರೂಪದ ಬಗ್ಗೆ ಸಾಮಾನ್ಯ ಸ್ವರೂಪ ಮತ್ತು ವಿಶಿಷ್ಟ ಸ್ವರೂಪ ಎನ್ನುವ ವಿಂಗಡಣೆಯನ್ನು ಮಾಡಿದ್ದಾರೆ. ಆದರೆ ಈ ವಿಂಗಡಣೆಗಳೇ ಸರಿಯಿಲ್ಲ ಎನ್ನಿಸುತ್ತದೆ. ಯಾಕೆಂದರೆ ಯಾರ ಅನುಭವವೂ ಸಾಮಾನ್ಯವಲ್ಲ. ಎಲ್ಲವೂ ವಿಶಿಷ್ಟ ಸಂವೇದನೆಯೇ ಆಗಿರುವಾಗ ನಾವು ಸಾಮಾನ್ಯ ಎಂದು ಗೆರೆ ಕೊರೆದರೆ ಇದು ಒಂದು ಮಿತಿಯಾಗುತ್ತದೆ.

ಆತ್ಮಚರಿತ್ರೆಗೂ ಜೀವನಚರಿತ್ರೆಗೂ ಇರುವ ವ್ಯತ್ಯಾಸ ಹಾಗೂ ಸಾಮ್ಯವನ್ನು ಇವರು ಆತ್ಮಚರಿತ್ರೆಗಿಂತ ಜೀವನಚರಿತ್ರೆಯೆ ಹೆಚ್ಚು ಅಥೆಂಟಿಕ್ ಆಗಿರುತ್ತದೆ. ಆತ್ಮಚರಿತ್ರೆಯಲ್ಲಿ ಲೇಖಕ ತನಗೆ ಬೇಕಾದ, ಬೇಡವಾದದ್ದನ್ನೆಲ್ಲಾ ಆರಿಸಿ ಸೋಸಿ ಬರೆಯುತ್ತಾನೆ. ಆದರೆ ಜೀವನಚರಿತ್ರೆಯಲ್ಲಿ

ಹಾಗಲ್ಲ. ಎಲ್ಲಾ ವಿಷಯಗಳೂ ಬರುತ್ತದೆ. ಹೇಗೆಂದರೆ ಜೀವನಚರಿತ್ರಾಕಾರನಿಗೆ ಎಲ್ಲ ವಿಷಯಗಳು ಮುಖ್ಯವಾಗುತ್ತದೆ. ಆತ್ಮಚರಿತ್ರೆಕಾರನಿಗೆ ಆಯ್ಕೆ ಮತ್ತು ನಿರಾಕರಣೆ ಇರುತ್ತದೆ. ಇದನ್ನು ಕೆಲವು ಉದಾಹರಣೆಯಿಂದ ಸ್ಪಷ್ಟಪಡಿಸಬಹುದಾದರೆ, ಜೀವನಚರಿತ್ರೆಗೆ ಆತ್ಮಕಥೆಯೇ ಮೂಲ ಆಕರ ಹೊರತು ಜೀವನ ಚರಿತ್ರೆ ನೋಡಿ ಆತ್ಮಕಥೆ ಬರೆಯುವುದಿಲ್ಲ. ಜಿ ಎಸ್ ಎಸ್ ಹೇಳುವ ಮಾತಿಗೂ, "ಡ್ಯೂಟಿಗೆ ರಿಪೋರ್ಟ್ ಮಾಡಿಕೊಂಡ ಮಾರನೇ ದಿನವೇ ತರಗತಿಗಳನ್ನು ತೆಗೆದುಕೊಳ್ಳಬೇಕೆಂದು ಪ್ರಿನ್ಸಿಪಾಲರು ಹೇಳಿದರು. ಮುಂದಿನ ಅವರ ಅನುಭವವನ್ನು ಅವರ ಮಾತಿನಲ್ಲಿ ಕೇಳುವುದೇ ಒಳಿತು. 'ನನಗೆ ಒಂದು ಥರ ಭಯವಿಲ್ಲದ ಭೀತಿ ಕವಿದುಕೊಂಡಿತ್ತು. ನಾನು ಎಂದೂ ಯಾವುದೇ ವೇದಿಕೆಗಳ ಮೇಲೆ ಮಾತಾಡಿದವನಲ್ಲ. ಯಾವ ಚರ್ಚಾ ಕೂಟಗಳಲ್ಲೂ ಭಾಗವಹಿಸಿದವನಲ್ಲ. ಕ್ಲಾಸ್ ಸೋಶಿಯಲ್ಸ್ ಸಂದರ್ಭದಲ್ಲಿ ಒಂದೆರಡು ಮಾತಾಡುವಾಗ ಹಣೆಗೆ ಬೆವರು ಬಂದು ಕಾಲುಗಳು ತತ್ತರಿಸುವ ಅನುಭವವಾಗಿತ್ತು. ಇನ್ನು ವಿದ್ಯಾರ್ಥಿಗಳ ಮುಂದೆ ಅದೂ ದಾವಣಗೆರೆಯ ಇಂಟರ್ಮೀಡಿಯೇಟ್ ಕಾಲೇಜಿನ ವಿದ್ಯಾರ್ಥಿಗಳ ಮುಂದೆ ಮಾತನಾಡುವುದು ಹೇಗೆ? ಏನು ಮಾಡುವುದು? ತಸ್ಮೈ ಶ್ರೀ ಗುರುವೇ ನಮಃ ಎಂದು ಕುವೆಂಪುರವರನ್ನು ನೆನೆದೆ. ಮರುದಿನ ಮೊದಲ ಪಾಠ ಮಾಡಬೇಕಾದ್ದು ಸೀನಿಯರ್ ಇಂಟರ್ ತರಗತಿಗೆ. ಕುವೆಂಪುರವರ 'ಚಿತ್ರಾಂಗದ' ಕಾವ್ಯವನ್ನು ಕುರಿತು ಕುವೆಂಪುರವರು ಮೂರು ವರ್ಷ ಮಾಡಿದ ತರಗತಿಯ ಪಾಠದ ಬತ್ತಳಿಕೆ-ಬಿಲ್ಲು-ಖಡ್ಗ-ತೋಮರಗಳಿಂದ ಸಿದ್ಧವಾಗಿ ಸೂಟುಬೂಟು ಧರಿಸಿ ತರಗತಿಗೆ ಪ್ರವೇಶ ಮಾಡಿ ಒಂದು ಘಂಟೆ ಭಯಂಕರ ಭಾಷಣ ಮಾಡಿದೆ. ನನಗೇ ತಿಳಿಯದಂಥ ದಪ್ಪ ದಪ್ಪ ಪದಪುಂಜಗಳು ಆ ವಿದ್ಯಾರ್ಥಿಗಳ ತಲೆಗೇ ಹೋಗದ ಕಾವ್ಯಮೀಮಾಂಸೆಯ ಪಾರಿಭಾಷಿಕ ಪದಗಳು. ನಡುನಡುವೆ ಮಹಾಛಂದಸ್ಸು, ಮಹೋಪಮೆ ಇಂಥ ಸಂಗತಿಗಳು ಇತ್ಯಾದಿಗಳಿಂದ ಕೂಡಿದ ನನ್ನ ವಾಕ್ ಪ್ರವಾಹದಿಂದ ನನ್ನ ಮೊದಲ ಪಾಠಕ್ಕೆ ಬಲಿಯಾದ ಸೀನಿಯರ್ ಇಂಟರ್‌ಮೀಡಿಯೇಟ್‌ನ ವಿದ್ಯಾರ್ಥಿಗಳು ಹಿಂದು ಮುಂದು ಏನೆಂದೂ ತಿಳಿಯದೆ ಸ್ಥಂಭೀಭೂತರಾದರು. ಮಾತಾಡಿದರೆ ಅರ್ಥವಾಗದಂತೆ ಮಾತಾಡಬಹುದಾದದ್ದು ಇಂಗ್ಲಿಷಿನಲ್ಲೇ ಅಂದುಕೊಂಡಿದ್ದ ನನಗೆ ಕನ್ನಡದಲ್ಲೂ ಇತರರಿಗೆ ಅರ್ಥವಾಗದಂತೆ ಮಾತನಾಡಬಹುದೆಂಬ ಸತ್ಯ ಸಾಕ್ಷಾತ್ಕಾರವಾಯಿತು. ನನ್ನ ವಾಗಾಡಂಬರದ ಆಘಾತಕ್ಕೆ ಸಿಕ್ಕು ಸ್ಥಂಭೀಭೂತರಾದ ಅಂದಿನ ಸೀನಿಯರ್ ಇಂಟರ್‌ಮೀಡಿಯೇಟ್ ತರಗತಿಯ ವಿದ್ಯಾರ್ಥಿಗಳಲ್ಲಿ ಎಂ ಚಿದಾನಂದ ಮೂರ್ತಿ ಒಬ್ಬರಾಗಿದ್ದರು."[೮]

ಇದರ ಬಗ್ಗೆ ರಾಷ್ಟ್ರಕವಿ ಜಿ.ಎಸ್.ಎಸ್ ಜೀವನ ಚರಿತ್ರೆಯಲ್ಲಿ ಲಿಂಗದೇವರು ಹಳೆಮನೆ ಯವರು ಚಿದಾನಂದ ಮೂರ್ತಿಯವರ ಮಾತುಗಳನ್ನ ಹೀಗೆ ಉಲ್ಲೇಖಿಸುತ್ತಾರೆ-"ಅವರನ್ನು

ನಾವು ನೋಡಿದ್ದೇ ಮೊದಲು ತರಗತಿಯಲ್ಲಿ ಸೂಟ್ ಹಾಕಿ ಕಾಲಲ್ಲಿ ಷೂ ಧರಿಸಿ ಮೊದಲ ತರಗತಿಗೆ ಬಂದರು ಅವರು ಆದರ ಹಿಂದಿನ ದಿನ ರಾತ್ರಿ ತಾನೆ 'ನೀರಿನ ಟಾಕಿ'ಯ ಉದ್ಯಾನವನದಲ್ಲಿ ಷೂ ಹಾಕಿ ಓಡಾಡಿ ಅವುಗಳನ್ನು ಕಾಲಿಗೆ ಹೊಂದಿಸಿಕೊಳ್ಳುವ ಪ್ರಯತ್ನ ಮಾಡಿದ್ದರೆಂದು ಆಮೇಲೆ ತಿಳಿಯಿತು. ನಾವು ಕುತೂಹಲಿಗಳಾಗಿ ಅವರ ಪಾಠಕ್ಕೆ ಸಿದ್ಧರಾದೆವು. ನಮಗೆ ಆ ವರ್ಷ ಕುವೆಂಪುರವರ ಚಿತ್ರಾಂಗದ ಕಾವ್ಯ ಪಠ್ಯಪುಸ್ತಕವಾಗಿ ನಿಯಮಿತವಾಗಿತ್ತು.ಅವರು ಆ ದಿನ ವಾಸ್ತವವಾಗಿ ಚಿತ್ರಾಂಗದ ಕಾವ್ಯದ ಬಗ್ಗೆ ಏನೂ ಹೇಳಲಿಲ್ಲ. ತಾವು ಬಿ ಎ ಆನರ್ಸ್‌ನಲ್ಲಿ ಓದಿದ್ದ ಅಲಂಕಾರ ಶಾಸ್ತ್ರ ಉಪಮೆ ಇವುಗಳನ್ನೆಲ್ಲ ಹೇಳಿ ಮಹೋಪಮೆಯ ಬಗ್ಗೆ ಉಜ್ವಲ ಉಪನ್ಯಾಸವನ್ನು ಬಿಗಿದರು.ನಿಜವಾಗಿಯೂ ಉಜ್ವಲ ಏಕೆಂದರೆ ಯಾರಿಗೂ ಏನೂ ಅರ್ಥವಾಗಲಿಲ್ಲ. ಏಕೆಂದರೆ ನಾವೆಲ್ಲ ಬೆದರಿ ಕಣ್ಣು ಕಣ್ಣು ಬಿಡುತ್ತ ನಡುಗುತ್ತ ಕೂತಿದ್ದೆವು. ಕುವೆಂಪುರವರ 'ಮಹೋಪಮೆ' ಎಂಬ ಹೆಸರಿನ ಪ್ರಬಂಧದ ಸಾಲುಸಾಲುಗಳನ್ನು ಆ ದಿವಸ ಉದ್ಧರಿಸಿದರು 'ತಗುಳ್ಚುವುದು', 'ಸಾದೃಶ್ಯಶ್ರೀ, 'ಭೂಮ', 'ಮಹತ್ತು', 'ಬೃಹತ್ತು'(ಇವೆಲ್ಲ ಕುವೆಂಪು ಉಕ್ತಿಗಳೆ) ಮುಂತಾದ ಪದಗಳು ಪದಪುಂಜಗಳು. ಇನ್ನೂ ಎಷ್ಟೋ ಸಂಸ್ಕೃತ ಭೂಯಿಷ್ಠವೂ ಕಷ್ಟವೂ ಜಟಿಲವೂ ಆದ ವಾಕ್ಯಗಳು. ಅವರ ಬಾಯಿಯಿಂದ ಧಾರಾಕಾರವಾಗಿ ಸುರಿದವು. ಅವರ ಮಾತಿನ ಪ್ರವಾಹವನ್ನು ಮೆಚ್ಚಿಕೊಂಡೆವು ಎಂದು ಹೇಳಿದರೆ ಸುಳ್ಳಾದೀತು. ದಡದ ಮೇಲೆ ಇದ್ದರೆ ತಾನೆ ಪ್ರವಾಹವನ್ನು ಮೆಚ್ಚುವುದು! ತೇಲಿದರೆ, ಮುಳುಗಿದರೆ, ನೀರು ಕುಡಿದು ಕಣ್ಣು ಬಿಟ್ಟರೆ ಏನಾದೀತು ಊಹಿಸಿಕೊಳ್ಳಬಹುದು. ಹೊಸಬರಾದರೂ ಪರವಾಗಿಲ್ಲ ಜೋರಾಗಿದ್ದಾರೆ ಎಂದು ಅಂದುಕೊಂಡೆವು."

ಆತ್ಮಕಥೆಗೂ ಜೀವನಚರಿತ್ರೆಗೂ ಇರುವ ವ್ಯತ್ಯಾಸ ಮತ್ತು ಸಾಮ್ಯತೆಗಳು ಒಂದು ಪಿಎಚ್.ಡಿ ಮಹಾ ಪ್ರಬಂಧ ಬರೆಯಬಹುದಾದಷ್ಟು ದೊಡ್ಡ ವ್ಯಾಪ್ತಿಯನ್ನು ಪಡೆದಿವೆ. ಆದರೂ ನನ್ನ ಅಧ್ಯಯನದ ಮಿತಿಯಲ್ಲಿ ಇಲ್ಲಿ ಒಂದು ಆತ್ಮಕಥೆ ಹಾಗೂ ಜೀವನಚರಿತ್ರೆಯ ಸಾಮ್ಯ ಹಾಗೂ ವ್ಯತ್ಯಾಸಗಳನ್ನು ಗುರುತಿಸುವ ಪ್ರಯತ್ನಮಾಡಿದ್ದೇನೆ. ಇದು ಇನ್ನೂ ಹೆಚ್ಚಿನ ಸಂಶೋಧನೆಯನ್ನು ನಿರೀಕ್ಷಿಸುತ್ತದೆ.

ಜೀವನ ಚರಿತ್ರೆಯಲ್ಲಿ ಬರುವ ಲಿಂಗದೇವರು ಹಳೆಮನೆಯವರು ಹೇಳುವ "ಆಗಿನ ಕಾಲಕ್ಕೆ ಎಸ್.ಎಸ್.ಎಲ್.ಸಿ.ಪಾಸು ಎಂದರೆ ವಿದ್ಯಾಭ್ಯಾಸದ ಒಂದು ಪ್ರಾಥಮಿಕ ಘಟ್ಟ ಮುಗಿದಂತೆ ಎಂಬ ನಂಬಿಕೆ ಇತ್ತು.ಅದನ್ನು ಪಾಸು ಮಾಡಿದವರಿಗೆ ಆಗ ಉದ್ಯೋಗವೂ ಲಭಿಸುತ್ತಿತ್ತು.ಈಗಲೂ ಲಭಿಸುತ್ತಿದೆ.ಆದರೆ ಆಗ ಅವಕಾಶಗಳು ಹೆಚ್ಚು ಇರುತ್ತಿದ್ದವು. ಶಿವರುದ್ರಪ್ಪ ಎಸ್.ಎಸ್.ಎಲ್.ಸಿ.ಪಾಸು ಮಾಡಿದಾಗ ಬಡತನದಲ್ಲಿದ್ದ ಅವರ ತಂದೆ ಸಹಜವಾಗಿಯೇ ಮಗ ಉದ್ಯೋಗ ಹಿಡಿಯಲಿ

ಎಂದು ಅಪೇಕ್ಷೆ ಪಟ್ಟರು.ಮಗನಿಗೆ ಮುಂದೆ ಓದಬೇಕೆಂಬ ಆಸೆ. ಮಗನ ಒತ್ತಾಯಕ್ಕೆ ಅವರು ಒಪ್ಪಲೇಬೇಕಾಯಿತು.೧೯೪೨ರಲ್ಲಿ ಅವರು ತುಮಕೂರಿನಲ್ಲಿ ಇಂಟರ್‌ಮೀಡಿಯೇಟ್ ಸೇರಿಕೊಂಡರು. ೧೯೪೨ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಚಳುವಳಿಯಲ್ಲಿ ಮಹತ್ವದ ವರ್ಷ.'ಬ್ರಿಟಿಷರೆ ಭಾರತ ಬಿಟ್ಟು ತೊಲಗಿ' ಎಂಬ ಘೋಷಣೆಯೊಂದಿಗೆ ಇಡೀ ದೇಶವೇ ಚಳುವಳಿಯಾಗಿ ರೂಪುಗೊಂಡಿತು. ಶಾಲಾಕಾಲೇಜುಗಳು ಹಾರಿಹೋದವು. ಈ ಬಿರುಗಾಳಿಯಲ್ಲಿ ಶಿವರುದ್ರಪ್ಪ ಕೂಡ ತರಗೆಲೆಯಾಗಿ ಮೆರವಣಿಗೆಯಲ್ಲಿ ಭಾಗವಹಿಸಿ 'ವಂದೇ ಮಾತರಂ' ಕೂಗಿದರು. ಈ ಸುದ್ದಿ ತಂದೆಗೆ ತಿಳಿಯಿತು. ಅವರು ಗಾಬರಿಯಾದರು. ಸರ್ಕಾರಿ ಹುದ್ದೆಯಲ್ಲಿದ್ದ ಅವರಿಗೆ ಈ ಚಳುವಳಿಗಳ ಬಗ್ಗೆ ಭಯ. ಕೊರಟಗೆರೆಯ ಹತ್ತಿರ ಅಕ್ಕಿರಾಂಪುರದಲ್ಲಿದ್ದ ಅವರು ಕೂಡಲೇ ಮಗನನ್ನು ಊರಿಗೆ ಕರೆಸಿಕೊಂಡರು."[೧೦]

ಆತ್ಮಕಥೆಯಲ್ಲಿ ಚಳುವಳಿಯಲ್ಲಿ ಭಾಗವಹಿಸಿದ ವಿವರಗಳಿಲ್ಲ. ಜೀವನಚರಿತ್ರೆಯಲ್ಲಿ ಮಗ ಚಳುವಳಿಯಲ್ಲಿ ಭಾಗವಹಿಸಿದರೆ ಎಂಬ ಮುನ್ನೆಚ್ಚರಿಕೆಯಿಂದ ತಂದೆಯವರು ಮಗನನ್ನು ವಾಪಸು ಕರೆದೊಯ್ಯುತ್ತಾರೆ. ಇನ್ನು ಜಿ.ಎಸ್.ಎಸ್ ಅವರೇ ಹೇಳುವ ಹಾಗೆ ಕೆಲವು ವಿಷಯಗಳನ್ನು ನಾವೇ ಮರೆಯಬೇಕೆನ್ನುವಾಗ ಮತ್ತೇಕೆ ನೆನಪಿಸಿಕೊಳ್ಳಬೇಕು ಎನ್ನುತ್ತಾರೆ.

"ಜಿ.ಎಸ್.ಎಸ್ ದಾವಣಗೆರೆಯಲ್ಲಿದ್ದಾಗಲೇ ಅವರ ಜೀವನದ ಎರಡು ಮಹತ್ವದ ಘಟನೆಗಳು ಸಂಭವಿಸಿದವು. ಮೊದಲನೆಯದು ಅವರ ಪ್ರಥಮ ಕವನಸಂಕಲನ ಸಾಮಗಾನ ಪ್ರಕಟವಾದದ್ದು ಎರಡನೆಯದು ರುದ್ರಾಣಿಯವರೊಡನೆ ಅವರ ವಿವಾಹವಾದದ್ದು."[೧೧]

ಈ ವಿವರ ಆತ್ಮಕಥೆಯಲ್ಲಿಲ್ಲ. ಪತ್ನಿ ರುದ್ರಾಣಿ ಜೀವನ ಸಂಗಾತಿ ಪದ್ಮ ಎನ್ನುವ ವಿವರಗಳು ಆತ್ಮಕಥೆಯಲ್ಲಿಲ್ಲದ ಜೀವನ ಚರಿತ್ರೆಯಲ್ಲಿ ಸಿಗುವ ವಿವರಗಳಾಗಿವೆ.

ಬಿ.ವಿ.ಕಾರಂತರು"ನಾಟಕದ ಮುಂಚೆ ಒಂದು ಆತ್ಮಕಥೆ ಬರೆದಿದ್ದೆ. ಸುಳ್ಳುಗಳದೇ ಸರಪಳಿಯಂತಿದ್ದ ಆ ಬರಹದಲ್ಲಿಡೀ ನನ್ನನ್ನು ಸಾಧ್ಯವಾದಷ್ಟು ಹಿಗ್ಗಿಸಿ ಹೀರೆಕಾಯಿ ಮಾಡಿ ಕೊಂಡಿದ್ದೆ. ಹುಟ್ಟಿದ ಕೂಡಲೇ ನನ್ನ ಹಿಮ್ಮಡಿಯಲ್ಲಿ ಬೆಳ್ಳಿ ರೂಪಾಯಿ ಚಿಹ್ನೆ ಇತ್ತು.ಅಂಥ ಇಂಥದೇ ನೂರಾರು. ಇಷ್ಟು ಸುಳ್ಳು ಬರೆದಿದ್ದರಿಂದಲೇ ಈ ಆತ್ಮಕಥೆ ಈಗಲೂ ನನಗೆ ಜ್ಞಾಪಕ ಇದೆ"[೧೨] ಆತ್ಮಕಥೆ ಬರೆದದ್ದೆಲ್ಲಾ ಸತ್ಯ ಅಲ್ಲ ಎಂಬುದನ್ನು ಲೇಖಕರೇ ಒಪ್ಪಿಕೊಳ್ಳುತ್ತಾರೆ. ಹಾಗಾಗಿ ಆತ್ಮಕಥೆ ಸುಳ್ಳು ಸತ್ಯ ಎನ್ನುವುದಕ್ಕಿಂತ ನೋಡುವವನ ದೃಷ್ಟಿಕೋನವಾಗಿದೆ.

ಸುಮಂಗಲ ಅವರು **ಕುವೆಂಪು ಆತ್ಮಕಥೆ ಮತ್ತು ಅವರ ಕುರಿತ ಜೀವನಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನ** ಎಂಬ ಸಂಶೋಧನಾ ಪ್ರಬಂಧ ರಚಿಸಿ ಕನ್ನಡ ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದಾರೆ.

ಕುವೆಂಪು ಕೃತಿಗಳ ಅಧ್ಯಯನ ಈಗಾಗಲೇ ಹಲವು ನೆಲೆಗಳಲ್ಲಿ ನಡೆದಿದೆಯಾದರೂ ಆತ್ಮಕಥೆ ಕೇಂದ್ರಿತ ಅಧ್ಯಯನವನ್ನು 'ನೆನಪಿನ ದೋಣಿಯಲ್ಲಿ' ಕೃತಿಯ ಮೂಲಕ ಅಧ್ಯಯನವನ್ನು ಕೈಗೊಂಡಿದ್ದಾರೆ. ಈ ದೃಷ್ಟಿಯಿಂದ ಕುವೆಂಪು ಪ್ರತಿನಿಧಿಸುವ ಬಹುಮುಖಿ ಆಯಾಮಗಳನ್ನು ಆತ್ಮಕಥೆಯಲ್ಲಿ ಪರಿಶೀಲಿಸಿದ್ದಾರೆ. ಕುವೆಂಪು ಹುಟ್ಟಿ, ಬೆಳೆದು ಬಂದ ಪರಿಸರ ಜೀವನಕ್ರಮ ಹಾಗೂ ಚಾರಿತ್ರಿಕ ಒತ್ತಡಗಳ ಹಿನ್ನೆಲೆಯಲ್ಲಿ ಅವರ ಸೃಜನಶೀಲ ಪ್ರತಿಭೆಯ ವಿಭಿನ್ನ ನೆಲೆಗಳು ನೆನಪಿನ ದೋಣಿಯಲ್ಲಿ ಅನಾವರಣಗೊಂಡಿದೆ. ಅವರು ಸೃಷ್ಟಿಸಿದ ವಿಪುಲರಾಶಿಯ ಸಾಹಿತ್ಯ, ಚಿಂತನೆಗಳು ಇಂದಿಗೂ ತನ್ನ ಛಾಪನ್ನು ಉಳಿಸಿಕೊಂಡಿವೆ. ಇವು ಮತ್ತೆ ಮತ್ತೆ ವ್ಯಾಖ್ಯಾನಗಳಿಗೆ, ಮರುಪರಿಶೀಲನೆಗೆ ಚರ್ಚೆ ವಾಗ್ವಾದಗಳಿಗೆ ಒಳಗಾಗುತ್ತಿವೆ. ಕುವೆಂಪು ಅವರ ಇಂಥ ವ್ಯಕ್ತಿವಿಶಿಷ್ಟವಾದ ವಿಚಾರಧಾರೆ ತಮ್ಮ ಕಾಲಕ್ಕಷ್ಟೇ ಅಲ್ಲದೇ ನಮ್ಮ ಕಾಲಕ್ಕೂ ಪ್ರಸ್ತುತವಾಗುತ್ತದೆಯೇ? ಈ ಪ್ರಶ್ನೆಗೆ ಅವರ ಆತ್ಮಕಥೆಯಲ್ಲಿ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಆತ್ಮಕಥೆಯಲ್ಲಿ ಸಿಗದ ಮಾಹಿತಿಯನ್ನು ಜೀವನಚರಿತ್ರೆಗಳ ಮೂಲಕ ತಿಳಿಯುವ ಪ್ರಯತ್ನ ಮಾಡಲಾಗಿದೆ. ಅಧ್ಯಯನಕ್ಕಾಗಿ ಪೂರ್ಣಚಂದ್ರ ತೇಜಸ್ವಿಯವರ 'ಅಣ್ಣನ ನೆನಪು' ತಾರಿಣಿ ಅವರ 'ಮಗಳು ಕಂಡ ಕುವೆಂಪು' ಕೆ.ವಿ. ಸುಬ್ಬಣ್ಣನವರ 'ಕುವೆಂಪುಗೆ ಪುಟ್ಟ ಕನ್ನಡಿ' ದೇ.ಜವರೇಗೌಡರ 'ರಾಷ್ಟಕವಿ ಕುವೆಂಪು' ಹಾಗೂ ಪ್ರಭುಶಂಕರರ 'ಕುವೆಂಪು' ಕೃತಿಗಳನ್ನು ಬಳಸಿಕೊಳ್ಳಲಾಗಿದೆ. ಒಟ್ಟಾರೆ ಮಹಾಪ್ರಬಂಧದ ಅಧ್ಯಯನಕ್ಕಾಗಿ ಕುವೆಂಪು ಆತ್ಮಕಥೆಯನ್ನು ಪ್ರಧಾನ ಭೂಮಿಕೆಯಲ್ಲಿ ಪರಿಗಣಿಸಲಾಗಿದೆ. ಇದಕ್ಕೆ ಪೂರಕವಾಗಿ ಜೀವನಚರಿತ್ರೆಗಳ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಸೃಜನಶೀಲ ಸಾಹಿತ್ಯ ಕೃತಿಗಳ ಮೂಲಕ ಕುವೆಂಪು ಆಲೋಚನೆ, ಅಭಿಪ್ರಾಯಗಳನ್ನು ಗ್ರಹಿಸಿಕೊಳ್ಳುವುದಕ್ಕಿಂತ ಭಿನ್ನವಾಗಿ ಅಥವಾ ಇನ್ನೂ ಹತ್ತಿರದಿಂದ ಆತ್ಮಕಥೆಯ ಮೂಲಕ ಗ್ರಹಿಸಿದ್ದಾರೆ.ಆತ್ಮಕಥೆ ಎಂಬುದು ಪಾಶ್ಚಾತ್ಯ ಪ್ರಣೀತ ಆಧುನಿಕ ಪ್ರಕಾರವಾಗಿ ನಮಗೆ ದತ್ತವಾಗಿದ್ದರೂ ನಮ್ಮ ಸಂದರ್ಭದಲ್ಲಿ ಈ ಪ್ರಕಾರವನ್ನು ಬಳಸಿಕೊಳ್ಳುವ ರೀತಿ ವಿಶಿಷ್ಟವಾಗಿದೆ.ಕನ್ನಡದ ಇತರೆ ಆತ್ಮಕಥೆಗಳ ಮಾದರಿಗಿಂತ ಕುವೆಂಪು ಅವರ ಆತ್ಮಕಥೆ ಹಾಗೂ ಅದರ ನಿರೂಪಣೆ ವಿಭಿನ್ನವಾಗಿದೆ. ಇದು ವ್ಯಕ್ತಿಯೊಬ್ಬರ ಆತ್ಮಕಥೆಯಾದರೂ ಸಮಷ್ಟಿನೆಲೆಯಲ್ಲಿ ಬಿಂಬಿತವಾಗಿದೆಯೆಂದು ಸರಿಯಾಗಿಯೇ ಗುರುತಿಸಿದ್ದಾರೆ. ಹೀಗೆ ಆತ್ಮಕಥೆಯ ರಚನೆಯಲ್ಲಿ ಅನುಸರಿಸಿರುವ ಕ್ರಮ ಮತ್ತು ಅಳವಡಿಸಿ ಕೊಂಡಿರುವ ಮಾರ್ಪಾಡುಗಳನ್ನು ಗಮನಿಸುತ್ತಲೇ ಆತ್ಮಕಥೆಯನ್ನು ಬರೆಯುವ ಹಿಂದಿನ ಉದ್ದೇಶವನ್ನು ಪರಿಶೀಲಿಸಿದ್ದಾರೆ.

ಜಾತಿ, ಧರ್ಮ,ಸಂಸ್ಕೃತಿ, ಇಂಗ್ಲಿಷ್ ಇವೇ ಮೊದಲಾದ ಸಾಮಾಜಿಕ ಹಾಗೂ ಶೈಕ್ಷಣಿಕ ಬಿಕ್ಕಟ್ಟುಗಳಿಗೆ ಎದುರಾದ ಸಂದರ್ಭಗಳಿವೆ. ಎಳೆವಯಸ್ಸಿನ ಮೇಲೆ ಉಂಟುಮಾಡಿದ ಇದರ ಪರಿಣಾಮವೇ ನಂತರದಲ್ಲಿ ಮತೀಯ ಹಾಗೂ ಜ್ಞಾನ ರಾಜಕಾರಣಗಳ ವಿರುದ್ಧ ಪ್ರತಿಭಟಿಸಲು ಬೀಜರೂಪದ ಕಾರಣಗಳಾಗಿದ್ದವು ಎನ್ನುವುದನ್ನು ಸರಿಯಾಗಿಯೇ ಗುರುತಿಸಲಾಗಿದೆ.

ಪ್ರಕಟಗೊಂಡ ಪುಸ್ತಕಗಳ ಸಮೀಕ್ಷೆ

ಡಾ.ಬಿ.ಎಂ.ಪುಟ್ಟಯ್ಯನವರು **'ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ'** ಎಂಬ ಪುಸ್ತಕ ಹೊರತಂದಿದ್ದಾರೆ. ಆತ್ಮಕಥೆಗಳ ಅಧ್ಯಯನ ದೃಷ್ಟಿಯಿಂದ ಇದು ಒಂದು ಬಹು ಮುಖ್ಯ ಕೃತಿ.ಪುಟ್ಟಯ್ಯನವರು'ಆತ್ಮಕಥೆಗಳ ಅಧ್ಯಯನದ ಸುತ್ತ'ದಲ್ಲಿ ಸಾಹಿತ್ಯಿಕ ಅಧ್ಯಯನಗಳು ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯನ್ನು ಪಡೆಯುತ್ತಿದೆ ಎಂದು ಗುರುತಿಸುತ್ತಾ ಈ ಪ್ರಕ್ರಿಯೆಯ ಹಿಂದೆ ಎರಡು ಬಗೆಯ ಹಂಬಲ ಕೆಲಸ ಮಾಡುವುದನ್ನು ಗುರ್ತಿಸುತ್ತಾರೆ. ಅವುಗಳೆಂದರೆ ಸಾಹಿತ್ಯವನ್ನು ಕುರಿತ ಪಾರಂಪರಿಕ ನಿರ್ವಚನೆಯ ನೆಲೆಗಳನ್ನು ಮೀರುವ, ವಿಸ್ತರಿಸುವ, ಮತ್ತು ಮರುವ್ಯಾಖ್ಯಾನಿಸುವ ಆಸಕ್ತಿ ಒಂದಾದರೆ ಇನ್ನೊಂದು ವಿಶಾಲವಾದ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಚರ್ಚಿಸಿ ತಾತ್ವೀಕರಿಸುವ ಪ್ರಯತ್ನ. ಇವೆರಡೂ ಬೇರೆಬೇರೆಯಾಗಿರದೆ ಒಂದನ್ನೊಂದು ಪ್ರಭಾವಿಸುತ್ತ ಅಭಿವೃದ್ಧಿಗೊಳಿಸುತ್ತಾ ಸಾಗಿದೆ ಎನ್ನುತ್ತಾರೆ. "ಈ ಹಿಂದಿನ ದಶಕಗಳಿಗೆ ಹೋಲಿಸಿದರೆ ನಿರ್ದಿಷ್ಟವಾಗಿ ೯೦ರ ದಶಕದಲ್ಲಿ ಆತ್ಮಕಥೆಗಳು ಹೆಚ್ಚು ಬಂದಿದೆ. ಈ ಅಂಶವೂ ಆತ್ಮಕಥೆಗಳ ಬಗ್ಗೆ ಕುತೂಹಲ ಮತ್ತು ಆಸಕ್ತಿಯನ್ನು ಹುಟ್ಟಿಸುತ್ತದೆ."[೧೩]

ಪಾಶ್ಚಾತ್ಯ ಮಾದರಿಯ ಕುಟುಂಬಗಳು ಭಾರತದಲ್ಲೂ ಬಂದು ಅಲ್ಲಿಯ ಒತ್ತಡ, ತಲ್ಲಣ, ಆತಂಕಗಳನ್ನು ಆತ್ಮಕಥೆಯ ಮೂಲಕ ಹೊರಹಾಕುವುದೇ ಆಗಿದೆ. ಹೇಳುವುದು, ಬರೆಯುವುದು, ಎರಡೂ ರಿಲ್ಯಾಕ್ಸ್ ಆಗುವ ಮಾರ್ಗಗಳಾದರೂ ಬರವಣಿಗೆಯು ರಿಲ್ಯಾಕ್ಸ್ ಆಗುವ ಶ್ರೇಷ್ಠ ಮಾರ್ಗವಾಗಿದೆ.

'ಪಾಶ್ಚಾತ್ಯ ಪ್ರೇರಣೆಯಿಂದ ಜಾಗತಿಕ ಮಟ್ಟದಲ್ಲಿ ಕೆಲವು ಬದಲಾವಣೆಗಳಾದವು. ಇದರ ಪರಿಣಾಮ ಸಾಹಿತ್ಯದಲ್ಲಿಯೂ ವ್ಯಕ್ತವಾಯಿತು. ಸಾಹಿತ್ಯದ ಪ್ರಕಾರವಾದ ಆತ್ಮಕಥೆಯಲ್ಲಿಯೂ ವ್ಯಕ್ತವಾಯಿತು. ಈ ಎಲ್ಲ ಬರಹಗಳಲ್ಲಿಯೂ ಎದ್ದು ಕಾಣುವ ಒಂದು ಅಂಶವೆಂದರೆ ಬರವಣಿಗೆಯಲ್ಲಿ ದಾಖಲಾಗಬೇಕೆಂಬ ತಹತಹ. ಆತ್ಮಕಥೆಗಳು ಮಾಹಿತಿಯ ದೃಷ್ಟಿಯಿಂದ ಬರೆದವರ ವೈಯಕ್ತಿಕ ತುಡಿತದಂತೆ ಕಂಡರೂ ಅದರಾಚೆಗಿನ ಜಗತ್ತು ಇದನ್ನು ಪ್ರೇರೇಪಿಸುತ್ತಿದೆ.

ಬರವಣಿಗೆಯ ಮತ್ತು ದೃಶ್ಯಮಾಧ್ಯಮಗಳು ಇಂದು ಸಮಾಜವನ್ನು ವಿಚಿತ್ರವಾಗಿ ಪ್ರಭಾವಿಸುತ್ತಿವೆ. ಪ್ರಭುತ್ವವು ಬರವಣಿಗೆಯನ್ನೇ ಪ್ರಧಾನವಾಗಿ ಅವಲಂಬಿಸಿವೆ. ಮೇಲಿನ ಎರಡೂ

ಮಾಧ್ಯಮಗಳು ಬೇರೆ ಬೇರೆ ಕಾರಣಗಳಿಗಾಗಿ ಪ್ರಬಲವಾಗುತ್ತಿವೆ. ಮಾಹಿತಿಗಳನ್ನು ಕೊಡಲು ಮತ್ತು ಪಡೆಯಲು; ಧೋರಣೆಗಳನ್ನು ಮಂಡಿಸಲು ಮತ್ತು ಹೇರಲು; ಬಂಡವಾಳವನ್ನು ತೊಡಗಿಸಲು ಮತ್ತು ಅದನ್ನು ವೃದ್ಧಿಸಿಕೊಳ್ಳಲು; ಸಾಮಾಜಿಕವಾಗಿ ಗುರುತಿಸಿಕೊಳ್ಳಲು ಮತ್ತು ದಾಖಲಾಗಲು. ಬರವಣಿಗೆ ಮತ್ತು ದೃಶ್ಯಮಾಧ್ಯಮಗಳಲ್ಲಿ ದಾಖಲಾಗುವ ತೀವ್ರತೆ ಎದ್ದು ಕಾಣುತ್ತಿದೆ. ಈ ಬಗೆಯ ದಾಖಲೀಕರಣ ಮಾತ್ರವೇ ಚರಿತ್ರೆಯಾಗಬಲ್ಲುದು ಎಂಬ ನಂಬಿಕೆಯೂ ಇದರಲ್ಲಿದೆ. ಅಂದರೆ ವರ್ತಮಾನದಲ್ಲಿ ದಾಖಲೀಕರಣಗೊಳ್ಳುವುದೆಂದರೆ ಭವಿಷ್ಯದಲ್ಲಿ 'ಚರಿತ್ರೆ'ಯಾಗುವ ಅಪೇಕ್ಷೆಯು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಕೆಲಸ ಮಾಡುತ್ತಿದೆ. ವರ್ತಮಾನದಲ್ಲಿ ತೀವ್ರ ಬಿಕ್ಕಟ್ಟಿನಲ್ಲಿರುವ ಸಾಮಾನ್ಯರು ಭವಿಷ್ಯದಲ್ಲಿ ಭರವಸೆಯನ್ನು ಕಾಣಬೇಕಾಗಿದೆ. ಇದಕ್ಕಾಗಿ ಇವರು ಭವಿಷ್ಯವನ್ನು ರೂಪಿಸಿಕೊಳ್ಳಬೇಕಾಗಿದೆ."[೧೪]

ಆತ್ಮಕಥೆ ಕೇವಲ ವೈಯಕ್ತಿಕವಲ್ಲ. ಅದಕ್ಕೆ ಸಾಮಾಜಿಕ ಆಯಾಮವೂ ಮುಖ್ಯವಾಗುತ್ತದೆ. ಶಿವರಾಮ ಕಾರಂತರು ಮತ್ತು ಬಿ.ವಿ.ಕಾರಂತರು ಹಾಗೂ ಸಿ.ಎನ್. ರಾಮಚಂದ್ರನ್ ಇವರುಗಳು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಒಬ್ಬ ವ್ಯಕ್ತಿಯ ಬದುಕಿಗೆ ಒಂದಲ್ಲಾ ಒಂದು ರೀತಿಯಲ್ಲಿ ಬೇರೆಬೇರೆ ರೂಪಗಳಲ್ಲಿ ಬೇರೆಬೇರೆ ಪಾತ್ರಗಳಲ್ಲಿ ವ್ಯಕ್ತಿತ್ವ ನಿರ್ಮಾಣಕ್ಕೆ ಸಮಾಜ ಕಾರಣವಾಗಿದೆ.

ಆತ್ಮಕಥೆ: ಕನ್ನಡ ಗದ್ಯದ ಅಧೋಲೋಕ ಡಾ॥ ರಹಮತ್ ತರೀಕೆರೆ

'ಕನ್ನಡ ಗದ್ಯದ ಅಧೋಲೋಕ' ಎಂಬ ಡಾ॥ ತರೀಕೆರೆಯವರ ಲೇಖನ ಆತ್ಮಚರಿತ್ರೆಗಳ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದು.'ಕನ್ನಡ ಆತ್ಮಕಥೆ ಒಂದು ಕಗ್ಗಾಡು' ಎನ್ನುವುದೂ 'ಆಧುನಿಕ ಕನ್ನಡದ ಗದ್ಯದ ಸಮೃದ್ಧಿ ಮತ್ತು ವೈವಿಧ್ಯಕ್ಕೆ ಅನೇಕ ಗದ್ಯಪ್ರಕಾರಗಳು ಕಾರಣವಾಗಿವೆ. ಅವುಗಳಲ್ಲಿ ಆತ್ಮಕಥೆ ಮತ್ತು ಜೀವನಚರಿತ್ರೆಗಳು ಕೂಡ ಸೇರಿವೆ'. ಎನ್ನುವುದು ಸ್ವಲ್ಪ ಮಟ್ಟಿಗೆ ವಿರೋಧದ ನೆಲೆಯಾಗಿದೆ ಎನ್ನುವಂತಿದೆ. ಆದರೆ ನಮ್ಮ ಸಾಹಿತ್ಯ ಸಂಸ್ಕೃತಿಯು ಇವುಗಳ ಮೇಲೆ ತಕ್ಕ ಚರ್ಚೆಯನ್ನೇ ಮಾಡದೆ ಪಕ್ಕಕ್ಕೆ ಸರಿಸಿದೆ. ಇವುಗಳ ಓದು ಮತ್ತು ಚರ್ಚೆಯನ್ನು ೨೧ನೇ ಶತಮಾನದಲ್ಲಿ ಬೇರೆಬೇರೆ ದೃಷ್ಟಿಕೋನಗಳಿಂದ ಕೈಗೊಳ್ಳಬೇಕಿದೆ. ಇದು ಸಾಹಿತ್ಯವನ್ನು ಪ್ರಕಾರಭೇದದಿಂದ ಹೊರಬಂದು ನೋಡುವ ಪ್ರಜಾಪ್ರಭುತ್ವೀಯ ಯತ್ನವಾಗ ಬೇಕಿದೆ. ಇದರಿಂದ ಭಾರತದ ಬಹುರೂಪೀ ಸಂಸ್ಕೃತಿಯನ್ನು ಪರಿಭಾವಿಸಲು ಸಾಧ್ಯವಾಗುವುದು–ಇದು ಇಲ್ಲಿನ ಟಿಪ್ಪಣಿಗಳಲ್ಲಿ ಪ್ರತಿಪಾದಿಸಲು ಯತ್ನಿಸಿರುವ ಒಂದು ಸಡಿಲ ಪ್ರಮೇಯ.ಬಹುಶಃ ಆತ್ಮಕಥೆಗಳ ಮೇಲೆ ನನಗಿರುವ ವ್ಯಾಮೋಹದ ಕಾರಣದಿಂದಾಗಿಯೂ ಓದುಗರನ್ನು ಇದರತ್ತ ಸೆಳೆಯಬೇಕೆಂಬ ವಾಂಛೆಯಿಂದಲೂ ನಾನು ಈ ಪ್ರಮೇಯವನ್ನು ಕಟ್ಟಿರಬಹುದು ಎಂದು ಪೀಠಿಕೆಯನ್ನು ಹಾಕಿ ತಮ್ಮ ವಾದವನ್ನು ಹೀಗೆ ಮುಂದುವರೆಸುತ್ತಾರೆ.

"ಕಾದಂಬರಿ ಸಣ್ಣಕತೆ ಭಾವಗೀತೆ ಆತ್ಮಕಥೆ ಮುಂತಾದ ಪ್ರಕಾರಗಳು ಪಶ್ಚಿಮದಿಂದ ವಲಸೆ ಬಂದವು ಎಂಬ ಮಾತನ್ನು ಕನ್ನಡದ ಎಲ್ಲ ಸಾಹಿತ್ಯ ಚರಿತ್ರಕಾರರೂ ಹೇಳುತ್ತಾರೆ. ಆದರೆ ತರ್ಕಕ್ಕಾದರೂ ನಮ್ಮಲ್ಲೂ ಆತ್ಮಕಥೆಯ ವಿಭಿನ್ನ ರೂಪಗಳಿದ್ದವು ಎಂದು ಸಾಧಿಸಬೇಕೆನಿಸುತ್ತದೆ. ನಮ್ಮ ಪ್ರಾಚೀನ ಕವಿಗಳು ಕೃತಿಗಳ ಉಪೋದ್ಘಾತ ಭಾಗಗಳಲ್ಲಿ ತಮ್ಮ ಹೆತ್ತವರು, ಪೂರ್ವಜರು, ಗುರು, ಆಶ್ರಯದಾತ, ಊರು ಮತ್ತದರ ಪರಿಸರಗಳ ಬಗ್ಗೆ ಹೇಳಿಕೊಳ್ಳುತ್ತಾರೆ. ಶರಣರ ವಚನಗಳಲ್ಲೂ ಪರೋಕ್ಷವಾಗಿ ಆತ್ಮಕಥೆಯ ಎಳೆಗಳಿವೆ. 'ಬಿಟ್ಟೇನೆಂದೊಡೆ ಬಿಡದೀ ಮಾಯೆ' ಎಂಬ ಅಕ್ಕನ ಈ ಮಾತು, ಏಕಕಾಲಕ್ಕೆ ಕಾಡುವ ದೈಹಿಕ ಕಾಮನೆಗಳ ಬಗ್ಗೆ ಮಾಡಿದ ರೂಪಕಾತ್ಮಕವಾಗಿ ಬಣ್ಣನೆಯೂ, ತನ್ನನ್ನು ಪೀಡಿಸುವ ಗಂಡಸರ ಜಗತ್ತನ್ನು ಕುರಿತ ಬೇಸರಿಕೆಯೂ, ಯೋಗಿಗಳ ಬೆಂಬತ್ತಿ ಬರುತ್ತಿದ್ದ ಯೋಗಿನಿಯರನ್ನು ಕುರಿತು ತನ್ನ ಕಾಲದಲ್ಲಿದ್ದ ನುಡಿಗಟ್ಟಿನ ಬಳಕೆಯೂ ಆಗಿರುವಂತಿದೆ."[೧೫] ಆತ್ಮಕಥೆಯ ಎಳೆಗಳಿರುವುದು ನಿಜವಾದರೂ ಆಧುನಿಕ ಆತ್ಮಕಥೆಗಳಿಗೆ ಸಮನಲ್ಲ ಎಂಬುದನ್ನು ಸರಿಯಾಗಿಯೇ ಗುರುತಿಸಿದ್ದಾರೆ.

"ಭವಿ ಬಿಜ್ಜಳನ ಕೆಳಗೆ ಕುಳ್ಳಿರ್ದು ಊಳಿಗವ ಮಾಡುವೆನೇ? ಎಂದು ಬಸವಣ್ಣನು ನಾಟಕೀಯವಾಗಿ ಒಂದು ಪ್ರಶ್ನೆಯನ್ನು ಕೇಳಿಕೊಂಡು, ಅದಕ್ಕೆ ತಾನೇ ಉತ್ತರಿಸುವ ವಚನವೊಂದಿದೆ. ಇದು ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಯೊಬ್ಬನು ತನಗೆ ಬರುವ ಟೀಕೆಗಳಿಗೆ ಉತ್ತರಿಸುವ ಹೊಣೆಗಾರಿಕೆ ಮತ್ತು ಮಾಡಿಕೊಳ್ಳುವ ಆತ್ಮವಿಮರ್ಶೆಗಳನ್ನು ಒಳಗೊಂಡಿದೆ. ಹರಿಹರನ 'ಪುಷ್ಪರಗಳೆ'ಯನ್ನು ಸ್ಥಾವರ ಲಿಂಗಾರ್ಚಕನಾದ ಅವನ ದಿನಚರಿಯನ್ನಾಗಿ ಕೂಡ ನೋಡಬಹುದು. ಹೀಗೆ ನಮ್ಮ ಕವಿಗಳು ಯಾವ ಪ್ರಕಾರದಲ್ಲೇ ಸಾಹಿತ್ಯ ರಚಿಸಿರಲಿ, ತಮ್ಮ ಆತ್ಮಕಥನದ ಅಂಶಗಳನ್ನು ಬಿಟ್ಟುಕೊಟ್ಟಿದ್ದಾರೆಂದು ಅನಿಸುವುದಿಲ್ಲ."[೧೬]

ಇದಕ್ಕೆ ನನ್ನ ಅಭಿಪ್ರಾಯವನ್ನು ಸೇರಿಸುವುದಾದರೆ ಭಾರತೀಯ ಸಂಸ್ಕೃತಿ ಆತ್ಮನ ಮಟ್ಟಕ್ಕೆ ಏರಿದುದು.ವಿದೇಶೀ ಸಂಸ್ಕೃತಿ ಕೇವಲ ದೇಹ ಕೇಂದ್ರಿತವಾದದ್ದು. ಅದಕ್ಕೆ ಭಾರತ ಯೋಗಭೂಮಿಯೆಂತಲೂ ವಿದೇಶ ಭೋಗ ಭೂಮಿ ಎಂತಲೂ ಕರೆಯುತ್ತಾರೆ. ಭೋಗ ಭೂಮಿಗಿಂತ ಯೋಗ ಭೂಮಿ ಉನ್ನತ ಮಟ್ಟದ್ದಾಗಿದೆ. ವ್ಯಕ್ತಿ ಕೇಂದ್ರಿತ ನೆಲೆಯು ಆತ್ಮನ ಮಟ್ಟಕ್ಕೆ ಏರಿದಾಗ ಮನುಷ್ಯನ ಅಹಂ ನಾಶವಾಗುತ್ತದೆ.ಈ ಅಹಂ ನಾಶವಾದಾಗ ವ್ಯಕ್ತಿಯನ್ನು ಮೀರಿದ ಅಗೋಚರ ಶಕ್ತಿ (ಆತ್ಮ) ಮುನ್ನಡೆಸುವುದು ಗೊತ್ತಾಗುತ್ತದೆ. ಅಂತಹ ಸಂದರ್ಭದಲ್ಲಿ ವೀರನಾರಾಯಣನೇ ಕವಿ ಲಿಪಿಕಾರ ಕುಮಾರವ್ಯಾಸದಂತಹ ಮಾತುಗಳು ಬರುತ್ತವೆ. ಮನುಷ್ಯನಲ್ಲಿ ದೇಹ ಮನಸ್ಸು ಆತ್ಮ ಇದೆ. ಆತ್ಮ ಸರ್ವಶಕ್ತವಾದದ್ದು. ದೇಹ ನಶ್ವರವಾದದ್ದು. ದೇಹವಿಲ್ಲದೆ ಮನಸ್ಸನ್ನು ಕಲ್ಪಿಸಿಕೊಳ್ಳಲು ಅಸಾಧ್ಯವಾದುದು. ದೇಹ ಮತ್ತು ಆತ್ಮದ ಸಂಬಂಧದ ಬಗ್ಗೆ ನಮಗೆಲ್ಲ ಗೊತ್ತಿದೆ.

ಭವಿ ಬಿಜ್ಜಳ ಎನ್ನುವ ಪದವೇ ಬಿಜ್ಜಳನ ಸಾಮಾನ್ಯ ಮಟ್ಟವನ್ನು ಹೇಳುತ್ತದೆ. ಆನು ಉಳಿಗವ ಮಾಡುವೆನೇ ಎನ್ನುವುದು ಬಸವಣ್ಣನ ಉನ್ನತ ಮಟ್ಟವನ್ನು ಹೇಳುತ್ತದೆ. ಬಿಜ್ಜಳನ ಸಾಮಾನ್ಯ ಮಟ್ಟಕ್ಕೂ ಬಸವಣ್ಣನ ಉನ್ನತ ವ್ಯಕ್ತಿತ್ವಕ್ಕೂ ಎಲ್ಲಿಯ ಹೋಲಿಕೆ ಎಂಬುದೇ ಇಲ್ಲಿಯ ಅರ್ಥವಾಗಿದೆ. ಇತಿಹಾಸ ಕೂಡ ಇದನ್ನು ಪುಷ್ಟೀಕರಿಸುತ್ತದೆ. ಇಲ್ಲಿ ಹರಿಹರನ ದಿನದ ಕೆಲಸವನ್ನು ವಿಮರ್ಶಕರು ಅವನ ದಿನಚರಿಯೆಂದು ಕರೆದಿದ್ದಾರೆಯೇ ಹೊರತು ಅವನು ತನ್ನ ದಿನಚರಿ (ಡೈರಿ) ಇದನ್ನು ಆತ್ಮಕಥೆಯೆಂದು ಹೇಳಿಕೊಳ್ಳಲಿಲ್ಲ. ಪಂಪನಲ್ಲಿಯ ಆತ್ಮಕಥೆಯ ಅಂಶಗಳಿಗೂ ಹರಿಹರನ ವಿವರಗಳಿಗೂ ವ್ಯತ್ಯಾಸವಿದೆ.

ಬಹುಶಃ ಕವಿಕಲಾವಿದರು "ತಮ್ಮ ವೈಯುಕ್ತಿಕ ಬದುಕಿನ ಬಗ್ಗೆ ಹೆಚ್ಚು ಹೇಳಿಕೊಳ್ಳುವುದನ್ನೇ 'ಕನ್ನಡ ಸಂಸ್ಕೃತಿ' ಅಷ್ಟು ಉತ್ತೇಜಿಸುವಂತಿಲ್ಲ. ಅನೇಕರು ತಮ್ಮ ಸ್ವಂತ ಹೆಸರನ್ನೇ ಅಡಗಿಸಿಕೊಳ್ಳುತ್ತಾರೆ. ಮುದ್ದಣ್ಣ ಎಂಬುದು ಕಾವ್ಯನಾಮ ಮಾತ್ರವಲ್ಲ. ತನ್ನ ಹೆಸರನ್ನು ಬಚ್ಚಿಟ್ಟು ಬರೆಯುವ ನಂದಳಿಕೆ ಲಕ್ಷ್ಮೀನಾರಾಯಣಪ್ಪನ ಯತ್ನವೂ ಹೌದು(ಅದಕ್ಕೂ ಮೊದಲು ಮುದ್ದಣ್ಣ ಹೆಣ್ಣಿನ ಹೆಸರಲ್ಲಿ ಬರೆಯಲೆತ್ನಿಸಿದವನು). ಇನ್ನೊಬ್ಬ ನಾರಣಪ್ಪನು ತಾನೊಬ್ಬ ಕೇವಲ ಲಿಪಿಕಾರ ನೆಂದೂ ಗದುಗಿನ ವೀರನಾರಯಣನೇ ನಿಜವಾದ ಕವಿಯೆಂದೂ ಹೇಳುವವನು. ಕವಿಗಳು ನಿಜನಾಮವನ್ನು ಹಿಂದಿಕ್ಕಿ ಕಾವ್ಯನಾಮದಲ್ಲಿ ಬರೆಯುವುದು. ಕಾವ್ಯವನ್ನು ಇಷ್ಟದೇವರೇ ಬರೆದನೆಂದು ಹೇಳುವುದು ಏನನ್ನು ಸೂಚಿಸುತ್ತದೆ? ಸಾಹಿತ್ಯ ರಚನೆಯಲ್ಲಿ ತಮ್ಮದೇನು ಪಾತ್ರವಿಲ್ಲ. ಎಲ್ಲ ದೈವಕೃಪೆ ಎಂಬ ಭಕ್ತಸಹಜ ನಿಯಮವನ್ನೇ? ತಮ್ಮ ಕೃತ್ಯಕ್ಕೆ ಹೊಣೆ ಹೊರುವುದರಿಂದ ತಪ್ಪಿಸಿಕೊಳ್ಳುವ ಉಪಾಯವನ್ನೇ? ತಮ್ಮ ಶ್ರಮಕ್ಕೆ ಪ್ರತಿಫಲ ಪಡೆಯಲು ಹಕ್ಕು ಸಾಧಿಸಲಾಗದ 'ಮಾ ಫಲೇಶು ಕದಾಚನ'ದ ಹಿಂಜರಿಕೆಯನ್ನೇ? ವ್ಯಕ್ತಿವಿಶಿಷ್ಟತೆಯನ್ನು ಒಂದು ದೊಡ್ಡ ಸಂಗತಿ ಯೆಂದು ಭಾವಿಸದ ಭಾರತೀಯ ಸಾಮಾಜಿಕ ಮನೋಧರ್ಮವನ್ನೇ?"[೧೭]

ಇಲ್ಲಿ ಮುದ್ದಣ ಹೆಸರನ್ನು ಮರೆಮಾಚಿ ಬರೆದಿರುವುದಕ್ಕೂ ಗದುಗಿನ ನಾರಾಣಪ್ಪ ಲಿಪಿಕಾರ ಕುಮಾರವ್ಯಾಸನೆಂದು ಬರೆದಿರುವುದಕ್ಕೂ ಚಾರಿತ್ರಿಕ ವ್ಯತ್ಯಾಸವಿದೆ. ಇದಕ್ಕೆ ಸಂಬಂಧಿಸಿದಂತೆ ಕಯ್ಯಾರ ಕಿಞ್ಞಣ್ಣ ರೈ ಹಾಗೂ ಸಿಂಪಿ ಲಿಂಗಣ್ಣರ ಆತ್ಮಕಥೆಗಳನ್ನು ನೋಡಬಹುದು. ಕೈಯಾರ ಕಿಞ್ಞಣ್ಣ ರೈ, "ಪತ್ರಿಕೆಗಳಿಗೆ ಕಳುಹಿಸಿದ ಕವನ ಲೇಖನಗಳು ಪ್ರಕಟವಾದುವು. ಮಂಗಳೂರು, ಧಾರವಾಡ, ಮದ್ರಾಸು, ಉಡುಪಿ ಈ ಎಲ್ಲ ಕಡೆಗಳ ಪತ್ರಿಕೆಗಳಲ್ಲೂ ಬಂದವು. ಆದರೂ ನಿಜ ಹೆಸರು ಕೊಟ್ಟು ಬರೆಯುವ ಧೈರ್ಯ ಬರಲಿಲ್ಲ; ನನ್ನ ಹೆಸರು ತಿಳಿದು ಇವ ಏನು ತಾನೇ ಬರೆದಾನು ಎಂದು ಹೇಳಿಬಿಟ್ಟಾರು ಎಂಬ ಭಾವನೆಯಿಂದ 'ದುರ್ಗಾ ದಾಸ್' ಎಂಬ ಸಾಹಿತ್ಯ ನಾಮದಿಂದ ಬರೆದೆ. ಸುಮಾರು ಹತ್ತು ವರ್ಷಗಳ ಕಾಲ ಅಂತೆಯೇ ಪ್ರಕಟವಾಯಿತು."[೧೮] ಎಂದು ಹೇಳುತ್ತಾರೆ.

"ಅದೇ ಕಾಲಕ್ಕೆ ಮುಂದೆ ನಿರಂಜನ ಎಂಬ ಹೆಸರಿನಿಂದ ಖ್ಯಾತನಾಮರಾದ ಕುಳಕುಂದ ಶಿವರಾಯರು ಮಂಗಳೂರಿಗೆ ಬಂದವರು 'ರಾಷ್ಟ್ರಬಂಧು' ಪತ್ರಿಕೆಯನ್ನು ಸೇರಿಕೊಂಡರು. ಪ್ರಸಿದ್ಧ ದೇಶಭಕ್ತರಾದ ಹಿರಿಯಡ್ಕ ರಾಮರಾಯ ಮಲ್ಯರು ಹಿಂದೆ 'ಸತ್ಯಾಗ್ರಹಿ' ಎಂಬ ಪತ್ರಿಕೆ ನಡೆಸುತ್ತಿದ್ದು, ಅದರಲ್ಲಿ ದೇಶ ದ್ರೋಹಿ ಲೇಖನಗಳು ಬಂತೆಂದು ಆಗಿನ ಬ್ರಿಟಿಷ್ ಪ್ರಭುತ್ವ ಅವರಿಗೆ ಶಿಕ್ಷೆ ವಿಧಿಸಿತ್ತು. ಆ ಪತ್ರಿಕೆ ಮುಚ್ಚಿಹೋಯಿತು. ಹಾಗಿದ್ದರೂ ಅವರು ಪತ್ರಿಕೋದ್ಯಮವನ್ನು ಸ್ವಾತಂತ್ರ್ಯ ಸಂಗ್ರಾಮದ ಅಂಗವಾಗಿ ಮತ್ತೂ ನಡೆಸುತ್ತಿದ್ದರು."[೧೯]

ಅಷ್ಟೇ ಅಲ್ಲದೆ ನಂದಳಿಕೆ ಲಕ್ಷ್ಮೀ ನಾರಾಯಣಪ್ಪನ ಬಗ್ಗೆ ಕೂಡ ಕಯ್ಯಾರ ಕಿಞ್ಞಣ್ಣ ರೈ ಹೀಗೆ ಬರೆಯುತ್ತಾರೆ, ಎಷ್ಟೋ ಜನರು ಉತ್ತಮ ಕತೆಗಾರ ಲೇಖಕರು ತಮ್ಮ ಹೆಸರು ಮರೆಸಿ ಗುಪ್ತ ನಾಮಗಳಿಂದ ಬರೆಯುತ್ತಾರೆ. ನಿಜ ಹೆಸರಿನಿಂದ ಬರೆದರೆ ಇವನೇನು ಬರೆದಾನು ಎಂದು ಜನ ತಾತ್ಸಾರ ಮಾಡಬಹುದೆಂಬ ಭಾವನೆಯಿಂದಲೂ ಮುದ್ದಣನಂತಹ ಮಹಾ ಕವಿಗೆ ಈ ಭಾವನೆ ಬಂತು. ತಾನು ನಂದಳಿಕೆ ಲಕ್ಷ್ಮೀ ನಾರಾಯಣಪ್ಪ. ಉದ್ಯೋಗದಲ್ಲಿ ಕುಸ್ತಿ ಮಾಸ್ತರ. ಅಂಥವನು ಬರೆದದ್ದು ಎಂದು ಹೇಳಿದರೆ ಅದನ್ನು ಯಾರೂ ಮನ್ನಿಸಲಾರರೆಂದು ಗ್ರಹಿಸಿಯೇ ಆತ ಹೆಸರು ಮರೆಸಿ ಮುದ್ದಣನೆಂದು ಮಹಾಲಕ್ಷ್ಮಿಯೆಂದು ಪ್ರಾಚೀನ ಕವಿಗಳು ಬರೆದದ್ದನ್ನು ದೊರಕಿಸಿ ತಾಳೆ ಗರಿಯಿಂದ ಪ್ರತಿ ಮಾಡಿದನೆಂದು ತಿಳಿಸಿ ಮೈಸೂರಿನ ರಾಮಾನುಜ ಅಯ್ಯಂಗಾರ್‌ಗೆ ಕಳಿಸಿದನು. ಹೀಗಾಗಿ ಅದು ಪ್ರಕಟವಾಯಿತು. ಬಹುಶಃ ಕುಸ್ತಿ ಮಾಸ್ತರ ಲಕ್ಷ್ಮೀ ನಾರಾಯಣಪ್ಪನು ಬರೆದದ್ದೆಂದು ಕಳುಹಿಸಿದ್ದರೆ ಅವರು ಪ್ರಕಟಿಸುತ್ತಿರಲಿಲ್ಲವೇನೋ. ಶ್ರೀ ರಾಮ ಪಟ್ಟಾಭಿಷೇಕದಲ್ಲಿ 'ಕನ್ನಡತಿಯೊರೆದ ನುಡಿಯೆಂದು ಅವಗಣಿಸದೇ ಕನ್ನಡಿಗನೊರೆದು ದೆಂದು ಮನ್ನಿಸಬೇಕೆಂದು' ಸೂಚ್ಯವಾಗಿ ತಿಳಿಸಿದ್ದರೂ ಆಗ ಅದಕ್ಕೆ ಬೇರೆಯೇ ಅರ್ಥ ಕಲ್ಪಿಸಲಾಗಿತ್ತು. ಅಂತೂ ಆತನ ಕಾವ್ಯ ಹೇಗಾದರೂ ಪ್ರಕಟವಾದದ್ದೂ ಒಳ್ಳೆಯದೇ ಆಯಿತು. ಮುಂದೆ ಆ ಕುರಿತು ಚರ್ಚಿತವಾಗಿ ಬೆಂಗಳೂರಿನ ಕರ್ನಾಟಕ ಸಂಘ, 'ಮುದ್ದಣ' ಎಂಬ ಪ್ರಶಸ್ತಿ ಗ್ರಂಥವನ್ನು ಪ್ರಕಟಿಸುವ ತನಕ ಅದರಲ್ಲಿ ಪಂಜೆಯವರು ಬೆನಗಲರು ಮೊದಲಾದವರು ಪ್ರತ್ಯಕ್ಷ ಸಾಕ್ಷಿ ಎಂಬಂತೆ ತಿಳಿಸುವ ತನಕ ನಂದಳಿಕೆ ಲಕ್ಷ್ಮಿ ನಾರಾಣಪ್ಪನೇ ಮುದ್ದಣನೆಂದು ಎಲ್ಲರೂ ಒಪ್ಪುತ್ತಿರಲಿಲ್ಲ.

ಅದೇ ರೀತಿ ಸಿಂಪಿ ಲಿಂಗಣ್ಣ, "ಆ ಬಳಿಕ ಹತ್ತೆಂಟು ವರ್ಷಗಳ ತರುವಾಯ ದೇಶ ಭಕ್ತಿಯ ಕತೆಗಳು (೯೦) ಬರೆದು ಪ್ರಚುರ ಪಡಿಸಿದ್ದುಂಟು.ಅದು ಕಾರಣಾಂತರದಿಂದ ಮಧುರಚೆನ್ನರ ಹೆಸರಿನಿಂದ ಹುಬ್ಬಳ್ಳಿಯ ಲೋಕ ಶಿಕ್ಷಣ ಸಮಿತಿಯವರು ಪ್ರಕಟಿಸಿದರು. ನನ್ನ ಹೆಸರಿನಿಂದ ಪ್ರಕಟವಾದರೆ ಶಿಕ್ಷಕನಾದ ನನಗೆ ಸರ್ಕಾರದಿಂದ ತೊಂದರೆಯಾಗುವ ಭಯವಿತ್ತು."[೨೦]

ಇವೆರಡೂ ವಾದಗಳಲ್ಲಿ ಭಾರತದ ದೇಶಭಕ್ತರು ಇಂಗ್ಲೀಷರಿಗೆ ದೇಶ ದ್ರೋಹಿಗಳಾಗಿ ಕಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ನಂದಳಿಕೆ ಲಕ್ಷ್ಮಿ ನಾರಾಣಪ್ಪನಾಗಲಿ ಸಿಂಪಿ ಲಿಂಗಣ್ಣನವ ರಾಗಲಿ ಬ್ರಿಟಿಷ್ ಸರ್ಕಾರದ ಸೇವೆಯಲ್ಲಿರುವುದರಿಂದ ಅವರಿಗೆ ಅವರ ಬರಹಗಳಿಂದ ಯಾವುದೇ ರೀತಿಯಲ್ಲಿ ದೇಶದ್ರೋಹಿಯೆಂದು ತೊಂದರೆಕೊಡುವ ಅವಕಾಶ ಹೆಚ್ಚಿರುವುದರಿಂದ ಗುಪ್ತನಾಮದಿಂದ ಬರೆದರು ಎನ್ನುವುದೇ ಸಮಂಜಸವೆನಿಸುತ್ತದೆ.

ಭಾರತೀಯ ಸಾಹಿತ್ಯದಲ್ಲಿ ಆತ್ಮಕಥೆಯ ಎಳೆಗಳಿವೆ ಎನ್ನುವುದು ಸರಿಯಾಗಿದೆ. ಜೊತೆಗೆ ಪಾರಸೀ ಮತ್ತು ಉರ್ದುವಿನಲ್ಲಿ ಆತ್ಮಕಥೆಯ ರೂಪಗಳಿದ್ದವು ಎಂಬುದು ಹೆಚ್ಚಿನ ಸಂಶೋಧನೆಯನ್ನು ನಿರೀಕ್ಷಿಸುತ್ತದೆ. ಆದರೂ ಆತ್ಮಕಥೆಯ ಮೂಲ ಯುರೋಪ್ ಖಂಡವೇ ಎಂಬುದು ರಹಮತ್ ರವರ ಸರಿಯಾದ ಅನಿಸಿಕೆಯಾಗಿದೆ.

ಅವರದೇ ಮಾತಿನಲ್ಲಿ ಹೇಳುವುದಾದರೆ, "ವ್ಯಕ್ತಿಗಳ ವೈಯುಕ್ತಿಕ ಅನಿಸಿಕೆ, ಭಾವನೆ ಮತ್ತು ನಿಲುವುಗಳಿಗೆ ಭಾರತೀಯರಿಗಿಂತ ಹೆಚ್ಚು ಆದ್ಯತೆ ಕೊಡುವ ಯುರೋಪಿಯನ್ ಮನೋಧರ್ಮದಲ್ಲಿ ಆತ್ಮಕಥೆಯು ಹುಟ್ಟುವುದು ಸಹಜವಾಗಿತ್ತು.ತಮ್ಮ ಬಾಳನ್ನು ಒಮ್ಮೆ ತಾವೇ ಹಿಂದಿರುಗಿ ನೋಡಿಕೊಳ್ಳಲೆಂದೂ ದಿನಚರಿ ಇಲ್ಲವೇ ಆತ್ಮಕಥೆಯನ್ನು ಯುರೋಪಿಯನ್ನರು ಬರೆಯುವುದು ಸಾಮಾನ್ಯವಾಗಿತ್ತು. ಭಾರತದಲ್ಲಿದ್ದ ಯುರೋಪಿಯನ್ ಅಧಿಕಾರಿಗಳು ಪಾದ್ರಿಗಳು ಕಲಾವಿದರು ಬರೆದಿರುವ ದಿನಚರಿ ಮತ್ತು ಟಿಪ್ಪಣಿಗಳು ಅಪಾರ ಪ್ರಮಾಣದಲ್ಲಿವೆ. ಕರ್ನಾಟಕದಲ್ಲಿ ಅಧಿಕಾರಿಗಳಾಗಿ ಸೇವೆಸಲ್ಲಿಸಿದ ಬ್ರಿಟಿಷರ ನೆನಪುಗಳ ಮೂಲಕ ಕರ್ನಾಟಕದ ಚರಿತ್ರೆಯನ್ನು ಕಟ್ಟಿದರೆ ಅದು ಹೇಗಿರಬಹುದು? ಈ ಕುತೂಹಲವು ಸುರುಪುರದಲ್ಲಿ ಬ್ರಿಟಿಶ್ ಏಜೆಂಟನಾಗಿದ್ದ ಮೆಡೋಸ್ ಟೇಲರನ ಆತ್ಮಕಥನಾತ್ಮಕ ನೆನಪುಗಳನ್ನು ಓದುವಾಗ ಸುಳಿಯುವುದುಂಟು. ಪಶ್ಚಿಮದ ಆಧುನಿಕತೆಗೆ ತೆರೆದುಕೊಂಡ ನಮ್ಮ ಅನೇಕ ಲೇಖಕರು ಹಾಗೂ ರಾಜಕಾರಣಿಗಳು ದಿನಚರಿ ಬರೆವ ಅಭ್ಯಾಸ ರೂಢಿಸಿಕೊಂಡರು. ಟಿಪ್ಪು ತನ್ನ ಕನಸುಗಳನ್ನು ಬರೆದಿಟ್ಟಿರುವುದು ದಿನಚರಿ ಅಥವಾ ಆತ್ಮಕಥೆಯ ಒಂದು ರೂಪವೆಂದು ಭಾವಿಸುವುದಾದರೆ, ಇದಕ್ಕೆ ಅವನಿಗೆ ಒದಗಿದ್ದ ಯುರೋಪಿಯನ್ನರ ಸಂಪರ್ಕವೂ ಒಂದು ಪ್ರೇರಣೆಯಾಗಿದೆ."[೨೧]

ಕನ್ನಡದ ಮಟ್ಟಿಗೆ ಆಧುನಿಕ ಸಾಹಿತ್ಯದಲ್ಲಿ ಒಂದು ಪ್ರಕಾರವಾಗಿ ಆತ್ಮಕಥೆ ಬೆಳೆದಿದ್ದು ಕೂಡ ಪಶ್ಚಿಮದ ಗಾಢ ಸಹವಾಸದಿಂದಲೇ. ಆತ್ಮಕಥೆಗಳು ಆಧುನಿಕ ಸಾಹಿತ್ಯದ ವಿಶಿಷ್ಟ ಭಾಗವಾಗಿ ಬೆಳೆದುಬಂದಿವೆ. ಆದರೆ ಅದನ್ನು ನಮ್ಮ ಸಾಹಿತ್ಯ ಸಂಸ್ಕೃತಿಯ ವಿಚಿತ್ರ ಧೋರಣೆಯಿಂದ ಗಂಭೀರ ಚರ್ಚೆಗೆ ಒಳಪಡಿಸಲು ಸಾಧ್ಯವಾಗಿಲ್ಲ. ನಾವು ಗೋಕಾಕರ 'ಭಾರತ ಸಿಂದುರಶ್ಮಿ'ಯನ್ನು ಚರ್ಚಿಸಬಲ್ಲವು; ಆದರೆ ಕನ್ನಡದ ಶ್ರೇಷ್ಠ ಆತ್ಮಕಥೆಗಳನ್ನಲ್ಲ. ಕಾರಂತರ 'ಮೂಕಜ್ಜಿಯ ಕನಸುಗಳು'

ಕಾದಂಬರಿಯಾಗಿರುವ ಕಾರಣಕ್ಕೇ 'ಹುಚ್ಚುಮನಸ್ಸಿನ ಹತ್ತುಮುಖ'ಗಳಿಗಿಂತ ಮುಖ್ಯವಾಗುತ್ತದೆ. ಪ್ರಾಚೀನ ಸಾಹಿತ್ಯದಲ್ಲಿ ಇಲ್ಲದ ಒಂದು ಬಗೆಯ ಶ್ರೇಣೀಕರಣ ಪರಿಕಲ್ಪನೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಆತ್ಮಕಥೆ ಜೀವನಚರಿತ್ರೆಗಳ ವಿಷಯದಲ್ಲಿ ಇದ್ದಂತಿದೆ. ಇವನ್ನು 'ಸೃಜನಶೀಲ' ಸಾಹಿತ್ಯ ಪ್ರಕಾರಗಳು ಎಂದು ಒಪ್ಪಿಕೊಳ್ಳುವುದಕ್ಕೂ ಕೆಲವು ಸಾಹಿತ್ಯ ಚಿಂತಕರಿಗೆ ಮನಸ್ಸಿಲ್ಲ. ಸಾಹಿತ್ಯ-ಸಾಹಿತ್ಯೇತರ, ಕಾವ್ಯ-ಗದ್ಯ, ಸೃಜನ-ಸೃಜನೇತರ ವಿಭಾಗಕ್ರಮಗಳು ಸೆಕ್ಟೇರಿಯನಾಗಿ ಮತ್ತು ಅಸೂಕ್ಷ್ಮವಾಗಿ ಬಳಕೆಗೊಂಡದ್ದರ ಪರಿಣಾಮವಿದು. ಸಾಹಿತ್ಯ ಸೃಷ್ಟಿಕ್ರಿಯೆಯ ಬಗೆಗಿರುವ ನಿಗೂಢೀಕರಣ ಮತ್ತು ವಿಶೇಷೀಕರಣ ವಾದಗಳೂ ಇಂತಹ ತಾರತಮ್ಯ ವಾದವನ್ನು ಪೋಷಿಸುತ್ತವೆ; ಆತ್ಮಕಥೆ, ಜೀವನಚರಿತ್ರೆ ಮತ್ತು ಪ್ರವಾಸ ಕಥನಗಳು ಕೇವಲ ಅನುಭವದ ನಿರೂಪಣೆ ಮಾಡುತ್ತವೆ. ಅನುಭವವನ್ನು ಕಲೆಯಾಗಿಸುವುದಿಲ್ಲ' ಎಂಬ ಗ್ರಹಿಕೆ ಇಲ್ಲಿ ಕೆಲಮಟ್ಟಿಗೆ ಕೆಲಸ ಮಾಡಿರಬಹುದು. ಆದರೆ ಸಾಹಿತ್ಯ ಕುರಿತ ಯಾವುದೇ ವರ್ಗೀಕರಣಗಳನ್ನು ಆತ್ಯಂತಿಕವಾಗಿ ಬಳಸತೊಡಗಿದರೆ, ಹಲವು ರೂಪಗಳಲ್ಲಿ ಒಂದು ಭಾಷೆಯಲ್ಲಿ ಸೃಷ್ಟಿಯಾಗುತ್ತಿರುವ ಸಾಹಿತ್ಯಕ್ಕೆ ಸ್ಪಂದಿಸಲು ಆಗುವುದಿಲ್ಲ; ಒಟ್ಟು ಸಾಹಿತ್ಯ ಎಂಬ ಪರಿಕಲ್ಪನೆ ಈಗ ಒಳಗೊಳ್ಳುವ ಪರಿಕಲ್ಪನೆಯಾಗಿ ವಿಶಾಲತೆ ಪಡೆಯುತ್ತಿರುವುದನ್ನು ಅರಿಯಲು ಕಷ್ಟವಾಗುತ್ತದೆ. ಒಂದು ಕೃತಿಯ ನಿರ್ದಿಷ್ಟ ಪ್ರಕಾರಕ್ಕೆ ಸೇರಿದ ಕಾರಣದಿಂದಲೇ ಆತ್ಮಕಥೆ ಜೀವನ ಚರಿತ್ರೆಗಳಿಗಿಂತ ಶ್ರೇಷ್ಠವಾಗಿರುವುದಕ್ಕೆ ಯಾವುದೇ ತಾರ್ಕಿಕ, ಸಾಹಿತ್ಯಕ ಮತ್ತು ತಾತ್ವಿಕ ಕಾರಣಗಳಿಲ್ಲ. ಸಾಹಿತ್ಯ ಕೃತಿ ಅಥವಾ ಬರೆಹದ ಜೀವಂತಿಕಗೆ, ಅದರೊಳಗಿನ ಅನುಭವ, ಕಲ್ಪನಾಶಕ್ತಿ, ಚಿಂತನೆ, ಜೀವನದರ್ಶನ, ಮಾನವೀಯ ಸೂಕ್ಷ್ಮತೆ ಮತ್ತು ಅದು ಬಳಸುವ ಭಾಷೆಗಳು ಕಾರಣವಾಗುತ್ತವೆ. ಪರಂತು, ಅದು ಯಾವ ಪ್ರಕಾರದಲ್ಲಿದೆ ಅಥವಾ ಅದನ್ನು ಬರೆದವರು ಯಾರು ಎಂಬುದಲ್ಲ. ಎಷ್ಟೋ ಕತೆ ಕಾದಂಬರಿ ಕಾವ್ಯಗಳು ಕೂಡ 'ಸಾಹಿತ್ಯೇತರ' ಸೃಜನೇತರ' ಎಂದು ಕರೆಯಲಾಗುವ ಆಯಾಮಗಳಿಂದ ತುಂಬಿವೆ."ಎಂಬ ರಹಮತ್ ತರೀಕೆರೆ ಅವರ ಮಾತುಗಳು ಆಲೋಚನೆಗೆ ಅರ್ಹವಾಗಿವೆ.

ಸಿ.ಎನ್.ರಾಮಚಂದ್ರನ್ ಅವರು ಕುಂ.ವೀ ಅವರ ಕೃತಿ 'ಗಾಂಧೀ ಕ್ಲಾಸ್' ಗೆ ಮುನ್ನುಡಿ ಬರೆಯುವ ಸಂದರ್ಭದಲ್ಲಿ ಹೇಳುವ ಮಾತುಗಳು ಗಮನಾರ್ಹವಾದುದು.'ಗಾಂಧೀ ಕ್ಲಾಸ್' ಕೃತಿಯನ್ನು ಓದಿದ ನಂತರ ನನಗೆ ಬಂದ ಸಂದೇಹ ಇದು: ಮರೆತು ಆತ್ಮಕಥೆಯ ಬದಲಿಗೆ ತಾವು ಬರೆದಿರುವ ಹೊಸ ಕಾದಂಬರಿಯೊಂದನ್ನು ನನಗೆ ಕಳಿಸಿದ್ದಾರೆಯೇ? ಇಷ್ಟು ರಂಜಕ ಹಾಗೂ ಅಸಾಧಾರಣ ಘಟನೆಗಳು ಕಾದಂಬರಿಯಲ್ಲಲ್ಲದೇ ಆತ್ಮಕಥೆಯಲ್ಲಿರಲು ಸಾಧ್ಯವೆ. ಉದಾ: ಕೇವಲ ತನ್ನ ಸುಯೋಧನ-ಛಲದಿಂದಾಗಿ ಸಾಕಷ್ಟಿದ್ದ ಸ್ಥಿರ-ಚರಾಸ್ತಿಗಳನ್ನು ಕಳೆದುಕೊಂಡು ಒದ್ದಾಡುವ ಸ್ಥಿತಿಗೆ ಬಂದ 'ಹೀರೋ' ತಂದೆಯ ಮಗನಾಗಿ ಅತಿ ಕಷ್ಟದಿಂದ ಎಸ್ಸೆಸ್ಸೆಲ್ಸಿ

ಪಾಸಾಗಿ ರೇಲ್ವೇ ದಿನಗೂಲಿಯಾಗುವ, ಪ್ಲಾಟ್‌ಫಾರಂನಲ್ಲಿ ಮೂರು ದಿನ ಹಸಿವೆಯಿಂದ ಸಾಯುವ ಸ್ಥಿತಿ ತಲುಪುವ, ಕೊನೆಗೆ ಶತಮಾನದಷ್ಟು ಹಿಂದುಳಿದಿರುವ ಊರೊಂದರಲ್ಲಿ ಶಾಲಾಮಾಸ್ತರನಾಗುವ, ತಿಂಗಳಿಗೊಂದು ಕೊಲೆಯಾಗುವ ಆ ಕುಗ್ರಾಮದಲ್ಲಿ ಧೈರ್ಯದಿಂದ ದಲಿತರನ್ನು ಶಾಲೆಗೆ ಸೇರಿಸಿಕೊಂಡೂ ಬದುಕಿ ಉಳಿಯುವ 'ಕಪ್ಪು' ಎಂಬ ತನ್ನ ಮೊದಲ ಕಾದಂಬರಿಯ ಕಾರಣದಿಂದ ಎಂದೋ ಕೊಲೆಯಾಗಬಹುದಾಗಿದ್ದ ಸಿನೆಮಾ ಪ್ರಪಂಚದಲ್ಲಿ ಎಲ್ಲರಿಂದ ವಂಚಿಸಲ್ಪಡುವ, ಅಕಾಡೆಮಿ ಪ್ರಶಸ್ತಿ ಪಡೆದ 'ಅರಮನೆ' ಕಾದಂಬರಿಯ ಬ್ಲರ್ಬ್ ತೋರಿಸಿ ಅಮೆರಿಕಾಕ್ಕೆ ವೀಸಾ ಪಡೆಯುವ ಇಂತಹ ವ್ಯಕ್ತಿ ಕಥಾನಾಯಕನಾಗಿರುವುದು; 'ಅರಮನೆ' ಎಂಬ ೧೨೦೦ ಪುಟಗಳ ಕಾದಂಬರಿಯನ್ನು ೫೦೦ ಪುಟಗಳಿಗೆ ತರಲು ಮತ್ತೆ ಮತ್ತೆ ಅದನ್ನು ಮುರಿದು ಕಟ್ಟಿ ಕೊನೆಗೆ ಅದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆಯುವ ಈ ಸಾಧನೆಗಳ ನಂತರವೂ ಅಬೋಧ ಬಾಲಕನ ಪ್ರೀತಿ–ವಿಸ್ಮಯಗಳನ್ನು ಉಳಿಸಿಕೊಂಡಿರುವ ಸಾಹಿತಿಯೂ ಆಗಿರುವುದು. ಇವೆಲ್ಲವೂ ಒಂದು ರೋಚಕ ಕಾದಂಬರಿಯಲ್ಲಿ ಮಾತ್ರ ಸಾಧ್ಯ ಕುಂ.ವೀ ಎಂಬ ಅದ್ಭುತ ಪ್ರತಿಭಾಶಾಲಿಯ ಅಸಾಧಾರಣ ಬದುಕಿನಲ್ಲಿ ಮಾತ್ರ ಸಾಧ್ಯ ಎಂದು ಆಶ್ಚರ್ಯ, ಅಭಿಮಾನ, ಅಸೂಯೆಗಳೊಡನೆ ಗ್ರಹಿಸುವಲ್ಲಿಗೆ– ಶಂಭೋ ಶಂಕರ ಮಹದೇವ."[೨]

ಪರಶಿವಮೂರ್ತಿ ರವರ 'ಗೆರೆ ದಾಟಿದ ಮೇಲೆ' ಬಗ್ಗೆ **ಕೃಷ್ಣಮೂರ್ತಿ ಹನೂರು** ಬರೆಯುತ್ತಾ "ಸಾಹಿತ್ಯದ ಶ್ರೇಷ್ಠತೆ ಇರುವುದೇ ಒಬ್ಬ ಲೇಖಕ ತನ್ನ ಸಂಗತಿಗಳನ್ನು ಹೇಗೆಲ್ಲ ಸಾರ್ವತ್ರಿಕಗೊಳಿಸುತ್ತಾನೆ ಎಂಬುದರಲ್ಲಿ! ಅಕ್ಕಮಹಾದೇವಿ ಬಸವಣ್ಣನವರ ವೈಯಕ್ತಿಕ ಅನುಭವ ಗಳನ್ನು ಹೇಳುವ ಅನೇಕ ವಚನಗಳು ಅವರದೇ ಅನುಭವ ಅನ್ನಿಸಿಕೊಳ್ಳುವುದಕ್ಕಿಂತ ಅವು ಓದಿಸಿಕೊಂಡ ಘಳಿಗೆಯಲ್ಲೇ ಅದು ಸಾಮಾಜಿಕ ಅನಿಸಿಕೊಂಡುಬಿಡುತ್ತದೆ. ಇವರ ಅನುಭವ ಕಥನ ಓದುಗರ ಅನುಭವಗಳನ್ನು ಹಂಚಿಕೊಂಡೇ ನಡೆಯುತ್ತದೆ.

ಪರಶಿವಮೂರ್ತಿರವರು ಬ್ಯಾಂಕ್ ಅಧಿಕಾರಿಗಳು.ಅವರ ಹುಟ್ಟು, ಬೆಳವಣಿಗೆ ಸಾಮಾನ್ಯ ರೀತಿಯದೇ. ಅನೇಕ ಬಗೆಯ ನಿಂದೆ ಶೋಷಣೆ ಸಮಸ್ಯೆಗಳಿಗೆ ಈಡಾದವರು. ಅಂದುಕೊಂಡದ್ದನ್ನು ನೆರವೇರಿಸಲಾಗದೇ ತೊಳಲಿದವರು. ಹಾಗೆಂದು ಅವರು ತಮ್ಮ ಆತ್ಮಕಥನದ ಉದ್ದಕ್ಕೂ ಯಾರ ಮೇಲೂ ಎಂಥ ಸಂದರ್ಭದಲ್ಲೂ ದ್ವೇಷ ಸಾಧಿಸುವುದಿಲ್ಲ. ಬದಲಿಗೆ ತಮ್ಮ ಮನಸ್ಸಿನೊಂದಿಗೆ ಮುಖಾಮುಖಿಯಾಗುತ್ತಾರೆ. ತಮ್ಮ ಆತ್ಮಸಾಕ್ಷಿಯನ್ನೇ ಅಗೆದಗೆದು ನೋಡುತ್ತಾರೆ. ಅತ್ಯಂತ ಸಮಾಧಾನ ಚಿತ್ತದಿಂದ ತಮ್ಮ ವಿವೇಕ ಅವಿವೇಕಗಳನ್ನು ಒರೆಗೊಡ್ಡಿ ನೋಡಿಕೊಳ್ಳುತ್ತಾರೆ. ತಮ್ಮ ಬದುಕಿನ ಹಾದಿ ಬದಲಾದಾಗಲೆಲ್ಲ ಅದರ ಅರಿವಾಗಿ ತಾನು ಕ್ರಮಿಸುತ್ತಿರುವ ಮಾರ್ಗ

ದಿಕ್ಕು ತಪ್ಪಿರಬಹುದೇ ಎನಿಸಿ ಹೆತ್ತವರ ಮುಂದೆ ನಿಂತು ತಲೆಬಾಗುತ್ತಾರೆ. ಇದೆಲ್ಲಕ್ಕಿಂತ ಮುಖ್ಯ ಪರಶಿವಮೂರ್ತಿಯವರು ತಾಯ್ತನದ ಅಂತರಂಗ ಇಟ್ಟುಕೊಂಡೇ ತಮ್ಮ ಬದುಕನ್ನು ಜಗತ್ತನ್ನು ನೋಡಹೊರಟಿದ್ದನ್ನು ಇಲ್ಲಿ ಮುಖ್ಯವಾಗಿ ಪ್ರಸ್ತಾಪಿಸಬೇಕು."[೨೩] ಎಂದು ಹೇಳುತ್ತಾರೆ.

ಇವೆರಡೂ ಆತ್ಮಕಥೆಗಳು ಸೃಜನಶೀಲ ಬರವಣಿಗೆಗೆ ಸಾಕ್ಷಿಯಾಗಿವೆ. ದಲಿತರಾದ ಪರಶಿವಮೂರ್ತಿಯವರಲ್ಲಿ ಮೊದಲನೇ ತಲೆಮಾರಿನಲ್ಲಿ ಬರುವ ಆಕ್ರೋಶ ಆವೇಶಗಳೆಲ್ಲ ಮಾಯವಾಗಿ ವಿವೇಚನೆ, ವಿವೇಕ ಮತ್ತು ಆತ್ಮವಿಮರ್ಶೆಯೇ ಇಲ್ಲಿ ಮುಖ್ಯವಾಗುತ್ತದೆ.

ಮತ್ತೆ ಡಾ॥ ರಹಮತ್ ತರೀಕೆರೆಯವರ ಲೇಖನಕ್ಕೆ ಮರಳುವುದಾದರೆ

"ಕನ್ನಡದಲ್ಲಿ ಆತ್ಮಕಥೆ ಮತ್ತು ಜೀವನ ಚರಿತ್ರೆಗಳು ಬೇರೆಬೇರೆ ಪ್ರಕಾರಗಳಲ್ಲಿ ರೂಪಾಂತರಗೊಂಡು ಪ್ರಕಟವಾಗುತ್ತಿವೆ. ಅದರಲ್ಲೂ ಇವಕ್ಕೂ ಕಾದಂಬರಿ ಪ್ರಕಾರಕ್ಕೂ ವಿಚಿತ್ರ ತರಹದ ಒಳಸಂಬಂಧವಿದೆ. ಈ ಹಿನ್ನೆಲೆಯಲ್ಲಿ ಸಾರಾ ತಮ್ಮ ಕಾದಂಬರಿಯ ಭಾಗವಾಗಿ ತಮ್ಮ ಆತ್ಮಕಥೆಯ ಬರೆಹವನ್ನು ಪ್ರಕಟಿಸಿಕೊಳ್ಳುವುದು ಮಾರ್ಮಿಕವಾಗಿದೆ. ಕನ್ನಡದಲ್ಲಿ ಆತ್ಮಕಥೆಗಳಿಗೆ ಕಾವ್ಯಕ್ಕಿಂತಲೂ ಬಹುಸಂಖ್ಯಾತರ ಓದುಗರಿದ್ದು, ಇದಕ್ಕೆ ಕಾರಣ ಅವು ಕಾದಂಬರಿಗೆ ಸಮೀಪದ ಪ್ರಕಾರವಾಗಿರುವುದೂ ಇರಬಹುದು. ಆತ್ಮಕಥೆಯಲ್ಲಿರುವ 'ಕಥೆ' ಶಬ್ದವನ್ನು ಗಮನಿಸಬೇಕು. ಸಣ್ಣಕತೆ ಕಾದಂಬರಿಗಳಲ್ಲಿ ಬರೆಹಗಾರರ ಆತ್ಮಕಥೆ ಇಲ್ಲವೇ ಲೋಕಾನುಭವಗಳು ಭಾಗವಹಿಸಿರುವಂತೆಯೆ, ಅವರ ಆತ್ಮಕಥೆಗಳಲ್ಲೂ ಕತೆ ಕಾದಂಬರಿಗಳ ಕಥನ ಗುಣ ಭಾಗವಹಿಸುತ್ತದೆ. ನವರತ್ನ ರಾಮರಾಯರ 'ಕೆಲವು ನೆನಪುಗಳು' ಯಾವುದೇ ಒಳ್ಳೆಯ ಕಾದಂಬರಿಗಿಂತಲೂ ಚೆನ್ನಾಗಿದೆ. ಕನ್ನಡದಲ್ಲಿ ಆತ್ಮಕಥನದ ಮಾದರಿಯಲ್ಲಿ ಕಾದಂಬರಿ ಬರೆಯುವ ಪದ್ಧತಿಯೂ ಇದೆಯಷ್ಟೆ."[೨೪]

ಕಾದಂಬರಿ ಬರೆಯುವ ಮಾರ್ಗದಲ್ಲಿ ಈಗ ಹೆಚ್ಚಿನ ಆತ್ಮಕಥೆಗಳಿವೆ. ಸಾರಾ ಅಬೂಬಕರ್ ಇವರು ತಮ್ಮ ಅನುಭವವನ್ನು ಕಾದಂಬರಿ ಭಾಗವಾಗಿ ತಂದಿದ್ದಕ್ಕೆ ಸಾಮಾಜಿಕ ಹಿನ್ನೆಲೆ ಹಾಗೂ ಮಹಿಳೆಗಿರುವ ಸಾಮಾಜಿಕ ಒತ್ತಡವನ್ನು ಹೀಗೆ ಹೇಳುತ್ತಾರೆ, "ತಾವು ಕಂಡುಂಡ ಬದುಕನ್ನು ಇತರರ ಮುಂದೆ ಪ್ರಾಮಾಣಿಕವಾಗಿ ಬಿಚ್ಚಿಡಲು ಮಹಿಳೆಯರಿಗೆ ಸುಲಭದಲ್ಲಿ ಸಾಧ್ಯವಾಗುವುದಿಲ್ಲ. ಆತ್ಮಚರಿತ್ರೆಯೆಂದರೆ ಅದು ಕೇವಲ ತಮ್ಮ ವೈಯಕ್ತಿಕ ಬದುಕೇ ಆಗಿದ್ದರೂ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಇತರರ ಬದುಕೂ ಕೂಡ ತಮ್ಮ ಬದುಕಿನೊಂದಿಗೆ ಹೆಣೆದುಕೊಂಡಿರುವುದರಿಂದ ಆ ಇತರರ ಮನೋಭಾವ ಅವರ ಸ್ಥಾನಮಾನ ಮತ್ತು ಅದನ್ನು ಚಿತ್ರಿಸುವಾಗ ಆಗುವ ಪರಿಣಾಮವೆಲ್ಲವನ್ನು ಗಮನಕ್ಕೆ ತೆಗೆದುಕೊಂಡೇ ಆತ್ಮಕಥೆ ಬರೆಯಬೇಕಾಗುತ್ತದೆ.

ಕೆಲವರ ಮನಸ್ಸಿಗೆ ನೋವಾಗಬಹುದು ಎಂಬ ಕಾರಣಕ್ಕಾಗಿಯೇ ಹೇಳಹೊರಟ ಘಟನೆಗಳನ್ನೂ ಹೇಳದಿರಬೇಕಾಗುತ್ತದೆ. ಕಾದಂಬರಿಯನ್ನು ಬರೆಯುವಾಗ ಇಂತಹ ವಿಷಯಗಳ ಕುರಿತು ಚಿಂತಿಸಬೇಕಾಗಿಲ್ಲ. ಆದರೆ ಆತ್ಮಕಥೆ ಬರೆಯುವಾಗ ಯಾವುದೋ ಒಂದು ಸುಳಿಯಲ್ಲಿ ನಾವು ಸುತ್ತುತ್ತಿಬೇಕಾಗುತ್ತದೆ."[೨೫] ಎನ್ನುವಲ್ಲಿ ಏಕಕಾಲಕ್ಕೆ ಇದು ಮಹಿಳೆ ಆತ್ಮಕಥೆ ಬರೆಯುವಾಗ ವಹಿಸುವ ಎಚ್ಚರದ ಕುರಿತಾಗಿಯೂ ಮತ್ತು ಮಹಿಳೆಯರು ಕಾದಂಬರಿ ಪ್ರಕಾರವನ್ನೇ ಹೆಚ್ಚಾಗಿ ಆಯ್ಕೆ ಮಾಡಿಕೊಂಡಿರುವ ಕುರಿತು ಮತ್ತು ಮಹಿಳೆಯರ ಆತ್ಮಕಥೆ ಯಾಕೆ ಕಡಿಮೆ ಎನ್ನುವುದರ ಕುರಿತಾಗಿಯೂ ಉತ್ತರ ಕೊಡುತ್ತದೆ.

ಸಾರಾ ಅವರೇ ಹೇಳುವ ಹಾಗೆ ನಾವು ಬದುಕುತ್ತಿರುವ ಸಮಾಜದ ಧೋರಣೆಯೇ ಆ ಬಗೆಯದು. ಸಂಸಾರದ ಗುಟ್ಟನ್ನು ಹೊರಹಾಕಬಾರದು ಗಂಜಿಯನ್ನಾದರೂ ಮುಚ್ಚಿಕೊಂಡು ಕುಡಿಯಬೇಕು. ಅದನ್ನು ಇತರರಿಗೆ ತಿಳಿಸಬಾರದು.ಮನೆಯಲ್ಲಿ ಬಹಳ ಬಡತನವಿದ್ದರೂ ಅದನ್ನು ಹೊರಗೆ ತಿಳಿಸಲು ಯಾರಿಗೂ ಇಷ್ಟವಿರುವುದಿಲ್ಲ. ಮನೆಯ ಹಿರಿಯರಂತೂ ಇದನ್ನು ಕಟ್ಟುನಿಟ್ಟಾಗಿಯೇ ಪಾಲಿಸುತ್ತಾರೆ. ಗಂಡನಿಂದ ಸಾಕಷ್ಟು ಚಿತ್ರಹಿಂಸೆ ಅನುಭವಿಸಿದರೂ 'ತಮ್ಮ ಬದುಕಿನಲ್ಲಿ ಎಲ್ಲವೂ ಸರಿಯಾಗಿದೆ.ತನ್ನ ಗಂಡ ದೇವರಂಥವನು' ಎನ್ನುವ ಮಹಿಳೆಯರನ್ನು ನಾನು ಕಂಡಿದ್ದೇನೆ. ಗಂಡನ ಒದೆ ತಿಂದ ಬಳಿಕವೂ 'ಗಂಡ ಹೊಡೆದರೇನಾಯಿತು? ಗಂಡನಲ್ಲದೇ ಇನ್ನಾರು ಹೊಡೆಯಬೇಕು?'ಎನ್ನುತ್ತ ಗಂಡನನ್ನು ಸಮರ್ಥಿಸುತ್ತ ಗುಲಾಮತನಕ್ಕೆ ಒಗ್ಗಿಹೋದ ಮಹಿಳೆಯೊಡನೆ, 'ಈ ನರಕದಲ್ಲಿ ಇನ್ನೂ ಯಾಕೆ ಇದ್ದಿ?'ಎಂದು ಕೇಳಿದರೆ, "ಹಾಗೇನಿಲ್ಲ. ರಾತ್ರಿ ಬೇಗನೆ ಬಂದು ಮಲಗಿದ್ದಾರೆ ನಿಮಗೆ ಬೇರೆಲ್ಲಿಯೋ ಗಲಾಟೆ ಕೇಳಿಸಿರಬಹುದು." ಎಂದು ಗಂಡನಿಗೆ ಕೊಡೆ ಹಿಡಿಯುವ ಮಹಿಳೆಯರಿಂದ ಎಂತಹ ಆತ್ಮಚರಿತ್ರೆಯನ್ನು ನಿರೀಕ್ಷಿಸಬಹುದು."[೨೬]

ಅಕಸ್ಮಾತ್ ಗಂಡ ಹಿಂಸಿಸುವುದನ್ನು ಹೇಳಿದರೆ ಅಥವಾ ಕೌಟುಂಬಿಕ ವಲಯದಿಂದ ಹೊರಬಂದರೆ ಪುರುಷ ಪ್ರಧಾನ ಸಮಾಜದಲ್ಲಿ ಅದರ ಪರಿಣಾಮಗಳನ್ನು ಅವಳೇ ಅನುಭವಿಸಬೇಕಾಗುತ್ತದೆ. ಹಾಗಾಗಿ ಮಹಿಳೆ ಕುಟುಂಬದಲ್ಲಿ ಹೇಳಿದಂತೆ ಬದುಕುವುದಿಲ್ಲ, ಬದುಕಿದಂತೆ ಹೇಳುವುದಿಲ್ಲ ಎಂದ ಮೇಲೆ ಅದು ವೈಯಕ್ತಿಕವೆಂದು ಭಾವಿಸಬೇಕಿಲ್ಲ. ಕೌಟುಂಬಿಕ ಬದುಕಿನಲ್ಲಿ ಮನೆಯ ಮರ್ಯಾದೆಯನ್ನು ಕಾಪಾಡುವ ಕವಚಗಳನ್ನೆಲ್ಲ ಮಹಿಳೆಗೆ ತೊಡಿಸಿದ್ದನ್ನು ಇದು ಹೇಳುತ್ತದೆ.

ಮಹಿಳೆಯಾಗಿ ಸಾರಾ ಅಬೂಬಕರ್ ಕೇವಲ ಮಹಿಳೆಯರು ಅನುಭವಿಸುವ ವಿಶಿಷ್ಟ ಅನುಭವವನ್ನು ಹೀಗೆ ಹೇಳುತ್ತಾರೆ, "ನಾನು 'ಚಂದ್ರಗಿರಿ ತೀರದಲ್ಲಿ' ಕಾದಂಬರಿ ಬರೆದಾಗ

ಲಂಕೇಶರು ನನ್ನೊಡನೆ ಆತ್ಮಚರಿತ್ರೆ ಬರೆಯಲು ಹೇಳಿದ್ದರು. ಕನ್ನಡದಲ್ಲಿ ಬರೆದ ಮುಸ್ಲಿಮ್ ಮಹಿಳೆಯರ ಹಿನ್ನೆಲೆಯೇನು? ಇಷ್ಟು ಧೈರ್ಯದಿಂದ ಬರೆಯಲು ಹೇಗೆ ಸಾಧ್ಯವಾಯಿತು? ಮುಂತಾದ ವಿಷಯಗಳು ಲಂಕೇಶರಲ್ಲಿ ಕುತೂಹಲ ಮೂಡಿಸಿರಬಹುದು. ನಾಲ್ಕೈದು ವಾರ ಪತ್ರಿಕೆಯಲ್ಲಿ ಬರುವಂತೆ ಸಂಕ್ಷಿಪ್ತವಾಗಿ ಆತ್ಮಚರಿತ್ರೆ ಬರೆದು ಕಳುಹಿಸಿ ಎಂದು ಪತ್ರ ಬರೆದರು. ನಾನು ಮೊದಲು ಒಪ್ಪಿಕೊಂಡೆ. ಆದರೆ ಬಳಿಕ ಗೊಂದಲ ಪ್ರಾರಂಭವಾಯಿತು. ಆತ್ಮಚರಿತ್ರೆ ಎಂದರೆ ಎಲ್ಲಿಂದ ಆರಂಭಿಸಬೇಕು? ಯಾವ್ಯಾವ ಅಥವಾ ಯಾರ್‍ಯಾರ ವಿಷಯ ಬರೆಯಬೇಕು ಅಥವಾ ಯಾವ್ಯಾವ ವಿಷಯ ಬರೆಯಬಾರದು? ಬರೆದರೂ ಎಲ್ಲಿ ನಿಲ್ಲಿಸಬೇಕು? ಸಾಹಿತ್ಯ ಕ್ಷೇತ್ರ ಪ್ರವೇಶಿಸಿ ಕೇವಲ ಒಂದು ಪುಟ್ಟ ಕಾದಂಬರಿ ಬರೆದೊಡನೆ ಆತ್ಮಚರಿತ್ರೆ ಬರೆಯಿರಿ ಎಂದರೆ ಏನು ಮಾಡುವುದು? ಬರೆಯದೇ ಇದ್ದರೆ ನಾನು ಇನ್ನು ಮುಂದೆ ಬರೆದದ್ದನ್ನು ಲಂಕೇಶರು ಪ್ರಕಟಿಸದೇ ಇದ್ದರೆ? ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡಲು ಅವಕಾಶ ಕೊಟ್ಟವರು ಇಂತಹ ಒಂದು ಬೇಡಿಕೆ ಮುಂದಿಟ್ಟರೆ ತಿರಸ್ಕರಿಸುವುದು ಹೇಗೆ? ಈ ಎಲ್ಲ ವಿಷಯಗಳ ಕುರಿತು ಚಿಂತನ ಮಂಥನ ನಡೆಸುತ್ತ ಕೆಲವು ದಿನ ತೊಳಲಾಡಿದೆ. ಬಳಿಕ ನಾನೇ ಯಾವ ನಿರ್ಧಾರಕ್ಕೂ ಬರಲಾರದೇ ನನ್ನ ತಂದೆಗೆ ಪತ್ರ ಬರೆದು ನಾನು ಆತ್ಮಚರಿತ್ರೆ ಬರೆಯಬಹುದೇ? ಎಂದು ಕೇಳಿದೆ. ಅವರಿಂದ ಕೂಡಲೇ ಉತ್ತರ ಬಂತು. ಖಂಡಿತ ಬರಿ. ನಿನಗೆ ಏನೇನು ಬರೆಯಬೇಕೆಂದೆನ್ನಿಸುತ್ತದೋ ಅದೆಲ್ಲವನ್ನೂ ಬರೆ. ನಿನ್ನ ಅಣ್ಣ ತಮ್ಮಂದಿರ ವಿಷಯವನ್ನೂ ಬರೆ. ಬರಹದಲ್ಲಿ ಯಾರೊಡನೆಯೂ ರಾಜಿ ಮಾಡಿಕೊಳ್ಳಬೇಡ ಎಂದು ಬರೆದರು. ಆಮೇಲೆ ಯೋಚಿಸಬೇಕಾದುದೇನೂ ಇರಲಿಲ್ಲ. ನನ್ನ ಗಂಡ ಟೂರ್ ಹೋದಾಗ ಅವರೊಡನೆ ಮೈಸೂರಿಗೆ ಹೋಗಿ ಮೈಸೂರಿನ ಐ.ಬಿ ಯಲ್ಲಿ ಕುಳಿತು ಬರಹವನ್ನಾರಂಭಿಸಿದೆ. ಬೆಂಗಳೂರಿಗೆ ಹಿಂದಿರುಗಿದ ಬಳಿಕ ಅದನ್ನು ಪೂರ್ತಿ ಮಾಡಿ ಲಂಕೇಶರಿಗೆ ಕಳುಹಿಸಿದೆ. ಅದನ್ನು ಓದಿದ ಬಳಿಕ ಅದನ್ನು ಮುಂದುವರೆಸಲು ಹೇಳಿದರು. ನಾನು ಅದಕ್ಕೆ 'ನೆನಪು ಸಿಹಿಯಲ್ಲ' ಎಂಬ ಹೆಸರು ಕೊಟ್ಟಿದ್ದೆ. ಲಂಕೇಶರು ಅದನ್ನು ಬದಲಯಿಸಿ 'ಮುಸ್ಲಿಮ್ ಹುಡುಗಿ ಶಾಲೆ ಕಲಿತದ್ದು' ಎಂಬ ತಲೆಬರಹವನ್ನಿತ್ತರು. ಹಾಗೆಯೇ 'ಚಂದ್ರಗಿರಿ' ತೀರದಲ್ಲಿ ಕಾದಂಬರಿಯೊಡನೆ ಅದನ್ನೂ ಸೇರಿಸಿದ್ದರಿಂದ ಇಂದು ಹಲವು ಭಾಷೆಗಳಿಗೆ ಅನುವಾದಗೊಂಡಿತು. ಅದನ್ನು ಮುಂದುವರೆಸಲು ಈವರೆಗೆ ಸಾಧ್ಯವಾಗಿಲ್ಲ."[೨೭]

ಆತ್ಮಚರಿತ್ರೆ ಬರೆ ಎಂದಾಗ ಬಹುಶಃ ಪುರುಷನಿಗೆ ಇದೇ ಪ್ರಶ್ನೆಯನ್ನು ಕೇಳಿದ್ದರೆ ಮಹಿಳೆಯಷ್ಟು ತೊಳಲಾಡುತ್ತಿರಲಿಲ್ಲವೇನೋ. ಇದು ಮಹಿಳೆ ಮತ್ತು ಪುರುಷರ ಆತ್ಮಕಥೆ ಬರವಣಿಗೆಯ ವ್ಯತ್ಯಾಸವನ್ನು ಹೇಳುತ್ತದೆ. ಎಲ್ಲವನ್ನೂ ಬರೆಯಬಹುದೆಂದು ತಂದೆ ಹೇಳಿದರೂ

ಮನೆಯಲ್ಲಿ ಬರೆಯಲಾರದ ಒತ್ತಡದ ಇನ್ನೊಂದು ಮುಖವನ್ನು ಇದು ಹೇಳುತ್ತದೆ.'ಅದನ್ನು ಮುಂದುವರೆಸಲು ಈವರೆಗೆ ಸಾಧ್ಯವಾಗಿಲ್ಲ' ಎನ್ನುವುದು ಕೌಟುಂಬಿಕ ಜವಾಬ್ದಾರಿಗಳಲ್ಲಿ ಗಂಡಿಗಿಂತ ಹೆಣ್ಣಿಗೇ ಹೆಚ್ಚಿರುವುದನ್ನು ಇದು ಹೇಳುತ್ತದೆ. ಹಾಗೆಯೇ ತಮ್ಮ ಹೆಚ್ಚಿನ ಅನುಭವಗಳನ್ನು ಕಾದಂಬರಿಯಲ್ಲಿ ಸೇರಿಸಿದ್ದರ ಬಗ್ಗೆ ಹೀಗೆ ಹೇಳುತ್ತಾರೆ. "ನನ್ನ ಬದುಕಿನ ಒಂದಾರು ತಿಂಗಳನ್ನು ನನ್ನ 'ತಳವಡೆದ ದೋಣಿಯಲ್ಲಿ' ಎಂಬ ಕಾದಂಬರಿಯಲ್ಲಿ ಚಿತ್ರಿಸಿದ್ದೇನೆ. ಅದರಲ್ಲಿನ ಕಥಾನಾಯಕಿ ಆಯಿಷಾಳ ಹೆಸರಿನ ಬದಲಿಗೆ ಸಾರಾ.ಎಂದು ಓದಿಕೊಂಡರೆ ಅದು ನನ್ನ ಆತ್ಮಚರಿತ್ರೆಯ ಒಂದು ಭಾಗವೆಂಬುದು ನಿಮಗೆ ಮನವರಿಕೆಯಾಗಬಹುದು.ಅದರಲ್ಲಿ ವಿವರಿಸಲ್ಪಟ್ಟ ಘಟನೆಗಳೆಲ್ಲವೂ ನನ್ನ ಅನುಭವಗಳೇ ಹೊರತು ಅದೊಂದು ಕಾಲ್ಪನಿಕ ಕಾದಂಬರಿಯಲ್ಲ."[೨೮]

ಮಹಿಳೆ ಸತ್ಯವನ್ನು ಹೇಳಿದರೆ ಅದರಿಂದಾಗುವ ಪರಿಣಾಮಗಳನ್ನು ಕುರಿತು ಹೀಗೆ ಹೇಳುತ್ತಾರೆ, "ಮಂಗಳೂರು ಮಿತ್ರ' ಎಂಬ ಪತ್ರಿಕೆ ಒಮ್ಮೆ "ಪ್ರೇಮ ವಿವಾಹದ ಕುರಿತು ನಿಮ್ಮ ಅಭಿಪ್ರಾಯ ತಿಳಿಸಿ" ಎಂದು ಪತ್ರ ಬರೆದರು. "ಪ್ರೇಮ ವಿವಾಹವಾದರೆ ಜಾತೀಯತೆ ಕಮ್ಮಿಯಾಗುತ್ತದೆ.ಜಾತಿ, ಧರ್ಮಗಳ ಗೊಡವೆ ಇಲ್ಲದೆ ಅವರು ಕೇವಲ ಮನುಷ್ಯರಾಗಿ ಬದುಕಲು ಅನುವು ದೊರೆತಂತಾಗುತ್ತದೆ. ಮತ್ತು ವರದಕ್ಷಿಣೆಯ ಸಮಸ್ಯೆಯು ಇರುವುದಿಲ್ಲ. ನನ್ನ ಕುಟುಂಬದಲ್ಲಿ ನನ್ನಣ್ಣನ ಮಗ ಮತ್ತು ತಮ್ಮನ ಮಗ ಇಬ್ಬರೂ ಬ್ರಾಹ್ಮಣ ಹುಡುಗಿಯರನ್ನು ಮದುವೆಯಾಗಿ ಸಂತೋಷದಿಂದಿದ್ದಾರೆ" ಎಂದು ಬರೆದೆ. ಪತ್ರಿಕೆ ನನ್ನ ಈ ಪತ್ರವನ್ನು ಪ್ರಕಟಿಸಿ ನನ್ನ ಫೋನ್ ನಂಬರನ್ನು ಪ್ರಕಟಿಸಿತು. ಮರುದಿನ ಸುರತ್ಕಲ್ ಬ್ರಾಹ್ಮಣರೊಬ್ಬರು ನನಗೆ ಫೋನ್ ಮಾಡಿದರು, "ನಾವು ಮದುವೆಯಾಗುವಾ?" ಎಂದು! ಇನ್ನೊಬ್ಬ, "ನಿಮಗೆ ಹೆಣ್ಣು ಮಗಳಿದ್ದಾಳಾ? ನಾನು ಮದುವೆಯಾಗಲಾ?" ಎಂದು ಕೇಳಿದರು! ಇದು ಇಪ್ಪತ್ತು ವರ್ಷಗಳ ಹಿಂದಿನ ಮಾತು. ಮನದಾಳದಲ್ಲಿ ಇಂತಹ ಕೊಳಚೆಗಳನ್ನು ತುಂಬಿಕೊಂಡಿದ್ದ ವಿಷಜಂತುಗಳಿಂದ ಕೂಡಿದ ಈ ಸಮಾಜದಲ್ಲಿ ನಾವು ಎಂತಹ ಆತ್ಮಕಥೆ ಬರೆಯಬಹುದು? ಸಮಾಜ ಅದನ್ನು ಹೇಗೆ ಸ್ವೀಕರಿಸುವುದು ಎನ್ನುವುದಕ್ಕೆ ಈ ಉದಾಹರಣೆಗಳು ಸಾಕಲ್ಲವೇ?[೨೯]

ಅಲ್ಲದೇ ಆತ್ಮಕಥೆ ಬರೆಯುವುದಕ್ಕಿಂತ ಬರೆಯದಿರುವ ಹಾಗೆ ಒತ್ತಡಗಳು ಮಹಿಳೆಗಿವೆ ಎನ್ನುವುದನ್ನು ಅವರು ಹೀಗೆ ಹೇಳುತ್ತಾರೆ, ಪುರುಷರು ಏನೇ ಬರೆದರೂ ಅದನ್ನು ಪ್ರಶ್ನಿಸುವವರಿಲ್ಲ. ಅಥವಾ ಪ್ರಶ್ನಿಸಿದರೂ ಪುರುಷರಿಗೆ ಅದನ್ನು ನಿಭಾಯಿಸುವ ಶಕ್ತಿ ಇದೆ. ಆದರೆ ಮಹಿಳೆಯರಿಗೆ ಅಷ್ಟು ಸುಲಭದಲ್ಲಿ ಅಂತಹ ಟೀಕೆ, ವಿಮರ್ಶೆಗಳನ್ನು ನಿರ್ಲಕ್ಷಿಸಲು ಸಾಧ್ಯವಾಗುವುದಿಲ್ಲ. ಆದರೆ ಎಂತಹ ಸಂದರ್ಭದಲ್ಲೂ ನಾನು ಸ್ವಲ್ಪ ಕೆಚ್ಚಿನಿಂದಲೇ ಇಂತಹ ಪ್ರಶ್ನೆಗಳನ್ನೆದುರಿಸಿದ್ದೇನೆ. "ಬ್ರಾಹ್ಮಣ ಹುಡುಗಿಯನ್ನು ಮುಸ್ಲಿಮ್ ಹುಡುಗ ಮದುವೆಯಾದದ್ದನ್ನು ತಿಳಿದು ನಿಮ್ಮ

ಹೊಟ್ಟೆಯುರಿಯಿತೇ?" ಎಂದು ನಾನು ಆ ವ್ಯಕ್ತಿಯನ್ನು ಪ್ರಶ್ನಿಸಿದ್ದೆ! ಇಷ್ಟೆಲ್ಲ ಸಮಸ್ಯೆಗಳು ನಮ್ಮನ್ನು ಆತ್ಮಚರಿತ್ರೆ ಬರೆಯದಂತೆ ನಮ್ಮಲ್ಲಿ ಹಿಂಜರಿಕೆಯುಂಟುಮಾಡುತ್ತಿದ್ದರೂ ಆತ್ಮಕಥೆ ಬರೆಯಬೇಕೆಂಬ ನನ್ನ ಉತ್ಸಾಹ ಕಮ್ಮಿಯಾಗಿಲ್ಲ. ಎಂದಾದರೂ ಅಂತಹ ಪ್ರಯತ್ನವನ್ನು ಮುಂದುವರೆಸಬೇಕೆಂಬ ಆಶಯ ನನ್ನದು.

ಹೀಗೆ ಮಹಿಳೆಗೆ ಆತ್ಮಕಥೆಯ ಬರವಣಿಗೆಯ ಬಗ್ಗೆ ಇರುವ ಅಡ್ಡಿ ಆತಂಕಗಳನ್ನು ಹಾಗೂ ಇರುವ ಸವಾಲುಗಳನ್ನು ಹೀಗೆ ಹೇಳುತ್ತಾರೆ.

ಆತ್ಮಕಥನ: ವಾದ ಮತ್ತು ಸಂವಾದ; ಮತ್ತು....: ಬಸವರಾಜ ಕಲ್ಗುಡಿ

"ಪಾಶ್ಚಾತ್ಯ ಆತ್ಮ ಕಥನಗಳನ್ನು ಓದಿದ ನಮಗೆ ಪೌರ್ವಾತ್ಯ ಆತ್ಮಕಥನಗಳ ಧಾಟಿ ಎದ್ದು ಕಾಣುವಷ್ಟು ಭಿನ್ನವಾದದ್ದು ಎಂದು ಅನ್ನಿಸದೆ ಇರದು. ಕೇವಲ ಬರವಣಿಗೆಯ ಶೈಲಿಗೆ ಸಂಬಂಧಿಸಿದ ವಿನ್ಯಾಸ ಮಾತ್ರವಲ್ಲದೆ. ಲೋಕಗ್ರಹಿಕೆಯ ದೃಷ್ಟಿಯಿಂದಲೂ ಈ ವ್ಯತ್ಯಾಸವು ಎದ್ದು ತೋರುತ್ತದೆ ಎಂದು ನನಗೆ ಅನ್ನಿಸಿದೆ. ವಾಸ್ತವವಾಗಿ ಎಲ್ಲ ಶ್ರೇಷ್ಠ ಆತ್ಮಕಥನಗಳು ಬಹುಮುಖ್ಯವಾಗಿ ಸಾಂಸ್ಕೃತಿಕ ಸಂಕಥನಗಳು. ಆ ಕಾರಣಕ್ಕಾಗಿಯೇ ಸೃಜನಶೀಲವೂ ಹೌದು. ಆತ್ಮಕಥನಗಳ ಬರವಣಿಗೆಯು ಸಾಂಸ್ಕೃತಿಕ ಸಂಕಥನವಾಗುವ ರೀತಿಯು ವಿಶಿಷ್ಟವಾದದ್ದೆ. ಅದು ಘಟನೆಗಳ ದಾಖಲೆಗಳ ಮಾದರಿಯದ್ದಲ್ಲ. ಆತ್ಮಕಥನಗಳ ವಿವರಗಳ ಒಳಗೆ ಸೂಕ್ಷ್ಮವಾಗಿ ಕಾಣುವ ಲೋಕದೃಷ್ಟಿಯು ಇಂಥ ಸಂಕಥನವನ್ನು ಓದುಗನಿಗೆ ಹೊಳೆಸಬಲ್ಲುದು."[೩೦]

ಪಾಶ್ಚಾತ್ಯರ ರೀತಿ ನೀತಿಗಳು ವೈಯಕ್ತಿಕ ನೆಲೆಯದಾದರೆ ಪೌರ್ವಾತ್ಯ ಆತ್ಮಕಥನಗಳು 'ವಸುದೈವ ಕುಟುಂಬಕಂ' ತತ್ವದ್ದು. ಕುಟುಂಬಗಳ ರೀತಿಗೂ ಆತ್ಮಕಥೆಗೂ ತುಂಬಾ ಹತ್ತಿರದ ಸಂಬಂಧವಿದೆ. ನಗರೀಕರಣ ಮತ್ತು ವಿಘಟಿತ ಕುಟುಂಬದಿಂದ ಭಾವನಾತ್ಮಕ ಭದ್ರತೆಯಿಲ್ಲದ ಮನುಷ್ಯನ ಮನಸ್ಸು ಸದೃಢವಾಗಿ ಬೆಳೆಯಲಾರದು. ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಪರಿಪೂರ್ಣ ವಾಗಬೇಕಾದರೆ ಭಾವನಾತ್ಮಕ, ದೈಹಿಕ, ಆಧ್ಯಾತ್ಮಿಕ, ನೈತಿಕ ಈ ಎಲ್ಲಾ ಅಂಶಗಳು ಮುಖ್ಯ. ಈ ಎಲ್ಲಾ ಅಂಶಗಳು ಭಾರತೀಯ ಕುಟುಂಬದೊಳಗೆ ಇದ್ದವು. ಇವೆರಡೂ ಒಂದು ರೀತಿಯಲ್ಲಿ ವಿರುದ್ಧ ನೆಲೆಯಂತೆ ಕಾಣುತ್ತದೆ. ಯಾವ ಸಮಾಜದಲ್ಲಿ ಕೃತಿ ರಚನೆಯಾಗುತ್ತೋ ಅಲ್ಲಿಯ ಕುಟುಂಬಗಳ ಪ್ರಭಾವ ಕೃತಿಯಲ್ಲಿ ಒಡಮೂಡುತ್ತದೆ. ಇದು ಆತ್ಮಕಥೆಗಳಿಗೂ ಅನ್ವಯಿಸುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳಬಹುದಾದರೆ ಭಾರತೀಯ ಆತ್ಮಚರಿತ್ರೆ ಹೃದಯ(ಆತ್ಮ) ಕೇಂದ್ರಿತವಾದರೆ ವಿದೇಶದ ಆತ್ಮಕಥೆಗಳು ಬುದ್ಧಿಕೇಂದ್ರಿತವಾದವು. ಹೃದಯಕ್ಕೆ ಭಾವನಾತ್ಮಕವೇ ಮುಖ್ಯವಾದರೆ ಬುದ್ಧಿಗೆ ಆಲೋಚನೆ ತರ್ಕಗಳೇ ಮುಖ್ಯವಾಗುತ್ತದೆ. ಬಸವರಾಜ್ ರವರು

ಆತ್ಮಕಥೆ ಸೃಜನಶೀಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ಹಿಂದೆಯೇ ಇದರ ಚರ್ಚೆ ಮಾಡಲಾಗಿದೆ.

ಬಸವರಾಜ್ ಕಲ್ಗುಡಿಯವರು 'ಪೂರ್ವದ ಆತ್ಮಕಥೆ'ಯನ್ನು ಸಂವಾದವೆಂದು 'ಪಶ್ಚಿಮದ ಆತ್ಮಕಥೆ'ಯನ್ನು ವಾಗ್ವಾದ ಎಂದು ಗುರುತಿಸಿದ್ದಾರೆ. ಇದಕ್ಕೆ ಉತ್ತರವೆಂಬಂತೆ, "ಪೂರ್ವದ ಆತ್ಮಕಥನಗಳಿಗೆ ಈ ಬುದ್ಧಿಜನ್ಯ ವಾಗ್ವಾದದಲ್ಲಿ ಅಷ್ಟು ಆಸಕ್ತಿ ಇಲ್ಲ. ವಾಗ್ವಾದಕ್ಕಿಂತ ಸಂವಾದಕ್ಕಾಗಿ ಇಲ್ಲಿ ಹಾತೊರೆಯುವಿಕೆ ಇದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಪಶ್ಚಿಮದ ಆತ್ಮಕಥನದ ನಾಯಕ ಚರಿತ್ರೆಯನ್ನು ಕಟ್ಟಲೆಂದೇ ಸಮೂಹದಿಂದ ಪ್ರತ್ಯೇಕಗೊಂಡರೆ ಒಡೆದು ಹೋದ ಸಮುದಾಯದ ದಾರುಣ ಚರಿತ್ರೆಯು ಇಲ್ಲಿ ವ್ಯಕ್ತಿಯನ್ನು ಸಂವಾದಕ್ಕೆ ಎಳೆಸುವಂತೆ ಮಾಡುತ್ತಿದೆ. ವ್ಯಕ್ತಿ ಸಮುದಾಯದ ಭಾಗವಾಗಲು ಹಾತೊರೆಯುವ ಕಥಾನಕಗಳಿವು. ಹೃದಯದ ಭಾಷೆ ಮುಖ್ಯವಾಗುವ ಮಾದರಿ ಇದು. ಭವಿಷ್ಯಕ್ಕೆ ಬೆಳೆಯಬೇಕೆನ್ನುವ, ಚಲಿಸಬೇಕೆನ್ನುವ ಆಶಯಕ್ಕಿಂತ ವರ್ತಮಾನವನ್ನು ಕಟ್ಟುವ ಕ್ರಿಯೆ ಇಲ್ಲಿ ಮುಖ್ಯ ಆಶಯವಾಗಿದೆ.

ಕೊನೆ ಟಿಪ್ಪಣಿಗಳು

೧. ಜವರೇಗೌಡ, **ಶತಮಾನದ ಸಂಶೋಧನೆ**, ಪು.೯೮೦

೨. ಎಸ್.ಎಲ್.ಭೈರಪ್ಪ, **ಭಿತ್ತಿ**, ಪು.೨೨

೩. ಚದುರಂಗ, **ವೈಶಾಖದ**, ಮುನ್ನುಡಿ

೪. ಡಿ.ಆರ್.ನಾಗರಾಜ್, **ಊರುಕೇರಿಗೆ ಬರೆದ**, ಮುನ್ನುಡಿ

೫. ಮೂಡ್ನಾಕೂಡು ಚಿನ್ನಸ್ವಾಮಿ, **ಮುಮ್ಮಾತು-ಬುದ್ಧ ಬೆಳದಿಂಗಳು**, ಮುನ್ನುಡಿ

೬ ಸವಿತಾ ಒಡೆಯರ್, **ಆತ್ಮಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನ**, ಪು.೯

೭ ಅದೇ, ಪು.೨೭

೮. ಜಿ.ಎಸ್.ಎಸ್., **ಅಸಮಗ್ರ ಆತ್ಮಕಥೆ**, ಪು.೨೪

೯. ಲಿಂಗದೇವರು ಹಳೆಮನೆ, **ಜಿಎಸ್‌ಎಸ್ ಜೀವನ ಚರಿತ್ರೆ**, ಪು.೨೫

೧೦. ಅದೇ, ಪು.೧೩-೧೪

೧೧. ಅದೇ, ಪು.೨೮

೧೨. ಬಿ.ವಿ.ಕಾರಂತ, **ಇಲ್ಲಿರಲಾರ ಅಲ್ಲಿಗೆ ಹೋಗಲಾರ**, ಪು.೧೯

೧೩. ಪುಟ್ಟಯ್ಯ ಬಿ.ಎಂ., **ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ**, ಪು.೨

೧೪. ಅದೇ, ಪು.೨

೧೫. ರಹಮತ್ ತರೀಕೆರೆ, ಕನ್ನಡ ಗದ್ಯದ ಅಧೋಲೋಕ, ಪು.೩೮

೧೬. ಅದೇ, ಪು.೩೮

೧೭ ಸಾ.ರಾ ಅಬೂಬಕರ್, ಮಹಿಳಾ ಆತ್ಮಕಥನಗಳ ಬರವಣಿಗೆಯ ಸಾಧ್ಯತೆ ಮತ್ತು ಸವಾಲುಗಳು, ಪು.೩೯

೧೮. ಕಯ್ಯಾರ ಕಿಞ್ಞಣ್ಣ ರೈ, ದುಡಿತವೇ ನನ್ನ ದೇವರು, ಪು.೧೪೪

೧೯. ಅದೇ, ಪು.೨೮

೨೦. ಅದೇ, ಪು.೧೫೬

೨೧ ರಹಮತ್ ತರೀಕೆರೆ, ಕನ್ನಡ ಗದ್ಯದ ಆಧೋಲೋಕ, ಪು.೩೯

೨೨ ಸಿ.ಎನ್.ರಾಮಚಂದ್ರನ್, ಗಾಂಧಿ ಕ್ಲಾಸ್, ಬೆನ್ನುಡಿ

೨೩. ಕೃಷ್ಣಮೂರ್ತಿ ಹನೂರು, ಗೆರೆ ದಾಟದ ಮೇಲೆ, ಮುನ್ನುಡಿ

೨೪ ರಹಮತ್ ತರೀಕೆರೆ, ಕನ್ನಡ ಗದ್ಯದ ಆಧೋಲೋಕ, ಪು.೪೧

೨೫. ಸಾ.ರಾ ಅಬೂಬಕರ್, ಮಹಿಳಾ ಆತ್ಮಕಥನಗಳ ಬರವಣಿಗೆಯ ಸಾಧ್ಯತೆ ಮತ್ತು ಸವಾಲುಗಳು, ಪು.೨೦

೨೬. ಅದೇ, ಪು.೨೧

೨೭. ಅದೇ, ಪು.೨೨

೨೮. ಅದೇ, ಪು.೨೨

೨೯. ಅದೇ, ಪು.೨೨

೩೦. ಬಸವರಾಜ ಕಲ್ಗುಡಿ, ಆತ್ಮಕಥನ ವಾದ ಮತ್ತು ಸಂವಾದ, ಪು.೧೪೯

ಅಧ್ಯಾಯ ಎರಡು

ಆತ್ಮಕಥೆಯ ಉಗಮ ಮತ್ತು ವಿಕಾಸ

೨.೧ ಆತ್ಮ ಕಥೆಗಳ ಸ್ವರೂಪ

೨.೨ ಆತ್ಮ ಕಥೆಗಳ ಸಾಹಿತ್ಯದ ಸ್ವರೂಪ

ಅಧ್ಯಾಯ ಎರಡು

ಆತ್ಮಕಥೆಯ ಉಗಮ ಮತ್ತು ವಿಕಾಸ

ಆಧುನಿಕ ಕನ್ನಡ ಸಾಹಿತ್ಯದಲ್ಲಿ, ಆತ್ಮಕಥೆಯ ಪ್ರಕಾರವು ಒಂದಾಗಿದೆ. ಆತ್ಮಕಥೆಯನ್ನು ಸಾಹಿತ್ಯಪ್ರಕಾರವಾಗಿ ನೋಡಬೇಕೋ ಅಥವಾ ಅದನ್ನು ವ್ಯಕ್ತಿಯೊಬ್ಬನ ಚಾರಿತ್ರಿಕ ಅಭಿವ್ಯಕ್ತಿಯ ಕ್ರಮವಾಗಿ ಅರ್ಥೈಸಬೇಕೋ ಎಂಬುದು ಸಾಕಷ್ಟು ಚರ್ಚಿಸಬೇಕಾದ ವಿಷಯ. ಅಂತಿಮವಾಗಿ ಸಾಹಿತ್ಯದ ಯಾವುದೇ ಪ್ರಕಾರವಾಗಲಿ ಆತ್ಮಕಥೆಯಾಗಲಿ ಭಾಷೆಯ ಮೂಲಕವೇ ಅಭಿವ್ಯಕ್ತಗೊಳ್ಳಬೇಕಾಗುತ್ತದೆ. ಪ್ರಸ್ತುತ ಆತ್ಮಕಥೆಗಳನ್ನು ಅಧ್ಯಯನ ಮಾಡುವಾಗ ಭಾಷಾ ಅಭಿವ್ಯಕ್ತಿ ಕ್ರಮ ರೂಪುಗೊಳ್ಳುವ ಬಗೆಯನ್ನು ಗ್ರಹಿಸುವುದು ಅನಿವಾರ್ಯವಾಗುತ್ತದೆ.

ಭಾಷೆಯು ಅನೇಕ ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ, ಆರ್ಥಿಕ, ರಾಜಕೀಯ ಒತ್ತಡಗಳ ನಡುವೆ ಕಾಲ ಮತ್ತು ಸಂದರ್ಭಗಳನ್ನಾಧರಿಸಿ ರೂಪುಗೊಳ್ಳುತ್ತದೆ. ಕತೆ, ಕಾದಂಬರಿ, ಕಾವ್ಯ, ನಾಟಕ, ಪ್ರಬಂಧ, ಪ್ರವಾಸ ಸಾಹಿತ್ಯ, ಜೀವನಚರಿತ್ರೆ, ಆತ್ಮಕಥೆ, ದಿನಚರಿ ಮೊದಲಾದ ರೂಪಗಳಲ್ಲಿ ಭಾಷೆಯು ಪ್ರಕಟಗೊಳ್ಳುತ್ತದೆ. ಲಿಖಿತ ರೂಪದಲ್ಲಿ ಪ್ರಕಟಗೊಳ್ಳುವ ಯಾವುದೇ ಪಠ್ಯ ಆ ಕಾಲಘಟ್ಟದಲ್ಲಿ ಭೂತ ವರ್ತಮಾನ ಮತ್ತು ಭವಿಷ್ಯತ್‌ಗಳನ್ನು ತನ್ನದೇ ಆದ ಸ್ವರೂಪದಲ್ಲಿ ಹಿಡಿದಿಡುತ್ತದೆ.

ಸಾಹಿತ್ಯ ಪ್ರಕಾರವು ಏಕಕಾಲದಲ್ಲಿ ಚರಿತ್ರೆಯಾಗಿಯೂ ಲಿಖಿತ ದಾಖಲೆಯಾಗಿಯೂ ಸಮಾಜದ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿಯೂ ಕಾಣಸಿಗುತ್ತದೆ. ಇದಕ್ಕೆ ಕಾದಂಬರಿ ಪ್ರಕಾರವು ಅತ್ಯುತ್ತಮ ಉದಾಹರಣೆ. ಕೈಗಾರಿಕಾ ಕ್ರಾಂತಿಯ ನಂತರ ಉಂಟಾದ ಪಲ್ಲಟಗಳನ್ನು ಹಿಡಿದಿಡುವ ಸಶಕ್ತ ಮಾಧ್ಯಮವಾಗಿ ಕಾದಂಬರಿಯು ಹುಟ್ಟಿಕೊಂಡಿತು. ಕಾದಂಬರಿಯಷ್ಟೇ ಪ್ರಭಾವಶಾಲಿ ಮಾಧ್ಯಮವಾಗಿ ಹೊರ ಹೊಮ್ಮಿದ್ದು ಆತ್ಮಕಥೆ.

ಆತ್ಮಕಥೆ ಹುಟ್ಟಲು ೧೮ನೇ ಶತಮಾನದ ನಂತರ ಅನೇಕ ಸಾಮಾಜಿಕ, ಆರ್ಥಿಕ ರಾಜಕೀಯ ಮತ್ತು ಸಾಂಸ್ಕೃತಿಕ ಪ್ರೇರಣೆಗಳಿದ್ದವು. ದಿನಚರಿಗಳ ಬರವಣಿಗೆಯಲ್ಲಿ ನಾವು

ಆತ್ಮಕಥೆಯ ಮೂಲವನ್ನು ಗುರುತಿಸಬಹುದು. ದಿನಚರಿಗಳು ಪಾಶ್ಚಾತ್ಯ ಸಮಾಜದಲ್ಲಿ ಗಣ್ಯವರ್ಗದ, ಮಧ್ಯಮ ವರ್ಗದ ಸಮಯವನ್ನು ಯೋಜನಾಬದ್ಧವಾಗಿ ಬಳಸಿಕೊಳ್ಳುವ ಸಲುವಾಗಿ ಹುಟ್ಟಿಕೊಂಡವು. ಕ್ರಮೇಣ ಡೈರಿ ಬರವಣಿಗೆಯು ವ್ಯಕ್ತಿಯೊಬ್ಬನ/ಳ ಜೀವನದ ಬೇಗುದಿಗಳನ್ನು, ತಲ್ಲಣಗಳನ್ನು, ಏಕಾಂತವನ್ನು ಸಮಾಜದೊಂದಿಗಿನ ಸಂಬಂಧವನ್ನು ದಾಖಲಿಸುವ ಬರವಣಿಗೆಗಳಾಗಿ ರೂಪುತಳೆಯತೊಡಗಿದವು. ಈ ದಿನಚರಿಗಳ ವಿಸ್ತೃತವಾದ ಮತ್ತು ಸೂಕ್ಷ್ಮವಾದ ಸಂವೇದನೆಗಳನ್ನು, ವ್ಯಕ್ತಿಯ ಹಲವಾರು ವರ್ಷಗಳ ಜೀವನಾವಧಿಯಲ್ಲಿ ನಡೆದ ವೃತ್ತಾಂತವನ್ನು, ಅದಕ್ಕೆ ಪ್ರತಿಕ್ರಿಯಿಸಿದ ಬಗೆಯನ್ನು ಬರವಣಿಗೆ/ ಲಿಖಿತರೂಪದಲ್ಲಿ ದಾಖಲಿಸುವ ಪರಿಪಾಠ ಆರಂಭವಾಯಿತು. ಸದ್ಯದ ಉದ್ದೇಶಕ್ಕಾಗಿ ಇದನ್ನು ಆತ್ಮಕಥೆಯೆಂದು ವಿವರಿಸಿಕೊಳ್ಳಲಾಗಿದೆ.

ಜರ್ಮನಿಯಲ್ಲಿ ಹಿಟ್ಲರ್‌ನ ಆಡಳಿತ ಸಂದರ್ಭದಲ್ಲಿ ಯಹೂದಿಗಳನ್ನು ಬೇಟೆಯಾಡಲಾಯಿತು. ಆ ಸಂದರ್ಭದಲ್ಲಿ ಯಾತನಾಶಿಬಿರಗಳಿಂದ ಮತ್ತು ನಾಜಿಗಳ ಹೊಡೆತದಿಂದ ತಪ್ಪಿಸಿಕೊಳ್ಳಲು ಯಹೂದಿ ಕುಟುಂಬಗಳು ತಮ್ಮ ಮಕ್ಕಳ ಜೊತೆ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದರು.ಅಂತಹ ಸಂಧರ್ಭದಲ್ಲಿ ಹದಿಮೂರು ವರ್ಷದ 'ಅನ್ನೆ ಫ್ರಾಂಕ್' ಅನ್ನುವ ಮಗು ಅಟ್ಟದ ಕೆಳಗೆ, ನೆಲಮಾಳಿಗೆಯಲ್ಲಿ ಅವಿತಿದ್ದಾಗ ತನಗಾಗುತ್ತಿದ್ದ ಭಯವನ್ನು, ಆತಂಕವನ್ನು, ದುಃಖವನ್ನು ಬೂಟಿನ ಸದ್ದು, ಬೀಗಮುರಿದ ಶಬ್ದ, ಉಸಿರಾಟದ ಲಯ ಮೊದಲಾದುವನ್ನು ತನ್ನ ದಿನಚರಿಯಲ್ಲಿ ದಾಖಲಿಸಿದಳು. ಹಿಟ್ಲರನ ಆಡಳಿತ ಮುಗಿದ ಎಷ್ಟೋ ವರ್ಷಗಳ ತರುವಾಯ ಅನ್ನೆ ಫ್ರಾಂಕ್‌ಳ ಡೈರಿಯು ಪ್ರಕಟವಾಯಿತು. ಡೈರಿಯು ಪ್ರಕಟವಾದ ಕೂಡಲೇ ಇಡೀ ಜಗತ್ತು ನಾಜಿಗಳ ಕ್ರೌರ್ಯವನ್ನು ಮತ್ತಷ್ಟು ಗಾಢವಾಗಿ ಅರ್ಥಮಾಡಿಕೊಳ್ಳತೊಡಗಿತು. ಅನ್ನೆ ಪ್ರಾಂಕ್‌ಳದು ಡೈರಿಯಂದು ಕರೆಯಲ್ಪಟ್ಟರೂ ಆತ್ಮಕಥೆಯ ಶ್ರೇಷ್ಠವಾದ ಮಾದರಿಗೆ ಸಾಕ್ಷಿಯಾಗಿದೆ.

ಭಾರತದಲ್ಲಿ ಆತ್ಮಕಥೆಯ ಪರಂಪರೆಯು ಪಾಶ್ಚಾತ್ಯರ ಹಾಗೂ ಪಾಶ್ಚಾತ್ಯ ಶಿಕ್ಷಣದ ಪ್ರಭಾವದ ಫಲವಾಗಿ ಹುಟ್ಟಿಕೊಂಡಿತು. ಪಾಶ್ಚಾತ್ಯ ದೇಶಗಳಿಗೆ ಹೋಗಿ ಬಂದವರು ತಮ್ಮ ಅನುಭವಗಳನ್ನು ದಾಖಲಿಸತೊಡಗಿದರು. ಇವು ಏಕಕಾಲದಲ್ಲಿ ಪ್ರವಾಸ ಸಾಹಿತ್ಯ, ಅನುಭವ ಕಥನ ಮತ್ತು ಆತ್ಮಕಥೆಗಳ ಮಾದರಿಯ ಸಮ್ಮಿಶ್ರಣಗೊಂಡಂತೆ ಕಾಣುತ್ತಿದ್ದವು. ಭಾರತದಲ್ಲಿ ಆತ್ಮಕಥೆಗಳಿಗೆ ಅತ್ಯಂತ ವ್ಯಾಪಕ ಜನಪ್ರಿಯತೆ ದೊರೆತದ್ದು ಗಾಂಧೀಜಿಯವರ ಆತ್ಮಕಥೆ 'ನನ್ನ ಸತ್ಯಾನ್ವೇಷಣೆ' ಪ್ರಕಟವಾದ ನಂತರ. ಗಾಂಧೀಜಿಯವರ ಆತ್ಮಕಥೆಯು ೧೯೨೫ರಲ್ಲಿ ರಚಿತವಾಯಿತು. ಆದರೆ ಇದು ಏಕಕಾಲದಲ್ಲಿ ಭವಿಷ್ಯದಲ್ಲಿ ಬರಬಹುದಾದ ಆತ್ಮಕಥೆಗಳಿಗೆ ಒಂದು ಸುದೀರ್ಘವಾದ ಪರಂಪರೆಯನ್ನು ಹಾಕಿಕೊಟ್ಟಿತು. ಗಾಂಧಿ ತಾವು ಆತ್ಮಕಥೆಯನ್ನು ಬರೆಯಲು ಪ್ರಾರಂಭಿಸಿದಾಗ ಅನೇಕರಿಗೆ ಜಿಜ್ಞಾಸೆ ಉಂಟಾಯಿತು. ಆ ಜಿಜ್ಞಾಸೆಗಳಿಗೆ ಗಾಂಧಿ ಉತ್ತರಿಸುತ್ತಾ ಕೆಳಕಂಡಂತೆ

ಹೇಳುತ್ತಾರೆ."ಒಂದು ಯಥಾವತ್ತಾದ ಆತ್ಮಕಥೆಯನ್ನು ಬರೆಯಲು ಪ್ರಯತ್ನಿಸುವುದು ನನ್ನ ಉದ್ದೇಶವಲ್ಲ. ನಾನು ಹೇಳಬಯಸುವುದು ಸತ್ಯಶೋಧನೆಯ ನನ್ನ ಅನೇಕ ಪ್ರಯೋಗಗಳ ಕಥೆಯನ್ನು ಮಾತ್ರ, ನನ್ನ ಜೀವನ ಈ ಪ್ರಯೋಗಗಳ ಹೊರತೂ ಮತ್ತೇನೂ ಅಲ್ಲ. ಆದ್ದರಿಂದ ಈ ಕಥೆ ಆತ್ಮಕಥೆಯ ರೂಪವನ್ನು ಹೊಂದುವುದು ಸತ್ಯ." ತೀರಾ ಇತ್ತೀಚಿನ ದಶಕಗಳವರೆಗೂ ಗಾಂಧೀಜಿಯ ಮಾದರಿ ಆತ್ಮಕಥೆಯೇ ಪ್ರಧಾನವಾಗಿ ನಮಗೆ ತಿಳಿದಮಟ್ಟಿಗೆ ಪ್ರಕಟವಾಗಿರುವುದು ಕಂಡುಬರುತ್ತದೆ.

ಶರಣಮ್ಮ ಗೋರೇಬಾಳ- ಅವರು ಆತ್ಮಚರಿತ್ರೆಯ ಹುಟ್ಟು ಪಾಶ್ಚಾತ್ಯರಲ್ಲಿ ಕಂಡು ಬರುತ್ತದೆ ಎನ್ನುತ್ತಾರೆ."ಬಹುಮಟ್ಟಿಗೆ ಯುರೋಪ ಖಂಡದಲ್ಲಿ ಆತ್ಮಕಥೆಯ ಬೆಳವಣಿಗೆ ಆಗುವುದಕ್ಕೆ ಒಂದು ಕಾರಣ ಕ್ರೈಸ್ತಮತದ ಮುಖ್ಯ ಅಂಶಗಳಲ್ಲೊಂದಾದ ಪಾಪ ನಿವೇದನೆ. ಇದರಿಂದ ಪಾಪ ನಿವೇದನೆಯ ಸ್ವಭಾವ ಬೆಳೆದು ಯುರೋಪಿನಲ್ಲಿ ಬಹಳ ಹಿಂದೆಯೇ ಆತ್ಮಚರಿತ್ರಾಂಶವುಳ್ಳ ಅನೇಕ ಕೃತಿಗಳು ಬರೆಯಲ್ಪಟ್ಟವು.

ನಮಗೆ ದೊರಕಿರುವ ಗ್ರಂಥಗಳ ಆಧಾರದ ಮೇಲೆ ಕ್ರಿಪೂ ೧೨೧-೮೦ರಲ್ಲಿ ಜೀವಿಸಿದ್ದ ಮಾರ್ಕಸ್ ಆಲೀಲಿಯಸ್ ಎಂಬ ರಾಜನ ಮೆಡಿಟೇಷನ್ಸ್ ಎಂಬ ಕೃತಿಯೇ ಆತ್ಮಕಥೆಯ ಗುಂಪಿಗೆ ಸೇರಿದ ಬರವಣಿಗೆಗಳಲ್ಲಿ ಅತ್ಯಂತ ಹಳೆಯದು. ಮುಂದೆ ಸೇಂಟ್ ಅಗಸ್ಟೀನ್ ಕ್ರಿಶ ೩೫೪-೪೩೦ರಲ್ಲಿ ಬರೆದ ಕನ್‌ಫೆಷನ್ಸ್ ಎಂಬ ಕೃತಿ ಈ ಮಾರ್ಗದಲ್ಲಿ ಒಂದು ಮುಖ್ಯ ಮೈಲಿಗಲ್ಲು. ಕ್ರಿಶ ೮ನೇ ಶತಮಾನದಲ್ಲಿ ಇಂಗ್ಲೆಂಡಿನ ವೆನರಬಲ್ ಬೀಡನ ಕೃತಿಯೊಂದರಲ್ಲಿ ಆತ್ಮಕಥೆಯಿರುವುದನ್ನು ನೋಡುತ್ತೇವೆ. ಇದಾದ ಮೇಲೆ ಕ್ರಿಶ ೧೫೭೩ರಲ್ಲಿ ಬರೆಯಲ್ಪಟ್ಟ 'ಪೊಯೆಟಿಕಲ್ ನೆರೆಟ್ಟೀವ್ ಆಫ್ ಥಾಮಸ್ ಟಸರ್' ಎಂಬ ಗ್ರಂಥ ಬರುವವರೆಗೆ ಆತ್ಮಕಥೆಯೆಂದು ಹೇಳಿಸಿಕೊಳ್ಳಲು ಅರ್ಹವಾದ ಕೃತಿ ಯಾವುದೂ ಬರಲಿಲ್ಲ.

ಹೀಗೆ ಪಾಶ್ಚಾತ್ಯರಲ್ಲಿ ಪ್ರಾರಂಭವಾದ ಆತ್ಮಚರಿತ್ರಾತ್ಮಕ ಬರವಣಿಗೆ ಭಾರತೀಯರಿಗೂ ಬಳುವಳಿಯಾಗಿ ಬಂತು. ಆತ್ಮಚರಿತ್ರೆಯು ಪ್ರಾಚೀನ ಭಾರತೀಯ ಸಾಹಿತ್ಯದ ಸಂದರ್ಭಕ್ಕೆ ಸೇರಿಕೊಂಡ ಅಂಶವಾಗಿರಲಿಲ್ಲ. ಏಕೆಂದರೆ ಭಾರತೀಯ ಪರಂಪರೆಯಲ್ಲಿ ಕಲಾವಿದನ ವ್ಯಕ್ತಿತ್ವಕ್ಕಿಂತ ಅವನು ರಚಿಸಿದ ಕೃತಿಯೇ ಮುಖ್ಯವಾಗಿತ್ತು. ಇವಕ್ಕೆ ಪ್ರಮುಖ ಅಪವಾದಗಳೆಂದರೆ ಬಾಣಭಟ್ಟ ಹಾಗೂ ದಂಡಿ ಇವರುಗಳು ಏಳನೇ ಶತಮಾನದ ಸುಮಾರಿಗೆ ಬರೆದ 'ಹರ್ಷಚರಿತೆ' ಹಾಗೂ 'ಆವಂತಿ ಸುಂದರಿ' ಎಂಬ ಆತ್ಮಚರಿತ್ರಾತ್ಮಕ ಬರಹಗಳು. ಭಾರತೀಯ ಸಾಹಿತ್ಯದಲ್ಲಿ ೧೯ನೇಶತಮಾನದ ಮಧ್ಯದವರೆಗೂ ಆತ್ಮಚರಿತ್ರೆಯ ಪಾಶ್ಚಾತ್ಯ ಮಾದರಿ ಪ್ರಚಲಿತವಾಗಿ ಒಪ್ಪಿತವಾಗುತ್ತಿದ್ದಂತೆಯೇ ಪ್ರತಿಯೊಂದು ಭಾರತೀಯ ಭಾಷೆಯಲ್ಲೂ ಆತ್ಮಚರಿತ್ರೆಯ ಪ್ರಕಾರ

ಎಷ್ಟರ ಮಟ್ಟಿಗೆ ಮೈತುಂಬಿಕೊಂಡು ಬೆಳೆಯಿತೆಂದರೆ ಬಹುಶಃ ಅದು ಜೀವನಚರಿತ್ರೆಗಳ ಸಿದ್ಧಿಯನ್ನು ಮೀರಿದ ಪ್ರಗತಿ ಸಾಧಿಸಿತು.[೧]

ಹೀಗೆ ಆತ್ಮಕಥೆಯ ಪ್ರಕಾರವು ಪಾಶ್ಚಾತ್ಯರಿಂದ ಬಳುವಳಿಯಾಗಿ ಬಂದದ್ದೇನೊ ನಿಜ. ಆದರೂ ಕನ್ನಡ ಸಾಹಿತ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಆತ್ಮಚರಿತ್ರಾಂಶವುಳ್ಳ ಎಳೆಗಳನ್ನು ನಾವು ಕಾಣುತ್ತೇವೆ.

ಎಸ್ ಆರ್ ಗುಂಜಾಳ್‌ರವರು, "ಭಕ್ತಿ ಇಲ್ಲದ ಬಡವ ನಾನಯ್ಯ.ಮಾವಿನಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯ. ನಿಮ್ಮ ನಂಬಿ ನಂಬದ ಡಂಭಕ ನಾನು. ನಾನು ಎಡಹುತಿಪ್ಪೆ. ಸಹಜನಲಯ್ಯ. ಅಡ್ಡದೊಡ್ಡ ನಾನಲ್ಲಯ್ಯ; ದೊಡ್ಡ ಬಸುರು ಎನಗಿಲ್ಲಯ್ಯ. ಬೋಧಿಸಲು ಪ್ರಾರ್ಥಿಸಲು ಮುನ್ನ ನಾನರಿಯೆನಯ್ಯ. ದೊಡ್ಡತನವೆನಗಿಲ್ಲ. ಜೋಳವಾಳಿಯಾನಲ್ಲ. ವೇಳೆವಾಳಿಯವ ನಾನಯ್ಯ ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ ನ್ಯಾಯ ನಿಷ್ಠುರಿ ದಾಕ್ಷಿಣ್ಯಪರನು ನಾನಲ್ಲ. ಅಂಬುಧಿಯೊಳಗೆ ಬಿದ್ದ ಆಲಿಕಲ್ಲಿನಂತೆ ಭಿನ್ನಭಾವವರಿಯದೆ ಶಿವಶಿವ ಎನ್ನುತಿದ್ದೆ ನಾನು...... ಹೀಗೆ ನಾನು ಶಬ್ದ ಪ್ರಯೋಗವಾದ ಎಲ್ಲ ವಚನವಾಕ್ಯಗಳನ್ನು ಹೆಣೆದರೆ ಬಸವಣ್ಣನವರ ಅಂತರಂಗ-ಬಹಿರಂಗ ಜೀವನದ ವಿವಿಧ ಬಣ್ಣಗಳನ್ನು ತೋರಿಸುವ ಆತ್ಮಚರಿತ್ರೆಯಾಗುತ್ತದೆ."[೨] ವಚನಗಳೂ ಕೂಡ ಆತ್ಮಚರಿತ್ರೆಗಳೇ ಎನ್ನುತ್ತಾರೆ. ವಚನಗಳಲ್ಲಿ ಆತ್ಮಕಥೆಯ ಕೆಲ ಅಂಶಗಳಿವೆ ಆದರೆ ಇದು ೨೧ನೇ ಶತಮಾನದ ಆಧುನಿಕ ಆತ್ಮಕಥೆಗಿಂತಾ ಭಿನ್ನವಾಗಿದೆ.

ಡಾ.ರಹಮತ್ ತರೀಕೆರೆರವರು, "ಕನ್ನಡ ಕವಿಗಳಿಗೆ ಹೋಲಿಸಿದರೆ, ಫಾರಸಿ ಉರ್ದು ಲೇಖಕರು ಸ್ವಂತದ್ದನ್ನು ಹೆಚ್ಚು ಹೇಳಿಕೊಳ್ಳುತ್ತಾರೆ; ಕೊನೆಯಲ್ಲಿ ತಮ್ಮ ಹೆಸರು ಅಂಕಿತದ ಹಾಗೆ ಬರುವಂತೆ ಕವಿತೆ ರಚಿಸುತ್ತಾರೆ. ಬೇರೆ ರೂಪದಲ್ಲಿ ಕಬೀರ ದೋಹೆಗಳಲ್ಲೂ ಮೀರಾ ಭಜನೆಗಳಲ್ಲಿಯೂ ನಮ್ಮ ಶರಣರ ಮತ್ತು ದಾಸರ ಅಂಕಿತಗಳಲ್ಲೂ ಇದು ಇದೆ. ಕನ್ನಡ ಮೌಖಿಕ ಪರಂಪರೆಯ ಭಾಗವಾಗಿರುವ ಜನಪದ ಲಾವಣಿ (ಶಾಯರಿ) ಕವಿಗಳಲ್ಲಿ ಈಗಲೂ ಸ್ವವಿವರಗಳನ್ನು ಸೇರಿಸಿ ಹಾಡುವ ಪದ್ಧತಿ ಮುಂದುವರೆದಿದೆ.

'ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆಯಿಲ್ಲ' ಎಂಬ ಪಾಶ್ಚಿಮಾತ್ಯರ ಆಕ್ಷೇಪಣೆ ಇತ್ತಷ್ಟೆ. ಈ ಸವೆದ ಆಕ್ಷೇಪಕ್ಕೆ ಕೊಟ್ಟಿರುವ ಉತ್ತರಗಳೂ ಸವೆದಿದೆ. ಆದರೆ ಬ್ರಿಟಿಷರು ಬರುವ ಮುನ್ನ ಹಾಗೂ ಬಂದ ನಂತರ ಕೂಡ ಭಾರತದ ರಾಜಾಸ್ಥಾನಗಳಲ್ಲಿ ಫಾರಸಿ ಮತ್ತು ಉರ್ದುವಿನ ಅನೇಕ ಚರಿತ್ರೆಯ ಗ್ರಂಥಗಳು ಹುಟ್ಟಿದವು ; 'ಬಾಬರ್‌ನಾಮಾ' 'ಅಕಬರನಾಮಾ' 'ಇಬ್ರಾಹಿಂನಾಮಾ' 'ಹೈದರ್‌ನಾಮಾ'-ಹೀಗೆ ಆಯಾ ರಾಜರ ಹೆಸರಲ್ಲಿ ಅವು ಪ್ರಕಟಗೊಂಡವು ಎಂಬುದನ್ನು ಇಲ್ಲಿ ತಪ್ಪದೇ ನೆನೆಯಬೇಕು. ಮಧ್ಯ ಏಶಿಯಾದ ಇಸ್ಲಾಮಿಕ್ ಸಂಸ್ಕೃತಿಯ ಎಷ್ಟೋ ಸಂಗತಿಗಳನ್ನು

ಯುರೋಪಿನಿಂದ–ಮುಖ್ಯವಾಗಿ ಗ್ರೀಸಿನಿಂದ ಕಲಿತಂತೆ–ಅನೇಕ ವಿಷಯಗಳನ್ನು ಯುರೋಪ್ ಕೂಡ ಏಶಿಯಾದಿಂದ ಕಲಿತಿದೆ. ಈ ಖಂಡಾಂತರ ಕೊಡುಕೊಳೆಗಳ ಅರಿವಿಲ್ಲದೆ ನಾವು–ಎಲ್ಲ ಜ್ಞಾನದ ಚರ್ಚೆಯನ್ನೂ ವೇದಗಳಿಂದ ಆರಂಭಿಸುವಂತೆ–ಯುರೋಪಿಗೆ ಸಮಸ್ತ ಶ್ರೇಯಸ್ಸು ಕೊಡುವುದುಂಟು. ಫಾರಸಿ ಮತ್ತು ಉರ್ದುವಿನಲ್ಲಿ ಮಧ್ಯಕಾಲದ ಅನೇಕ ದೊರೆಗಳು ಆತ್ಮಕಥೆ ಬರೆದರು. ಅವುಗಳಲ್ಲಿ ಬಾಬರನ ಆತ್ಮಕಥೆ ಪ್ರಸಿದ್ಧವಾಗಿದೆ(ಇದನ್ನು ನಾ.ಕಸ್ತೂರಿಯವರು ಕನ್ನಡಿಸಿದ್ದಾರೆ); ಆದ್ದರಿಂದ ಆತ್ಮಕಥೆಯ ಸಂಪ್ರದಾಯ ಪಶ್ಚಿಮದಿಂದಲೇ ಬಂದದ್ದೆಂದು ತೀರ ಹಠ ಹಿಡಿಯುವಂತಿಲ್ಲ."[೩]

ಆತ್ಮಕಥೆಯ ಮೂಲದ ಬಗ್ಗೆ ಫಾರಸಿ ಹಾಗೂ ಉರ್ದುವಿನ ಚರಿತ್ರೆಯ ಕುರಿತು ಇವರು ಹೇಳುವ ಮಾತು ಹೆಚ್ಚಿನ ಸಂಶೋಧನೆಯನ್ನು ನಿರೀಕ್ಷಿಸುತ್ತದೆ.

ಆತ್ಮಕಥೆಯ ಉಗಮ ಪಾಶ್ಚಾತ್ಯ ಪ್ರೇರಣೆಯಿಂದ ಎಂಬ ಶರಣಮ್ಮ ಗೋರೇಬಾಳ್ ಅವರ ಮಾತನ್ನು ಒಪ್ಪಬಹುದು. ಏಕೆಂದರೆ ಪಾಶ್ಚಾತ್ಯ ಕುಟುಂಬಗಳ ರೀತಿಗೂ ಭಾರತೀಯ ಕುಟುಂಬದ ರೀತಿಗೂ ಆತ್ಮಕಥೆಗೂ ಪರಸ್ಪರ ಅಂತರ್ ಸಂಬಂಧವಿದೆ. ನಗರೀಕರಣ, ಜಾಗತೀಕರಣದ ಪ್ರಭಾವವೂ ಕುಟುಂಬಗಳ ಮೇಲೆ ನೇರವಾದ ಪರಿಣಾಮ ಉಂಟುಮಾಡುತ್ತದೆ. ಈ ನಗರೀಕರಣದಿಂದ ಆದ ಪರಿಣಾಮದ ಬಿಸಿ ಪಾಶ್ಚಾತ್ಯರಲ್ಲೇ ಮೊದಲು ಪ್ರಾರಂಭವಾಯಿತು. ವಿಘಟಿತ ಕುಟುಂಬದಿಂದ ಭಾವನಾತ್ಮಕ ಭದ್ರತೆಯಿಲ್ಲದ ಮನುಷ್ಯನ ಮನಸ್ಸು ಸದೃಢವಾಗಿ ಬೆಳೆಯಲಾರದು. ಅಲ್ಲದೇ ಭಾರತೀಯ ಕುಟುಂಬ ಪದ್ಧತಿಗೂ, ಉದ್ಯೋಗಕ್ಕೂ, ಸಂಸ್ಕೃತಿಗೂ ನಿಕಟ ಸಂಬಂಧವಿದೆ. ಭಾರತೀಯ ಸಂಸ್ಕೃತಿಯ ಬೇರುಗಳು ಕುಟುಂಬದಲ್ಲಿಯೇ ಇವೆ. ಭಾರತದಲ್ಲಿ ಕೃಷಿಯೇ ಮೂಲ ಕಸುಬಾದ್ದರಿಂದ ಅವಿಭಕ್ತ ಕುಟುಂಬಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತು. ಭಾರತೀಯ ಕುಟುಂಬವೆಂದರೆ ಅವಿಭಕ್ತವೇ ಆಗಿತ್ತು. ಭಾರತೀಯರಿಗೆ ಕುಟುಂಬವೇ ಎಲ್ಲ ಚಟುವಟಿಕೆಯ ಕೇಂದ್ರ ಸ್ಥಾನವಾಗಿತ್ತು. ಹಿಂದೂ ಜೀವನ ದೃಷ್ಟಿಯನ್ನು ಪ್ರತಿಬಿಂಬಿಸುವ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳ ಸಿದ್ಧಾಂತದಲ್ಲಿಯೂ ವ್ಯಕ್ತಿಯ ಕೌಟುಂಬಿಕ ಜೀವನದ ಪ್ರಾಮುಖ್ಯತೆಯನ್ನು ಹೇಳಲಾಗಿದೆ. ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಪರಿಪೂರ್ಣವಾಗಬೇಕಾದರೆ ಭಾವನಾತ್ಮಕ, ದೈಹಿಕ, ಆಧ್ಯಾತ್ಮಿಕ, ನೈತಿಕ ಈ ಎಲ್ಲ ಅಂಶಗಳು ಮುಖ್ಯ. ಈ ಎಲ್ಲ ಅಂಶಗಳು ಭಾರತೀಯ ಶಿಕ್ಷಣ ಮತ್ತು ಕುಟುಂಬದೊಳಗೇ ಇದ್ದವು. ಈಗ ಪಾಶ್ಚಾತ್ಯರ ಪ್ರಭಾವವು ಸಾಹಿತ್ಯ, ಶಿಕ್ಷಣ ಪದ್ಧತಿಯ ಮೇಲೆ ಆಗಿರುವುದರ ಜೊತೆಗೆ ಕುಟುಂಬದ ಮೇಲೂ ದಟ್ಟವಾಗಿದೆ. ಹೇಗೆಂದರೆ ಅವಿಭಕ್ತ ಕುಟುಂಬ ಅನುಕೂಲತೆ ಮತ್ತು ಅನನುಕೂಲತೆಯ ಜೊತೆ ಈಗ ಪರಿವರ್ತಿತವಾಗುತ್ತಿದೆ. ಅದು ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳುತ್ತ ಕೇವಲ ಚಿಕ್ಕ

ಗಾತ್ರವಲ್ಲದೇ ಕುಟುಂಬದ ಸ್ವರೂಪದಲ್ಲೂ ಬದಲಾವಣೆಯಾಗಿದೆ. ಕೈಗಾರಿಕೀಕರಣ, ನಗರೀಕರಣ, ಆಧುನೀಕರಣ ಮತ್ತು ಆಧುನಿಕ ಶಿಕ್ಷಣದ ಪರಿಣಾಮವಾಗಿ ಅಣು ಕುಟುಂಬಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ. ನಗರೀಕರಣ ಮತ್ತು ಔದ್ಯೋಗಿಕರಣದ ಪರಿಣಾಮವಾಗಿ ಕುಟುಂಬದಲ್ಲಿ ದಂಪತಿಗಳಿಬ್ಬರು ಬೇರೆ ಬೇರೆ ಪ್ರದೇಶದಲ್ಲಿ ಕೆಲಸ ಮಾಡುತ್ತಾ ಮಕ್ಕಳು ವಿದ್ಯಾಭ್ಯಾಸಕ್ಕೋಸ್ಕರ ಇನ್ನೊಂದು ಕಡೆ ಆಶ್ರಯಿಸುತ್ತಾ ಹೀಗೆ ಕುಟುಂಬ ಎಲ್ಲಿದೆ ಎಂಬ ಪ್ರಶ್ನೆಗೆ ಉತ್ತರವೇ ಸಂಕೀರ್ಣ ಸ್ವರೂಪದ್ದಾಗಿದೆ. ಅಷ್ಟರ ಮಟ್ಟಿಗೆ ಕುಟುಂಬದ ಸ್ವರೂಪದಲ್ಲಿ ಬದಲಾವಣೆಯಾಗುತ್ತಿದೆ. ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ ಭಾರತೀಯ ಕುಟುಂಬಗಳ ಮೇಲೆ ಸಾಕಷ್ಟಾಗಿದೆ. ಇದರ ಪರಿಣಾಮ ಬದುಕಿನ ಹಲವು ಮಜಲುಗಳಲ್ಲಿ ಪ್ರತಿಫಲಿಸುತ್ತಿದೆ. ಕುಟುಂಬಕ್ಕೂ ಬಾಲ್ಯಕ್ಕೂ ಹಾಗೂ ಆತ್ಮಕಥೆಗೂ ತುಂಬಾ ನಿಕಟ ಸಂಬಂಧವಿದೆ.

ಜಿ ಎಸ್ ಶಿವರುದ್ರಪ್ಪ ಅವರು, "ವಾಸ್ತವವಾಗಿ ಆತ್ಮಕಥೆ ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆ ಪ್ರಭಾವಗಳಿಂದ ನಮ್ಮಲ್ಲಿ ರೂಪುಗೊಂಡದ್ದು ಎಂದು ಹೇಳಲಾಗಿದೆ ಮತ್ತು ಕನ್ನಡದಲ್ಲಿ ಸಾಕಷ್ಟು ಆತ್ಮಕಥನಗಳು ಲಿಖಿತವಾಗಿವೆ. ಆತ್ಮಕಥನ ಎನ್ನುವುದು ಇತರ ಸೃಜನ ಪ್ರಕಾರಗಳಿಂದ ತೀರಾ ಭಿನ್ನವಾದದ್ದು: ಅಷ್ಟೇ ಅಲ್ಲ ಅದನ್ನು ಬರೆಯುವುದು ತೀರಾ ಕಷ್ಟದ ಕೆಲಸ ಕೂಡ. ಕತೆ ಕಾದಂಬರಿ ಕವಿತೆ ನಾಟಕ ಇತ್ಯಾದಿ ಸೃಜನ ಪ್ರಕಾರಗಳಲ್ಲಿ ಸಾಹಿತಿಯಾದವನ ವ್ಯಕ್ತಿತ್ವ ಬಹುಮಟ್ಟಿಗೆ ಕಾಣದಷ್ಟು ಪ್ರಚ್ಛನ್ನವಾದ ಕಲಾವಿಧಾನಗಳಲ್ಲಿ ಅಭಿವ್ಯಕ್ತವಾಗಿರುತ್ತದೆ. ಆದರೆ ಆತ್ಮಕಥೆಯಾದರೂ, ಯಾವುದೇ ಕ್ಷೇತ್ರದ ವ್ಯಕ್ತಿಯೊಬ್ಬ ತನ್ನ ಜೀವನದ ನಡೆದು ಬಂದ ದಾರಿಯ ಅನುಭವಗಳನ್ನು ಅವು ಹೇಗೆ ಇವೆಯೋ ಹಾಗೆಯೇ ತೆರೆದು ಸಾರ್ವಜನಿಕರ ಎದುರಿಗೇ ಇಡುವ ಸ್ವರೂಪದ್ದು. ಹೀಗೆ ಮಾಡಲು ಮುಖ್ಯವಾಗಿ ನೈತಿಕ ಧೈರ್ಯ ಬೇಕು: ತನ್ನ ಬದುಕನ್ನು ತಾನೇ ಪರೀಕ್ಷಿಸಿಕೊಳ್ಳುವ ಪ್ರಾಮಾಣಿಕತೆ ಬೇಕು. ತನ್ನ ಇತಿಮಿತಿಗಳನ್ನು ಕುರಿತ ವಿವೇಚನೆ ಬೇಕು. ಇವೆಲ್ಲಕ್ಕೂ ಮಿಗಿಲಾಗಿ ವಿನಯ ಬೇಕು. ಒಂದು ರೀತಿಯಲ್ಲಿ ಇದು ನಿಜವಾದ ಸ್ವಾತ್ಮಶೋಧನೆಯ ಕೆಲಸ. ನಿಜವಾದ ಆತ್ಮಕಥನಗಳು ಹೀಗೆ ತನ್ನನ್ನು ತಾನು ಒರೆಗಲ್ಲಿಗೆ ಉಜ್ಜಿಕೊಂಡು ಅದರ ಗೆರೆ–ಬಣ್ಣಗಳನ್ನು ಪರಿಶೀಲಿಸುವ ವ್ಯಕ್ತಿತ್ವದ ಅಭಿವ್ಯಕ್ತಿಗಳಾಗಿವೆ. ವಾಸ್ತವವಾಗಿ ಈ ಬಗೆಯ ಬರೆಹ ಭಾರತೀಯ ಪರಿಸರಕ್ಕೆ ಅಷ್ಟಾಗಿ ಪರಿಚಿತವಾದುದಲ್ಲವೆಂದೇ ಹೇಳಬೇಕು, ಯಾಕೆಂದರೆ ಮೊದಲಿನಿಂದಲೂ ಈ ಭಾರತೀಯ ಮನಸ್ಸು ಬಹುಮಟ್ಟಿಗೆ ಅಂತರ್ಮುಖವಾದದ್ದು. ಅದಕ್ಕೆ ತನ್ನ ಲೋಕ ಜೀವನದ ಅಹಂ ವ್ಯಕ್ತಿತ್ವದ 'ಲೌಕಿಕ' ಸಂಗತಿಗಳನ್ನು ಹೇಳಿಕೊಳ್ಳುವುದರಲ್ಲಿ ಅಂತಹ ಆಸಕ್ತಿ ಇಲ್ಲ ಎಂದು ಹೇಳಲಾಗಿದೆ. ಆದರೆ ನನಗೆ ತೋರುವ ಮಟ್ಟಿಗೆ ಹೇಳುವುದಾದರೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ಆತ್ಮಕಥನ'ದ ಮೊದಲ ರೂಪಗಳನ್ನು ಹನ್ನೆರಡನೇ ಶತಮಾನದ

ವಚನಕಾರರ ಅಭಿವ್ಯಕ್ತಿಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ಬಸವಣ್ಣನ ವಚನಗಳಲ್ಲಿ ಗುರುತಿಸಬಹುದು. ಈ ಲೋಕದ ನಡುವೆ ನಿಂತು ಪರಂಪರಾಗತವಾದ ವಿಚಾರಗಳನ್ನು ನಂಬಿಕೆಗಳನ್ನು ದಿಟ್ಟತನದಿಂದ ಪ್ರಶ್ನಿಸುತ್ತ ಅಂದಿನ ಪರಿಸರಸದ ಅವೈಚಾರಿಕ ಶೋಷಕ ಪ್ರವೃತ್ತಿಯ ಪಟ್ಟ ಭದ್ರ ಹಿತಾಸಕ್ತಿಗಳೊಂದಿಗೆ ಸಂಘರ್ಷಿಸುತ್ತ, ಅಂದಿನ ಶ್ರೀಸಾಮಾನ್ಯರನ್ನು ಈ ಬಗೆಯ ಸಮರಕ್ಕೆ ಸಜ್ಜುಗೊಳಿಸುತ್ತ ನಿಂತ ಬಸವಣ್ಣನವರ ಅಂತರಂಗದ ತೊಳಲಾಟಗಳನ್ನೂ ಪ್ರತಿಕ್ರಿಯೆಗಳನ್ನೂ ಆಲೋಚನೆಗಳನ್ನೂ ನೋಡಿದರೆ ಬಸವಣ್ಣನವರ ವಚನಗಳು ನಿಜವಾದ 'ಆತ್ಮಕಥನ'ದ ಅಂತರ್ಲಕ್ಷಣಗಳನ್ನು ಬಹುಸೊಗಸಾಗಿ ಪ್ರತಿನಿಧಿಸುತ್ತವೆ ಎನ್ನಬಹುದು."[೪] ಎಂದು ಹೇಳುತ್ತಾರೆ.

ಆತ್ಮಕಥೆಯಲ್ಲಿ ಎಲ್ಲವನ್ನೂ ಹೇಳಬಹುದಾದರೂ ಎಲ್ಲವನ್ನು ಹೇಳಲಾಗುವುದಿಲ್ಲ. ಅಲ್ಲದೇ ಎಲ್ಲ ಅನುಭವಗಳನ್ನು ಭಾಷೆಯಲ್ಲಿ ಹಿಡಿದಿಡುವುದು ಕಷ್ಟ. ಇದು ಭಾಷೆಯ ಮಿತಿಯೋ ಅಥವಾ ಆತ್ಮಕಥೆಯ ಮಿತಿಯೋ ಎಂದು ಗೆರೆ ಕೊರೆದು ಹೇಳುವುದು ಕಷ್ಟ. ಇದು ಹೆಚ್ಚಿನ ಸಂಶೋಧನೆಯನ್ನು ನಿರೀಕ್ಷಿಸುತ್ತದೆ. ಹೇಗೆಂದರೆ ಮೂಕನಿಗೆ ಸಕ್ಕರೆ ಕೊಟ್ಟು ಹೇಗಿದೆಯೆಂದರೆ ಅವನು ಹೇಗೆ ವ್ಯಕ್ತಪಡಿಸುತ್ತಾನೆ? ಅದೇ ಮಾತು ಬರುವವನಿಗೂ ಸಕ್ಕರೆ ಕೊಟ್ಟರೆ ಸಿಹಿ ಎಂದಲ್ಲದೇ ಬೇರೆ ಏನು ಉತ್ತರ ಕೊಟ್ಟಾನು? ಸಿಹಿಯಲ್ಲಿ ಎಷ್ಟು ಪ್ರಕಾರಗಳಿವೆ! ಅದರ ವಿವಿಧ ಮಜಲುಗಳ ಪರಿಚಯ ನಮಗಾಗುವುದಿಲ್ಲ.

ಸ್ವಾತಂತ್ರ್ಯಾ ನಂತರದಿಂದ ತೊಂಬತ್ತರ ದಶಕದವರೆಗೆ ತುಂಬಾ ಕಡಿಮೆ ಪ್ರಮಾಣದ ಆತ್ಮಕಥೆಗಳು ಬಂದಿವೆ. ಸ್ವತಂತ್ರಕ್ಕಿಂತ ಅನುವಾದವೇ ಹೆಚ್ಚು ಎಂಬುದನ್ನು ವಿ. ಗುಂಡಣ್ಣನವರು ಹೀಗೆ ಹೇಳುತ್ತಾರೆ. '೧೯೪೭-೫೬-೨೭ ಆತ್ಮಕಥೆಗಳು, ೧೯೫೭-೬೬-೨೧, ಆತ್ಮಕಥೆಗಳು, ೧೯೬೭-೭೬-೧೮, ಆತ್ಮಕಥೆಗಳು, ೧೯೭೭-೮೬-೫೨, ಆತ್ಮಕಥೆಗಳು, ೧೯೮೭-೯೧-೧'ಆತ್ಮಕಥೆಗಳು ಬಂದಿವೆ

ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ೧೯೭೭-೮೬ರ ದಶಕದಲ್ಲಿ ಹೆಚ್ಚು ಆತ್ಮಕಥೆಯ ಕೃಷಿಯಾಗಿರುವುದು ಕಂಡುಬರುತ್ತದೆ. ಪ್ರಕಟವಾಗಿರುವ ಆತ್ಮಚರಿತ್ರೆಗಳಲ್ಲಿ ೪೦ಕ್ಕೂ ಹೆಚ್ಚಿನವು ಅನುವಾದಿತ ಕೃತಿಗಳು. ಇವುಗಳನ್ನು ಹೊರತುಪಡಿಸಿದರೆ ಸ್ವತಂತ್ರ ಕೃತಿಗಳ ಸಂಖ್ಯೆ ನೂರನ್ನು ಮುಟ್ಟುವುದೂ ಕಷ್ಟವಾಗುತ್ತದೆ. ಬೆರಳೆಣಿಕೆಗೆ ಸಿಗುವಷ್ಟು ಆತ್ಮಚರಿತ್ರೆಗಳು ಸ್ತ್ರೀಯರವು. ಕೇವಲ ಏಳೆಂಟು ಸ್ತ್ರೀಯರ ಆತ್ಮಚರಿತ್ರೆಗಳು ೬೭ರಿಂದ ೯೧ರ ವರೆಗಿನ ಅವಧಿಯಲ್ಲಿ ಪ್ರಕಟವಾಗಿವೆ.

ಪ್ರಾರಂಭದಲ್ಲಿ ತುಂಬಾ ಕಡಿಮೆ ಪ್ರಮಾಣದಲ್ಲಿ ಬಂದ ಆತ್ಮಕಥೆ ಪ್ರಕಾರ ಇತ್ತೀಚಿನ ಎಲ್ಲ ಪ್ರಕಾರಗಳಿಗಿಂತ ವಿಪುಲವಾಗಿ ಬೆಳೆದಿದ್ದನ್ನು ಗುರುತಿಸಬಹುದು.

ಹನ್ನೆರಡನೆಯ ಶತಮಾನದಲ್ಲಿ ತಮ್ಮ ವಚನಗಳ ಮೂಲಕ ಅಂತರಂಗ ನಿವೇದನೆ ಮಾಡಿಕೊಂಡಿರುವುದು ಕಂಡುಬರುತ್ತದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಆತ್ಮಕಥನದ ಮೊದಲ ರೂಪವನ್ನು ಹನ್ನರಡೆನೆಯ ಶತಮಾನದ ವಚನಕಾರರ ಅಭಿವ್ಯಕ್ತಿಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ಬಸವಣ್ಣನ ವಚನಗಳಲ್ಲಿ ಗುರುತಿಸಬಹುದು.

ಹನ್ನೆರಡನೇ ಶತಮಾನದ ವಚನಗಳಲ್ಲಿ ಅಲ್ಲದೇ ಹತ್ತನೇ ಶತಮಾನದ ಕಾವ್ಯಗಳಲ್ಲಿಯೂ ಲೇಖಕರ ವೈಯಕ್ತಿಕ ವಿಚಾರಗಳು ಸ್ವಲ್ಪಮಟ್ಟಿಗೆ ಬಂದಿವೆ. ಅಲ್ಲದೇ ಹದಿಮೂರನೇ ಶತಮಾನದ ರಗಳೆಗಳಲ್ಲಿಯೂ, ನಂತರದಲ್ಲಿ ಬಂದ ಷಟ್ಪದಿಗಳಲ್ಲಿಯೂ ವೈಯಕ್ತಿಕ ವಿಚಾರಗಳು ಬಂದರೂ ಇದು ಇಪ್ಪತ್ತನೇ ಶತಮಾನದ ಆತ್ಮಕಥೆಗಳಿಗೆ ಹೋಲಿಸಲಾಗುವುದಿಲ್ಲ. ಆದರೆ ಇವು ಆತ್ಮಕಥೆಗಳಿಗೆ ಮೂಲ ಎನ್ನಬಹುದು. ಜನಪದ ಸಾಹಿತ್ಯದಲ್ಲಿಯೂ ಆತ್ಮಕಥೆಯ ಎಳೆಗಳಿವೆ ಎನ್ನಬಹುದು.

ನವೋದಯ ಸಂದರ್ಭದಲ್ಲಿ ಆತ್ಮಕಥೆಯೆಂದರೆ ಬಾಲ್ಯದಿಂದ ಹಿಡಿದು ಯೌವ್ವನ ಮುಪ್ಪು ಇವೆಲ್ಲವನ್ನು ಒಳಗೊಂಡ ಅನುಭವಗಳ ಸಂಕೀರ್ಣಸ್ಥಿತಿಯಾಗಿತ್ತು. ಇದು ಬದಲಾಗುತ್ತ ಜಿ.ಎಸ್. ಶಿವರುದ್ರಪ್ಪ ಆತ್ಮಕಥೆಗೆ ಅಸಮಗ್ರ ಎಂದೇ ಹೆಸರು ಕೊಟ್ಟರು. ಆತ್ಮಕಥೆ ಸಮಗ್ರವಾಗಲು ಸಾಧ್ಯವಿಲ್ಲ. ಏಕೆಂದರೆ ಜೀವನದಲ್ಲಿ ನಡೆದ ಎಲ್ಲ ಘಟನೆಗಳು ಅನುಭವಗಳು ಅನಾವರಣ ಗೊಂಡರೂ ಬರೆದಾದ ಪ್ರಕಟಿಸಿದ ಮೇಲಿನ ಅನುಭವಗಳ ಬಗ್ಗೆ ಏನು ಹೇಳಲು ಸಾಧ್ಯ? ಅದಕ್ಕೆ ಜಿ.ಎಸ್.ಶಿವರುದ್ರಪ್ಪನವರು ನಮಗೆ ಬೇಡದಿರುವ ಕಹಿ ಅನುಭವವನ್ನು ಯಾಕೆ ನೆನಪಿಸಿಕೊಳ್ಳಬೇಕು? ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ಪ್ರಾರಂಭದಲ್ಲಿ ಎಲ್ಲ ಘಟನೆಗಳ ನಿರೂಪಣೆ ಇರುವುದು ಸಾಧ್ಯವಿಲ್ಲ. ಹೆಚ್ಚಿನ ಘಟನೆಗಳು ಅನುಭವಗಳ ಅನಾವರಣದ ಆತ್ಮಕಥೆ ಬಂದರೆ, ಕ್ರಮೇಣ ಈ ವ್ಯಾಖ್ಯೆ ಬದಲಾಗುತ್ತ ಹೋಯಿತು. ವ್ಯಾಸರಾಯ ಬಲ್ಲಾಳರು ಮುಂಬೈ ದಿನಾಂಕವನ್ನು ಬರೆಯುವಾಗ ಇದನ್ನು ನನ್ನ ಆತ್ಮವೃತ್ತ ಎಂದು ಕರೆಯುವುದು ಸರಿಯೆನಿಸದು ಎನ್ನುತ್ತಾರೆ. ಏಕೆಂದರೆ ಬಾಲ್ಯದ ಕೆಲವೇ ವಿವರಗಳನ್ನು ಸಂದರ್ಭಕ್ಕೆ ಹೊಂದಿಕೊಳ್ಳುವಂತೆ ವಿವರಿಸಿದ್ದೇನೆ. ಆ ಮೇಲೆ ಮುಂಬೈಯಲ್ಲಿ ವೃತ್ತಿಜೀವನಕ್ಕಷ್ಟೇ ಸೀಮಿತಗೊಳಿಸದೆ ಪತ್ರಿಕೋದ್ಯಮ, ಸಾಹಿತ್ಯದ ಬರೆವಣಿಗೆಯ ದಾರಿಯಲ್ಲಿ ನನಗೆ ಸಿಕ್ಕ ಅವಕಾಶ, ಅನುಭವಗಳನ್ನೆಲ್ಲ ಒಂದು ಕೃತಿಯಲ್ಲಿ ಒಡಮೂಡಿಸುವ ಆಶಯದ ಬರವಣಿಗೆ ಹೊರತೂ ವೈಯಕ್ತಿಕ ಜೀವನದ ಏರಿಳಿತಗಳನ್ನು ವಿವರಿಸುವ ಆಶಯ ಈ ಕೃತಿಗಿಲ್ಲ. ಅದಕ್ಕಾಗಿ ಇದನ್ನು ಆತ್ಮವೃತ್ತ ಎನ್ನದೇ ಅನುಭವ ಕಥನಕ್ಕಷ್ಟೇ ಸೀಮಿತಗೊಳಿಸಿದ್ದೇನೆ ಎನ್ನುವಲ್ಲಿ ಆತ್ಮವೃತ್ತ ಮತ್ತು ಅನುಭವ ಕಥನದ ವ್ಯತ್ಯಾಸ ತಿಳಿಯುತ್ತದೆ. ಇಲ್ಲಿ ವೈಯಕ್ತಿಕ ಬದುಕಿನ ಏರಿಳಿತಗಳಿಗೂ ಹಾಗೂ ವೃತ್ತಿ ಅನುಭವದ ಏರಿಳಿತಗಳೂ ಮೇಲ್ನೋಟಕ್ಕೆ ಒಂದೇ ಅನಿಸಿದರೂ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಬಹುದು. ವೃತ್ತಿಜೀವನದ ಅನುಭವ ಅಂದರೆ ಸಾಧನೆಯ ಹಾದಿಯಲ್ಲಿ ಸಾಗಿದ ಜೀವನದ ಅನುಭವ. ಇದು ಒಂದು

ಘಟನೆಯ ವಿವರ ಆಗಿರಬಹುದು ಅಥವಾ ಹಲವಾರು ಘಟನೆಯ ವಿವರ ಆಗಿರಬಹುದು. ಇಂಥ ಆತ್ಮಕಥೆಗಳಿಗೆ ಮಹಿಳೆಯರು ಮತ್ತು ಪ್ರಾರಂಭದಲ್ಲಿ ಅಂದರೆ ೮೦ರ ದಶಕದಲ್ಲಿ ಬಂದ ದಲಿತ ಆತ್ಮಕಥೆಗಳು ಉದಾಹರಣೆ ಎನ್ನಬಹುದು. ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ ಬ್ರಾಹ್ಮಣ'ದು ಕೂಡ ಸರಸ್ವತಿಯ 'ಈಗೇನ್ ಮಾಡೀರಿ' ಶೈಲಜಾ ಅವರ ಕಿಚ್ಚಿಲ್ಲದ ಬೇಗೆಯನ್ನು ಗಮನಿಸಬಹುದು. ಮೊದಲು ಇಡೀ ಅನುಭವದ ಗುಚ್ಛವಾಗಿ ಬಂದ ಆತ್ಮಕಥೆ ನಂತರ ಟಿಸಿಲೊಡೆದು ಬೆಳೆದದ್ದನ್ನು ಗಮನಿಸಬಹುದು.

೨.೧. ಆತ್ಮಕಥೆಗಳ ಸ್ವರೂಪ

ಆತ್ಮಕಥೆಯು ವ್ಯಕ್ತಿಯೊಬ್ಬ ತನ್ನ ಜೀವನ ಕ್ರಮವನ್ನು ಆತ್ಮನಿರೀಕ್ಷಣೆಯ ನಿಕಷಕ್ಕೊಡ್ಡಿದ ಮಹಾಗಾಥೆಯೇ ಆಗಿದೆ. ಆತ್ಮಕಥೆ ಎಂದರೆ ವ್ಯಕ್ತಿಯ ಅನುಭವಗಳ ಖಾಸಾ ಕಥನ. ಈ ಕಥನದಲ್ಲಿ ಎಲ್ಲ ಅನುಭವಗಳನ್ನು ಹೇಳುವುದು ಸಾಧ್ಯವಿಲ್ಲದ್ದು. ಹಾಗಾದರೆ ಕೆಲವು ಅನುಭವಗಳನ್ನಷ್ಟೇ ಏಕೆ ಹೇಳುತ್ತಾರೆ? ಹಾಗೆ ಹೇಳಹೊರಟಿರುವ ಹಿಂದಿನ ಉದ್ದೇಶ ಯಾವುದು ಎನ್ನುವ ಕುತೂಹಲಕ್ಕೆ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆತ್ಮಕಥೆಗಳಲ್ಲಿ ಯಾವೆಲ್ಲ ಅನುಭವಗಳಿವೆ? ಯಾವ ಭಾವಗಳಿವೆ? ಸಣ್ಣತನ ದೊಡ್ಡತನಗಳೆಲ್ಲ ಹೇಗೆ ವ್ಯಕ್ತವಾಗುತ್ತವೆ? ಇದು ಸಮಾಜದ ಮೇಲೆ ಬೀರುವ ಪರಿಣಾಮ ಎಂತಹುದ್ದು? ಇವೇ ಮುಂತಾದ ಪ್ರಶ್ನೆಗಳು ಆತ್ಮಕಥೆಗಳ ಅಧ್ಯಯನದ ಸಂದರ್ಭದಲ್ಲಿ ಎದುರಾಗುತ್ತವೆ. ಈ ಪ್ರಶ್ನೆಗಳಿಟ್ಟುಕೊಂಡೇ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

"ಆತ್ಮಕಥನ ಎಂದರೆ ಬಯಲಾಗುವುದು, ಬಯಲಾಗಿ ಬಯಲಲ್ಲಿ ನಿಲ್ಲುವ ಕ್ರಿಯೆ. ಪರಿಶೀಲನೆ, ನಿವೇದನೆ, ಸ್ವಗತ, ಆತ್ಮಾವಲೋಕನ, ನೆನಪು, ಅನುಭವಗಳ ಹೋರಾಟಗಳ ಕಥನ. ಈ ಎಲ್ಲವನ್ನೂ ಒಳಗೊಂಡು ಬದುಕಿನ ಶೋಧನೆಯತ್ತ ತಂತಾನೆ ಸಾಗುವ ಸಂಪೂರ್ಣವಾಗಿ ಲೌಕಿಕದಲ್ಲಿಯೆ ಅರಳುವ ಒಂದು ಸಹಜ ಆಧ್ಯಾತ್ಮ. 'ಬತ್ತಲಾಗದೆ ಬಯಲು ಸಿಕ್ಕದಿಲ್ಲ' ಎಂಬುದರ ಆಂತರಿಕ ಅರ್ಥ. ಅದೊಂದು ನಿರಾವರಣಗೊಳ್ಳುವ ಪ್ರಕ್ರಿಯೆ. ನಿರಾವರಣಗೊಳ್ಳುವುದು ತಮ್ಮಿಂದ ತಾವೇ ಸುಲಭವಲ್ಲ. ತಮಗೆ ತಾವೇ ಒಡ್ಡಿಕೊಳ್ಳುವ ಒಂದು ಬಗೆಯ ಸವಾಲು. ಅದಕ್ಕೆ ಅಪಾರ ಧೈರ್ಯ ಮಾತ್ರವಲ್ಲದೆ, ತನ್ನೊಳಗನ್ನು ಹೇಳಿಕೊಳ್ಳುವ ತೀವ್ರ ಬಯಕೆಯು ಬೇಕಾಗುತ್ತದೆ. ಎಂದು ವೈದೇಹಿ ಅವರು ಆತ್ಮಕಥೆಯನ್ನು ಕುರಿತು ವಿಶ್ಲೇಷಿಸಿದ್ದಾರೆ.

ಕೇವಲ ಹೇಳುವುದು ಮಾತ್ರವಲ್ಲದೆ ಕೇಳುವ ವರ್ಗದ ಜೊತೆ ಕೂಡ ವೈದೇಹಿ ಸೇತುವೆ ಕಟ್ಟುತ್ತಾರೆ. ಅವರ ಪ್ರಕಾರ ತಾನು ಯಾವ ಪ್ರಪಂಚದೊಡನೆ ತನ್ನ ಒಳಹೊರಗನ್ನು ಯಥಾವತ್

ತೋರಲು ಹೊರಟಿದ್ದಾರೋ ಆ ಕೇಳುಗ ಪ್ರಪಂಚದ ಜೀರ್ಣಶಕ್ತಿಯ ಬಗ್ಗೆ ವಿಶ್ವಾಸ, ಅವರೆದುರು ಕುಳಿತು ಎಲ್ಲವನ್ನೂ ಹೇಳಿಯೇ ಹೇಳುವೆನು, ತಿಳಿಸಿಯೇ ತೀರುವನೆಂಬ ತುಡಿತವೂ ಬೇಕಾದೀತು.

ತನ್ನನ್ನು ತಾನು ಹುಡುಕುವುದು, ತನ್ನನ್ನು ತಾನು ಕಂಡುಕೊಳ್ಳುವ ಕತೆಯೇ ಆತ್ಮಕಥೆ, ಕಂಡುಕೊಳ್ಳುವ ದಾರಿ ಅಥವಾ ರೀತಿ ಬೇರೆಯಾಗಿರಬಹುದು. ಆದರೆ ಗುರಿ ಒಂದೆ. ಕೇವಲ ಮನುಷ್ಯ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ಕಥೆಯಿದೆ. ನಾಯಿ, ಬೆಕ್ಕು, ಕ್ರಿಮಿಕೀಟಾದಿ ಸಕಲ ಚರಾಚರ ವಸ್ತುಗಳಿಗೂ ತನ್ನದೇ ಆದ ಕಥೆಯಿದೆ. ಈ ಕತೆಯೇ ಆತ್ಮಕಥೆ. ತನ್ನ ಬದುಕಿನ ಉದ್ದೇಶವೇನೆಂದು ತಿಳಿದಾಗ ತನ್ನನ್ನು ಹುಡುಕಿಕೊಳ್ಳುವುದು ಅಥವಾ ಹುಡುಕುವ ಮಾರ್ಗ ಸುಲಭವಾಗುತ್ತದೆ. ಇಂತಹ ಹುಡುಕಾಟವನ್ನು ನಡೆಸಿದ ಆತ್ಮಕಥೆಗಳೆಂದರೆ ಚಂದ್ರಶೇಖರ ಉಡುಪರ 'ನನಗೊಲಿದ ಗುರೂಜಿ ನಿಮಗೊಲಿಯಲಿ', ವೀಣಾ ಬನ್ನಂಜೆ ಅವರ 'ಆತ್ಮಕಥೆ' ಮತ್ತು ಮಧುರಚೆನ್ನರ 'ಆತ್ಮಶೋಧ'.

ಆತ್ಮಕಥೆಯ ಮೂಲಕ ವ್ಯಕ್ತಿ ಮತ್ತು ವ್ಯಕ್ತಿಯ ಅನೇಕ ಮುಖಗಳನ್ನು ಅದೇ ರೀತಿ ಸಮಾಜದ ವಿವಿಧ ಆಯಾಮಗಳನ್ನು ತಿಳಿಯಬಹುದು. ವ್ಯಕ್ತಿ ಮತ್ತು ಸಮಾಜದ ಅಂತರ್ ಸಂಬಂಧ ಮತ್ತು ಬಾಹ್ಯ ಸಂಬಂಧಗಳನ್ನು ವಿವರಿಸುವುದೇ ಆತ್ಮಕಥೆ. ಮನಸ್ಸಿನ ಜೊತೆ ಹೊರಗಿನ ಮತ್ತು ಒಳಗಿನ ಸ್ಥಿತಿಗತಿಗಳು ಹೇಗೆ ಸ್ಪಂದಿಸುತ್ತವೆ ಎನ್ನುವ ಅಂಶಗಳನ್ನು ಆತ್ಮಕಥೆ ಅನಾವರಣಗೊಳಿಸುತ್ತದೆ. ಅದನ್ನೇ ಹೀಗೂ ಹೇಳಬಹುದು. ಒಳಮನಸ್ಸು ಮತ್ತು ಹೊರಜಗತ್ತುಗಳ ಪರಸ್ಪರ ಸಂಬಂಧ ಅಥವಾ ಹೋರಾಟಗಳೇ ಆತ್ಮಕಥೆ. ಅನುಭವಗಳು ವ್ಯಕ್ತಿ ಜೀವನದ ಅನುಭವಗಳ ಸ್ಮೃತಿ ಸಂಪುಟದಿಂದ ಬರುವ ಸುರುಳಿಗಳಾಗಿರುತ್ತವೆ. ಇವು ಬರಹದಲ್ಲಿ ಅನೇಕ ಭಾವಗಳಾಗಿ ಮೂಡುತ್ತವೆ. ಒಂದು ಸಾಂಸ್ಕೃತಿಕ ಒಳನೋಟಗಳನ್ನು ಕಟ್ಟಿಕೊಡುವ, ತಾವು ನೊಂದ ರೀತಿಯನ್ನು ಪ್ರಪಂಚ ಗಮನಿಸಲಿ ಎಂಬ ಮನೋಭಾವದ, ಸಹಾನುಭೂತಿ ವ್ಯಕ್ತಪಡಿಸಲಿ ಎನ್ನುವ ಆಕಾಂಕ್ಷೆಯುಳ್ಳ, ತಮಗೆ ಅನ್ಯಾಯ, ಅಪಚಾರ ಎಸಗಿದವರಿಗೆ ತಕ್ಕ ಶಾಸ್ತಿಯಾಗಲಿ ಎನ್ನುವ ಒಳ ಆಸೆಯೂ ಕೆಲವೊಮ್ಮೆ ಇರುತ್ತದೆ. ಈ ಒಳ ಮನಸ್ಸು ಆತ್ಮಕಥನಕಾರರೆಲ್ಲರಲ್ಲಿ ಹಲವು ಮಾದರಿಯಲ್ಲಿ ಸತ್ಯ ಮತ್ತು ಸತ್ವಗಳ ಪರಿಧಿಯಲ್ಲಿರುತ್ತದೆ. ಅನುಭವಿಸಲಾಗದ ಮತ್ತು ಸಹಿಸಲಾಗದ ಎಷ್ಟೋ ವಿಚಾರಗಳು ಸರಾಗವಾಗಿ ಹೊರಬರುವುದಕ್ಕೆ ಆತ್ಮಕಥೆ ಅತ್ಯುತ್ತಮ ಮಾಧ್ಯಮವಾಗಿದೆ.

ಆತ್ಮಕಥೆ ಉದ್ದೇಶವನ್ನು ವಿ.ಗುಂಡಣ್ಣನವರು ಹೀಗೆ ಹೇಳುತ್ತಾರೆ. "ಪ್ರಚಾರ ಹಾಗೂ ಹಣಗಳಿಕೆಯ ದೃಷ್ಟಿಯಿಂದ ತನ್ನ ವೈಯುಕ್ತಿಕ ಜೀವನವನ್ನು ಓದುಗರ ಮುಂದೆ ಬಿಚ್ಚಿಡುವುದು, ಓದುಗರ ಪ್ರಶಂಸೆ, ಮೆಚ್ಚುಗೆ, ಅನುಕಂಪವನ್ನು ಪಡೆಯುವುದು. ಸಿಹಿ ನೆನಪುಗಳನ್ನು

ಪಡೆಯುವುದು.ಸಿಹಿ ನೆನಪುಗಳನ್ನು ಮತ್ತೆ ಮತ್ತೆ ಮೆಲುಕು ಹಾಕಿ ಕಹಿ ನೆನಪುಗಳ ಹೊರೆಯಿಂದ ವಿಮೋಚನೆ ಪಡೆಯುವುದು ಉತ್ತಮವಾದ, ಆದರ್ಶವಾದ, ಪ್ರಾಮಾಣಿಕವಾದ, ಕಲಾತ್ಮಕವಾದ ಜೀವನಚಿತ್ರವನ್ನು ಕೊಡುವುದು. ತನ್ನ ಶ್ರೇಷ್ಠತೆಯಿಂದಾಗಿ ಇತರರ ಉದ್ದಾರವಾಗಬಹುದೆಂದು ಭಾವಿಸುವುದು ತನ್ನನ್ನು ಇತರರು ಅನುಸರಿಸಲಿ ಎಂದು ಬಯಸುವುದು. ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಹಲವು ಉದ್ದೇಶಗಳು ಆತ್ಮಚರಿತ್ರೆಯ ರಚನೆಗೆ ಕಾರಣ ವಾಗಬಹುದು."[೫]

ಗುಂಡಣ್ಣನವರ ಅಭಿಪ್ರಾಯವನ್ನು ಆಧರಿಸಿ ಆತ್ಮಕಥೆಗಳ ಉದ್ದೇಶವನ್ನು ಗ್ರಹಿಸುವುದಾದರೆ ಆತ್ಮಕಥೆಯು ವ್ಯಕ್ತಿಯೊಬ್ಬನ ಬದುಕಿನ ನೈಜ ಸ್ಥಿತಿ ಏನೇ ಇದ್ದರೂ ಅಕ್ಷರ ರೂಪದ ದಾಖಲೀಕರಣದ ವೇಳೆಗೆ ಅಚ್ಚುಕಟ್ಟುಗೊಳಿಸಲಾದ ಸುಧಾರಿತ ನಿರೂಪಣೆಯಾಗಿದೆ. ತಾನು ತನ್ನ ಸಮಕಾಲೀನ ಹಾಗೂ ಭಾವೀ ಸಮುದಾಯಕ್ಕೆ ಮಾದರಿ ಎಂಬ ಸಣ್ಣ ಮಟ್ಟಿನ ಅಹಮಿಕೆಯೂ ಆತ್ಮಕಥೆಯ ಕಥನಕಾರನಿಗೆ ಇರುವುದು ಅನೇಕ ಆತ್ಮಕಥೆಗಳ ಓದಿನಲ್ಲಿ ಸ್ಪಷ್ಟವಾಗುತ್ತದೆ.

ವರ್ಜೀನಿಯಾ ವೂಲ್ಫ ಪ್ರಕಾರ "ಕನ್ನಡಿ ವೈಯುಕ್ತಿಕತೆಯನ್ನು ಸಂರಚಿಸುತ್ತದೆ. ವೈಯುಕ್ತಿಕತೆಯೆಂದು ಅಂದುಕೊಳ್ಳುವುದೇನಿದ್ದರೂ ಪ್ರತಿಫಲನಗಳ ಒಗ್ಗೂಡಿಕೆಯಾಗಿದ್ದು, ಅದನ್ನೇ ನಿಜವೆಂದು ಮನುಷ್ಯ ಭ್ರಮಿಸಿದ್ದಾನೆ. ಈ ವಿಷಯದಲ್ಲಿ ವರ್ಜನೀಯಾ ವೂಲ್ಫ್ ಹೇಳಿರುವುದೇನೆಂದರೆ; ವೈಯುಕ್ತಿಕತೆಯ ಬಗೆಗಿನ ಬರವಣಿಗೆ, ವೈಯುಕ್ತಿಕತೆಯೆಂಬುದು ಮಾಯವಾಗಿ, ಅದರಲ್ಲಿ ಬಿರುಕುಗಳು ಉಂಟಾಗಿ ಎಚ್ಚರದಲ್ಲಿ ಲಭ್ಯವಿರದಿದ್ದ ನೆನಪುಗಳು ಇದ್ದಕ್ಕಿದಂತೆ ಅದರೊಳಗೆ ನುಗ್ಗಿ ನಿಲ್ಲುವ ಗಳಿಗೆಗಳನ್ನೊಳಗೊಂಡಿವೆ. ನಾವೆಲ್ಲಾ ನಮ್ಮ ಅನುಕೂಲಕ್ಕಾಗಿ ಸತ್ಯವೆಂದು ಕರೆಯಬಹುದಾದರೆ ಮೇಲೆ ತೇಲಿಬಿಟ್ಟಿರುವ ಬೆಸುಗೆ ಹಾಕಿ ಮೊಹರು ಮಾಡಿ ಮುಚ್ಚಳವನ್ನು ಭದ್ರಪಡಿಸಿರುವ ಭಾಂಡೆಗಳು. ಕೆಲವೊಮ್ಮೆ ಬೆಸುಗೆ ಬಿಟ್ಟುಕೊಂಡು ಸತ್ಯವೆಂಬುದು ಅದರೊಳಕ್ಕೆ ನುಗ್ಗುತ್ತದೆ. ವೈಯುಕ್ತಿಕತೆಯೆಂಬುದು ಎಂದೂ ಸ್ಥಾಯಿಯಾದದ್ದಲ್ಲ. ಮತ್ತು ಅದು ಅದರದ್ದೇ ಕಥನವಾಗುವುದು ಸಾಧ್ಯವಿಲ್ಲ. ಹೆಚ್ಚೆಂದರೆ ತಮ್ಮ ಕಡೆಗಿನ ಪುನರಾಗಮನವನ್ನು ತಾವೇ ಏರ್ಪಡಿಸಿಕೊಳ್ಳುವ ಪ್ರಾತಿನಿಧಿಕ ಅಥವಾ ಗಟ್ಟಿಯಾಗುಳಿದ ಕೆಲವು ಘಟನೆಗಳು, ಸಂದರ್ಭಗಳಿರಬಹುದಷ್ಟೆ. ವೈಯುಕ್ತಿಕತೆ ಯಾವಾಗಲೂ ಅದರ ಒಗ್ಗೂಡಿಕೆಯಿಂದಾಗಿ ಎಷ್ಟೋ ಅದರ ಬಿಡಿ ತುಣುಕುಗಳಿಂದಾಗಿಯೂ ಗುರುತಿಸಲ್ಪಡಬಹುದಾದ ಒಂದು ಸಂರಚನೆ, ಮನಃಪ್ರತಿಮೆ.ಆತ್ಮಕಥೆ ಎಂಬುದರಲ್ಲಿ ಸತ್ಯದರ್ಶನಕ್ಕಿಂತ, ಅದರ ಪ್ರದರ್ಶನವೇ ಅಧಿಕವಾಗಿರುವ ಸಂಭವವೇ ಹೆಚ್ಚಾಗಿದ್ದು, ಒಂದು ಭಗ್ನಾವಶೇಷವಾದ ಕಟ್ಟಡವನ್ನು

ಮೂಲರೂಪವನ್ನೂಹಿಸಿ ಪುನಾರೂಪಣ ಮಾಡಿದಂತೆ, ಭೂತಕಾಲದ್ದು ಪುನರ್‌ಗ್ರಹಣ ಮಾಡುವುದು ಅಸಾಧ್ಯ. ಬೇರೆಯೇ ಆದ ಗಂಭೀರ ಚರ್ಚೆಗೆ ಗ್ರಾಸವಾಗಿರುವ ಮೇಲ್ಕಂಡ ವಿಚಾರಗಳನ್ನಿಲ್ಲಿ ಲಂಬಿಸಬಯಸದೇ ಮೇಲ್ಕಂಡ ವಿಚಾರಗಳ ಹಿನ್ನಲೆಯಲ್ಲಿ ಇಲ್ಲಿಗೆ ಸಂಬಂಧಿಸಿದಂತೆ ಸೀಮಿತವಾಗಿ ಒಂದನ್ನು ಸ್ಪಷ್ಟಪಡಿಸುವುದೇನೆಂದರೆ ಆತ್ಮಕಥೆಯೆಂಬುದು ಸತ್ಯದ ನಿರೂಪಣೆಯೇ ಅಥವಾ ಕಲ್ಪಿತ ಕಥನವೇ ಅಥವಾ, ಇವರೆಡರ ಸಮ್ಮಿಶ್ರಣವೇ ಎಂಬುದನ್ನು ಇದಮಿತ್ಥಂ ಎಂದು ನಿರ್ಧರಿಸುವುದು ಅಸಾಧ್ಯ.[1]

ವರ್ಜನೀಯಾ ವೂಲ್ಫ್ ಹೇಳಿರುವ ಮಾತನ್ನು ಗಮನಿಸುವಾಗ ಆತ್ಮಕಥೆಯು ಅಧಿಕೃತವಾಗಿ ಲೇಖಕನ ಅನುಭವದ್ರವ್ಯವೇ ಆಗಿರಬೇಕಿಲ್ಲ. ಕಾಲಾನಂತರದಲ್ಲಿ ಲೇಖಕ ತನ್ನ ಕತೆಯನ್ನು ತಾನು ಬರೆಯುವ ಸಂದರ್ಭದ ಧೋರಣೆಗೆ ಅನುಸರಿಸಿಕೊಂಡು ತನ್ನ ಬಾಳನ್ನು 'ಬೀಳೆ'ಂದು ಕರೆಯದೆ 'ಮೇಲೆಂ'ದು ವಿಶೇಷವಾಗಿ ವಿವರಿಸುವ, ಉತ್ತಮಿಕೆಗಳನ್ನಷ್ಟೆ ಉಲ್ಲೇಖಿಸುವ, ಇಳಿಜಾರು, ಪ್ರಪಾತಗಳನ್ನು ವರ್ಜಿಸುವ ಅಪ್ರಮಾಣಿಕ ಸಭ್ಯತೆಯೂ ಆಗಿರಬಹುದು ಎಂಬ ಗುಮಾನಿ ಬರುತ್ತದೆ.

ವ್ಯಕ್ತಿಯೊಬ್ಬನ ಆತ್ಮಕಥೆ ವೈಯುಕ್ತಿಕವೆಂದು ಕಂಡರೂ ಪರಿಸರದಿಂದ ಬೇರೆಯಾಗಿಲ್ಲ. ಬೇರೆ ಬೇರೆ ವ್ಯಕ್ತಿಗಳ ಪ್ರಭಾವ ಪರಸ್ಪರವಾದದ್ದು, ಸಾಮಾಜಿಕ, ನೈತಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಶಕ್ತಿಗಳು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುತ್ತವೆ. ಬುದ್ಧ, ಬಸವೇಶ್ವರ, ವಿವೇಕಾನಂದರಂತಹ ವ್ಯಕ್ತಿಗಳು ಕೇವಲ ವ್ಯಕ್ತಿಗಳಾಗದೆ ಶಕ್ತಿ ಪ್ರತಿನಿಧಿಗಳಾಗಿ ಬದುಕಿರುವುದರಿಂದ ಸಮಕಾಲೀನ ಮಾತ್ರವಲ್ಲದೆ ಕಾಲೋತ್ತರವಾಗಿ ಭವಿಷ್ಯವನ್ನು ರೂಪಿಸಿದವರಾಗಿದ್ದಾರೆ. ವ್ಯಕ್ತಿಯೇ ಸಮಾಜವನ್ನು ರೂಪಿಸುತ್ತಾನೋ, ಸಮಾಜವೇ ವ್ಯಕ್ತಿತ್ವವನ್ನು (ಶಕ್ತಿಗಳನ್ನಾಗಿ) ನಿರ್ಮಾಣ ಮಾಡುತ್ತದೋ ಬೇರ್ಪಡಿಸಿ ಹೇಳಲಾಗದಿದ್ದರೂ ಅವು ಒಂದರೊಳಗೊಂದು ಬೆರೆತಂತೆ ಇರುತ್ತದೆ. ಸಮಷ್ಟಿಯೇ ವ್ಯಷ್ಟಿಯನ್ನು ರೂಪಿಸುತ್ತದೆ ಎನ್ನುವುದನ್ನು ಒಪ್ಪಬಹುದು. ಏಕೆಂದರೆ ಸಮಷ್ಟಿಯನ್ನು ಸುಧಾರಿಸಬೇಕೆಂಬ ತಹತಹ ವ್ಯಕ್ತಿಯೊಬ್ಬನಿಗೆ ಉದಿಸುವುದೇ ಸಾಮಾಜಿಕ ಪ್ರೇರಣೆಯಿಂದ. ವ್ಯಕ್ತಿಯ ಪ್ರಭಾವ ಸಮಾಜದ ಮೇಲೂ, ಸಮಾಜದ ಪ್ರಭಾವ ವ್ಯಕ್ತಿಯ ಮೇಲೆ ಇದ್ದರೂ ಸಮಷ್ಟಿಯೇ ವ್ಯಷ್ಟಿಯನ್ನು ರೂಪಿಸುತ್ತದೆ ಎನ್ನುವುದೆ ಸರಿಯಾದದ್ದು ಎನಿಸುತ್ತದೆ.

ಎಚ್.ಎಸ್. ದೊರಸ್ವಾಮಿಯವರು 'ನೆನಪಿನ ಸುರುಳಿ ತೆರೆದಾಗ' ದಲ್ಲಿ ಕುವೆಂಪುರವರು ಹೇಳಿರುವುದುನ್ನು ಹೀಗೆ ಉಲ್ಲೇಖಿಸುತ್ತಾರೆ. ವ್ಯಕ್ತಿಯೊಬ್ಬರ ವ್ಯಕ್ತಿತ್ವ ವಿಕಾಸದಲ್ಲಿ ಅಗೋಚರ ಶಕ್ತಿಯ ಕೈವಾಡವನ್ನು ಕಾಣುವವರೂ ಇದ್ದಾರೆ. ಇದನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ಸಮಯದಲ್ಲೇ ರಾಮಾಯಣದರ್ಶನಂ ಮಹಾಕಾವ್ಯವನ್ನು ಕುವೆಂಪು ಬರೆದದ್ದು, ಶ್ರೀರಾಮಾಯಣ ದರ್ಶನಂ ಮಹಾಕಾವ್ಯ ಬರೆಯುವಾಗಿನ ಪ್ರಸಂಗ–"ಅಶೋಕವನದಲ್ಲಿ

ಸೀತಾದೇವಿಯ ದರ್ಶನವಾಗುತ್ತದೆ. ಸೀತಾದೇವಿಯನ್ನು ಕುರಿತು ಮಾತನಾಡುವ ಸನ್ನಿವೇಶ. ಈ ಸಂಭಾಷಣೆಯನ್ನು ಅನೇಕ ಸಾರಿ ಬರೆದು ತೃಪ್ತಿಕರವಾಗಲಿಲ್ಲವೆಂದು ಹೊಡೆದು ಹಾಕುತ್ತಾರೆ. ಹತಾಶರಾಗಿ ಲೇಖನಿ ಪಕ್ಕಕ್ಕಿಡುತ್ತಾರೆ. ಅದೇ ಚಿಂತೆಯಲ್ಲಿ ನಿದ್ದೆ ಹತ್ತುತ್ತದೆ. ಮಧ್ಯರಾತ್ರಿ ಇದ್ದಕ್ಕಿದಂತೆ ಆಂಜನೇಯ ಸೀತಾದೇವಿಯ ಎದುರು ಬಂದು ನಿಂತಿದ್ದಂತೆ ಕನಸಾಗುತ್ತದೆ. ಎದುರಿಗೆ ನಿಂತವನೇ ಅವನು ಸೀತಾದೇವಿಯ ಸಂಭಾಷಣೆಗಿಳಿಯುತ್ತಾನೆ. ಪುಟ್ಟಪ್ಪನವರು ಥಟ್ಟನೆ ದೀಪ ಹಾಕಿ ಪಕ್ಕದಲ್ಲಿ ಇಟ್ಟುಕೊಂಡಿದ್ದ ಪೆನ್ನು ಮತ್ತು ಕಾಗದವನ್ನು ತೆಗೆದುಕೊಂಡು ಆಂಜನೇಯ ಹೇಳುತ್ತಿದ್ದುದನ್ನು ಆತ್ರ ಆತ್ರವಾಗಿ ಬರೆದುಕೊಂಡರಂತೆ ಹೀಗೆ ಬರೆದುಕೊಳ್ಳುತ್ತಿದಂತೆ ಒಂದು ಘಟ್ಟದಲ್ಲಿ ಈ ಸಂಭಾಷಣೆ ನಿಂತುಹೋಯಿತಂತೆ. ಎಷ್ಟು ತಿಣುಕಿದರೂ ಮುಂದಿನ ಸಾಲುಗಳನ್ನು ಬರೆಯಲು ಪುಟ್ಟಪ್ಪನವರಿಗೆ ಸಾಧ್ಯವಾಗಲಿಲ್ಲವಾಗಿ ಮತ್ತೆ ದೀಪ ಆರಿಸಿ ಮಲಗಿದರಂತೆ. ಆಂಜನೇಯ ಸೀತೆಯರ ಸಂಭಾಷಣೆಯ ಆ ಭಾಗವನ್ನು ಬೆಳಿಗ್ಗೆ ಓದಿ ನೋಡುತ್ತಾರೆ ಪುಟ್ಟಪ್ಪನವರು.ಅದ್ಭುತವಾಗಿದೆ, ಛಂದೋಬದ್ಧವಾಗಿದೆ ಸಂಭಾಷಣೆ ಮನಮೋಹಕ ವಾಗಿದೆ. ಪುಟ್ಟಪ್ಪನವರು ಸಂಭಾಷಣೆಯ ಈ ಭಾಗವನ್ನು ಸಾಕ್ಷಾತ್ ಆಂಜನೇಯನೇ ಹೇಳಿ ಬರೆಯಿಸಿದರೆಂದು ನಂಬಿದ್ದರು.[೫೭]

ಸಮಾಜವಲ್ಲದೇ, ಅಗೋಚರ ಶಕ್ತಿಯು ವ್ಯಕ್ತಿಯ ವ್ಯಕ್ತಿತ್ವವನ್ನು ಪ್ರಕಾಶಮಾನವಾಗುವಂತೆ ಸಹಾಯ ಮಾಡುತ್ತದೆ ಎಂಬುದು ಅವರ ಮಾತಿನ ತಿರುಳಾಗಿದೆ. ಆದರೆ ಇದನ್ನು ಆಂಜನೇಯನೇ ಹೇಳಿ ಬರೆಯಿಸಿದನೆಂಬುದು ಕುವೆಂಪು ಅಭಿಮತವಾದರೂ ಅದು ನಂಬಿಕೆಯ ಸೀಮಿತ ಪರಿಧಿಯಲ್ಲಿ ಉಳಿಯುತ್ತದೆ. ವಾಸ್ತವದಲ್ಲಿ ಇದು ಕಾವ್ಯದ ವಸ್ತು ನಿರ್ವಹಣೆಯ ವಿಚಾರದಲ್ಲಿ ಕವಿ ನಡೆಸಿರಬಹುದಾದ ತೀವ್ರತರವಾದ ಅಂತರ್‌ಮಥನದ ಸ್ವಪ್ನದರ್ಶನ ಎನ್ನಬಹುದು.

ಎಚ್.ಎಸ್.ದೊರೆಸ್ವಾಮಿಯವರು 'ನಾನೊಬ್ಬ ಅಧಿಕಾರಿಯಾಗಬೇಕೆಂಬ ನಮ್ಮಣ್ಣನವರ ಇಚ್ಛೆಯಾಗಿತ್ತು. ಒಳ್ಳೆಯ ಉಪಾಧ್ಯಾಯನಾಗಬೇಕು. ಚೌಬೀನೆ ವ್ಯಾಪಾರಿಯಾಗಬೇಕು. ದೊಡ್ಡ ಪ್ರಕಾಶನ ಸಂಸ್ಥೆ ಕಟ್ಟಬೇಕು ಎಂದು. ನಾನು ಕಟ್ಟಿಕೊಂಡಿದ್ದ ಕನಸುಗಳೆಲ್ಲ ನುಚ್ಚು ನೂರಾಗಿ ಕಳಚಿಬಿದ್ದು ಸೇವಾಕ್ಷೇತ್ರಕ್ಕೆ ನನ್ನನ್ನು ವಿಧಿ ಎಳೆದುಕೊಂಡು ಹೋಯಿತು. ಇದರಿಂದ ನನಗೇನೂ ಅಸಮಾಧಾನವಿಲ್ಲ. ಹತಾಶೆಯಾಗಿಲ್ಲ. ನನ್ನಿಂದ ದೇವರು ಒಳ್ಳೆಯ ಕೆಲಸಗಳನ್ನು ಮಾಡಿಸಿದ್ದಾನೆ. ಅದು ನನಗೆ ಆತ್ಮ ಸಮಾಧಾನ ತಂದುಕೊಟ್ಟಿದೆ. ನನ್ನ ಬಾಳು ಸಾರ್ಥಕವಾಯಿತು ಎಂಬ ತೃಪ್ತಿ ನನಗಿದೆ'[೫೮] ಎನ್ನುವಲ್ಲಿ ನಮ್ಮನ್ನು ಮೀರಿದ ಶಕ್ತಿ ನಮ್ಮನ್ನು ಮುನ್ನಡೆಸುತ್ತದೆ ಮತ್ತು ವ್ಯಕ್ತಿಸಂಸ್ಕರಣಕ್ಕೆ ಸಹಾಯ ಮಾಡುತ್ತದೆ ಎಂಬುದು ಲೇಖಕನ ವಿಧಿವಾದಿ ತಿಳುವಳಿಕೆಯಾದರೂ ಇದೊಂದು ತಾನೆಣಿಸಿದಂತೆ ನಡೆಯದೇ ಹೋದಾಗ ನಡೆದು ಹೋದುದನ್ನೇ ವಿಧಿಯೆಣಿಕೆ ಎಂದುಕೊಂಡು

ಹೊರೆಯಿಳಿಸಿಕೊಳ್ಳುವ ಪಾರಂಪರಿಕ ನಂಬಿಕೆಯ ಕ್ರಮವಾಗಿದೆ.

ಆತ್ಮಕಥನಕಾರ ಆತ್ಮಕಥೆಯನ್ನು ಬರೆಯುವಾಗ ಸಾಮಾಜಿಕ ಸನ್ನಿವೇಶ, ಸಂಪ್ರದಾಯ, ಪರಿಸರ ಇವು ವ್ಯಕ್ತಿಗಳ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತವೆ. ಒಬ್ಬ ವ್ಯಕ್ತಿಯ ಆತ್ಮಕಥೆ ಒಬ್ಬರದೇ ಆಗಿರದೆ ಹಲವರ ಕಥೆಯೂ ಆಗಿರುತ್ತದೆ. ಹೇಗೆಂದರೆ ದೊರಸ್ವಾಮಿಯವರ 'ನೆನಪಿನ ಸುರುಳಿ ತೆರೆದಾಗ' ದಲ್ಲಿ ಎಸ್.ನಿಜಲಿಂಗಪ್ಪ, ಸರ್. ಎಂ.ವಿಶ್ವೇಶ್ವರಯ್ಯ, ಕೆ.ಹನುಮಂತಯ್ಯ, ಕೆ.ಸಿ.ರೆಡ್ಡಿ ಹೀಗೆ ಹಲವರ ವ್ಯಕ್ತಿತ್ವಗಳು ಬಿಚ್ಚಿಕೊಳ್ಳತ್ತಾ ಹೋಗುತ್ತದೆ. ದು.ಸರಸ್ವತಿಯವರ 'ಈಗೇನ್ ಮಾಡೀರಿ' ನಿರೂಪಣಾ ತಂತ್ರದಲ್ಲಿ ಅವಳ ಅಮ್ಮ ಮತ್ತು ಮಗಳ ಬಾಂಧವ್ಯದ ಜೊತೆ ಇತರರ ವ್ಯಕ್ತಿತ್ವಗಳು ತೆರೆದುಕೊಳ್ಳುತ್ತದೆ. ಒಬ್ಬರ ಆತ್ಮಕಥೆಯಲ್ಲಿ ಇನ್ನೊಬ್ಬರ ವ್ಯಕ್ತಿತ್ವಕ್ಕೆ ಘಾಸಿಯಾಗಬಹುದು, ಮೆರಗು ಪಡೆಯಲೂಬಹುದು. ಹೀಗೆ ಒಂದು ಕೃತಿ ಸಮಷ್ಟಿಯ ಫಲವಾಗಿದೆ.

ಅನುಭವಿಸಿದಷ್ಟನ್ನೂ ಆತ್ಮಕಥೆಯಲ್ಲಿ ಬರೆಯುವುದು ಸಾಧ್ಯವಿಲ್ಲ. ಬರೆದಿದ್ದಷ್ಟನ್ನೇ ಅನುಭವಿಸಿರುವುದಿಲ್ಲ. ಇಲ್ಲಿ ಆಯ್ಕೆ ಮತ್ತು ನಿರಾಕರಣೆಯ ಪ್ರಶ್ನೆ ಇರುತ್ತದೆ. ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಮತ್ತು ಯಾವುದನ್ನು ನಿರಾಕರಿಸುತ್ತಾರೆ ಎಂಬುದು ಮಹಿಳೆ, ಪುರುಷ, ಕಾಲ, ಜಾತಿ, ಸನ್ನಿವೇಶ, ಸಂದರ್ಭ, ಸಾಮಾಜಿಕ ಸ್ಥಿತಿ ಇನ್ನೂ ಮುಂತಾದುವುಗಳನ್ನು ಅವಲಂಬಿಸಿವೆ. ಆತ್ಮಕಥನಗಳಲ್ಲಿ ಘಟನೆಗಳ ಆಯ್ಕೆ ಹಾಗೂ ನಿರಾಕರಣೆ ಸೈದ್ಧಾಂತಿಕ ಕಾರಣಗಳಿಂದಲೂ ಇರುತ್ತದೆ. ಹೀಗಿರುವಾಗ ಇದರ ಅಧ್ಯಯನ ತುಂಬಾ ದೊಡ್ಡ ವ್ಯಾಪ್ತಿಯನ್ನು ಪಡೆಯುತ್ತದೆ.

೨.೨. ಆತ್ಮಕಥೆಗಳ ಸಾಹಿತ್ಯಕ ಸ್ವರೂಪ

ಆತ್ಮಕಥೆ ಎಂದರೆ ಕೇವಲ ಬರೆದವರ ಕಥೆಯೇ? ಆತ್ಮಕಥೆ ಕೇವಲ ಒಬ್ಬರ ಕಥೆಯಲ್ಲ. ಒಬ್ಬರ ಕಥೆಯಾಗುವುದು ಸಾಧ್ಯವೂ ಇಲ್ಲ. ಒಬ್ಬ ವ್ಯಕ್ತಿ ತನ್ನ ಅನುಭವಗಳನ್ನು ಹಂಚಿಕೊಳ್ಳುವಲ್ಲಿ ಬೇರೊಬ್ಬರ ಪಾತ್ರ ಎಷ್ಟಿದೆ, ಹೇಗಿದ್ದೆ ಎಂದು ಹೇಳುವ ಕಥೆಯೂ ಆಗಿದೆ. ಇದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಹುದು 'ಶೂನ್ಯವಾದವಳು' ಕತೆಯ ನಾಯಕಿ ವೇಶ್ಯೆ ಆಗುವುದಕ್ಕೆ ಅವಳಿಗಿಂತ ಬೇರೆಯವರು ಕಾರಣರಾಗಿದ್ದಾರೆ. ಲಕ್ಷ್ಮಣ ಗಾಯಕವಾಡರ 'ಉಚಲ್ಯಾ'ದ ಜನರು ಕಳ್ಳತನ ಮಾಡುವುದಕ್ಕೆ ಕೂಡ ಸಮಾಜದ ಪಾತ್ರ ಮುಖ್ಯ ಕಾರಣವಾಗಿದೆ. ಕುಟುಂಬ, ಸಮಾಜ, ಉದ್ಯೋಗ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಗೊತ್ತಿದ್ದೋ ಗೊತ್ತಿಲ್ಲದೆಯೊ ಸಂಬಂಧಗಳು ಪ್ರಭಾವ ಬೀರುತ್ತಿರುತ್ತವೆ. ತೃತೀಯ ಲಿಂಗಿ ಲಿವಿಂಗ್ ಸ್ಮೈಲ್ ವಿದ್ಯಾ ಎಂ.ಎ.

ಪದವೀಧರೆಯಾಗಿ ಭಿಕ್ಷೆ ಬೇಡುವುದಕ್ಕೂ ಕೂಡ ವೈಯಕ್ತಿಕಕ್ಕಿಂತ ಸಾಮಾಜಿಕ ಆಯಾಮವೇ ಮುಖ್ಯವಾಗುತ್ತದೆ.

ಆತ್ಮಕಥೆ ಸ್ವಯಂಪೂರ್ಣವಲ್ಲ; ಸಂಕೀರ್ಣವಾದದ್ದು, ಅದು ಒಬ್ಬರ ಕಥೆಯಲ್ಲ. ಅದು ಆತ್ಮಕಥನಕಾರರ ಪೂರ್ವಜರ ಚರಿತ್ರೆ ಕೂಡ ಹೌದು. ಹೇಗೆಂದರೆ ಕುವೆಂಪು ಅವರಲ್ಲಿ ಬರುವ ಈ ವಿವರಣೆ, "ನನ್ನ ತಂದೆಯ ಅಜ್ಜ ಓಬಯ್ಯಗೌಡರಿಗೆ ಮೂರು ಜನ ಹೆಂಡಿರಂತೆ. ಸರಡೊಳ್ಳಿ ಮನೆಯ ಹೆಣ್ಣಾಗಿದ್ದ ಅವರ ಎರಡನೆಯ ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದ ಇಬ್ಬರು ಮಕ್ಕಳಲ್ಲಿ ಒಂದು ಗಂಡು, ಒಂದು ಹೆಣ್ಣು–ಮಂಜಪ್ಪಗೌಡರು ನನ್ನ ತಂದೆಯ ತಂದೆ. ಅವರಿಗೆ ಕೊಳಾವರದಿಂದ ಹೆಣ್ಣು ತಂದಿತ್ತಂತೆ. ಆ ನನ್ನ ಅಜ್ಜಿಗೆ ನನ್ನ ತಂದೆ ಏಕಮಾತ್ರ ಪುತ್ರರಾಗಿ ಜನಿಸಿದರು. ಕುಪ್ಪಳ್ಳಿ ವೆಂಕಟಯ್ಯ ಗೌಡರು." ಈ ನಿರೂಪಣೆ ಹೇಗೆಂದರೆ, ನಮಗೆ ಚಂದ್ರ ಬೆಳಕು ಕೊಡುತ್ತಾನೆಂದು ಕಂಡರೂ ಅದು ಸೂರ್ಯನ ಬೆಳಕೇ ಆಗಿರುವಂತೆ ಒಬ್ಬ ವ್ಯಕ್ತಿಯ ಕೀರ್ತಿ/ಅವನತಿ ಅವರೊಬ್ಬರದೇ ಆಗಿರದೇ, ಹಲವಾರು ಸೂರ್ಯರು ಅನ್ಯಾನ್ಯ ರೂಪದಲ್ಲಿಯೂ ಆತ್ಮಕಥೆ ಬರೆಯುವ ಚಂದ್ರನಿಗೆ ಬೆಳಕು ನೀಡಬಲ್ಲರು. ಅದೇ ರೀತಿ ಅವನತಿಗೂ ಕಾರಣವಾಗಬಲ್ಲರು. ಕೆಲವೊಮ್ಮೆ ಕೇವಲ ಆತ್ಮಕಥೆಯಾಗದೆ ಜೀವನ ಚರಿತ್ರೆಯೂ ಆಗಿದೆ. ಕುಂವೀ ಯವರ 'ಗಾಂಧಿಕ್ಲಾಸು' ಅವರ ಆತ್ಮಕಥೆಯ ಜೊತೆಗೆ ಅವರ ಅಪ್ಪನ ಜೀವನ ಚರಿತ್ರೆಯೂ ಆಗಿದೆ. ನಟರಾಜ ಹುಳಿಯಾರರ 'ಇಂತೀ ನಮಸ್ಕಾರಗಳು' ಕೃತಿ ಅವರ ಆತ್ಮಕಥೆಯೂ ಅಲ್ಲದ ಡಿ.ಆರ್.ನಾಗರಾಜರ ಮತ್ತು ಲಂಕೇಶರ ಜೀವನಚರಿತ್ರೆಯೂ ಅಲ್ಲದ ವಿಶಿಷ್ಟ ಕಥಾನಕವಾಗಿದೆ.

ಜಿ.ಎಸ್.ಶಿವರುದ್ರಪ್ಪನವರು, ಎಚ್.ನರಸಿಂಹಯ್ಯ ಅವರ 'ಹೋರಾಟದ ಹಾದಿ'ಯ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ. "ನರಸಿಂಹಯ್ಯನವರು ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿಶಿಷ್ಟವಾದ ಸಾಧನೆಗಳನ್ನು ಮಾಡಿದ ಕೆಲವೇ ಕೆಲವರಲ್ಲಿ ತೀರಾ ಮುಖ್ಯರಾದವರು. ಅವರು ಬರೆದುಕೊಂಡಿರುವ ಈ ಆತ್ಮಕಥನ ಪುಟಪುಟಗಳಲ್ಲಿ ಯಾವ ಮುಚ್ಚುಮರೆಯೂ ಇಲ್ಲದೆ ತನ್ನನ್ನು ತಾನು ಬಿಚ್ಚಿಟ್ಟುಕೊಂಡ ದಿಟ್ಟತನದ ಪರಿಣತ ಜೀವನ ಕ್ರಮವೊಂದು ಸ್ಫುಟವಾಗಿದೆ. ಹಾಗೆ ನೋಡಿದರೆ ಇದು ಒಂದು ವ್ಯಕ್ತಿತ್ವದ ಜೀವನ ಚರಿತ್ರೆ ಅಲ್ಲ. ನರಸಿಂಹಯ್ಯನವರ ಆತ್ಮಕಥೆಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಚರಿತ್ರೆಯ ಒಂದಷ್ಟು ಭಾಗ, ಕ್ವಿಟ್ ಇಂಡಿಯಾ ಸ್ವಾತಂತ್ರ್ಯ ಚಳುವಳಿಯ ಇನ್ನೊಂದಷ್ಟು ಭಾಗ, ನ್ಯಾಷನಲ್ ಹೈಸ್ಕೂಲ್, ಕಾಲೇಜು ಮತ್ತು ಶೈಕ್ಷಣಿಕ ಸಂಸ್ಥೆಯ ಬಹಳಷ್ಟು ಭಾಗ ಅವರ ವ್ಯಕ್ತಿತ್ವದಲ್ಲಿ

ಅವಿನಾಭಾವದಿಂದ ಬೆಸೆದುಕೊಂಡಿದೆ. ಅವರು ನಡೆದುಬಂದ ದಾರಿಯಲ್ಲಿ ಅವರು ಪ್ರವೇಶಿಸಿದ ಕ್ಷೇತ್ರಗಳು, ವಹಸಿಕೊಂಡ ಹುದ್ದೆಗಳು ಹಾಗೂ ಜವಾಬ್ದಾರಿಗಳು ಅನೇಕ, ಶಿಕ್ಷಣ, ಸಮಾಜಸೇವೆ, ವಿಜ್ಞಾನ, ದಣಿವರಿಯದ ಹೋರಾಟದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡ ಅವೈಚಾರಿಕತೆ ಹಾಗೂ ಮೂಢನಂಬಿಕೆಗಳ ವಲಯ–ಇತ್ಯಾದಿ.ಜತೆಗೆ ಅಧ್ಯಾಪಕ, ಪ್ರಿನ್ಸಿಪಾಲ್, ಉಪಕುಲಪತಿ, ಶಾಸಕ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಈ ಎಲ್ಲವೂ ಅವರಿಗೆ ಅಯಾಚಿತವಾಗಿ ಅನಾಯಾಸವಾಗಿ ಬಂದವುಗಳಲ್ಲ ಎನ್ನುವುದು ಗಮನಿಸಬೇಕಾದ ಸಂಗತಿಯಂತಿದೆ"[೧೦] ಎನ್ನುತ್ತಾರೆ.

ಹೀಗೆ ಇಲ್ಲಿ ಕೇವಲ ವ್ಯಕ್ತಿತ್ವದ ಚರಿತ್ರೆಯಾಗದೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚರಿತ್ರೆಯೂ ಆಗಿದೆ. ಕೈಯ್ಯಾರ ಕಿಞ್ಞಣ್ಣ ರೈ ಅವರ 'ದುಡಿತವೇ ದೇವರು' ಆತ್ಮಕಥೆಯ ಜೊತೆಗೆ ದಕ್ಷಿಣ ಕನ್ನಡದ ಹಾಗೂ ಕೇರಳದ ಸಾಂಸ್ಕೃತಿಕ ಇತಿಹಾಸವೂ ಆಗಿದೆ.

ಆತ್ಮಕಥೆ ಕೇವಲ ಸ್ವಂತ ಕಥೆ ಮಾತ್ರವಲ್ಲದೆ ಸಾಂಸ್ಕೃತಿಕ ಮಹತ್ವ ಹಾಗೂ ಸಾಮಾಜಿಕ ಮಹತ್ವ ಕೂಡ ಇದರಲ್ಲಿದೆ. 'ಮುಂಬಯಿ ವಾಸದ ನೆನಪುಗಳು' ವಿ.ಸೀ.ಅವರ ಆತ್ಮಕಥೆಯಾಗಿರುವ ಜೊತೆಗೆ ಪ್ರವಾಸ ಕಥನವೂ ಕೂಡಾ. ಮುಂಬಯಿ ಜೀವನದ ನೆನಪುಗಳ ಪುನಾರಚನೆಯೂ ಆಗಿದೆ. ಆತ್ಮಕಥೆ ತನ್ನ ಅನುಭವಗಳ ಮೂಲಕ ಇತರರನ್ನು ನೋಡುವ ಬರವಣಿಗೆಯ ಕಣ್ಣೂ ಆಗಿದೆ. ಕೆಲವರು ತನ್ನನ್ನೇ ಹೆಚ್ಚು ನೋಡಿಕೊಂಡರೆ ಇನ್ನೂ ಕೆಲವರು ತನ್ನನ್ನು ಮತ್ತು ಬೇರೆಯವರನ್ನು ತೂಗಿ ನೋಡಿದ ಆತ್ಮಕಥೆಗಳಿವೆ. ತನ್ನನ್ನು ಶೂನ್ಯವಾಗಿಸಿ ಬೇರೆಯವರೇ ಮುಖ್ಯವಾದ ಆತ್ಮಕಥೆಗಳೂ ಇವೆ. ಗೋದಾವರಿ ಪರುಳೇಕರವರ ಮಾನವ ಎಚ್ಚೆತ್ತಾಗದಲ್ಲಿ ಬರೆಯುವ ಈ ವಿಚಾರ ಗಮನಿಸಿದರೆ "ತಮ್ಮ ಜಮೀನ್ದಾರ, ತಮ್ಮ ಹಳ್ಳಿ ಈ ಎರಡನ್ನುಳಿದರೆ ಅವರಿಗೆ ಬೇರೆ ಜಗತ್ತೇ ಇಲ್ಲ. ಕತ್ತರಿಸುವ ಸಲುವಾಗಿ ಸಾಕುವ ಕುರಿಗಳಂತೆ ಅವರ ಬದುಕು ಪ್ರತಿಭಟನೆಯನ್ನೇ ಕಂಡುದಿಲ್ಲ. ಉಪವಾಸ ಕೆಡವಿದರೂ ಜೀವ ತೆಗೆದರೂ ಹೆಂಡತಿಯರನ್ನು, ಸೋದರಿಯರನ್ನು ಅಪಹರಿಸಿದರೂ ಮೌನದಿಂದ ಅವರು ಸಹಿಸುತ್ತಿದ್ದರು. ಈ ರೀತಿಯ ಬದುಕಿನಲ್ಲಿ ದಿನಗಳನ್ನು, ವರ್ಷಗಳನ್ನು ಕಳೆದಿದ್ದರು; ಮೂಕ ಪ್ರಾಣಿಗಳಂತೆ. ಅವರ ಬದುಕಿನಲ್ಲಿ ಆನಂದ, ವೈಚಿತ್ರ್ಯ, ರಸ, ಸ್ವಾತಂತ್ರ್ಯ ಯಾವುದೂ ಇರಲಿಲ್ಲ. ಆದರೆ ಅಂತರಾಳದಲ್ಲಿ ಅಸಮಾಧಾನ ಬೂದಿ ಮುಚ್ಚಿದ ಕೆಂಡದಂತೆ ಮುಸುಕಿಕೊಂಡಿತ್ತು. ಅವರಿಗೆ ಮಾರ್ಗದರ್ಶನ ಮಾಡಲು ಸಿದ್ಧರಾದೆವು. ನಮ್ಮ ಆಧಾರ ಸಿಕ್ಕ ಮೇಲೆ ಅವರಿಗೂ ತಾವು ಮನುಷ್ಯರು ಎನ್ನುವ ಎಚ್ಚರವಾಗತೊಡಗಿತು. ಮನುಷ್ಯರಂತೆ ಬಾಳಲು ತಮಗೂ ಹಕ್ಕಿದೆಯೆಂದು ತಿಳಿದಮೇಲೆ ಪ್ರತಿಭಟನೆಗೂ, ಪ್ರತೀಕಾರಕ್ಕೂ ಅವರು ಹೇಗೆ ಸಿದ್ದವಾದರು ಎಂಬುದನ್ನು ನನ್ನ ಪ್ರತ್ಯಕ್ಷ ಅನುಭವಗಳಿಂದ ಹೇಳುವ ಪ್ರಯತ್ನ ಇಲ್ಲಿಯದು."[೧೧]

ಗೋದಾವರಿ ಪರುಳೇಕರ ಅವರದು ತೀರಾ ಸಾಮಾಜಿಕ ಆಯಾಮವಿರುವ, ಸಮಷ್ಟಿ ಹಿತದಲ್ಲೇ ವ್ಯಷ್ಟಿಯ ಹಿತವನ್ನು ಕಾಣುವ ಆತ್ಮಕಥೆಯಾಗಿದೆ. ಇನ್ನೂ ಕೆಲವರು ತಮ್ಮೊಳಗೇ ತಾವು ಇಳಿದವರಿದ್ದಾರೆ. ಪರಮಹಂಸ ಯೋಗಾನಂದರ 'ಯೋಗಿಯ ಆತ್ಮಕಥೆ" ಮತ್ತು ಚಂದ್ರಶೇಖರ ಉಡುಪರ 'ನನಗೊಲಿದ ಗುರೂಜಿ ನಿಮಗೊಲಿಯಲಿ', ಮಧುರಚೆನ್ನರ 'ಆತ್ಮಶೋಧ'.ಈ ಮೊದಲಾದ ಆತ್ಮಕಥೆಗಳಲ್ಲಿ ವ್ಯಕ್ತಿಯು ಆಧ್ಯಾತ್ಮಿಕ ಪರಿಪ್ರೇಕ್ಷದಲ್ಲಿ ತನ್ನೊಳಗೆ ತಾನೇ ಮುಳುಗಿಬಿಟ್ಟಿದ್ದಾನೆ. ಇನ್ನೂ ಕೆಲವರು ತಾವು ಬೆಳೆಯುವುದಕ್ಕೆ ಮತ್ತು ಹಾಳಾಗುವುದಕ್ಕೆ ಇತರೆರಷ್ಟು ಪೂರಕ ಮತ್ತು ಮಾರಕರಾಗಿದ್ದಾರೆ ಎಂದು ಬರೆದಿದ್ದಾರೆ. ಇದಕ್ಕೆ ಉದಾಹರಣೆ ಅಗ್ನಿ ಶ್ರೀಧರ್‌ರವರ 'ದಾದಗಿರಿಯ ದಿನಗಳು' ಮತ್ತು ಶರಣಕುಮಾರರ 'ಅಕ್ರಮ ಸಂತಾನ'.

ಬಿ.ವಿ.ಕಾರಂತರ 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಆತ್ಮಕಥೆ ಜೊತೆಗೆ ರಂಗಭೂಮಿಯ ಸಾಂಸ್ಕೃತಿಕ ಇತಿಹಾಸವೂ ಆಗಿದೆ. ಬಿ.ವಿ.ಕಾರಂತರರು 'ನನ್ನ ಈ ದೀರ್ಘ ಜೀವನದ ಬಗ್ಗೆ 'ಉಳಿದವರು' ಏನು ತಿಳಿದುಕೊಂಡಿದ್ದಾರೋ ಅದೇ ನನ್ನ ಕತೆ. ಆದರೆ ಈ ಉಳಿದವರಲ್ಲಿ ನಾನು ಒಬ್ಬನಾಗಿದ್ದೇನೆ! ಆದ್ದರಿಂದ ವ್ಯಕ್ತಿಯ ಆತ್ಮಕಥೆ ಒಂದು ಅಧಿಕೃತ ವಾಣಿಯಾಗುತ್ತದೆ. ಎಂದರೆ, ಕತೆಯಲ್ಲಿ ಸತ್ಯವಿದೆ, ಅದು ನನ್ನ ಸತ್ಯ ಮಾತ್ರ. ಈ ನನ್ನ ಸತ್ಯವೂ ಸಮುದಾಯದ ನಡುವೆಯೇ ಬೆಳೆದಿರುವುದರಿಂದ ಸ್ವಲ್ಪ ಬೇರೆ ಅನ್ನಿಸಿದರೂ ಸಜ್ಜನರು ವಿರೋಧ ಮಾಡುವುದಿಲ್ಲ. ಆಗ ಅದು ಅಧಿಕೃತವೂ ಹೌದು; ಪ್ರಾಮಾಣಿಕವೂ ಹೌದು."[೨] ಇಲ್ಲಿ ಬರೆಯುವುದರ ಜೊತೆಗೆ ಬರೆಯದಿರುವ ಬದುಕು ಕೂಡ ಆತ್ಮಕಥೆಯಾಗುತ್ತದೆ. ಬರೆಯದೇ ಇರುವ, ಬೇರೆಯವರು ಗ್ರಹಿಸಿರುವ ಬದುಕು ಕೂಡ ಆತ್ಮಕಥೆಯೇ ಆಗಿದೆ.

ಆತ್ಮಕಥೆಯನ್ನು ಸಾಹಿತ್ಯ ಪ್ರಕಾರವಾಗಿ ನೋಡಬೇಕೋ ಅಥವಾ ವ್ಯಕ್ತಿಯೊಬ್ಬರ ಚಾರಿತ್ರಿಕ ಅಭಿವ್ಯಕ್ತಿಯ ಕ್ರಮವಾಗಿ ಅರ್ಥೈಸಬೇಕೋ ಎಂಬುದು ಸಾಕಷ್ಟು ಚರ್ಚಿಸಬೇಕಾದ ವಿಷಯ. ಸಾಹಿತ್ಯ ಪ್ರಕಾರವಾಗಲೀ ಚಾರಿತ್ರಿಕ ಅಭಿವ್ಯಕ್ತಿಯೇ ಆಗಲಿ ಅದು ಭಾಷೆಯ ಮೂಲಕ ಅಭಿವ್ಯಕ್ತಗೊಳ್ಳುತ್ತಿರುತ್ತದೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಆತ್ಮಕಥೆಗಳನ್ನು ಗಮನಿಸುವಾಗ ಭಾಷಾ ಅಭಿವ್ಯಕ್ತಿ ಕ್ರಮ ರೂಪುಗೊಳ್ಳುವ ಬಗೆಯನ್ನು ಗ್ರಹಿಸುವುದು ಅನಿವಾರ್ಯವಾಗುತ್ತದೆ.

ಭಾಷೆಯ ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ, ಆರ್ಥಿಕ, ರಾಜಕೀಯ ಒತ್ತಡಗಳ ನಡುವೆ ಕಾಲ ಮತ್ತು ಸಂದರ್ಭಗಳನ್ನಾಧರಿಸಿ ರೂಪುಗೊಳ್ಳುತ್ತದೆ. ಕತೆ, ಕಾದಂಬರಿ, ಕಾವ್ಯ, ನಾಟಕ, ಪ್ರಬಂಧ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕಥೆ, ದಿನಚರಿ ಮುಂತಾದ ಲಿಖಿತ ರೂಪದಲ್ಲಿ ಪ್ರಕಟಗೊಳ್ಳುವ ಯಾವುದೇ ಪಠ್ಯ ಆ ಕಾಲಘಟ್ಟದಲ್ಲಿ ಭೂತ, ವರ್ತಮಾನ ಮತ್ತು ಭವಿಷ್ಯತ್‌ಗಳನ್ನು ತನ್ನದೇ ಆದ ಸ್ವರೂಪದಲ್ಲಿ ಹಿಡಿದಿಡುತ್ತದೆ. ಸಾಹಿತ್ಯ ಪ್ರಕಾರವು ಏಕಕಾಲದಲ್ಲಿ

ಚರಿತ್ರೆಯಾಗಿಯೂ ಲಿಖಿತ ದಾಖಲೆಯಾಗಿಯೂ ಸಮಾಜದ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿಯೂ ಕಾಣಸಿಗುತ್ತದೆ.

ಆತ್ಮಕಥೆ ಒಂದು ಸೃಜನಶೀಲ ಸಾಹಿತ್ಯ ಪ್ರಕಾರವೇ? ಭಾರತದಲ್ಲಿ ಆಧುನಿಕ ಶಿಕ್ಷಣದ ಪರಿಣಾಮವಾಗಿ ಮನುಷ್ಯ ಸಂಬಂಧಗಳಲ್ಲಿ ಹಾಗೂ ಆಲೋಚನಾ ಕ್ರಮಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು. ಈ ಮಹತ್ತರ ಬದಲಾವಣೆಗಳಿಂದ ವಿದ್ಯಾವಂತ ಮಧ್ಯಮ ವರ್ಗವೊಂದು ಸೃಷ್ಟಿಯಾಯಿತು. ಈ ಎಲ್ಲ ಬದಲಾವಣೆಗಳ ಫಲವಾಗಿ ಜನರ ಜೀವನಕ್ರಮ ಮತ್ತು ಕುಟುಂಬ ವ್ಯವಸ್ಥೆಯಲ್ಲೂ ಸ್ಥಿತ್ಯಂತರಗಳು ಉಂಟಾದವು. ಈ ಸ್ಥಿತ್ಯಂತರಗಳು ವೈಯುಕ್ತಿಕ ನೆಲೆಯಂತೆ ಕಂಡರೂ ಅದರ ಮೂಲ ಸಾಮಾಜಿಕವೇ ಆಗಿದೆ. ಈ ಸಾಮಾಜಿಕ ಸ್ವರೂಪವೂ ಹಲವು ನೆಲೆಗಳಲ್ಲಿ ಗೋಚರವಾಯಿತು. ಪಾಶ್ಚಾತ್ಯ ಪ್ರೇರಣೆಯಿಂದ ಇಲ್ಲಿನ ಜೀವನಕ್ರಮದಲ್ಲಿ ಬದಲಾವಣೆಗಳುಂಟಾದವು. ಇದರ ಪರಿಣಾಮವಾಗಿ ಸಾಹಿತ್ಯದಲ್ಲೂ ಬದಲಾವಣೆಗಳು ಉಂಟಾಗಿ ಕಾವ್ಯ, ಕತೆ, ಕಾದಂಬರಿ, ನಾಟಕ, ಆತ್ಮಕಥನ, ಪ್ರಬಂಧ ಮುಂತಾದ ಪ್ರಕಾರಗಳು ಹುಟ್ಟಿಕೊಂಡವು. ಇವುಗಳಲ್ಲಿ ಆತ್ಮಕಥೆಯೂ ಒಂದು.

ಆತ್ಮಕಥೆ ಸೃಜನಶೀಲ ಸಾಹಿತ್ಯ ಪ್ರಕಾರವೂ ಹೌದು. ಆತ್ಮಕಥೆಗೂ ಅದರದ್ದೇ ಆದ ಹಂದರವಿದೆ. ಅದು ಪತ್ರಿಕೆಗಳ ವರದಿಗಳಂತಲ್ಲ. ನಿರೂಪಣಾಕ್ರಮ ಮತ್ತು ಆಯ್ಕೆ ಮತ್ತು ನಿರಾಕರಣೆ ಕೂಡ ಅಲ್ಲಿ ಮುಖ್ಯವಾಗುತ್ತದೆ. ಅನುಭವಿಸಿದ ಎಲ್ಲವನ್ನೂ ಹೇಳುವುದಕ್ಕಾಗುವುದಿಲ್ಲ. ಹೇಳಿದ್ದೆಲ್ಲವೂ ಸತ್ಯವಾಗಿರಬೇಕಿಲ್ಲ. ಅದು ಆತ್ಮಕಥನಕಾರರ ದೃಷ್ಟಿ. ಅವರ ದೃಷ್ಟಿಯಂತೆ ಸೃಷ್ಟಿ ಕಾಣುತ್ತದೆ. ಆತ್ಮಕಥೆ ಸುಳ್ಳೋ ಸತ್ಯವೋ ಎನ್ನಲು ಸಾಧ್ಯವಿಲ್ಲ. ಅದು ಆತ್ಮಕಥನಗಾರರ ಕಾಣ್ಕೆ. ಆತ್ಮಕಥನಕಾರರು ಪ್ರಜ್ಞಾಪೂರ್ವಕವಾಗಿಯೋ ಅಥವಾ ಅಪ್ರಜ್ಞಾಪೂರ್ವಕವಾಗಿಯೋ ಆಯಾ ಕಾಲದ ಘಟನೆಗಳಿಗೆ ಸ್ಪಂದಿಸಿ ಪ್ರತಿಕ್ರಿಯಿಸುತ್ತಾರೆ. ಆಯಾ ಕಾಲದಲ್ಲಿ ಜರುಗಿದ ಸಾಮಾಜಿಕ ಸ್ಥಿತ್ಯಂತರಗಳು ಮೌಲ್ಯಗಳು ಕೃತಿಯ ಚೌಕಟ್ಟನ್ನು ನಿರ್ಮಿಸುತ್ತವೆ. ಈ ಹಿನ್ನಲೆಯಲ್ಲಿ ಆತ್ಮಕಥೆ ಕಲಾಕೃತಿಯೂ ಹೌದು. ಸಾಮಾಜಿಕ ಚರಿತ್ರೆಯೂ ಹೌದು.

ದೇ.ಜವರೇಗೌಡರು ಹೇಳುವ ಹಾಗೆ, "ವಾಸ್ತವವಾಗಿ ಕಾವ್ಯ, ಕಾದಂಬರಿ, ಕತೆ, ನಾಟಕಗಳೆಲ್ಲ ಜೀವನ ಚರಿತ್ರೆಗಳೆ. ಒಂದಲ್ಲಾ ಒಂದು ರೀತಿಯಲ್ಲಿ ಅವು ಪುನರ್ನಿರ್ಮಾಣಗೊಂಡ ಜೀವಂತ ವ್ಯಕ್ತಿಗಳು. ಕವಿಯಾಗಲಿ ಕಾದಂಬರಿಕಾರನಾಗಲಿ ಅಥವಾ ನಾಟಕಕಾರನಾಗಲಿ ತಾನು ಕಂಡ ತನ್ನ ಸುತ್ತಮುತ್ತು ಜೀವಿಸುವ ವ್ಯಕ್ತಿಗಳ ಮಾದರಿಗಳನ್ನು ತನ್ನ ಕೃತಿಗಳಲ್ಲಿ ಸೃಷ್ಟಿಸುತ್ತಾನೆ. ಆ ಮಾದರಿಗೆ ಮೂಲಗಳು ಜೀವನದಲ್ಲಿವೆಯೆಂಬುದು ಮಾತ್ರ ಸುಸ್ಪಷ್ಟ".[೧೩] ಈ ಮಾತನ್ನು ಆತ್ಮಕಥೆಗಳಿಗೂ ಅನ್ವಯಿಸಿ ಹೇಳಬಹುದು.

ಸಾಂಸ್ಕೃತಿಕ ಹಾಗೂ ಐತಿಹಾಸಿಕ ಸನ್ನಿವೇಶಗಳು ಮಹಾವ್ಯಕ್ತಿಯ ಉದಯ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಹೇಗೆ ಪೂರಕವಾಗಿರುತ್ತದೆಯೋ ಹಾಗೆ ಒಬ್ಬ ವ್ಯಕ್ತಿಯ ಸಾಧನೆಯನ್ನು ವೈಯುಕ್ತಿಕವೆಂದು ಭಾವಿಸಲಾಗುವುದಿಲ್ಲ. ಕೃತಿಯಾಗಲಿ ವ್ಯಕ್ತಿಯಾಗಲಿ ಅದನ್ನು ಸಮಾಜವೇ ರೂಪಿಸುವುದರಿಂದ ಅದನ್ನು ಸಮಷ್ಟಿಯ ಫಲ ಎನ್ನಬಹುದು.

ಬಿ.ವಿ.ಕಾರಂತರು, "ನಾಟಕದ ಮುಂಚೆ ಒಂದು ಆತ್ಮಕಥೆ ಬರೆದಿದ್ದೆ. ಸುಳ್ಳುಗಳದೇ ಸರಪಳಿಯಂತಿದ್ದ ಆ ಬರಹದಲ್ಲಿಡೀ ನನ್ನನ್ನು ಸಾಧ್ಯವಾದಷ್ಟು ಹಿಗ್ಗಿಸಿ ಹೀರೇಕಾಯಿ ಮಾಡಿ ಕೊಂಡಿದ್ದೆ. ಹುಟ್ಟಿದ ಕೂಡಲೇ ನನ್ನ ಹಿಮ್ಮಡಿಯಲ್ಲಿ ಬೆಳ್ಳಿ ರೂಪಾಯಿ ಚಿಹ್ನೆ ಇತ್ತು. ಅಂಥ ಇಂಥದ್ದೇ ನೂರಾರು.ಇಷ್ಟು ಸುಳ್ಳು ಬರೆದಿದ್ದರಿಂದಲೇ ಈ ಆತ್ಮಕಥೆ ಈಗಲೂ ನನಗೆ ಜ್ಞಾಪಕ ಇದೆ."[೧೪]

ಆತ್ಮಕಥೆ ಬರೆದದ್ದೆಲ್ಲಾ ಸತ್ಯ ಅಲ್ಲ ಎಂಬುದನ್ನು ಲೇಖಕರೇ ಒಪ್ಪಿಕೊಳ್ಳುತ್ತಾರೆ. ಹಾಗಾಗಿ ಆತ್ಮಕಥೆ ಸುಳ್ಳು ಸತ್ಯ ಎನ್ನುವುದಕ್ಕಿಂತ ನೋಡುವವನ ದೃಷ್ಟಿಕೋನ. ಆತ್ಮಕಥೆಯಲ್ಲಿ ಆತ್ಮಪ್ರಶಂಸೆಯೂ ಇರುತ್ತದೆ ಎಂಬುದನ್ನು ಲೇಖಕರೇ ಒಪ್ಪಿಕೊಳ್ಳುತ್ತಾರೆ. ಯಾರೂ ಹೊಗಳದೇ ಇದ್ದಾಗ ಸ್ವಪ್ರಶಂಸೆಯ ಮೂಲಕ ಮಾನಸಿಕ ಸಮತೋಲನ ಕಾಯ್ದುಕೊಳ್ಳುವ ರೀತಿಯಿರಬಹುದೆ ಎನ್ನುವ ಪ್ರಶ್ನೆಯನ್ನು ಇದು ಹುಟ್ಟು ಹಾಕುತ್ತದೆ.

ಆತ್ಮಕಥೆಯ ಉದ್ದೇಶ ಅಂತರಂಗ ಶುದ್ಧಿ. ಅದು ಬರೆಯುವುದರ ಮೂಲಕವಾಗಬಹುದು ಅಥವಾ ಹೇಳುವುದರ ಮೂಲಕವಾಗಬಹುದು. ಬರೆಯುವುದು, ಹೇಳುವುದು ಮತ್ತು ಅನುಭವಿಸುವುದರ ಮೂಲಕವೂ ಅಂತರಂಗ ಶುದ್ಧವಾಗುತ್ತದೆ. ಆತ್ಮಕಥೆ ಅಂತರಂಗ ಮತ್ತು ಬಹಿರಂಗ ಎರಡನ್ನೂ ನೋಡುವ ಕತೆಯೂ ಹೌದು.ಇದನ್ನೇ ಎಚ್.ಎಸ್.ರಾಘವೇಂದ್ರರಾವ್ ಅವರು ಹೀಗೆ ಹೇಳಿದ್ದಾರೆ. 'ನಡೆದಿರಬಹುದಾದ ವಾಸ್ತವಕ್ಕೂ ಮಂಡಿತವಾಗಿರುವ ವಾಸ್ತವಕ್ಕೂ ಇರುವ ಸಂಬಂಧಗಳನ್ನು, ವ್ಯತ್ಯಾಸಗಳನ್ನು ಹುಡುಕುತ್ತ ಹೋಗುವುದು.ಎಷ್ಟೋ ಸಲ, ಇದೇ ಕೃತಿಯ ಅಧಿಕೃತತೆಯನ್ನು ನಿರ್ಧರಿಸುವ ಮಾನದಂಡ ಆಗಿಬಿಡುತ್ತದೆ. ಹೀಗೆ ಮಾಡುವುದು ಸರಿಯಲ್ಲ. ಏಕೆಂದರೆ ಕೃತಿಯ ಅನುಭವ ಅಧಿಕೃತವಾಗುವುದು ಅದು ಮಂಡಿತವಾಗುವ ಭಾಷಿಕ ರೂಪದ ಮೂಲಕ, ಶೈಲಿಯ ಮೂಲಕ, ನಿಜವನ್ನು ಹುಸಿಯಾಗಿ ಹೇಳಬಹುದು ಹುಸಿಯನ್ನು ನಿಜವೆನ್ನಿಸುವಂತೆ ಹೇಳಬಹುದು. ಬರೆವಣಿಗೆಯಲ್ಲಿ ಎರಡೂ ಸಾಧ್ಯ. ಹಾಗೆ ನೋಡಿದರೆ, ಗಾಂಧೀಜಿಯವರದೂ ಸೇರಿದಂತೆ ಯಾರ ಆತ್ಮಕಥೆಯೂ 'ಸತ್ಯ' ಅಲ್ಲ. ಅವೆಲ್ಲವೂ ಸಂಗತಿ ಮತ್ತು ಮಂಡನೆಗಳ (ಫ್ಯಾಕ್ಟ್ ಮತ್ತು ಪ್ರೆಸೆಂಟೇಷನ್) ಜೋಡಣೆಯೇ ಆಗಿರುತ್ತದೆ.[೧೫]

ಹೆಣ್ಣು ವೇಶ್ಯೆಯಾಗುವುದಾಗಲೀ, ಮಂಗಳಮುಖಿಯರು ಭಿಕ್ಷೆ ಬೇಡುತ್ತ, ದರೋಡೆಗಿಳಿದಿರುವುದಾಗಲಿ, ಉಚಲ್ಯದಂತಹ ಜನಾಂಗ ಕಳ್ಳತನ ಮಾಡುವುದಾಗಲಿ, ಭೂಗತ ಲೋಕದಲ್ಲಿದ್ದು ದಾದಗಿರಿ ಮಾಡುವುದಾಗಲಿ, ಇದರಲ್ಲಿ ಅವರ ಹೊಣೆಯೆಷ್ಟು, ಸಮಾಜದ ಹೊಣೆಯೆಷ್ಟು, ವ್ಯವಸ್ಥೆಯ ಪಾತ್ರ ಎಷ್ಟು ಎಂಬುದನ್ನು ಅರಿಯಬೇಕಾಗಿದೆ. ಯಾರು ವೇಶ್ಯೆಯಾಗಿದ್ದಾರೊ ಅವರಿಗೆ ಅಪಮಾನ ಮಾಡಿ ಹೀಗಳಿಯುವುದು ನಡೆಯುತ್ತಿತ್ತು. ಅವಳು ಮಾಡುತ್ತಿರುವ ವೇಶ್ಯೆಯ ಕೆಲಸ ಯಾರಿಗೆ ಅನುಕೂಲವಾಗಿದೆ, ಯಾಕೆ ಅವಳನ್ನು ವೇಶ್ಯೆಯಾಗಿಯೇ ಉಳಿಸಿ, ಹೀಯಾಳಿಸಿ ಬಳಸಲಾಗುತ್ತಿದೆ? ಇದು ಇಡೀ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣಿಗಷ್ಟೇ ಸೀಮಿತವಾಗಿಲ್ಲ. ಇದು ಇಡೀ ವ್ಯವಸ್ಥೆಯ ತಂತ್ರವಾಗಿದೆ. ಇವುಗಳಲ್ಲೆಲ್ಲ ವ್ಯವಸ್ಥೆಯ ಪಾತ್ರ ಎಷ್ಟು ಎಂಬುದನ್ನು ಅರಿಯುವ ಅಗತ್ಯವಿದೆ. ಪ್ರಭುತ್ವದ ಮುಖವಾಣಿಯಾಗಿ ನೋಡುವ ಧೋರಣೆಯನ್ನು ಇದು ಹೇಳುತ್ತದೆ.

ಶ್ರೀಧರ್ ಪಾಲಿಗೆ ಬಂದ ಭೂಗತ ಬದುಕು ಖಾಸಗಿಯಾದ ಆಯ್ಕೆಯೇ ಅಲ್ಲ ಎಂಬುದು ಅವರು ಕೊಡುವ ವಿವರಗಳಿಂದ ನಿಚ್ಚಳವಾಗಿ ಕಾಣುತ್ತದೆ. ಭೂಗತ ಜಗತ್ತು ನಾವೇ ಸೃಷ್ಟಿಸಿಕೊಂಡ ಲೋಕ. ಅದು ಯಾವುದೋ ದೂರದ ಲೋಕವಲ್ಲ. ನಮ್ಮ ಸಮಾಜ ಅದರಿಂದ ತುಂಬ ಲಾಭವನ್ನು ಪಡೆದಿದೆ. ಧೀಮಂತರು, ಮಹಾಸಭ್ಯರು ಕೂಡ ಅದರಿಂದ ಬೇಕಾದ್ದೆಲ್ಲವನ್ನು ಉಂಡಿದ್ದಾರೆ. ನಮ್ಮ ರಾಜಕಾರಣಿಗಳು ಅತ್ಯಂತ ಆಪ್ತವಾಗಿ ಪಡೆದವರೇ, ನಾವೇ ಸಾಕಿ ಸಲುಹಿದ ಹಿಂಸೆಯ ಜಗತ್ತನ್ನು ಶ್ರೀಧರ್ 'ದಾದಾಗಿರಿಯ ದಿನಗಳು' ಬರಹದ ಮೂಲಕ ಬೆತ್ತಲೆ ಮಾಡುವುದರ ಜೊತೆಗೆ ಹಿಡಿಯಾಗಿ ಸಮಾಜದ ನೈತಿಕ ವ್ಯವಸ್ಥೆಯನ್ನು ಅತ್ಯಂತ ಸೂಕ್ಷ್ಮವಾದ ಒಳತೋಟಿಯ ಮೂಲಕ ಬಿಡಿಸಿ ತೋರುತ್ತಾರೆ. ಹೀಗಾಗಿಯೇ ಇದು ಸಾಮಾಜಿಕವಾದ ವ್ಯವಸ್ಥೆಯ ದೌರ್ಬಲ್ಯಗಳನ್ನೂ ಕೂಡ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.”[೧೬] ಇದನ್ನು ಕೇವಲ ದಾದಾಗಿರಿಯ ಲೋಕಕ್ಕೆ ಮಾತ್ರ ಸೀಮಿತ ಗೊಳಿಸಬೇಕಿಲ್ಲ. ವ್ಯವಸ್ಥೆಯ ತಂತ್ರವಾಗಿ ಬಳಕೆಯಾದ ಬೇರೆ ವಲಯಗಳಿಗೂ ವಿಸ್ತರಿಸಬಹುದಾಗಿದೆ. ದರೋಡೆ ಮಾಡುವುದಾಗಲಿ, ವೇಶ್ಯೆಯಾಗಲಿ, ಕಳ್ಳತನ ಮಾಡುವ ಪ್ರಸಂಗವಾಗಲಿ ಇದಕ್ಕೆ ಪ್ರೇರಣೆ ಸಮಾಜವೇ ಕಾರಣವೆಂದಾದರೂ ಅದರ ಪರಿಣಾಮ ಮತ್ತೆ ಸಮಾಜದ ಮೇಲೆಯೇ ಆಗುವುದರಿಂದ ಅದನ್ನು ತಡೆಯುವ ಅಗತ್ಯವಿದೆ. ನಕಾರಾತ್ಮಕ ವ್ಯಕ್ತಿತ್ವದ ಮನುಷ್ಯ ಪರಿವರ್ತನೆಯಾಗುವ ಮನಸ್ಸು ಮಾಡಿದರೆ ಸಕಾರಾತ್ಮಕವಾಗಿ ಬೆಳೆಯಬಹುದಾಗಿದೆ. ವಾಲ್ಮೀಕಿ, ಅಂಗುಲೀಮಾಲ ಬದಲಾದುದರ ಬಗ್ಗೆ ಚರಿತ್ರೆಯಲ್ಲಿ ಓದಿದ್ದೇವೆ.

ಅಗ್ನಿ ಶ್ರೀಧರ್ ಹೇಳುವ “ನನ್ನ ಪ್ರತಿಯೊಂದು ಘಳಿಗೆಯನ್ನು ಅಪರಿಚಿತ ಕಣ್ಣುಗಳು ಹಿಂಬಾಲಿಸುತ್ತಿದ್ದವು. ಕಾಣದ ಕಿವಿಗಳು ಕೇಳಿಸಿಕೊಳ್ಳುತ್ತಿದ್ದವು. ಅದೊಂದು ಪಾತಕಿಗಳ ಭೀಕರ

ಪ್ರಪಂಚವೆಂದು ತಳ್ಳಿ ಹಾಕುವಂತಿರಲಿಲ್ಲ. ಪಾತಕಿಗಳಲ್ಲಿ ನಾನೂ ಒಬ್ಬನಾಗಿದ್ದೆ. ಭೀಕರತೆಯಲ್ಲಿ ನನ್ನ ಕೊಡುಗೆಯೂ ಇತ್ತು. ನನ್ನನ್ನು ಜೀವಂತವಾಗಿಸಿರುವುದು ಬದುಕಿನ ಪ್ರೀತಿಯೋ ಅಥವಾ ಸಾವಿನ ಆತಂಕವೋ ಅರ್ಥವಾಗುತ್ತಿರಲಿಲ್ಲ. ಏಕ ಕಾಲದಲ್ಲಿ ಎರಡೂ ನನ್ನನ್ನು ಸಮ ಪ್ರಮಾಣದಲ್ಲಿ ಆವರಿಸಿದ್ದವು. ಅಲ್ಲಿಂದ ಕಳಚಿಕೊಳ್ಳಲೇಬೇಕಿತ್ತು. ಆದರೆ ಕಳಚಿಕೊಳ್ಳುವುದಾದರೂ ಹೇಗೆ? ಆ ಪ್ರಶ್ನೆಯ ತುಡಿತ ನನ್ನನ್ನು ಬರವಣಿಗೆಯ ಜಗತ್ತಿಗೆ ದೂಡಿತು."[೧೭] ಈ ತುಡಿತವೇ ಸಕಾರಾತ್ಮಕ ಬೆಳವಣಿಗೆಗೆ ಸೂಚನೆಯಾಗಿದೆ. ಅದರಲ್ಲಿ ಬರವಣಿಗೆ ಮೊದಲ ಹೆಜ್ಜೆಯಾಗಿದೆ.

ಲಿಂಗ ಜಾತಿ ಹಿನ್ನಲೆಯಲ್ಲಿ ಒಂದು ಘಟನೆಯನ್ನು ಕೇವಲ ಒಂದೇ ನೆಲೆಯಲ್ಲಿ ವಿಶ್ಲೇಷಿಸಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಲಿಂಗ ಜಾತಿಗಳು ಒಂದರೊಳಗೊಂದು ಬೆರೆತಿರುವದೇ ಆಗಿದೆ. ಅದು ಕೂಡ ಯಾವುದರೊಳಗೆ ಯಾವುದು ಬೆರೆತಿದೆ ಎಂದು ಹೇಳುವುದೂ ಕೂಡ ಕಷ್ಟದ ಕೆಲಸವಾಗಿದೆ. 'ಲಿಂಗ'ವನ್ನು ವಿಶ್ಲೇಷಿಸಲು ಹೊರಟರೆ ಅವರು ಯಾವುದೋ ಒಂದು ಜಾತಿಗೆ ಸೇರಿದವರಾಗಿರುತ್ತಾರೆ. 'ಜಾತಿ' ಯನ್ನು ವಿಶ್ಲೇಷಿಸಲು ಹೊರಟರೆ ಅವರು ಯಾವುದೋ ಒಂದು ಲಿಂಗದ ಪರಿಧಿಯಲ್ಲಿ ಬರುತ್ತಾರೆ. ಹಾಗಾಗಿ ಕೆಲವು ವೇಳೆ ಆ ಘಟನೆಯನ್ನು ಲಿಂಗ ಹಿನ್ನಲೆಯಲ್ಲಿ ಚರ್ಚಿಸಬೇಕೋ ಅಥವಾ ಜಾತಿ ಹಿನ್ನಲೆಯಲ್ಲಿ ವಿಶ್ಲೇಷಿಸಬೇಕೋ ಎಂದು ಗೊಂದಲಕ್ಕೊಳಗಾಗುವಷ್ಟು ಕಷ್ಟವಾಗಿದೆ. ಇದೂ ಕೂಡ ಅಧ್ಯಯನದ ತೊಡಕೇ ಆಗಿದೆ.

ಆತ್ಮಕಥೆಯಲ್ಲಿ ಎಲ್ಲವನ್ನು ಹೇಳಬಹುದಾದರೂ ಎಲ್ಲವನ್ನೂ ಹೇಳಲಾಗುವುದಿಲ್ಲ. ಅಲ್ಲದೇ ಎಲ್ಲ ಅನುಭವಗಳನ್ನು ಭಾಷೆಯಲ್ಲಿ ಹಿಡಿದಿಡುವುದು ಕಷ್ಟ. ಇದನ್ನು ಭಾಷೆಯ ಮಿತಿಯೊ ಆತ್ಮಕಥೆಯ ಮಿತಿಯೋ ಎಂದು ಗೆರೆ ಕೊರೆದು ಹೇಳುವುದು ಕಷ್ಟ. ಅದು ಹೆಚ್ಚಿನ ಸಂಶೋಧನೆಯನ್ನು ನಿರೀಕ್ಷಿಸುತ್ತದೆ.

ಕೊನೆ ಟಿಪ್ಪಣಿಗಳು

೧. ಗೋರೇಬಾಳ್, ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ, ಪು.೨-೩

೨. ಎಸ್.ಆರ್‌ಗುಂಜಾಳ್, ನಾನು, ಮುನ್ನುಡಿ

೩. ರಹಮತ್ ತರೀಕೆರೆ, ಆತ್ಮಕಥೆಯ ಅಧೋಲೋಕ, ಪು.೩೯

೪. ಜಿ.ಎಸ್.ಎಸ್., ಹೋರಾಟದ ಹಾದಿ, ಮುನ್ನುಡಿ

೫. ವಿ.ಗುಂಡಣ್ಣ, ಆತ್ಮಚರಿತ್ರೆ, ಪು.೩೩೪

೬. ವರ್ಜಿನಿಯಾ ವೂಲ್ಫ್, **ಪದಚರಿತ**, ಮುನ್ನುಡಿ

೭. ಎಚ್.ಎಸ್.ದೊರೆಸ್ವಾಮಿ, **ನೆನಪಿನ ಸುರುಳಿ ತೆರೆದಾಗ**, ಪು.೫೮

೮. ಅದೇ, ಪು.೭೫

೯. ಕುವೆಂಪು, **ನೆನಪಿನ ದೋಣಿಯಲ್ಲಿ**, ಪು.೧೩

೧೦. ಜಿ.ಎಸ್.ಎಸ್., **ಹೋರಾಟದ ಹಾದಿ**, ಮುನ್ನುಡಿ

೧೧. ಗೋದಾವರಿ ಪರುಳೇಕರ್, **ಮಾನವ ಎಚ್ಚೆತ್ತಾಗ**, ಮುನ್ನುಡಿ

೧೨. ಬಿ.ವಿ.ಕಾರಂತ, ಇಲ್ಲಿರಲಾರೆ **ಅಲ್ಲಿಗೆ ಹೋಗಲಾರೆ**, ಮುನ್ನುಡಿ

೧೩. ದೇ.ಜವರೇಗೌಡ, **ಶತಮಾನದ ಸಂಶೋಧನೆ**, ಪು.೯೨೦

೧೪. ಬಿ.ವಿ.ಕಾರಂತ, ಇಲ್ಲಿರಲಾರೆ **ಅಲ್ಲಿಗೆ ಹೋಗಲಾರೆ**, ಪು.೧೯

೧೫. ಎಚ್.ಎಸ್.ರಾಘವೇಂದ್ರರಾವ್, **ದಾದಾಗಿರಿಯ ದಿನಗಳು**, ಮುನ್ನುಡಿ

೧೬. ಮೊಗಳ್ಳಿ ಗಣೇಶ್, **ದಾದಾಗಿರಿಯ ದಿನಗಳು**, ಅನುಬಂಧ

೧೭. ಅಗ್ನಿ ಶ್ರೀಧರ, ದಾದಾರಿಗಿರಿಯ ದಿನಗಳು, ಮುನ್ನುಡಿ

ಅಧ್ಯಾಯ ಮೂರು

ಆತ್ಮಕಥನಕಾರರ ದೃಷ್ಟಿಯಲ್ಲಿ ಆತ್ಮ ಕಥೆಗಳು

೩.೧. ಪೀಠಿಕೆ

೩.೨. ಆತ್ಮಕಥನಕಾರರ ಆಶಯ ಹಾಗೂ ಅದರ ವ್ಯಾಖ್ಯಾನ

೩.೩. ಒಟ್ಟು ನೋಟ

ಅಧ್ಯಾಯ ಮೂರು

ಆತ್ಮಕಥೆ ಮೈತಳೆದ ಬಗೆ, ಆತ್ಮಕಥನಕಾರರ ದೃಷ್ಟಿಯಲ್ಲಿ ಆತ್ಮಕಥೆಯ ಉದ್ದೇಶ

ಮನುಷ್ಯ ಮೂಲತಃ ಆನಂದಸ್ವರೂಪಿ. ಹೇಗೆಂದರೆ ಇದು ಮಗುವಿನ ಸ್ವರೂಪದಲ್ಲಿರುವಾಗ ಸ್ಪಷ್ಟವಾಗಿ ಗೋಚರವಾಗುತ್ತದೆ. ಬದುಕಿನಲ್ಲಿ ಆನಂದವನ್ನು ಅನುಭವಿಸುವುದೇ ಮನುಷ್ಯನ ಗುರಿಯಾದರೂ ಕೃತಕತೆ(artificiality)ಯಿಂದ ಎಲ್ಲಿ ಆನಂದ ಹೇಗೆ ಕಳೆದುಹೋಗಿದೆ. ಅದನ್ನು ಪಡೆಯಲು ಏನು ಮಾಡಬೇಕು ಎಂಬ ಗೊಂದಲದಲ್ಲಿ ಸಿಲುಕಿದ್ದಾನೆ. ಸಮರ್ಥ ಗುರುವಿನ ಮಾರ್ಗದರ್ಶನದಿಂದ ಅಥವಾ ಅರಿವೇ ಗುರುವಿನ ಮೂಲಕ ಇವೆಲ್ಲವುಗಳಿಗೂ ಉತ್ತರ ಕಂಡುಕೊಳ್ಳಬಹುದಾಗಿದೆ. ಆತ್ಮಕಥೆಯ ಗುರಿಯು ತನ್ನನ್ನು ತಾನು ಕಂಡುಕೊಳ್ಳುವುದೇ ಆಗಿದೆ. ಆತ್ಮಕಥೆಯೂ ಕೂಡ 'ಅರಿವೇ ಗುರು'ವಿನ ಮೂಲಕ ತನ್ನನ್ನು ತಾನು ಕಂಡುಕೊಳ್ಳುವುದೇ ಆಗಿದೆ. ಇದನ್ನೇ ಗಾಂಧೀಜಿ 'ಆತ್ಮಶೋಧ' ಎಂದು ಕರೆದಿದ್ದಾರೆ.

ಆತ್ಮಕಥೆಯ ಉದ್ದೇಶ ಅಂತರಂಗ ಶುದ್ಧಿ. ಅದು ಬರೆಯುವುದರ ಮೂಲಕವಾಗಬಹುದು ಅಥವಾ ಹೇಳುವುದರ ಮೂಲಕವಾಗಬಹುದು. ಬರೆಯುವುದು, ಹೇಳುವುದು ಮತ್ತು ಅನುಭವಿಸುವುದರ ಮೂಲಕವೂ ಅಂತರಂಗ ಶುದ್ಧವಾಗುತ್ತದೆ. ಅಂತರಂಗ ಶುದ್ಧಿಯಾದ ಮನುಷ್ಯ ಪಕ್ವವಾಗುತ್ತಾನೆ.

ಆತ್ಮಕಥೆಗಳಲ್ಲಿ ಆತ್ಮಕಥನಕಾರರು ತಾನು ಯಾಕೆ ಇದನ್ನು ಬರೆದೆ ಎಂಬುದನ್ನು ಸ್ವತಃ ಹೇಳಿಕೊಂಡಿದ್ದಾರೆ. ಬೇರೆ ಬಗೆಯ ಬರವಣಿಗೆಯಲ್ಲಿ ಬರಹಗಾರರು ಈ ಪ್ರಶ್ನೆಯನ್ನು ಎದುರಿಸುವ ಪರಿ ಬೇರೆ. ಆದರೆ ಆತ್ಮಕಥೆ ಬರೆಯುವ ಸಂದರ್ಭದಲ್ಲಿ ಈ ಪ್ರಶ್ನೆ ಪ್ರಜ್ಞಾಪೂರ್ವಕವಾಗಿ ಕಾಡಿದಂತಿದೆ. ಇದಕ್ಕೆ ಉತ್ತರವೆಂಬಂತೆ ಆತ್ಮಕಥನಕಾರರು ತಮ್ಮ ಬರವಣಿಗೆಯ ಉದ್ದೇಶವನ್ನು ಹೇಳಿದ್ದಾರೆ. ಇಂತಹ ಒಂದು ಸಮಸ್ಯೆ, ಪ್ರಶ್ನೆ ಬರಹಗಾರರನ್ನು ಏಕೆ ಕಾಡುತ್ತದೆ ಎಂಬುದು ಆಸಕ್ತಿಯ ವಿಷಯ ಎಂದು ಡಾ. ಪುಟ್ಟಯ್ಯನವರು ಸರಿಯಾಗಿಯೇ ಗುರುತಿಸಿದ್ದಾರೆ. ಇದಕ್ಕೆ

ಪ್ರತಿಕ್ರಿಯೆಯಾಗಿ ಕೆಲವು ಆತ್ಮಕಥನಕಾರರು ಪ್ರಾರಂಭದಲ್ಲಿ ನಾನು ಯಾಕೆ ಬರೆದೆ ಎನ್ನುವುದನ್ನು ಹೇಳಿಕೊಳ್ಳುತ್ತಾರೆ. ಕೆಲವು ಆತ್ಮಕಥನಕಾರರು ತಾನು ಯಾಕೆ ಬರೆದೆ ಎಂಬ ಪ್ರಶ್ನೆಯ ಗೋಜಿಗೇ ಹೋಗದೆ ಆತ್ಮಕಥೆಗಳೇ ಆ ವಿಷಯವನ್ನು ಹೇಳುತ್ತವೆ (ಸಿದ್ಧಲಿಂಗಯ್ಯ-ಊರು ಕೇರಿ, ಕುವೆಂಪು- ನೆನಪಿನ ದೋಣಿಯಲ್ಲಿ). ಇನ್ನು ಕೆಲವು ಆತ್ಮಕಥನಕಾರರು ಸಮುದಾಯದ ಸಾಂಸ್ಕೃತಿಕ ಅನುಭವ ಸಾಮಾಜಿಕ ಜಗತ್ತಿಗೆ ತಿಳಿಯಲೆಂದು ಸ್ನೇಹಿತರ ಒತ್ತಾಯಕ್ಕೋಸ್ಕರ ಬರೆದವರಿದ್ದಾರೆ (ಕಯ್ಯಾರ ಕಿಞ್ಞಣ್ಣ ರೈ- ದುಡಿತವೇ ದೇವರು, ಲಕ್ಷ್ಮಣ್- ಸಂಬೋಳಿ ಇನ್ನು ಮುಂತಾದವು). ತಾನೇನೋ ಸಾಧನೆ ಮಾಡಿದ್ದೇನೆ ಎನ್ನುವುದಕ್ಕಿಂತ ಸ್ನೇಹಿತರ ಒತ್ತಾಯಕ್ಕೆ ಕೆಲವರು ಅನುಭವಗಳನ್ನು ಬರೆದಿದ್ದಾರೆ. ಅಗ್ನಿ ಶ್ರೀಧರ್ ಬದುಕಿನ ಜಟಿಲವಾದ ಪ್ರಶ್ನೆಗಳಿಗೆ ಉತ್ತರಿಸಲಾಗದೇ ಹೋದಾಗ ಆತ್ಮಕಥೆಯಂತಹ ಬರವಣಿಗೆ ಹುಟ್ಟುತ್ತದೆ ಎನ್ನುತ್ತಾರೆ. ಈಗಾಗಲೇ ನಾನು ಗುರುತಿಸಿದಂತೆ ಬೀಚಿಯವರ ಮಾತುಗಳಲ್ಲಿ ಹೇಳುವುದಾದರೆ, "ನಾನೀ ಗ್ರಂಥವನ್ನು ಬರೆಯುತ್ತಿರುವುದು ಲೋಕಕ್ಕೆ ಮಹೋಪಕಾರವನ್ನು ಮಾಡಲಿಕ್ಕಲ್ಲ. ಆಗಾಗ್ಗೆ ನನ್ನ ತಲೆಯಲ್ಲಿ ಏಳುವ ಬಿರುಗಾಳಿ ನನ್ನ ಹೃದಯದಲ್ಲಿ ಮೇಲಿಂದ ಮೇಲೆ ಸಂಭವಿಸುವ ವಿಪ್ಲವ, ನನ್ನ ಅಂತರಂಗದ ಗೊಣಗು ಇವಕ್ಕೆಲ್ಲ ಒಂದು ಶಾಂತಿ ಮಾಡಬೇಡವೇ. ಆ ಪ್ರಯತ್ನದ ಫಲವೇ ಈ ಭಯಾಗ್ರಫಿ"[೧].

ಇಲ್ಲಿ ಲೋಕೋಪಕಾರಕ್ಕಿಂತ ತನ್ನ ಮನಸ್ಸಿನ ಶಾಂತಿಯನ್ನು ಕಾಪಾಡಿಕೊಳ್ಳಲು ಆತ್ಮಕಥೆ ಉತ್ತರವಾಗಿದೆ. ಲೋಕ ಸುಖಾಯ ಲೋಕ ಹಿತಾಯ ಆತ್ಮಕಥೆ ಬರೆಯುವುದಿಲ್ಲ. ಸ್ವಂತ ಸಾಂತ್ವನಕ್ಕೆ ಮತ್ತು ಶಾಂತತೆಯ ನೆಲೆ ತಲುಪಲು ಮಾಡುವ 'ಶಾಂತಿ ಯಜ್ಞ' ಎಂಬುದಾಗಿ ಬೀಚಿ ಭಾವಿಸಿದ್ದಾರೆ. ಕೆಲವು ಆತ್ಮಕಥನಕಾರರು ಲೋಕಕ್ಕೆ ತನ್ನ ಅನುಭವ ಏನಾದರೂ ಉಪಯೋಗವಾಗಬಹುದೆಂದು ಹೇಳಿದರೆ ಇಲ್ಲಿ ಬೀಚಿ ಲೋಕಕ್ಕಿಂತ ತನಗೇ ಅದರಿಂದ ಅನುಕೂಲ ಎಂಬ ಮಾತನ್ನು ಹೇಳಿದ್ದಾರೆ. ಆತ್ಮಕಥೆಯ ಜೊತೆಗೆ ಭಯ ಹುಟ್ಟಿಸುವ ನನ್ನ ಕತೆ 'ಭಯಾಗ್ರಫಿ'ಯೂ ಹೌದು ಎಂದು ವ್ಯಂಗ್ಯ ಮಾಡಿದ್ದಾರೆ

ಆತ್ಮಕಥೆಯ ಒತ್ತಾಸೆಯ ಮೂಲ ವ್ಯಕ್ತಿ ನೆಲೆಯದೋ ಅಥವಾ ಸಮುದಾಯದ ನೆಲೆಯದೋ ಎಂಬ ಪ್ರಶ್ನೆಯು ಅಷ್ಟೇ ಕ್ಲಿಷ್ಟಕರವಾದುದಾಗಿದೆ. ಆದರೆ ವ್ಯಕ್ತಿಯ ಅಪೇಕ್ಷೆ ಎಂಬುದನ್ನೂ ಕೂಡ ಸಮಾಜವೇ ಸೃಷ್ಟಿಸುತ್ತದೆ. ಹಾಗಾಗಿ ತನ್ನ ಬಗ್ಗೆ ತಾನು ಹೇಳಿಕೊಳ್ಳಬೇಕೆಂಬ ಹಂಬಲವು ಒಂದು ಹಂತದಲ್ಲಿ ವ್ಯಕ್ತಿ ಮೂಲದ್ದು ಎಂದು ಕಾಣಿಸಿದರೂ ಮತ್ತೊಂದು ದೃಷ್ಟಿಯಲ್ಲಿ ಅದು ಸಮಾಜ ಮೂಲದ್ದೂ ಆಗಿರುತ್ತದೆ.

ಶಿವರಾಮ ಕಾರಂತರು "ನನ್ನ ಸಾರ್ವಜನಿಕ ಜೀವನದ ಎರಡೂವರೆ ದಶಕಗಳ ಅವಧಿ ಮುಗಿದ ಹೊತ್ತಿಗೆ ಯಾವುದೋ ಒಂದು ಮನೋಲಹರಿಯಿಂದಾಗಿ ನನ್ನ ಆತ್ಮಕಥೆಯನ್ನು

ಬರೆಯುವ ಪ್ರಯತ್ನ ಮಾಡಿದೆ. ನನ್ನ ಜೀವನ ವೃತ್ತ ನನ್ನ ಒಬ್ಬೊಬ್ಬರು ಮಿತ್ರರಿಗೆ ಕುತೂಹಲಕಾರಿಯಾಗಿ ಕಂಡುದರಿಂದ ಅವರು ತಾವು ಬರೆಯುತ್ತೇವೆಂದು ಉತ್ಸುಕತೆ ತೋರಿಸಿದರು. ನಾನು ಅವರಿಗೆ ಪರಿಹಾರ ಮಾಡುತ್ತಾ, 'ನೀವು ನನ್ನನ್ನು ಕೊಲ್ಲಬೇಕಿಲ್ಲ. ನನ್ನ ಆತ್ಮಹತ್ಯೆಯನ್ನು ನಾನೇ ಮಾಡಿಕೊಳ್ಳುತ್ತೇನೆ ಎಂದುದುಂಟು.'[೨]

ಈ ಕಾರಂತರ ಮಾತಿಗೆ ಪ್ರತಿಕ್ರಿಯಿಸುವುದಾದರೆ ಆತ್ಮಚರಿತ್ರಕಾರರಿಗೆ ಕಾಣದ್ದು ಮತ್ತು ಬೇಡದ್ದು ಜೀವನಚರಿತ್ರಕಾರರಿಗೆ ಕಾಣುವುದೇ ಎಂಬ ಭಯ ಕಾಡಿರಬಹುದು ಎಂಬ ಗುಮಾನಿ ಹುಟ್ಟುತ್ತದೆ. ಜೀವನಚರಿತ್ರೆ ಬರೆಯುವ ವ್ಯಕ್ತಿ ಜೀವನಚರಿತ್ರೆಯನ್ನು ಬರೆಯುವವನನ್ನು ಕೊಲ್ಲಬೇಕಾಗಿಲ್ಲ. ಆತ್ಮಕಥೆಯನ್ನು ಬರೆಯುವ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳಬೇಕಾಗಿಯೂ ಇಲ್ಲ. ಇದನ್ನೇ ಪುಟ್ಟಯ್ಯನವರು ಈ ರೀತಿ ಗುರುತಿಸುತ್ತಾರೆ. 'ಕಾರಂತರು ತಮ್ಮ ಜೀವನ ವಿವರಗಳನ್ನು ಬೇರೆಯವರು ಬರೆದಾಗ ಬಂದೊದಗುವ ಸಮಸ್ಯೆಗಳ ಬಗ್ಗೆ ಎಚ್ಚರ ವಹಿಸಿದ್ದಾರೆ. ಇದರಿಂದ ತನ್ನ ಬಗ್ಗೆ ತಾವೇ ಬರೆದುಕೊಳ್ಳುವ ತೀರ್ಮಾನಕ್ಕೆ ಬಂದಿದ್ದಾರೆ. ತಮ್ಮ ಜೀವನ ವಿವರಗಳನ್ನು ಬೇರೆಯವರು ಬರೆದಾಗ ಉಂಟಾಗುವ ಸಮಸ್ಯೆಗಳ ಸ್ವರೂಪ ಖಚಿತವಿಲ್ಲ ಆದರೆ ಆ ಬಗ್ಗೆ ಆತಂಕ ಮಾತ್ರ ವ್ಯಕ್ತವಾಗಿದೆ.' ಅಥವಾ ಇನ್ನೊಂದು ಆಯಾಮದಿಂದ ನೋಡಬಹುದಾದರೆ ಒಂದು ಸಮಸ್ಯೆ ಇರುವುದು ಬೇರೆ ಕಾಣುವುದೇ ಬೇರೆ. ಹಾಗೆ ಕಂಡಿದ್ದೆಲ್ಲವೂ ಸತ್ಯವಲ್ಲ" ಎಂಬ ಚರ್ಚೆಗೆ ಇಲ್ಲಿ ಅವಕಾಶವಿದೆ.

ಆತ್ಮಕಥೆ ಎಂದರೆ ಪೂರ್ತಿ ವಾಸ್ತವವಾಗಿ ನಡೆದುದರ ಕಥೆ ಎಂದು ಬೀಚಿ. ಹೇಳಿಕೊಂಡಿದ್ದಾರೆ, "ಸಾಹಿತ್ಯ ವಿಮರ್ಶಕರು ಕತೆಯನ್ನು ಲಲಿತ ಸಾಹಿತ್ಯ ಎಂದೆಣಿಸುವರು. ಆತ್ಮ ಮಾತ್ರ ಲಲಿತವಲ್ಲದ ಸಾಹಿತ್ಯ ವಿಭಾಗ ಎಂದು ಅವರ ಅಭಿಪ್ರಾಯ. ಕತೆಯು ಇನ್ನೊಬ್ಬರನ್ನು ಕುರಿತುದು ಆತ್ಮಕಥೆ ತನ್ನನ್ನು(ಬರೆದವನನ್ನು ಕುರಿತುದು ಎಂಬುದಕ್ಕಾಗಿ ಈ ಬೇಧವಿರಬಹುದೆ ಎಂಬ ಪ್ರಶ್ನೆಗೆ ಉತ್ತರಿಸುವುದಾದರೆ ಕತೆಯಲ್ಲಿ ವ್ಯಕ್ತಿಯೂ ಪಾತ್ರವಾಗಬಹುದು ಅಥವಾ ಬೇರೆಯವರೂ ಆಗಬಹುದು ಕಥೆಯಲ್ಲಿ ಕಲ್ಪನೆಯ ಸಾಧ್ಯತೆಗಳು ಹೆಚ್ಚು. ಆತ್ಮಕಥೆ ಬರೆದ ಸೃಜನಶೀಲ ಬರಹಗಾರ(ಕತೆ, ಕಾದಂಬರಿ, ನಾಟಕ ಬರೆದಂತಹವರನ್ನು ಇಲ್ಲಿ ಸೃಜನಶೀಲ ಎಂಬರ್ಥದಲ್ಲಿ ಬಳಸಲಾಗಿದೆ) ಉದಾಹರಣೆಗೆ, ಬೀಚಿ, 'ಹೆಣ್ಣು ಕಾಣದ ಗಂಡು'ನಲ್ಲಿ ಬರುವ ಕಥಾನಾಯಕ ಅನಂತ 'ದಾಸಕೂಟ' ಮತ್ತು 'ಸತಿಸೂಳೆ'ಯ ಉಮೇಶ ಇವರೆಲ್ಲ ನಾನಲ್ಲದೇ ಮತ್ತಾರು."[೩]

ಜಿ.ಎಸ್.ಎಸ್ ರವರ ಅಸಮಗ್ರ ಆತ್ಮಕಥೆ ಚತುರಂಗವನ್ನು ಆಧರಿಸಿ ಲಿಂಗದೇವರು ಹಳೆಮನೆಯವರು 'ರಾಷ್ಟ್ರಕವಿ ಜಿ ಎಸ್ ಶಿವರುದ್ರಪ್ಪ' ಎಂಬ ಜೀವನ ಚರಿತ್ರೆಯನ್ನು ಬರೆದಿದ್ದಾರೆ.

ಆತ್ಮಕಥೆಯಲ್ಲಿಲ್ಲದ ಎಷ್ಟೋ ವಿಷಯಗಳು ಜೀವನ ಚರಿತ್ರೆಯಲ್ಲಿವೆ. ಆತ್ಮಕಥೆ ಸತ್ಯವೋ ಸುಳ್ಳೋ ಎನ್ನುವುದಕ್ಕಿಂತ ಒಂದು ಘಟನೆ ಸನ್ನಿವೇಶವನ್ನು ನೋಡುವವನ ದೃಷ್ಟಿಕೋನ. ಸಾಹಿತಿಗಳ ಸೃಜನಶೀಲ ಸಾಹಿತ್ಯದಲ್ಲಿ ಬದುಕಿನ ಹಲವು ಪಾತ್ರಗಳನ್ನು ಸೃಷ್ಟಿಸಲು ಸಾಧ್ಯವಾದರೆ ಈ ಸಾಹಿತ್ಯ ಕೃತಿ ರಚಿಸಿದ ಮೇಲೆ ಅದರ ಪ್ರತಿಕ್ರಿಯೆಗಳನ್ನು ದಾಖಲಿಸಲು ಆತ್ಮಕಥೆ ಅಥವಾ ಅನುಭವ ಕಥನ ಮುಖ್ಯವಾಗುತ್ತದೆ. ಸಾಹಿತ್ಯ ಕೃತಿಯ ವಿಷಯ ಮತ್ತು ವಸ್ತುವನ್ನು ಏಕೆ ಆಯ್ಕೆ ಮಾಡಿಕೊಂಡೆ. ವಿಷಯ ವಸ್ತುವಿನ ಪ್ರೇರಣೆ ಪ್ರಭಾವ ಯಾವುದು ಇಲ್ಲಿ ಮುಖ್ಯವಾಗುತ್ತದೆ. ಕಾರಂತರು ಭೈರಪ್ಪ ವ್ಯಾಸರಾಯ ಬಲ್ಲಾಳ ಅವರ ಕೃತಿಗಳಲ್ಲಿಯೂ ಈ ಅಂಶ ಬರುತ್ತದೆ.

ಕವಿ ಜಿ ಎಸ್ ಶಿವರುದ್ರಪ್ಪನವರು, "ನನ್ನ ಆತ್ಮಕಥೆ ಅಸಮಗ್ರ ಯಾಕೆಂದರೆ ನನ್ನನ್ನು ಕುರಿತು ನಾನು ನಿಸ್ಸಂಕೋಚವಾಗಿ ಹೇಳಿಕೊಳ್ಳಲಾಗದ ಅನೇಕ ನಿರ್ಬಂಧಗಳಲ್ಲಿ ಅವು ವೈಯಕ್ತಿಕವಾಗಿರಬಹುದು ಸಾಮಾಜಿಕವಾಗಿರಬಹುದು ಸಾಂಸ್ಕೃತಿಕವಾಗಿರಬಹುದು. ಒಬ್ಬ ಸೃಜನಶೀಲ ಲೇಖಕ ವಾಸ್ತವವಾಗಿ ತನ್ನ ಬರಹಗಳಲ್ಲೇ ತನ್ನ ನಿಜವಾದ ಆತ್ಮಕಥೆಯನ್ನು ಬರೆದುಕೊಂಡಿರುತ್ತಾನೆ ಎಂದು ನಾನು ತಿಳಿದಿರುವುದರಿಂದ."[9]

ಬೀಚಿ ಮತ್ತು ಭೈರಪ್ಪನವರ ಮಾತಿಗೆ ಇದು ಪೂರಕವಾಗಿದೆ. ಮಹಿಳೆಯರ ಕಥೆ ಕಾದಂಬರಿಗಳೇ ಆತ್ಮಕಥೆಗಳಾಗಿವೆ. ಪುರುಷರಲ್ಲಿ ಕಥೆ ಕಾದಂಬರಿಯಲ್ಲಿ ಆತ್ಮಕಥೆಯ ಭಾಗ ಮಾತ್ರ ಬಂದಿದೆ.

ಮಹಾತ್ಮಾ ಗಾಂಧಿ, "ಒಂದು ಯಥಾವತ್ತಾದ ಆತ್ಮಕಥೆಯನ್ನು ಬರೆಯಲು ಪ್ರಯತ್ನಿಸುವುದು ನನ್ನ ಉದ್ದೇಶವಲ್ಲ. ನಾನು ಹೇಳಬಯಸುವುದು ಸತ್ಯಶೋಧನೆಯ ನನ್ನ ಅನೇಕ ಪ್ರಯೋಗಗಳ ಕತೆಯನ್ನು ಮಾತ್ರ. ನನ್ನ ಜೀವನ ಈ ಪ್ರಯೋಗಗಳ ಹೊರತು ಮತ್ತೇನೂ ಅಲ್ಲ. ಆದುದರಿಂದ ಈ ಕತೆ ಆತ್ಮಕಥೆಯ ರೂಪವನ್ನು ಹೊಂದುವುದು ಸತ್ಯ ಇದರ ಪ್ರತಿಯೊಂದು ಪುಟದಲ್ಲಿಯೂ ನನ್ನ ಪ್ರಯೋಗಗಳ ವಿಷಯವನ್ನೇ ಹೇಳುವುದಾದರೂ ನನಗೆ ಚಿಂತೆಯಿಲ್ಲ. ಈ ಎಲ್ಲ ಪ್ರಯೋಗಗಳ ಒಟ್ಟು ಕತೆ ವಾಚಕರಿಗೆ ಲಾಭವಾಗದಿರದೆಂದು ನಾನು ನಂಬುತ್ತೇನೆ. ಈಗ ರಾಜಕೀಯ ಕ್ಷೇತ್ರದ ನನ್ನ ಪ್ರಯೋಗಗಳು ಭಾರತದಲ್ಲಿ ಮಾತ್ರವೇ ಅಲ್ಲದೇ ನಾಗರಿಕ ಪ್ರಪಂಚಕ್ಕೆಲ್ಲಾ ತಕ್ಕಮಟ್ಟಿಗೆ ಗೊತ್ತಾಗಿವೆ. ಅವು ನನಗೆ ಹೆಚ್ಚು ಬೆಲೆಯುಳ್ಳವಲ್ಲ. ಅವುಗಳಿಂದ ನನಗೆ ಬಂದಿರುವ ಮಹಾತ್ಮಾ ಎಂಬ ಬಿರುದು ನನಗೆ ನೋವನ್ನುಂಟುಮಾಡಿದೆ. ಇದರಿಂದ ಒಂದು ಕ್ಷಣವಾದರೂ ನಾನು ಉಬ್ಬಿಹೋದುದು ನನಗೆ ನೆನಪಿಲ್ಲ. ಆದರೆ ಆಧ್ಯಾತ್ಮ ಕ್ಷೇತ್ರದಲ್ಲಿ ನಾನು ನಡೆಸಿದ ಪ್ರಯೋಗಗಳನ್ನು ವಿವರಿಸುವುದು ನನಗೆ ನಿಜವಾಗಿಯೂ ಇಷ್ಟ. ಇವು ಗೊತ್ತಿರುವುದು ನನಗೆ ಮಾತ್ರ, ಈ ಪ್ರಯೋಗಗಳು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಲು

ನನಗೆ ಶಕ್ತಿಯನ್ನು ಕೊಟ್ಟಿವೆ. ಇವುಗಳಿಂದ ನನ್ನ ನಮ್ರತೆಯೇ ಹೆಚ್ಚಾಗಬಲ್ಲುದು. ನಾನು ನನ್ನಲ್ಲೇ ಆಲೋಚನೆ ಮಾಡಿ ಹಿನ್ನೋಟ ಬೀರಿದಂತೆ ನನ್ನ ದೌರ್ಬಲ್ಯ ನನಗೆ ಹೆಚ್ಚು ಸ್ಪಷ್ಟವಾಗಿ ಅನುಭವವಾಗುತ್ತಿದೆ. ನನ್ನ ಎಲ್ಲ ಅನುಭವವೂ ಸತ್ಯ ಅಲ್ಲದೇ ಬೇರೆ ದೇವರು ಇಲ್ಲ ಎಂಬ ನಂಬಿಕೆಯನ್ನು ಉಂಟುಮಾಡಿವೆ. ಮತ್ತು ಈ ಅಧ್ಯಾಯಗಳ ಪ್ರತಿ ಪುಟವೂ ಸತ್ಯದ ಸಾಕ್ಷಾತ್ಕಾರಕ್ಕೆ ಇರುವ ಒಂದೇ ಸಾಧನೆ ಅಹಿಂಸೆ ಎಂಬುದನ್ನು ಓದುಗನಿಗೆ ಸಾರಿ ಹೇಳದಿದ್ದರೆ ಈ ಅಧ್ಯಾಯಗಳನ್ನು ಬರೆದ ನನ್ನ ಶ್ರಮ ವ್ಯರ್ಥ ಎಂದು ತಿಳಿಯುತ್ತೇನೆ ಮತ್ತು ಈ ದೆಸೆಯಲ್ಲಿ ನನ್ನ ಪ್ರಯತ್ನಗಳು ನಿಷ್ಫಲವಾದರೆ ಅದು ವಾಚಕನ ತಪ್ಪೇ ಹೊರತು ಮಹತ್ ತತ್ವಗಳ ತಪ್ಪು ಅಲ್ಲ ಎಂದು ಓದುಗರು ತಿಳಿಯಲಿ. ಎಷ್ಟಾದರೂ ಅಹಿಂಸೆಯ ಆಚರಣೆಯಲ್ಲಿ ನನ್ನ ಪ್ರಯತ್ನ ಎಷ್ಟು ಪ್ರಾಮಾಣಿಕವಾದರೂ ಅವು ಅಪರಿಪೂರ್ಣ ಮತ್ತು ಅಪರ್ಯಾಪ್ತವೇ. ಆದುದರಿಂದ ನಾನು ಕಂಡಿರುವ ಸತ್ಯದ ಸಣ್ಣ ಚಂಚಲ ದೃಶ್ಯವು ಸತ್ಯದ ಅವರ್ಣನೀಯ ಮಹತ್‌ಪ್ರಭೆಯ ಪರಿಚಯ ಮಾಡುವುದು ಅಸಾಧ್ಯವೇ. ಈ ಪ್ರಭೆ ಕೋಟಿ ಸೂರ್ಯ ಪ್ರಕಾಶದ್ದು. ನಾನು ಕಂಡಿರುವುದು ಆ ಮಹತ್‌ಪ್ರಭೆಯ ಒಂದು ಮಸುಕಾದ ಪ್ರತಿಫಲನ ಮಾತ್ರ. ಆದರೆ ನನ್ನ ಸತ್ಯಶೋಧನೆಯ ಅನುಭವದಿಂದ ನಾನು ಇಷ್ಟನ್ನೂ ನಿರ್ಧಾರವಾಗಿ ಹೇಳಬಲ್ಲೆ. ಸತ್ಯದ ಪರಿಪೂರ್ಣ ದರ್ಶನವನ್ನು ಪಡೆಯಲು ಅಹಿಂಸೆಯ ಪರಿಪೂರ್ಣ ಆಚರಣೆ ಒಂದೇ ಸಾಧನೆ"[೫]

ಆತ್ಮಕಥೆಯೆಂದರೆ ತನ್ನನ್ನು ತಾನು ಕಂಡುಕೊಳ್ಳುವುದು. ತನ್ನನ್ನು ತಾನು ಕಾಣುತ್ತಾ ಹೋದಹಾಗೆಲ್ಲ ನಮ್ಮ ದೌರ್ಬಲ್ಯ/ಶಕ್ತಿಗಳು ನಮಗೇ ಗೋಚರವಾಗಿ ಅದನ್ನು ಮೀರಿ ಬೆಳೆಯಲು ಸಾಧ್ಯವಾಗುತ್ತದೆ. ತನ್ನನ್ನು ಕಾಣಲು ಕನ್ನಡಿ ಬೇಕಾಗುತ್ತದೆ. ಆ ಕನ್ನಡಿಯೇ ಇತರ ವ್ಯಕ್ತಿಗಳು. ಇತರ ವ್ಯಕ್ತಿಗಳ ಜೊತೆ ಹೇಗೆ ಒಡನಾಡಿದ್ದೇವೆ. ಹೇಗೆ ವ್ಯವಹರಿಸಿದ್ದೇವೆ ಎನ್ನುವುದರ ಮೂಲಕ ವ್ಯಕ್ತಿಯ ವ್ಯಕ್ತಿತ್ವ ಗೋಚರವಾಗುತ್ತದೆ.

ಜಾತಿ ಲಿಂಗಗಳನ್ನು ಮೀರಿ ಗಾಂಧಿಯವರು ಸಾರ್ವಕಾಲಿಕ ಸತ್ಯವನ್ನು ಹೇಳುತ್ತಾರೆ. ರಾಜಕೀಯ ಕ್ಷೇತ್ರದ ಪ್ರಯೋಗಗಳಿಗಿಂತ ಅಧ್ಯಾತ್ಮಿಕ ಪ್ರಯೋಗಗಳು ಜನರಿಗೆ ತಿಳಿಯುವುದು ಇಲ್ಲಿ ಮುಖ್ಯವಾಗಿದೆ. ಅಹಿಂಸೆ ಮತ್ತು ಸತ್ಯದ ಸಾಕ್ಷಾತ್ಕಾರಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಇಲ್ಲಿ ಬ್ರಾಹ್ಮಣ ಜಾತಿಯ ಪುರುಷನಾದರೂ ಜಾತಿ ಮತ್ತು ಲಿಂಗಗಳನ್ನು ಮೀರಿರುವುದು ಕಂಡು ಬರುತ್ತದೆ. ಅಹಿಂಸೆಯ ಆಚರಣೆಯಿಂದ ಸತ್ಯದ ದರ್ಶನ. ಅದರಲ್ಲಿ ತನ್ನ ದೌರ್ಬಲ್ಯಗಳನ್ನು ಮೀರಿ ಗಟ್ಟಿಗೊಳ್ಳುವ ವ್ಯಕ್ತಿತ್ವದ ಬಗ್ಗೆ ಗಾಂಧೀಜಿ ಹೇಳುತ್ತಾರೆ.

ಆತ್ಮಕಥೆ ಯಾಕೆ ಬರೆಯುತ್ತೇನೆನ್ನುವುದು ಎಷ್ಟು ಕುತೂಹಲಕಾರಿಯಾಗಿದೆಯೋ ಅದೇ ರೀತಿ ಆತ್ಮಕಥೆಯನ್ನು ಯಾಕೆ ಬರೆಯುವುದಿಲ್ಲ ಎಂಬುದು ಅಷ್ಟೇ ಕುತೂಹಲಕರವಾಗಿದೆ.

ಎಂ. ಎನ್. ರಾಯ್, "ನನ್ನ ಬಗ್ಗೆ ನಾನೇ ಬರೆದುಕೊಳ್ಳುವುದು ನನಗೆ ಇಷ್ಟವಿಲ್ಲ. ಚರಿತ್ರೆಯೆಂದರೆ ವಿಜ್ಞಾನವೇ. ಜೀವನ ಚರಿತ್ರೆಯನ್ನು ತೀಕ್ಷ್ಣ ಪರಿಶೀಲನೆಯಿಂದ ಬರೆದರೆ ಚರಿತ್ರೆಯಲ್ಲಿ ಅವುಗಳಿಗೆ ಸ್ಥಾನವಿರುತ್ತದೆ. ಆತ್ಮಕಥೆಗಳು ಚಾರಿತ್ರಿಕ ಸತ್ಯಗಳಾಗಿ ನಿಲ್ಲುವುದಿಲ್ಲ. ಅವರ ದೊಡ್ಡತನವನ್ನು ಅವರೇ ಗಮನಿಸಿ ಅಹಂ ಭಾವದಿಂದ ಆತ್ಮಕಥೆಯನ್ನು ಬರೆದುಕೊಳ್ಳುತ್ತಾರೆ. ತಾವು ಯಾವುದೋ ಚಾರಿತ್ರಿಕ ಪಾತ್ರವನ್ನು ನಿರ್ವಹಿಸುವುದಕ್ಕೆ ಹುಟ್ಟಿದ್ದೇವೆ ಎಂದುಕೊಳ್ಳುವವರೇ ತಮ್ಮ ಸ್ವಂತ ಕತೆಯನ್ನು ಬರೆದುಕೊಳ್ಳುತ್ತಾರೆ. ತನ್ನನ್ನು ತಾನು ಬಹಳ ವಿಮರ್ಶಾತ್ಮಕವಾಗಿ ನೋಡಿದರೆ ಹಾಗೆ ಬರೆದುಕೊಳ್ಳಬಹುದು. ಆದರೆ ವಿಮರ್ಶಾದೃಷ್ಟಿ, ಆತ್ಮಕಥೆ ಒಂದೇ ಕಡೆ ಸೇರುವುದಿಲ್ಲ. ಸೊಗಸಾದ ಸಾಹಿತ್ಯವಾಗಿ ಆತ್ಮಕಥೆಗಳನ್ನು ಓದಿಕೊಳ್ಳಬಹುದು. ಆದರೆ ಆ ಮಟ್ಟಕ್ಕೆ ಸೇರಿದವೂ ಕೂಡ ಕಡಿಮೆಯೇ. ಆದ್ದರಿಂದ ನನ್ನ ಮಾನಸಿಕ ಬೆಳವಣಿಗೆಯ ಕುರಿತು ಜೀವನ ಸಂಘಟನೆಗಳ ಕುರಿತು ಯಾವತ್ತೂ ದಾಖಲೆ ಮಾಡಿಕೊಳ್ಳಲಿಲ್ಲ"[೬]

ಎಂ.ಎನ್.ರಾಯ್ ಹೇಳುವುದೇನೆಂದರೆ ಆತ್ಮಕಥೆ ಎಂದರೆ ಸ್ವವಿಮರ್ಶೆ ಇರುವುದಿಲ್ಲ. ತಮ್ಮ ಬಗ್ಗೆ ತಾವೇ ಹೊಗಳಿಕೊಂಡು ಬರೆದುಕೊಳ್ಳುವುದು ಸರಿಯಾದ ಕ್ರಮವಲ್ಲ. ಸಾಮಾಜಿಕ ಬದುಕಿನಲ್ಲಿ ಅನ್ಯನ್ಯ ಕಾರಣ ಸಾಧನೆಗಳಿಂದ ಗಳಿಸಿದ ಪ್ರಶಸ್ತಿ ಜನಪ್ರಿಯತೆಗಳ ಕಾರಣದಿಂದ ತಾನು ಆದರಣೀಯನೆಂದೇ ಪ್ರತಿಪಾದಿಸುವ ಧಾಟಿಯಲ್ಲಿ ಆತ್ಮಕಥೆಗಳಿರುತ್ತವೆ. ಓದುಗರ ಮನಸ್ಸಿಗೆ ತನ್ನ ಜನಪ್ರಿಯ ಪ್ರಭಾವೀ ವ್ಯಕ್ತಿತ್ವದ ಮುಖೇನ ಲಗ್ಗೆ ಇಟ್ಟು ಮೆಚ್ಚಿಸುವ ರೀತಿಯಲ್ಲಿ ಕಲ್ಪಿತ ಸಂಗತಿಗಳನ್ನು ನಕಲಿ ಸತ್ಯಗಳನ್ನು ನಿರೂಪಿಸಿ ಬಿಡುವುದು ಸಾಮಾನ್ಯ ಸಂಗತಿಯೆಂಬುದು ಡಾ.ಎಂ.ಎನ್.ರಾಯ್ ಅವರ ವಿಶ್ಲೇಷಣೆಯ ಮುಖ್ಯ ತಿರುಳಾಗಿದೆ. ಇವರ ಪ್ರಕಾರ ಆತ್ಮಕಥೆ ಮತ್ತು ವಿಮರ್ಶಾ ದೃಷ್ಟಿ ಒಂದೇ ಕಡೆ ಸೇರುವುದಿಲ್ಲ. ಎನ್ನುವ ಕಾರಣ ಕೊಡುತ್ತಾರೆ.

ಬಿ ವಿ ಕಾರಂತರು, "ಆತ್ಮಗತ (ಸಾಲೀಲೋಕಿ) ಜಗತ್ತಿಗೆ ರಂಗಭೂಮಿ ಕೊಟ್ಟ ಒಂದು ಮಹಾ ಕೊಡುಗೆಯಂತೆ. ಅದು ಬರೀ ಆತ್ಮವಿಶ್ಲೇಷಣೆಯಲ್ಲ, ಸಮಾಜವಿಶ್ಲೇಷಣೆ, ವಿವೇಕ ವಿಶ್ಲೇಷಣೆ. ಎಲ್ಲಕ್ಕಿಂತ ಹೆಚ್ಚಾಗಿ ಜೀವನ ವಿಶ್ಲೇಷಣೆ, ಈ ವಿಶ್ಲೇಷಣೆ ದಾರ್ಶನಿಕ ವಿಶ್ಲೇಷಣೆಗಿಂತಲೂ ಶ್ರೇಷ್ಠ ಎನ್ನುವವರೂ ಇದ್ದಾರೆ. ಚಾಪ್ಲಿನ್ ಸರ್ ಲಾರೆನ್ಸ್ ಮುಂತಾದವರು... ಇಲ್ಲಿರುವುದು ನನ್ನ 'ಆತ್ಮಗತವೇ'. ಅದರ ಉದ್ದೇಶವಿಷ್ಟೆ. ನೋಡಿ, ನನಗೆ ನೆನಪಿದ್ದಷ್ಟು ಇಷ್ಟೆ. ನನ್ನ ಸಂಗಾತಿಗಳು ಹತ್ತಿರ ಹತ್ತಿರ ಹೀಗೆ ಹೇಳುತ್ತಿದ್ದರು ಎಂಬುದು ಅದೇ ಈ ಆತ್ಮಕಥೆಯ ಈ ಸಾರ. ಒಮ್ಮೊಮ್ಮೆ ನಾನೇ ಈ ಬರವಣಿಗೆಯ ಕೆಲವು ಭಾಗಗಳನ್ನು ಓದಿದಾಗ ಇನ್ನೊಬ್ಬನ ಕತೆಯನ್ನು ಓದಿ ಅನುಭವಿಸುತ್ತಿದ್ದೇನೆ ಅನ್ನಿಸಿದೆ.

ನನ್ನ ಬದುಕು ನೇರ ರೇಖೆಯಲ್ಲಿ ಸಾಗಲೇ ಇಲ್ಲ. ಏನೇನೋ ಪರಿಸ್ಥಿತಿ ಎದುರಾದಾಗ ಅದು ನನಗೆ ಅನಿವಾರ್ಯವಾದಾಗ ಒಪ್ಪಿಗೆ ಇದ್ದೋ ಇಲ್ಲದೆಯೋ ಜೀವನವನ್ನು ಸವೆಯಿಸಿದ್ದೆ. ಅದಕ್ಕೆ ನನ್ನ ಬಗ್ಗೆ ಬರೆಯುವಾಗ– ಬರೆಸುವಾಗ ಸುಖವೂ ಅನ್ನಿಸುವುದಿಲ್ಲ ದುಃಖವೂ ಅನ್ನಿಸುವುದಿಲ್ಲ. ಅಂದರೆ ಒಂದು ಕತೆ ಹೇಳಿದ ಅಥವಾ ಅಭಿನಯಿಸಿದ ಆತ್ಮತೃಪ್ತಿ. ಬಾಲ್ಯದಲ್ಲಿ ತಂದೆಯಿಂದ ತುಂಬ ಹೊಡೆಸಿಕೊಂಡಿದ್ದೆ. ನಿಂತಲ್ಲಿ... ಕೂತಲ್ಲಿ. ಆದರೆ ಈಗ ಅದನ್ನು ಹೇಳುವಾಗ ಆ ರಸವೇ ಬೇರೆ. ನಿರ್ಲಿಪ್ತತೆಯಂತೂ ಅಲ್ಲ. ರಾಮಾನುಜನ್ ಹೇಳಿದ ಹಾಗೆ ಇದು ಇನ್ನೊಬ್ಬನ ಆತ್ಮಚರಿತ್ರೆ ಎಂದುಕೊಂಡರೂ ತಪ್ಪಿಲ್ಲ.

ಚರಿತ್ರೆಗೆ ತತ್ಯಗಳು ಬೇಕು. ಕತೆಗೆ ಸತ್ಯಗಳು ಬೇಕು. ವ್ಯಕ್ತಿಯೊಬ್ಬನ ಜೀವನದ ತತ್ಯಗಳು ಬಂದರೆ ಸಾಲದು. ಅದರ ಜೊತೆಗೆ ಸತ್ಯವೂ ಬೇಕು. ಸತ್ಯವೆಂದರೆ ವ್ಯಕ್ತಿಯು ತನ್ನ ಜೀವನಾನುಭವಗಳನ್ನು ಹೇಗೆ ಸ್ವೀಕರಿಸುತ್ತಾನೆ. ಹಾಗೆ ಸ್ವೀಕರಿಸುವಾಗ ಅದರಲ್ಲಿ ತನ್ನ ಹಾಗೂ ತನ್ನ ಹತ್ತಿರದವರ ಸತ್ಯ ಅದನ್ನು ಅವರು ಸ್ವೀಕರಿಸಿರುವ ರೀತಿಯಲ್ಲಿ– ಸೇರುತ್ತದೆ. ಅವುಗಳಲ್ಲೂ ವೈವಿಧ್ಯ ವೈರುಧ್ಯಗಳಿರುತ್ತವೆ. ಈ ದೀರ್ಘ ಜೀವನದ ಬಗ್ಗೆ 'ಉಳಿದವರು' ಏನು ತಿಳಿದುಕೊಂಡಿದ್ದಾರೋ ಅದೇ ನನ್ನ ಕತೆ. ಆದರೆ ಈ ಉಳಿದವರಲ್ಲಿ ನಾನೂ ಒಬ್ಬನಾಗಿದ್ದೇನೆ. ಆದುದರಿಂದ ವ್ಯಕ್ತಿಯ ಆತ್ಮಕಥೆ ಒಂದು ಅಧಿಕೃತ ವಾಣಿಯಾಗುತ್ತದೆ. ಅಂದರೆ ಕತೆಯಲ್ಲಿ ಸತ್ಯವಿದೆ. ಅದು ನನ್ನ ಸತ್ಯ ಮಾತ್ರ. ಈ ನನ್ನ ಸತ್ಯವೂ ಸಮುದಾಯದ ನಡುವೆಯೇ ಬೆಳೆದಿರುವುದರಿಂದ ಸ್ವಲ್ಪ ಬೇರೆ ಅನ್ನಿಸಿದರೂ ಸಜ್ಜನರೂ ವಿರೋಧ ಮಾಡುವುದಿಲ್ಲ. ಆಗ ಅದು ಅಧಿಕೃತ್ಯವೂ ಹೌದು ಪ್ರಾಮಾಣಿಕವ ಹೌದು"[೨]

ಇಲ್ಲಿ ಬಿ ವಿ ಕಾರಂತರು ಆತ್ಮವಿಮರ್ಶೆ ಮತ್ತು ಆತ್ಮಕಥೆ ಎರಡೂ ಜೊತೆಯಲ್ಲೇ ಹೋಗಲು ಸಾಧ್ಯವಿದೆ ಎನ್ನುತ್ತಾರೆ.

ತನ್ನ ಸುತ್ತಣ ನಿಜದ ಕುರಿತು ಆತ್ಮಕಥನಕಾರ ತಾನು ಪ್ರತಿಕ್ರಿಯಿಸುವುದಕ್ಕಿಂತಲೂ ತನ್ನ ಸುತ್ತಣ ಮಂದಿ ತನ್ನ ಬಗ್ಗೆ ಪ್ರತಿಕ್ರಿಯಿಸುವುದನ್ನು ಕೇಳಿಸಿಕೊಂಡು ಸಮಷ್ಟಿಯ ಅವಲೋಕನದಲ್ಲಿ ತನ್ನ ಸ್ಥಾನ ನಿರ್ದೇಶನವು ಎಂಥದ್ದೆಂಬುದನ್ನು ಆತ್ಮಕಥೆಯಲ್ಲಿ ಬರೆಯಬೇಕಾಗುತ್ತದೆ. ಹಾಗಾದಾಗ ಆ ಆತ್ಮಕಥೆಗೆ ವಿಶಾಲವಾದ ಆಯಾಮ ಒದಗುತ್ತದೆಂಬುದು ಬಿ.ವಿ. ಕಾರಂತರ ಆಲೋಚನೆಯಾಗಿದೆ. ಎಂ.ಎನ್.ರಾಯ್ ಅವರ ಮಾತಿಗೆ ಉತ್ತರವೋ ಎಂಬಂತೆ ಆತ್ಮಕಥೆ ಬರಿ ಆತ್ಮವಿಶ್ಲೇಷಣೆಯಲ್ಲ. ಒಬ್ಬ ವ್ಯಕ್ತಿ ಸಮಾಜದ ಇತರ ವ್ಯಕ್ತಿಗಳ ಜೊತೆ ಬದುಕುವುದರಿಂದ ಇದು ಸಮಾಜ ವಿಶ್ಲೇಷಣೆಯೂ ಹೌದು. ಆತ್ಮಕಥೆಯಲ್ಲಿ ಎಲ್ಲವನ್ನೂ ಹೇಳಲಾಗುವುದಿಲ್ಲ.

ಆಯ್ಕೆ ಮತ್ತು ನಿರಾಕರಣೆಯ ಪ್ರಶ್ನೆ ಇರುವುದರಿಂದ ವಿವೇಕ ವಿಶ್ಲೇಷಣೆಯೂ ಇರುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ಆತ್ಮಕಥೆ ಬದುಕಿನ ವಿಶ್ಲೇಷಣೆಯನ್ನು ಒಳಗೊಂಡಿದೆ ಎನ್ನುತ್ತಾರೆ. ತನ್ನ ಕತೆಯನ್ನು ಓದುವಾಗ ಇನ್ನೊಬ್ಬರ ಕತೆಯನ್ನು ಓದುತ್ತಿದ್ದೇವೆಂದು ಅನಿಸುತ್ತದೆ ಎಂದರೆ ಆತ್ಮಕಥೆಯಲ್ಲಿ ಸ್ವವಿಮರ್ಶೆ ಇದ್ದಾಗ ಮಾತ್ರ ಹಾಗನಿಸುತ್ತದೆ. ಬೇರೆಯವರ ಬಗ್ಗೆ ವಿಮರ್ಶೆ ಮಾಡಿದಷ್ಟು ನಮ್ಮ ಬಗ್ಗೆ ವಿಮರ್ಶೆ ಮಾಡಿಕೊಳ್ಳುವುದಿಲ್ಲ. ಆದರೂ ಇಲ್ಲಿ ಸ್ವವಿಮರ್ಶೆ ಇದೆ. ಒಂದು ರೀತಿ ಭಾವೋದ್ವೇಗದಿಂದ ಹೊರತಾದ ನಿರ್ಲಿಪ್ತ ಸ್ಥಿತಿಯಿದ್ದಾಗ ಮಾತ್ರ ವಿವೇಚನೆಯಿಂದ ಬರೆಯುವುದು ಸಾಧ್ಯ. ನಮ್ಮ ಬಗ್ಗೆ ನಾವು ಹೇಳುವುದಲ್ಲದೆ ಇತರರು ನಮ್ಮ ಬಗ್ಗೆ ಏನು ತಿಳಿದುಕೊಂಡಿದ್ದಾರೋ ಅದೇ ನನ್ನ ಕತೆ ಎನ್ನುವಲ್ಲಿ ವಾಸ್ತವದ ಬಗ್ಗೆ ಒತ್ತು ಕೊಟ್ಟಿದ್ದಾರೆ.

ಕೆ.ಗೋವಿಂದರಾಜು ಅವರು ಹೀಗೆ ಹೇಳಿಕೊಳ್ಳುತ್ತಾರೆ. "ನಾನು ಆತ್ಮಚರಿತ್ರೆ ಬರೆಯುವಷ್ಟು ದೊಡ್ಡವನಲ್ಲ. ಆ ಯಾವ ಬಗೆಯ ಹಿನ್ನಲೆಯೂ ನನಗೆ ಇಲ್ಲ. ನಾನು ಹುಟ್ಟಿ ಬೆಳೆದ ಊರು ಕೇರಿಗಳನ್ನು ಅರ್ಥ ಮಾಡಿಕೊಳ್ಳುವ ಸಲುವಾಗಿ, ನನ್ನ ಸುತ್ತಲಿನ ಸ್ನೇಹಿತರ, ಸಂಬಂಧಿಗಳ ಮನಸ್ಸು, ಭಾವನೆಗಳೆಂಥವು ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆಂದು ತೊಡಗಿದ ವೇಳೆ ನನಗಾದ ಅಪಮಾನ, ನೋವು, ತಲ್ಲಣಗಳಿಂದ ತಳಮಳಿಸಿದ ಸಂದರ್ಭಗಳನ್ನು ಯಾವುದೇ ಪೂರ್ವಗ್ರಹಗಳಿಲ್ಲದೆ ಹೇಗಾದರೂ ಹೊರ ಹಾಕಬೇಕೆನ್ನಿಸಿತು. ಯಾವುದೇ ದಿಕ್ಕಿನಲ್ಲಿ ಯಾವ ಸಮಸ್ಯೆಯೂ ಇಲ್ಲದಂತೆ ಸಾಗಬೇಕಿದ್ದ ನನ್ನ ಬದುಕು ಕುಸಿದು ಬಿದ್ದು, ಸುಳ್ಳು ವಂಚನೆಗಳ ಜಾಲದಲ್ಲಿ ಸಿಕ್ಕಿ ಹಾಕಿಕೊಂಡದ್ದನ್ನೆಲ್ಲ ಬರೆಯಬೇಕೆನ್ನಿಸಿತು. "ಈ ಬರವಣಿಗೆಯ ಮೂಲಕ ನನ್ನ ಅಂತರಂಗದ ಬೇಗುದಿಯನ್ನೆಲ್ಲ ಹೇಳಿಕೊಂಡಂತಾಗಿ ಈಗ ನಿರಾಳವೆನಿಸುತ್ತದೆ."[೮] ಎಂದು ಅವರೇ ಹೇಳಿಕೊಳ್ಳುತ್ತಾರೆ.

ಆತ್ಮಕಥೆ ನಿರ್ದಿಷ್ಟ ವಯಸ್ಸು, ಸ್ಥಾನಮಾನವನ್ನು ಅವಲಂಬಿಸಿದೆ ಎಂಬ ಧೋರಣೆಗೆ ವ್ಯತಿರಿಕ್ತವಾಗಿದೆ. ಮನಸ್ಸಿನಲ್ಲಿರುವ ಕೊಳೆ, ನೋವು ಹೊರಹಾಕುವುದಕೋಸ್ಕರ ಆತ್ಮಕಥೆ ಬಂದಿದೆ. ಹೇಳಿಕೊಳ್ಳುವುದು ಹಗುರ ಆಗುವ ಒಂದು ಮಾರ್ಗವಾದರೆ ಬರೆಯುವುದು ಹಗುರವಾಗುವ ಇನ್ನೊಂದು ಮಾರ್ಗವಾಗಿದೆ.

ಅದೇ ರೀತಿ ಶಾಂತ ಹುಬಳೀಕರ '೭೭ನೇ ವರ್ಷ ಹಿಂದಿನ ಸ್ಮೃತಿಗಳ ಸುರುಳಿ ಬಿಚ್ಚಿ ನೋಡುವಾಗ, ನನ್ನ ಜೀವನವು ಅತೀ ಸಾಮಾನ್ಯವೇನೂ ಅಲ್ಲ ಎಂದೆನಿಸುತ್ತದೆ. ಸಾದಾ ರೀತಿಯಿಂದ ಜೀವಿಸುವುದೂ ಕೂಡ "ನೇರವಾಗಿ ಸಾದಾ" ಇಲ್ಲ. ಯಾರ ಆಧಾರವೂ

ಇಲ್ಲದೇ. ಸಹಾಯವೂ ಇಲ್ಲದೇ ಹೇಗೆ ನಾನು ಜೀವಿಸಿದೆ? ದುಃಖದ ಎಷ್ಟು ತಿರುವನ್ನು ಅನುಭೋಗಿಸಿದ್ದೇನೆ. ನನ್ನ ಈ ಪರಿಸ್ಥಿತಿಗೆ ಕಾರಣ ಯಾರು ಅನ್ನುವುದನ್ನು ಜಗತ್ತು ತಿಳಿಯಬೇಕು. ಕಾರು, ಬಂಗಲೆ, ಒಡವೆಗಳು ಮಾನ ಸಮ್ಮಾನದಿಂದ ಮೊದಲುಗೊಂಡು ಅನಾಥ ವೃದ್ಧರಿಗಾಗಿ ನಡೆಯಿಸಿಕೊಂಡು ಬಂದ ಆಶ್ರಮದಲ್ಲಿ ಜೀವಿಸುವ ವರೆಗಿನ ಎರಡು ತುದಿಗಳ ಆಯುಷ್ಯ ಜೀವಿಸಿದ್ದೇನೆ ನಾನು. ಸಿನೆ ಸೃಷ್ಟಿಯಲ್ಲಿದ್ದೂ ವ್ಯಸನಗಳಿಂದ ದೂರವಿದ್ದೆ. ಮೋಹವನ್ನು ತಳ್ಳುತ್ತ ಬಂದೆ. ಆದರೆ ಈ ನನ್ನ ದೀನ ಅವಸ್ಥೆ ಹೇಗೆ ಆಯಿತು? ಈ ಪ್ರಶ್ನೆಗಳ ಉತ್ತರವೆಂದರೇ ಈ ನನ್ನ ಆತ್ಮಕಥನವು' ಎನ್ನುವಲ್ಲಿಯೂ ತನ್ನ ನೋವನ್ನು ಹೇಳಿಕೊಳ್ಳುವುದೇ ಆಗಿದೆ. ದು.ಸರಸ್ವತಿಯವರು–ಅಪ್ಪ ಅಮ್ಮನ ಬೆಚ್ಚಗಿನ ಪ್ರೀತಿಯಲ್ಲಿ ಬೆಳೆದು ದೊಡ್ಡವಳಾಗಿದ್ದು, ಕೆಲಸಕ್ಕೆ ಹೋಗಲ್ಲ ಎಂದರೂ ಅಪ್ಪ, ನಿನ್ನ ಕಾಲ ಮೇಲೆ ನೀನು ನಿಲ್ಲಬೇಕು ಅಂದಿದ್ದು ಕೆಲಸದಲ್ಲಿ ಮಾಡದ ತಪ್ಪಿಗೆ ಶಿಕ್ಷೆಯಾದದ್ದು. ಶಿಕ್ಷೆಯ ರೀತಿ, ಬದುಕಿನಲ್ಲಿ ಬಿದ್ದ ಪೆಟ್ಟುಗಳಿಂದ ಮುದುರಿ ಕುಳಿತು ಸತ್ತು ಹೋಗಬಾರದೇ ಎಂದುಕೊಂಡವಳು ಕ್ರಮೇಣ ಗಟ್ಟಿಯಾಗಿ ಪರಿಸ್ಥಿತಿಯನ್ನು ಎದುರಿಸುವ ತಾಕತ್ತು ಪಡೆದುಕೊಂಡದ್ದು ಬೇರೆಯವರ ವ್ಯಂಗ್ಯ ನುಡಿಗೆ ತಿರುಗುಬಾಣ ಬಿಟ್ಟದ್ದು. ಮನುಷ್ಯ ಸಹಜವಾದ "ಗೊತ್ತಿಲ್ಲದನ್ನು ಮಾತಾಡುತ್ತ ಆಡುತ್ತ ನಿಜವಾಗಿಸುವುದರಿಂದ ಸಿಗುವ ಥ್ರಿಲ್ ಏನು ಎಂಬ ಪ್ರಶ್ನೆ ಕಾಡಿದ್ದು ಇವೆಲ್ಲವೂ ತನ್ನ ನೋವನ್ನು ಹಂತಹಂತವಾಗಿ ಹೊರಹಾಕುವ ತಂತ್ರಗಳೇ ಆಗಿವೆ.

ಎಷ್ಟು ದುಃಖ ಅನುಭವಿಸಿದೆ! ಆ ದುಃಖಕ್ಕೆಲ್ಲ ಯಾರ್‍ಯಾರು ಕಾರಣ ಎಂಬುದನ್ನು ಜಗತ್ತು ತಿಳಿಯಬೇಕು. ಇಲ್ಲಿ ಜಗತ್ತು ತಿಳಿದು ಕೆಲವೊಮ್ಮೆ ಪ್ರಯೋಜನಕ್ಕೆ ಬರುವುದಿಲ್ಲ. ಕೆಲವೊಮ್ಮೆ ಅನುಕಂಪ ಸಿಗಬಹುದು. ಈ ಅನುಕಂಪದ ಮೂಲಕ ಸಮಾಧಾನವಾಗಬಹುದು. ಇನ್ನೊಂದು ಸಿನೆಮಾ ನಟರ ವರ್ಣರಂಜಿತ ಬದುಕು ನಿಜ ಜೀವನದಲ್ಲಿ ಇರಬೇಕಾಗಿಲ್ಲ. ಇರುವ ಸಾಧ್ಯತೆ ಕಡಿಮೆ ಎಂಬುದನ್ನು ಶಾಂತಾ ಅವರು ಹೇಳುತ್ತಾರೆ.

ಕುಂ.ವೀರಭದ್ರಪ್ಪರವರ ಆತ್ಮಕಥೆ ಇದಕ್ಕಿಂತ ತುಸು ಭಿನ್ನವಾಗಿದೆ. 'ಶಿಕ್ಷಕನಾಗಿ ಲೇಖಕನಾಗಿ ನಾನು ಕಂಡುಂಡ ಅನುಭವಗಳು, ಕೆಲವು ಕಡೆ ಊರುಗಳ, ವ್ಯಕ್ತಿಗಳ ಹೆಸರುಗಳನ್ನು ನಾನು ನನ್ನ ಒಳಿತಿಗಾಗಿ ಬದಲಿಸಿಕೊಂಡಿರುವೆನು. ಆದರೆ ಸತ್ಯ ಹೊರತು ಬೇರೇನೂ ಇಲ್ಲ. ದಿಗ್ಭ್ರಮೆ, ವಿಸ್ಮಯ, ಹತಾಶೆ ಮತ್ತು ಕುತೂಹಲ ಇವೆಲ್ಲ ಪ್ರತಿಯೊಂದು ಬರಹದ ನೇಪಥ್ಯದಲ್ಲಿವೆ. ಖುಷಿ ಜೊತೆಗೆ ಮತ್ತೇನನ್ನಾದರೂ ಓದಿನ ಮೂಲಕ ನೀವು ಕಂಡು ಕೊಂಡಲ್ಲಿ ನಾನು ಅನುಭವಿಸಿದ್ದಕ್ಕೂ, ಬರೆದದ್ದಕ್ಕೂ, ಸಾರ್ಥಕ'.[೧೦]

ಇಲ್ಲಿ ಕುಂ.ವೀ. ಆತ್ಮಕಥೆ ಹತಾಶೆ ಅವಮಾನದ ಜೊತೆಗೆ ತಾನು ಅನುಭವಿಸಿದ ವಿಸ್ಮಯ ದಿಗ್ಭ್ರಮೆ ನನ್ನಂತಹ ಹಲವು ಮಂದಿಗೆ ತಿಳಿಯಲಿ ಎನ್ನುವಲ್ಲಿ ತನ್ನ ಅನುಭವ ಹಂಚುವ ಕುತೂಹಲ ಕಾಣುತ್ತದೆ.

ಕಮಲಾದಾಸ್ ಅವರು "ಮೊದಲ ಗಂಭೀರ ಹೃದಯ ಬೇನೆಗೆ ಒಳಗಾದಾಗ ಇದನ್ನು ನಾನು ಬರೆಯತೊಡಗಿದೆ. ಬರವಣಿಗೆ ನನ್ನನ್ನು ಆಕಸ್ಮಿಕ ಸಾವಿನ ಭೀತಿಯಿಂದ ವಿಮುಖ ಗೊಳಿಸಿತೆಂದು ಡಾಕ್ಟರು ಬಗೆದರು. ಇದಲ್ಲದೆ ಆಸ್ಪತ್ರೆಯ ಬಿಲ್ಲನ್ನು ತುಂಬಬೇಕಿತ್ತಲ್ಲ? ಈ ತೆರನಾದ ಪುಸ್ತಕವನ್ನು ಧಾರಾವಾಹಿಯಾಗಿ ಪ್ರಕಟಿಸಲು ನನ್ನ ದುಂಬಾಲು ಬಿದ್ದದ್ದ ಪತ್ರಿಕೆಯೊಂದರ ಸಂಪಾದಕರಿಗೆ ತಂತಿ ಕೊಟ್ಟು ಬರಹೇಳಿದೆ. ಒಂದು ದಿನದ ನಂತರ ಸಂಪಾದಕರು ಪೂರ್ಣ ಸಂಭಾವನೆಯನ್ನು ಹಿಡಿದುಕೊಂಡೇ ಬಂದರು. ಅವರು ರಿಸ್ಕ್ ತೆಗೆದುಕೊಂಡಿದ್ದರು. ಏಕೆಂದರೆ ನಾನು ಸಾವಿನ ದವಡೆಯಿಂದ ಪಾರಾಗುವ ಭರವಸೆ ಇರಲಿಲ್ಲ. ಕೆಲವು ಅಧ್ಯಾಯಗಳಿಗಿಂತ ಹೆಚ್ಚಿಗೆ ಬರೆಯುವ ಸಾಧ್ಯತೆ ಕಾಣುತ್ತಿರಲಿಲ್ಲ. ಆದರೂ ನನ್ನ ಬಳಿ ಕುಳಿತು ನನ್ನ ಸೊರಗಿದ ಕೈ ಹಿಡಿದು ಆಶ್ವಾಸನೆ ಇತ್ತರು. ನಾನು ಬರೆಯಲು ಆರಂಭಿಸಿದಂತೆಯೇ ಬರವಣಿಗೆಯ ವಶಳಾದೆ. ಈ ಬರವಣಿಗೆ ನಾನು ಸಂಪಾದಕರಿಗಿತ್ತ ವಾಗ್ದಾನವನ್ನು ಪೂರೈಸಲಷ್ಟೇ ಬರೆದುದಲ್ಲ; ನನ್ನ ಬದುಕಿನ ರಹಸ್ಯಗಳನ್ನು ಬಯಲಾಗಿಸಿ, ನನ್ನನ್ನು ನಾನು ಖಾಲಿ ಮಾಡಿಕೊಂಡು, ನನ್ನ ಕಾಲ ಬಂದಾಗ ಪರಿಶುದ್ಧ ಅಂತರಂಗ ಹೊತ್ತು ಹೋಗಬೇಕಿತ್ತು. ಈ ಕೃತಿಗಾಗಿ ನಾನು ತೆತ್ತ ಬೆಲೆ ಅಪಾರ. ಆದರೂ ನಾನು ಬರೆದುದ್ದಕ್ಕೆ ಪಶ್ಚಾತ್ತಾಪವಿಲ್ಲ. ನಾನು ಅದೆಷ್ಟೋ ಪುಸ್ತಕಗಳನ್ನು ಬರೆದಿದ್ದೇನೆ. ಆದರೆ ಈ ಕೃತಿ ನನಗೆ ಕೊಟ್ಟಷ್ಟು ಆನಂದ ಬೇರಾವುದೂ ಕೊಟ್ಟಿಲ್ಲ–ಇಷ್ಟು ಮಾತ್ರ ಹೇಳಬಲ್ಲೆ"[೧೧]

ಕಮಲಾದಾಸ್ ಅವರು ಬರೆದ ಆತ್ಮಕಥೆಯ ಉದ್ದೇಶವನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಷ್ಟನ್ನು ಹೇಳಬಹುದು. ಆತ್ಮಕಥನಕಾರರ ಮನೋಭೂಮಿಕೆಯು ಆತ್ಮಕಥೆಯನ್ನು ಬರೆಯುವ ಹೊತ್ತಿಗೆ ತುಂಬ ಪ್ರಾಂಜಲವೂ, ಪಾರದರ್ಶಕವೂ ಆಗಿರುತ್ತದೆ. ಅವರ ಪ್ರಕಾರ ಅದು ಬಾಳಿನ ಕೊಳೆ ತೊಳೆದುಕೊಳ್ಳುವ ಪ್ರಕ್ರಿಯೆಯಾಗಿದೆ ವೇದನೆಯಿಂದ ಅಮರಿಕೊಂಡ ಸಾವಿನ ಭೀತಿಯ ಕೊಳೆ ತೊಳೆಯುವ ಕೆಲಸಕ್ಕೆ ಪ್ರೇರೇಪಿಸಿದಂತಿದೆ. ಮಾನವ ತನ್ನ ಅಂತರಂಗವನ್ನು ಬದುಕಿನುದ್ದಕ್ಕೂ ರಹಸ್ಯ ಸಂಗತಿಗಳನ್ನು ತುಂಬುವ ಬುಟ್ಟಿ ಆಗಿಸುತ್ತಾನೆ. 'ಕಾಲ ಬಂದಾಗ ಪರಿಶುದ್ಧ ಅಂತರಂಗ ಹೊತ್ತು ಹೋಗಬೇಕಿತ್ತು' ಎಂಬ ಮಾತು ಪ್ರಾಮಾಣಿಕತೆಯನ್ನು ಬಹಿರಂಗಪಡಿಸಿದರೂ ಈ ಅಂತರಂಗ ಶುದ್ಧಿಯ ವಿಚಾರವು ಬದುಕಿನ ದೀರ್ಘ ಅವಧಿಯಲ್ಲಿ ಅರಿವಿಗೆ ಬರಲಿಲ್ಲ ಎಂದು ತಪ್ಪೊಪ್ಪಿಗೆ ಹೇಳಿದಂತಿದೆ. ಆಳವಾದ ಪರಿಶೀಲನೆ, ಆತ್ಮವೀಕ್ಷಣೆ ಮತ್ತು ಆತ್ಮನಿರೀಕ್ಷಣೆಗಿಂತ ದೊಡ್ಡದಾದ ಆನಂದದಾಯಕ ಸಂಗತಿ ಬೇರಾವುದೂ ಇಲ್ಲ ಎಂಬುದು ಕಮಲಾದಾಸ್ ಅವರ

ಕಥನವನ್ನು ಅಭ್ಯಸಿಸುವಾಗ ಸ್ಪಷ್ಟವಾಗುತ್ತದೆ. 'ಸಾವಿನ ದಿವ್ಯ'ದ ಮುಂದೆ ಪೂರ್ತಿ ಸುರಿದು ಬಯಲಾಗುವ ಈ ಆತ್ಮನಿವೇದನೆ ಲೌಕಿಕ ಬದುಕಿನ ಆಧ್ಯಾತ್ಮಿಕ ಉನ್ನತಿಯ ಉದಾಹರಣೆಯಾಗಿದೆ.

ಆತ್ಮಕಥೆಯ ಉದ್ದೇಶ ಇಷ್ಟೇ ಎಂದು ಗೆರೆ ಕೊರೆದು ಹೇಳುವುದು ಕಷ್ಟ. ಇಲ್ಲಿ ಆರ್ಥಿಕ ಸಂಕಷ್ಟಕ್ಕೆ ಉತ್ತರ ರೂಪವಾಗಿ ಅಲ್ಲದೇ ಹೃದಯವನ್ನು ಖಾಲಿ ಮಾಡಿಕೊಂಡು ಅಂತರಂಗ ಶುದ್ಧಿಯಾಗಲೂ ಕೂಡ ಆತ್ಮಕಥೆ ಬಂದಿದೆ.

ಅನುಪಮಾ ನಿರಂಜನ ಅವರು, "ಎರಡನೆಯ ಬಾರಿಗೆ ಕ್ಯಾನ್ಸರ್‌ಗೆಂದು ನನಗೆ ಶಸ್ತ್ರಕ್ರಿಯೆಯಾದಾಗ ನೋವು, ದುಗುಡಗಳಿಂದ ನಾನು ಬಸವಳಿದಿದ್ದೆ. ಹೆಚ್ಚು ದಿನ ಬದುಕುವುದಿಲ್ಲ ಎಂಬ ಗ್ರಹಿಕೆಯಿತ್ತು. ಜೀವನದುದ್ದಕ್ಕೂ ಹೆಜ್ಜೆಹೆಜ್ಜೆಗೂ ಹೋರಾಟವೇ ನನಗಿದಿರಾಗಿತ್ತು. ವೈದ್ಯೆಯಾಗಿ, ಸಾಹಿತಿಯಾಗಿ, ಪತ್ನಿಯಾಗಿ, ಮಾತೆಯಾಗಿ ನಾನು ಉಂಡ ಸಿಹಿಕಹಿಗಳನ್ನು ನಾಲ್ಕು ಜನರ ಜೊತೆ ಹಂಚಿಕೊಂಡರೆ ನನ್ನ ಉಳಿದ ಬಾಳು ಸಹ್ಯವಾಗಬಹುದೇನೋ ಎಂದು ತೋರಿತು. ಹಾಗೆ ಬರೆಯತೊಡಗಿದ್ದು 'ನೆನಪು: ಸಿಹಿ–ಕಹಿ.'"[೧೨]

ಇದರ ಜೊತೆಗೆ ಅನುಪಮಾ ಅವರೇ ಬರೆದ ಇನ್ನೊಂದು ಕೃತಿ ಬರಹಗಾರ್ತಿಯ ಬದುಕು. ಅದರಲ್ಲಿ "ಇದು ನನ್ನೊಬ್ಬಳ ಕತೆಯಾಗುವುದಿಲ್ಲ. ನನ್ನ ಪೀಳಿಗೆಯ ಬರಹಗಾರ್ತಿಯರೆಲ್ಲರ ಕತೆಯಾಗಬಹುದು ಎನ್ನಿಸಿತು. ಮಹಿಳೆಯಾದ್ದರಿಂದ ನಮಗೆ ಅನೇಕ ಸಮಸ್ಯೆಗಳಿದ್ದವು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಶೋಷಣೆಗಳಿದ್ದವು. ತಾರತಮ್ಯವಿತ್ತು. ಅಪಮಾನಗಳಿದ್ದವು. ಅನಾನುಕೂಲತೆಗಳಿದ್ದವು ನಿರ್ಲಕ್ಷವಿತ್ತು. ಇವುಗಳ ಜೊತೆಯಲ್ಲಿ ಸೋಲು ಗೆಲುವುಗಳಿದ್ದವು, ದುಃಖ ಆನಂದಗಳಿದ್ದವು. ಇವನ್ನೆಲ್ಲಾ ದಾಟಿ ಬರಲು ಮತ್ತು ನಮಗುರಿವಿಲ್ಲದಂತೆಯೇ ಮುಂದಿನ ಪೀಳಿಗೆಗಳಿಗೆ ನೆಲ ಹದ ಮಾಡಲು ನಾವು ಅಗತ್ಯವಾದುದಕ್ಕಿಂತ ಹೆಚ್ಚು ಶ್ರಮ ಪಡಬೇಕಾಯಿತು. ಅಂಥಹ ಸಾಂಸ್ಕೃತಿಕ ಹೋರಾಟಗಳ ಪ್ರಾಮಾಣಿಕ ದಾಖಲೆಯೇ 'ಬರಹಗಾರ್ತಿಯ ಬದುಕು'"[೧೩]

ಅನುಪಮಾ ಆಗಲಿ, ಕಮಲಾದಾಸ್ ಆಗಲಿ ಬದುಕುವುದು ಖಚಿತವಿಲ್ಲವಾದಾಗ ಕೆಲವು ಸತ್ಯಗಳ ಪರಿಣಾಮವನ್ನು ಎದುರಿಸುವುದು ಸುಲಭವಾಗುತ್ತದೆ. ಬದುಕುವುದು ಖಚಿತವಾದಾಗ ಕೆಲವು ಸತ್ಯಗಳ ಪರಿಣಾಮವನ್ನು ಎದುರಿಸುವುದು ದುರ್ಭರವಾಗುತ್ತದೆ. ಬದುಕಿನ ಪ್ರವಾಸ ದೀರ್ಘವಾದಾಗ ಅದರಲ್ಲೂ ಮಹಿಳೆಗೆ ಕೆಲವು ಸತ್ಯ ಹೇಳಿದ ಪರಿಣಾಮ ಅರಗಿಸಿಕೊಳ್ಳಲು ಕಷ್ಟವಾಗುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಿಂದ ಹೆಚ್ಚಿನ ಸಂದರ್ಭಗಳಲ್ಲಿ ಬದುಕಿನಲ್ಲಿಯ ಅತ್ಯಂತ ಸಹಜವಾದದ್ದು, ಹೆಣ್ಣಿಗೆ ಅಪರಾಧಿ ಭಾವವನ್ನು ಹುಟ್ಟುಹಾಕಿದೆ. ಅನುಪಮ ಅವರ ಪ್ರಕಾರ ಸಾಹಿತಿ ಸಮುದಾಯದ ಭಾಗ. ಸಾಹಿತಿ ಪೂರ್ತಿಯಾಗಿ 'ಉತ್ತರದಾಯಿತ್ವ' ನಿಭಾಯಿಸಿದಾಗ

ಮಾತ್ರ ಆತನ/ಆಕೆಯ ಬಾಳು ಸಹ್ಯ ಇಲ್ಲವಾದ 'ಬರೆಹ' ಕೇವಲ ಭೂಷಣದ ಸಂತೆಯ ಸರಕು. ಜನರು ಸಾಹಿತಿಯ ಅನುಭವ ಪ್ರಮಾಣದ ಕೃತಿಗಳನ್ನು ಓದಿ ಮೆಚ್ಚುವ ಸಹೃದಯ ವರ್ಗವಾಗಿ ಮಾತ್ರ ಇದ್ದರೆ ಸಾಕು ಎಂಬ ಧೋರಣೆ ಸ್ವಾರ್ಥವಾಗುವುದರಿಂದಲೇ ಅನುಪಮ ತಾನು ಬದುಕಿನಲ್ಲಿ ನಿರ್ವಹಿಸಿದ ಎಲ್ಲಾ ಪಾತ್ರಗಳನ್ನು ಸಿಹಿ ಕಹಿಗಳನ್ನು ನಿವೇದಿಸುವ ನಿಸ್ವಾರ್ಥ ಸಮರ್ಪಣೆಯ ಕಾರ್ಯವನ್ನು ತಮ್ಮ ಆತ್ಮಕಥೆಯಲ್ಲಿ ಮಾಡಿದ್ದಾರೆ. 'ನೆನಪು ಸಿಹಿ ಕಹಿ'ಯಲ್ಲಿ ಕೃತಿಯನ್ನು ಓದುಗ ಸಮಾಜಕ್ಕೆ ಅಭಿಮುಖವಾಗುವ ಬಗೆ ಇದ್ದರೆ 'ಬರಹಗಾರ್ತಿಯ ಬದುಕು' ಆತ್ಮಕಥೆಯಲ್ಲಿ ಸಮಕಾಲೀನ ಲೇಖಕಿಯರಿಗೆ ಅಭಿಮುಖವಾಗುವ ಪರಿ ಇದೆ. ಸಾಹಿತ್ಯ ಸೃಷ್ಟಿ ಏಕಾಂತದ ಸೃಜನವಲ್ಲ. ಅದೊಂದು ಸಮಷ್ಟಿ ಕಾರ್ಯ. ಹೇಗೆಂದರೆ ಸಾಹಿತಿ ತಾನು ಬದುಕುವ, ಬರೆಯುವ ಕಾಲದ ಇತರ ಸಾಹಿತಿಗಳಿಂದ ಸಿದ್ದಾಂತ ಹಾಗೂ ಪಂಥಗಳಿಂದಲೂ ಪ್ರೇರಿತನಾಗಿಯೇ ಬರೆಯುತ್ತಾನೆ/ಳೆ. ಮಹಿಳಾ ಸಾಹಿತಿಯಾಗಿ ಮಹಿಳೆಯರೇ ಸಮಾನ ಸಂವೇದಿಗಳಾಗಿ ಎದುರಿಸಬೇಕಾದ ಸವಾಲು ಜವಾಬ್ದಾರಿಗಳು ಸಮಾನವಾಗಿರುವುದರಿಂದ ಅದು ತನ್ನೊಬ್ಬಳ ಆತ್ಮಕಥೆಯಾಗುವುದಿಲ್ಲ. ತನ್ನ ಪೀಳಿಗೆಯವರೆಲ್ಲ ಕತೆಯಾಗಬಹುದು ಅಂದರೆ ಆತ್ಮಕಥೆಯು ಸಮಷ್ಟಿ ನೆಲೆಯ ರಚನೆಯೆಂಬ ನಿಲುವು ಅನುಪಮ ಅವರದ್ದಾಗಿದೆ.

ಕಪ್ಪುಬಣ್ಣ ಮತ್ತು ಬಂಜೆ ಎನ್ನುವ ಹೀಯಾಳಿಕೆ ಜಾತಿ, ವರ್ಗಗಳನ್ನು ಮೀರಿಯೂ ಕೇವಲ ಹೆಣ್ಣು ಮಾತ್ರ ಅನುಭವಿಸುವ ನೋವನ್ನು ಸುಶೀಲ ರಾಯ್ ಹೇಳುತ್ತಾರೆ. ನೋವಿಗೆ ಯಾರೂ ಜೊತೆಯಾಗದಾದಾಗ ಬರವಣಿಗೆಯೇ ಸಂಗಾತಿ. ಈ ಅಂಶವನ್ನು ಶೈಲಜ ನಾಗರಘಟ್ಟ ಹೀಗೆ ಹೇಳುತ್ತಾರೆ. ಅವರೇ "ಅಂತರ್ಜಾತಿ ವಿವಾಹಿತಳಾಗಿ ನಾನು ಮನೆ ಬಿಟ್ಟೆ. ಆಗ ಒಂದು ಅರ್ಥದಲ್ಲಿ ಕುಟುಂಬ ಮತ್ತು ಊರಿನಿಂದ ಬಹಿಷ್ಕೃತಳಾದೆ. ಆಗ ನನ್ನೊಳಗೆ ನೆನಪುಗಳು ಚೀರಾಡತೊಡಗಿದವು. ಪ್ರತಿಕ್ಷಣವೂ ಸ್ಮೃತಿಹಿಂಸೆಗೆ ಒಳಗಾಗಿ ಕೃಶವಾಗತೊಡಗಿದೆ. ಚಲಿಸುವ ಹುಳುವಿನ ಮೇಲೆ ಮುತ್ತಿಕೊಂಡ ಇರುವೆಗಳ ಹಾಗೆ ನನ್ನನ್ನು ಕವಿದ ನೆನಪುಗಳಿಂದ ಸಾವಿನ ಹತ್ತಿರ ಹೋದೆ. ಆಗ ನನಗೆ ಸಾವಿನಿಂದ ಪಾರಾಗಲು ಹೊಳೆದದ್ದು ಅಕ್ಷರದ ಮೂಲಕ ನೆನಪುಗಳನ್ನು ಹೊರಹಾಕುವುದು. ಬರೆಯುತ್ತಾ ಹೋದಂತೆ ನನ್ನ ಅಮೂರ್ತ ಯಾತನೆ ಕ್ಷೀಣಿಸತೊಡಗಿತು. ಯಾರಿಗೂ ಕಾಣಿಸದಂತೆ ಜಾರಿದ ಕಣ್ಣೀರಿನ ಹಾಗೆ ಆಗಾಗ ಹುಟ್ಟಿದ ಸ್ಮೃತಿಗಳ ಕಥನವೇ ಈ ಕಿಚ್ಚಿಲ್ಲದ ಬೇಗೆ." ಎನ್ನುತ್ತಾರೆ. ಮತ್ತು ಮುಂದುವರೆಸುತ್ತಾ ಬರೆಯುವ ಸಂದರ್ಭಗಳಲ್ಲಿ ನೆನಪುಗಳು, ಅನುಭವವಾಗಿವೆ. ಅನುಭವ, ಅನುಭಾವದ ಮೌನವೊಂದನ್ನು ನನ್ನೊಳಗೆ ಹಡೆದು ನನಗೆ ಬದುಕುವ ಸ್ಥೈರ್ಯ ನೀಡಿವೆ. ಜಾತಿವಾದಿ ಸಮಾಜದ ಮೋಹವನ್ನು ನೀಗಿ ಜಾತ್ಯತೀತ ಬದುಕನ್ನು ಅನುಭವಿಸುವ ಚೈತನ್ಯ ನೀಡಿವೆ"[೧೪] ಎನ್ನುತ್ತಾರೆ. ಅಂದರೆ ಕಷ್ಟದ ಬದುಕು ಆತ್ಮಸ್ಥೈರ್ಯ ನೀಡಿ ಬದುಕುವ ಚೈತನ್ಯ ನೀಡಿದ ವಿವರವನ್ನು ಇಲ್ಲಿ ಕಾಣಬಹುದಾಗಿದೆ.

ಅನುಪಮಾ, ಶೈಲಜಾ ಕಮಲಾದಾಸ್ ದು. ಸರಸ್ವತಿ ಅಂತಹವರಿಗೆ ಸಾವಿನ ಮನೆಯ ಬಾಗಿಲು ಅನಿವಾರ್ಯವಾದಾಗ ಬದುಕಿಗೆ ಹಿಂದಿರುಗಲು ಬರವಣಿಗೆ ಒಂದೇ ಆಧಾರವಾಗಿದೆ. ಕತೆ ಕಾದಂಬರಿಗಳಿಗಿಂತ ಆತ್ಮಕಥೆಯ ಬರವಣಿಗೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಜೀವನೋತ್ಸಾಹ ಪಡೆಯುವುದಕ್ಕಾಗಿ ಕಮಲಾದಾಸ್, ಅನುಪಮಾ, ದು.ಸರಸ್ವತಿ, ಶೈಲಜ ಮುಂತಾದ ಲೇಖಕಿಯರಿಗೆ ಅಕ್ಷರವೇ ಆಸರೆಯಾಗಿದೆ.

ಅಗ್ನಿ ಶ್ರೀಧರ್ ಹೇಳುವ ಹಾಗೆ– "ನಿಜಕ್ಕೂ ನಾನೇಕೆ ಭೂಗತಜಗತ್ತಿನ ಅನುಭವಗಳನ್ನು ದಾಖಲಿಸಿದೆ? ಅಷ್ಟಕ್ಕೂ ನಾನೇಕೆ ಬರೆಯುತ್ತಿದ್ದೇನೆ? ಪ್ರತಿಯೊಬ್ಬ ಲೇಖಕನೂ ಈ ಪ್ರಶ್ನೆ ಎದುರಿಸಿರುತ್ತಾನೆ. ದಾದಾಗಿರಿಯ ದಿನಗಳು ನನ್ನ ಮೊದಲ ಪುಸ್ತಕ; ಅದರಲ್ಲಿ ಮೇಲಿನ ಸವಾಲುಗಳಿಗೆ ಉತ್ತರಿಸಲೇಬೇಕೆಂದು ಅನೇಕ ಮಿತ್ರರು ಒತ್ತಾಯಿಸುತ್ತಿದ್ದಾರೆ. ಆ ಪ್ರಶ್ನೆಗಳಿಗೆ ನಾನು ಉತ್ತರಿಸದಿರುವ ಸ್ವಾತಂತ್ರ್ಯವೂ ನನಗಿದೆ; ಉತ್ತರಿಸಿಲ್ಲವೆಂದು ಯಾರೂ ನನ್ನನ್ನು ದಂಡಿಸಲು ಸಾಧ್ಯವಿಲ್ಲ. ಆದರೆ ನಾನು ಉತ್ತರಿಸಲೇಬೇಕಾಗಿದ್ದಂತಹ; ಸಮರ್ಪಕವಾಗಿ ಉತ್ತರಿಸದಿದ್ದರೆ ಭೀಕರ ದಂಡನೆಗೆ ಒಳಗಾಗುವಂತಹ ಪ್ರಶ್ನೆಗಳನ್ನು ನಾನು ಎದುರಿಸಿದ್ದೇನೆ: ನೀನೇಕೆ ಈ ಕೃತ್ಯ ಮಾಡಿದೆ? ನೀನೇಕೆ ಫೋನ್‌ನಲ್ಲಿ ಹೆದರಿಸಿದೆ? ಅಟ್ಯಾಕ್‌ನಲ್ಲಿ ನಿನ್ನೊಡನೆ ಯಾರೆಲ್ಲ ಇದ್ದರು? ಹಲವಾರು ಬಾರಿ ಈ ಪ್ರಶ್ನೆಗಳ ಸುಳಿಯಲ್ಲಿ ನನ್ನನ್ನು ಮುಳುಗಿಸಿ ವಿಲಿವಿಲಿ ಒದ್ದಾಡಿಸಿದರು ಕಾನೂನಿನ ರಕ್ಷಕರು. ಅಷ್ಟು ಮಾತ್ರವಲ್ಲದೆ ಆ ಪ್ರಶ್ನೆಗಳು ನನ್ನನ್ನು ಒಳಗೆ ದಹಿಸತೊಡಗಿದವು. ಬರ್ನ್ ಆಗುತ್ತಿರುವ ಆತಂಕ ಕಾಡತೊಡಗಿತು. ನನಗೆ ಗೋಚರಿಸಿದ ದಾರಿ ಒಂದೆ. ಬದುಕನ್ನು ಬದುಕಿನ ಅನುಭವಗಳನ್ನು ಕಲೆಯನ್ನಾಗಿಸಲು ಯತ್ನಿಸುವುದು. ನನ್ನ ಬದುಕಿನಲ್ಲಿ ಜರುಗಿದ ಘಟನೆಗಳನ್ನು ಕಲೆಯ ವಸ್ತುವನ್ನಾಗಿ ಮಾರ್ಪಡಿಸುವುದು. 'ಕಲೆಯ ಶ್ರೇಷ್ಠತೆ ಇರುವುದು ವಸ್ತುಗಳ ಅಭಿವ್ಯಕ್ತಿಯಲ್ಲಿ, ವಸ್ತುಗಳ ಮೌಲ್ಯಮಾಪನದಲ್ಲಿ ಇಲ್ಲ'ವೆಂದು ಯಾರೊ ದಾರ್ಶನಿಕ ಹೇಳಿದ್ದ ಮಾತುಗಳು ನನ್ನ ಅನುಭವಗಳನ್ನು ದಾಖಲಿಸಲು ಪ್ರೇರಣೆಯಾದವು."[೧೫]

ಕಸವನ್ನು ರಸವಾಗಿಸಿ ಬದುಕು ಸಹ್ಯವಾಗಿಸಲು ಈ ಆತ್ಮಕಥೆ ಬಂದಿದೆ. ಬದುಕಿನಲ್ಲಿ ಎದುರಿಸಿದ ಹಲವಾರು ಸವಾಲುಗಳಿಗೆ ಸಮಾಜ ಪ್ರತಿಕ್ರಿಯಿಸಿದ ರೀತಿಗೆ ಉತ್ತರಿಸದಿದ್ದರೆ ಅವು ಕಾಡುತ್ತವೆ. ಎಲ್ಲರಿಗೂ ಒಂದೇ ಬಾರಿ ಉತ್ತರ ಕೊಡುವುದಕ್ಕಾಗಿ ಹಾಗೂ ಆ ತಳಮಳದಿಂದ ಹೊರಬರುವುದಕ್ಕೆ ಆತ್ಮಕಥೆ ಉತ್ತರವಾಗಿದೆ. ಬರೆಯುವುದೇಕೆ ಎಂಬ ಸಹೃದಯರ ಪ್ರಶ್ನೆಗೆ ಉತ್ತರ ನೀಡದಿರುವ ಸ್ವಾತಂತ್ರ್ಯ ತನಗಿದೆ ಎಂಬ ಧೈರ್ಯವನ್ನು ತೋರಿಸುವ ಅಗ್ನಿ ಶ್ರೀಧರ್, ತನ್ನನ್ನು ವಿಲಿವಿಲಿ ಒದ್ದಾಡಿಸಿದ, ಜೀವನಾನುಭವಗಳಿಗೆ ಕಲಾರೂಪ ಕೊಡಲು ಪ್ರಯತ್ನಿಸಿ

ಆತ್ಮಕಥೆ ಬರೆದಿದ್ದಾರೆ. ಆದರೆ ಮತ್ತೆಯೂ ಕಲಾಶ್ರೇಷ್ಠತೆಯನ್ನು ವಸ್ತುಗಳ ಅಭಿವ್ಯಕ್ತಿಗೆ ಮಾತ್ರ ಸೀಮಿತವೆಂದು ಹೇಳುತ್ತ ಅಭಿವ್ಯಕ್ತಿಯ ಮೌಲ್ಯಮಾಪನ ಅರ್ಥಾತ್ ವಿಮರ್ಶೆಯನ್ನು ತಿರಸ್ಕರಿಸಿದ್ದಾರೆ.

ಎಂ. ಎಸ್ ಪರಶಿವಮೂರ್ತಿಯವರು, "ಪರರ ದಿನಚರಿಯನ್ನು ಓದುವುದು ಅಪರಾಧ ಅನ್ನುವ ಸಭ್ಯತೆಯುಳ್ಳ ನನ್ನ ಮಕ್ಕಳಂತೂ ಅವನ್ನು ಓದುವುದು ಕನಸೇ ಸರಿ. ಅವರಿಗೆ ತಿಳಿಸಲು ಬಯಸಿದ್ದ ವಿಷಯಗಳು ಅವುಗಳಲ್ಲಿ ಹೇರಳವಾಗಿದ್ದವು. ಕಥೆಯ ರೂಪದಲ್ಲಿ ಬರೆದರೆ ಆಗ ಅವರು ಓದುವ ಸಾಧ್ಯತೆಯಿದೆ ಎಂದೆಣಿಸಿ, ದಿನಚರಿಗಳಿಂದ ಅಂತಹುವುಗಳನ್ನು ಹೆಕ್ಕಿ ತೆಗೆದು ಒಂದು ಪುಸ್ತಕ ಬರೆಯಬಾರದೇಕೆ? ಅಂತ ಅನ್ನಿಸಿತು–ಅದು ಒಂದು. ಎರಡನೆಯದು–ವಿದ್ಯಾಭ್ಯಾಸ ಮಾಡಬೇಕಿದ್ದ ಸಮಯದಲ್ಲಿ ವಿದ್ಯಾಭ್ಯಾಸ ಮಾಡದೆ, ಹೀಗೆ ಪ್ರೇಮ ಪತ್ರಗಳನ್ನು ಬರೆಯುತ್ತಾ ಕಾಲಹರಣ ಮಾಡಿದೆನಲ್ಲ ಅನ್ನುವ ಅಪರಾಧಿಪ್ರಜ್ಞೆ ನನ್ನನ್ನು ಕಾಡಿಸಿತು. ಇಷ್ಟೊಂದು ಪತ್ರಗಳನ್ನು ಬರೆಯಲು ತೆಗೆದುಕೊಂಡ ಸಮಯವನ್ನು ಓದುವುದರ ಕಡೆಗೆ ಹರಿಸಿದ್ದಿದ್ದರೆ, ನಾನೂ ಸಹಾ ಒಬ್ಬ ಡಾಕ್ಟರೋ, ಇಂಜಿನಿಯರೋ ಖಂಡಿತ ಆಗುತ್ತಿದ್ದೆನಲ್ಲ ಅಂತ ಅನ್ನಿಸಿತು. ನಲವತ್ತು ವರ್ಷಗಳ ಹಿಂದೆ ಬರೆದಿದ್ದ ಆ ಪತ್ರಗಳಲ್ಲಿ, ಕುತೂಹಲಕ್ಕೆ ಒಂದೆರಡನ್ನು ಹೆಕ್ಕಿ ತೆರೆದು ಓದಿದಾಗ, ಅನ್ನಿಸಿದ್ದೇ ಬೇರೆ–ಜೀವನದಲ್ಲಿ ಯಾವುದೂ ವ್ಯರ್ಥವಾಗುವುದಿಲ್ಲ ಅಂತ ಹೇಳುವುದು ನಿಜ ಅನ್ನಿಸಿತು. ಆ ಹದಿವಯಸಿನಲ್ಲೇ ನನ್ನಲ್ಲಿ ಸಾಕಷ್ಟು ರೂಪುಗೊಂಡಿದ್ದ ಬರವಣಿಗೆ ನನ್ನಿಂದ ಮರೆಯಾಗಲು ಸಾಧ್ಯವಿಲ್ಲ. ಅದನ್ನು ಮುಂಚೂಣಿಗೆ ತರುವ ಪ್ರಯತ್ನವನ್ನೇಕೆ ಮಾಡಬಾರದು? ನನ್ನಲ್ಲಿ ಹುದುಗಿರುವ ಬರೆಯುವ ಗೀಳನ್ನು ಈಗ ಸದುಪಯೋಗಿಸಿಕೊಂಡು ಮತ್ತೆ ಬರೆಯಲು ಯಾಕೆ ಪ್ರಾರಂಭಿಸಬಾರದು? ಅಂತ ಅನ್ನಿಸಿತು."[೧೭]

ವ್ಯರ್ಥವೆಂದು ಬಗೆದು ಹುಗಿದಿಟ್ಟ ಹಳೆಯ ಸಂಗತಿಗಳಿಂದ ಸೃಜನಶಕ್ತಿಯ ಸಂಚಲನದ ಪರಿಣಾಮವಾಗಿ 'ಕಾಲಹರಣ–ಉದ್ದೇಶ ರಹಿತ ಜೀವನ ತನ್ನದಾಯಿತಲ್ಲ' ಎಂಬ ನಕಾರಾತ್ಮಕ ಭಾವದಿಂದ ಧನಾತ್ಮಕ ಶಕ್ತಿ ಆತ್ಮಕಥೆಯ ರೂಪದಲ್ಲಿ ಪರಶಿವಮೂರ್ತಿಯವರಲ್ಲಿ ಪ್ರವಹಿಸಿದೆ. ತನ್ನಿಂದಾದ ತಪ್ಪುಗಳು ಬೇರೆಯವರಿಗೆ ಪಾಠವಾಗಲಿ, ಅವರ ಅನುಭವಕ್ಕಿಂತ ತನ್ನ ಅನುಭವ ದಿಂದಲೇ ಕಲಿಯಲಿ ಎಂಬ ಆಶಯ ಕೂಡ ವ್ಯಕ್ತವಾಗಿದೆ.

ನೆಬ್ಬೂರು ನಾರಾಯಣ ಭಾಗವತರು, "ಇಷ್ಟೆಲ್ಲ ಇರುವ ನನ್ನ ಸಂಸಾರದ ಸುಖ–ದುಃಖದ ಸುದ್ದಿಗೆ ಒಂದು ರೂಪ ಕೊಟ್ಟರೆ ಒಳ್ಳೆಯದು ಎಂದು ಅನ್ನಿಸಿದ್ದು ನಿಜ. ಅದಕ್ಕೆ ಕಾರಣವೂ ಇದೆ. ಏನೇನೂ ಇಲ್ಲದಿದ್ದ, ಅಲ್ಲದಿದ್ದ ನಾನೂ ಬದುಕನ್ನು ಹುಟ್ಟಿ ಸಾಯುವವರೆಗೆ ಸಮೃದ್ಧವಾಗಿ ಸಾಗಿಸಿದ್ದೇನೆನ್ನುವ ನೆಮ್ಮದಿ ಇದೆ. ಅದು ದಾಖಲಾದರೆ ಆಗಲಿ ಎಂಬ ಆಸೆ

ಉಂಟಾದರೆ ತಪ್ಪಲ್ಲವಲ್ಲ. ಅದೂ ಖಾಸಗಿಯಾದುದು. ಮತ್ತೆ ತೀರಾ ನಮ್ಮನ್ನು ಹಚ್ಚಿಕೊಂಡ ಒಡನಾಡಿ ಅಭಿಮಾನಿಗಳೂ ಸಂಬಂಧಿಕರೂ ಈತ ಹಾದಿ ಮೇಲೆ ಬಿದ್ದಿಲ್ಲ; ಬಹಳ ಸುಸಂಬದ್ಧವಾಗೇ ಬದುಕಿದ್ದಾನೆ ಎಂಬುದನ್ನು ತಿಳಿಯಲಿ. ಸಮಾಜದಲ್ಲಿ ಅನೇಕರ ಸಂಪರ್ಕ, ಸಂಬಂಧಕ್ಕೆ ಬಂದರೂ ಬೇಕಾದ್ದನ್ನು ಮಾತ್ರ ಬಳಸಿಕೊಂಡು ಒಬ್ಬ ಮನುಷ್ಯನಾಗಿ ಬಾಳಿದ್ದಾನೆ ಎಂಬ ಸಮಾಧಾನ ಅವರಿಗೆ ಆಗಲಿ. ಇದರಿಂದ ನನ್ನನ್ನು ಹಚ್ಚಿಕೊಂಡ ಜನರಿಗೂ ಒಂದು ತೃಪ್ತಿ. ಈ ಸಮಾಜದಲ್ಲಿ ಓಡಾಡುವಾಗ ಬೇಡದೇ ಇದ್ದವರ ಜತೆಗೂ ಒಡನಾಡಬೇಕಾದ ಸಂದರ್ಭ ಇರುತ್ತದೆ. ಅಂಥವರಿಂದೆಲ್ಲಾ ನಮಗೆ ಗೌರವ, ಲಾಭ ಸಿಗುತ್ತದೆ ಅನ್ನುವುದಕ್ಕಿಂತ ಹೆಚ್ಚು ಅಪಾಯ ಬರಬಾರದೆಂಬ ಕಾರಣಕ್ಕೆ ಒಡನಾಡಬೇಕಾಗುತ್ತದೆ ಬದುಕಿನಲ್ಲಿ ಯಾವುದು ಬೇಕೋ ಅದನ್ನಷ್ಟೇ ಆಯ್ಕೆ ಮಾಡಿಕೊಂಡು ನಾನು ನನ್ನ ಹಾದಿಯನ್ನು ಕಂಡುಕೊಂಡ ಪರಿ ಉಳಿದವರಿಗೂ ಮುಖ್ಯವಾಗಬಹುದು. ಯಾವುದೇ ಕ್ಷೇತ್ರದಲ್ಲಿ ಸಹಜವಾಗಿ ಒಳ್ಳೆಯದು ಕೆಟ್ಟದ್ದು ಎರಡೂ ಇರುತ್ತದೆ. ಎಚ್ಚರ ಇದ್ದ ವ್ಯಕ್ತಿ ತನಗೆ ಬೇಕಾದ್ದನ್ನು ಹೆಕ್ಕಿಕೊಂಡು ಬದುಕನ್ನು ರೂಪಿಸಿಕೊಳ್ಳುವ ಬಗ್ಗೆ ನನ್ನ ಜೀವನ ನಿದರ್ಶನ ಆಗಬಹುದು ಎಂಬ ನಂಬಿಕೆ ನನಗಿದೆ. ಅದಕ್ಕಾಗಿ ಈ ಪ್ರಯತ್ನ"[೯೭]

ಏನೇನೂ ಅಲ್ಲ ಅಂದುಕೊಂಡ ಒಬ್ಬ ಮನುಷ್ಯ ಚೆನ್ನಾಗಿ ಬದುಕಿದ್ದ ಎನ್ನುವುದು ಅವರ ಒಡನಾಡಿಗಳಿಗೂ, ಅಭಿಮಾನಿಗಳಿಗೂ ತಿಳಿಯಲಿ. ಕಣ್ಣಿಗೆ ಕಂಡಿದ್ದು ಮಾತ್ರ ಸತ್ಯವಲ್ಲ. ಪರಾಂಬರಿಸಿ ನೋಡಿದಾಗ ಸತ್ಯ ತಿಳಿಯುತ್ತದೆ. ಕೆಟ್ಟವರ ಜೊತೆ ಇದ್ದ ಮಾತ್ರಕ್ಕೆ ವ್ಯಕ್ತಿ ಕೆಟ್ಟವನಾಗಬೇಕಿಲ್ಲ. ಕೆಟ್ಟವರ ಜೊತೆ ಇದ್ದೂ ತನ್ನತನ ಕಾಪಾಡಿಕೊಂಡು ಏನನ್ನಾದರೂ ಸಾಧಿಸಬಹುದು ಎನ್ನುವುದಕ್ಕೆ ಉದಾಹರಣೆಯೋ ಎಂಬಂತಿದೆ. ಬೇರೆಯವರಿಗೆ ಮಾದರಿಯಾಗಲಿ ಎಂಬ ಉದ್ದೇಶ ನಾರಾಯಣ ಭಾಗವತರದಾದರೆ ಕಡಿದಾಳ್ ಮಂಜಪ್ಪನವರ ಉದ್ದೇಶವು ಇದಕ್ಕಿಂತ ಭಿನ್ನವಾಗಿಲ್ಲ.

ಕಡಿದಾಳ್ ಮಂಜಪ್ಪರವರು, "ಈ ಐದು ಶತಕೋಟಿ ಜನರಲ್ಲಿ ನಾನೊಬ್ಬ ಯಃಕಶ್ಚಿತ್ ವ್ಯಕ್ತಿ. ನಾನು ಭೂಹೀನ ಗೇಣಿದಾರನೊಬ್ಬನ ಮಗನಾಗಿ, ಬಡತನದಲ್ಲಿ ಹುಟ್ಟಿ, ಬಡತನದಲ್ಲಿ ಬೆಳೆದು, ಜೀವನದಲ್ಲಿ ಹಲವು ವಿಧವಾದ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದ್ದವನು. ಅನೇಕ ಎಡರು-ತೊಡರುಗಳನ್ನು ಎದುರಿಸಿದ್ದ ನಾನು ಅಂದು ಕಷ್ಟಪಟ್ಟಂತೆಯೇ ತಮ್ಮ ಜೀವನದಲ್ಲಿ ಇಂದು ಕಷ್ಟಪಡುತ್ತಿರುವ ಜನರಿಗೆ ನನ್ನ ಅನುಭವದಿಂದ ಅಲ್ಪಸ್ವಲ್ಪವಾದರೂ ಪ್ರಯೋಜನವಾಗಬಹುದೆಂಬ, ಕೆಲವರು ಮಿತ್ರರ ಒತ್ತಾಯದಿಂದಲೂ ನನ್ನ ಬಾಳಿನಲ್ಲಿ ಸಂಭವಿಸಿದ ಪ್ರಮುಖ ಘಟನೆಗಳನ್ನೊಳಗೊಂಡ ನನ್ನ ಸಂಕ್ಷಿಪ್ತ ಆತ್ಮಕಥೆಯನ್ನು ಬರೆಯಲಾರಂಭಿಸಿದ್ದೇನೆ."[೯೮]

ಕಡಿದಾಳ್ ಮಂಜಪ್ಪನವರು ಪ್ರಮುಖ ಘಟನೆಗಳನ್ನು ಒಳಗೊಂಡ ಸಂಕ್ಷಿಪ್ತ ಆತ್ಮಕಥೆ ಬರೆಯುವುದರಲ್ಲಿಯೇ ಬಾಳು ಪ್ರಮುಖ ಹಾಗೂ ಅಪ್ರಮುಖ ಎಂಬ ಭೇದದಲ್ಲಿ ಸೀಳಿಹೋಗಿ ಅಸಮಗ್ರತೆಯ ದೋಷ ಒಕ್ಕರಿಸಿಬಿಡುತ್ತದೆ.

ಎಚ್ ವಿಶ್ವನಾಥ ರವರು, "ಜಗತ್ತಿನ ಅತ್ಯಂತ ಎತ್ತರದ ಜನತಂತ್ರ ವ್ಯವಸ್ಥೆಯನ್ನು ಒಪ್ಪಿ, ಅಪ್ಪಿ ಆಡಳಿತ ಮಾಡುತ್ತಿರುವ ಭಾರತದೇಶದ ರಾಜ್ಯವೊಂದರ ಶಾಸನ ಸಭೆಯ ಸದಸ್ಯನಾಗಿ, ಸರ್ಕಾರದ ವಿವಿಧ ಇಲಾಖೆಯ ಸಚಿವನಾಗಿ ಗಳಿಸಿಕೊಂಡ ಎಲ್ಲ ಅನುಭವಗಳನ್ನು ನನ್ನನ್ನು ಬೆಳೆಸಿದ ಸಮಾಜದ ಜೊತೆ ಹಂಚಿಕೊಳ್ಳಬೇಕೆನಿಸಿತು. ಬದುಕಿನಲ್ಲಿ ಅನುಭವದ ಪಾತ್ರ ದೊಡ್ಡದು."[೧೯] ಯಾವುದೇ ಅನುಭವಗಳು ಕೂಡ ಸಮಾಜದ ಭಾಗವೇ ಆಗಿರುತ್ತದೆ.

ಅನುಭವಗಳನ್ನು ಮನುಷ್ಯನಿಗೆ ಯಾಕೆ ಹಂಚಿಕೊಳ್ಳಬೇಕು ಎನಿಸುತ್ತದೆ ಎಂದರೆ ಮನುಷ್ಯ ಸಂಘಜೀವಿ ಜೊತೆಗೆ ಭಾವನಾ ಜೀವಿಯೂ ಹೌದು. ಭಾವನೆಗಳ ಮೂಲಕವೇ ಮನುಷ್ಯ ಸುಖ ದುಃಖ ಅನುಭವಿಸುವುದು. ಮನುಷ್ಯ ಭಾವಾತೀತನಾಗುವುದು ಸಾಧ್ಯವಿಲ್ಲ. ಭಾವಾತೀತನಾದರೆ ಮನುಷ್ಯನಾಗಿರುವುದು ಸಾಧ್ಯವಿಲ್ಲ. ಸಮಾಜದಿಂದ ಪಡೆದ ಅನುಭವಗಳನ್ನು ಹಂಚುತ್ತಾ ಋಣ ತೀರಿಸುವ ಪರಿಯೂ ಹೌದು.

ಲಕ್ಷ್ಮಣ ಗಾಯಕವಾಡ, "ಬಾಲ್ಯದಿಂದಲೇ ನಾನು ನನ್ನ ಸುತ್ತಲಿನ ಈ ಉಚಲ್ಯಾ ಜನರ ದಾರಿದ್ರ್ಯ ಸಂಕಟ ವೇದನೆಗಳನ್ನೆಲ್ಲ ನೋಡುತ್ತ ಬಂದಿದ್ದೇನೆ. ಕ್ರಮೇಣ ನಾನೊಬ್ಬ ಕಾರ್ಯಕರ್ತನಾದೆ. ಈ ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬನಿಗೂ ಉಸಿರುಗಟ್ಟಿದಂತಾಗುತ್ತಿತ್ತು. ಅವರ ಈ ವ್ಯಥೆಯನ್ನು ಚರ್ಚೆ ಭಾಷಣಗಳ ಮುಖಾಂತರ ವ್ಯಕ್ತ ಪಡಿಸುತ್ತಿದ್ದೆ. ಮನುಷ್ಯರಂತೆ ಬದುಕಲು ನಮಗೂ ಹಕ್ಕಿದೆ. ಕಿಸೆಗಳ್ಳತನದ ಈ ವ್ಯವಸಾಯ ಬಿಟ್ಟು ಸ್ವಂತ ಶಕ್ತಿಯ ಮೇಲೆ ಬದುಕಬೇಕು, ಶಿಕ್ಷಣ ಪಡೆಯಬೇಕು. ಅನ್ಯಾಯದ ವಿರುದ್ಧ ಸಂಘಟಿತರಾಗಬೇಕೆಂದು ನಮ್ಮ ಜನರಿಗೆ ತಿಳುವಳಿಕೆ ನೀಡುತ್ತಿರುವ ಸಂದರ್ಭದಲ್ಲೇ ಸವರ್ಣೀಯರಿಗೆ, ಮಧ್ಯಮ ವರ್ಗದವರಿಗೆ, ಬುದ್ಧಿಜೀವಿಗಳಿಗೆ, ಪಟ್ಟಭದ್ರರಿಗೆ ನಮ್ಮ ಸಮಾಜದ ನೋವಿನ ಕತೆ ಗೊತ್ತಿಲ್ಲವೆಂಬ ಅರಿವು ನನಗಾಯಿತು. ಹೀಗಾಗಿ ಈ ಎಲ್ಲ ನೋವಿನ ಕತೆಯನ್ನು ಜನರೆದುರಿಗೆ ತೋಡಿಕೊಳ್ಳಬೇಕೆಂಬ ಪ್ರಯತ್ನವೇ ಈ ಬರವಣಿಗೆಯ ಉದ್ದೇಶ. ಪಟ್ಟಭದ್ರರು ತಮ್ಮ ಪೂರ್ವಗ್ರಹ ತೊರೆದು ನಮ್ಮ ಬಗ್ಗೆ ಮತ್ತೊಮ್ಮೆ ಯೋಚಿಸುವಂತಾಗಲಿ. ಜೊತೆಗೆ ಜಾತಿ ವ್ಯವಸ್ಥೆಯ ಬಗ್ಗೆ ಹೊಸ ಅರಿವು ಮೂಡಿಸಿಕೊಂಡವರು ಈ ಸಮಾಜದ ಬಗ್ಗೆ ಸ್ಪಷ್ಟ ನಿಲುವು ವ್ಯಕ್ತಪಡಿಸುವಂತಾಗಲಿ ಎಂಬುದೇ ಈ ವೇದನೆಯ ಹಿಂದಿನ ಉದ್ದೇಶವೂ ಆಗಿದೆ."[೨೦]

'ಉಚಲ್ಯಾ'ದ ವಿಶೇಷವೇನೆಂದರೆ ಇದು ಸಮುದಾಯದ ಕತೆ. ಒಂದು ಜನಾಂಗದ ಕತೆಯೇ ಹೊರತು; ಒಬ್ಬ ವ್ಯಕ್ತಿಯ ಕಥೆಯಲ್ಲ. ಅಂದರೆ ಆತ್ಮಕಥೆ ಕೇವಲ ವ್ಯಕ್ತಿಯ ಕತೆ ಅಲ್ಲದೇ ಸಮುದಾಯದ ಕತೆಯೂ ಹೌದು. ಕೆಳಜಾತಿಯ ಹೆಚ್ಚಿನ ಆತ್ಮಕಥೆಗಳು ಸಮುದಾಯದ ಕತೆಯೇ ಆಗಿವೆ.

ಬಿ ಡಿ ಜತ್ತಿಯವರು ತಮ್ಮ ಆತ್ಮಕಥೆಯಲ್ಲಿ ಹೀಗೆ ಹೇಳಿಕೊಂಡಿರುವರು, "ನಾನು ನನ್ನ ಜೀವನದಲ್ಲಿ ನನ್ನದೇ ಆದ ಆದರ್ಶಗಳನ್ನಿಟ್ಟುಕೊಂಡು ನನಗೆ ನಾನೇ ಮಾದರಿಯಾಗಬೇಕೆಂದು ನನ್ನ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನ ಪಟ್ಟಿದ್ದೇನೆ. ನನ್ನ ಜೀವನದ ಚರಿತ್ರೆಯನ್ನು ನನ್ನದೇ ಆದ ರೀತಿಯಲ್ಲಿ ಇದ್ದುದನ್ನು ಇದ್ದಂತೆಯೇ ಬರೆದಿದ್ದೇನೆ."[೨೧]

ಕೆಲವರಿಗೆ ಕೆಲವರು ಆದರ್ಶ ವ್ಯಕ್ತಿಗಳಿರುತ್ತಾರೆ. ಅವರ ಆದರ್ಶಗಳೇ ಕೆಲವೊಮ್ಮೆ ಮೇಲ್ಪಂಕ್ತಿಯಾಗಿರುತ್ತದೆ. ಆದರೆ ಇಲ್ಲಿ ಬೇರೆ ಯಾರೂ ಆದರ್ಶ ವ್ಯಕ್ತಿಯಾಗದೆ ಬೇರೆ ಯಾರನ್ನೂ ಆದರ್ಶಕ್ಕಾಗಿ ಅವಲಂಬಿಸದೆ ನನಗೆ ನಾನೇ ಆದರ್ಶ ವ್ಯಕ್ತಿಯಾಗಬೇಕೆಂಬ ಆದರ್ಶ ಇಲ್ಲಿದೆ. ಇಲ್ಲಿ 'ಅರಿವೇ ಗುರು' ತತ್ವ ಕೆಲಸ ಮಾಡಿದೆ.

ಬೇಬಿತಾಯಿ ಕಾಂಬಳೆಯವರು, "ಐವತ್ತು ವರ್ಷಗಳ ಹಿಂದಿನ ಹೊಲೆಯರ ಬದುಕು ಹೇಗಿತ್ತು. ಏನನ್ನು ಅನುಭವಿಸಬೇಕಿತ್ತು. ಗುಲಾಮಗಿರಿಯ ಸಂಕೋಲೆಯಲ್ಲಿ ಸಿಲುಕಿ, ಹೇಗೆ ಒದ್ದಾಡಬೇಕಾಗುತ್ತಿತ್ತು ಎಂಬುದು ನನ್ನ ಮಕ್ಕಳು–ಸೊಸೆ–ಮೊಮ್ಮಕ್ಕಳು ಅರಿಯಲೆಂಬ ಉದ್ದೇಶದಿಂದ ಬರೆದಿದ್ದೇನೆ. ಆ ಅಗ್ನಿದಿವ್ಯ ಭಾವೀ ಪೀಳಿಗೆಯವರಿಗೆ ಗೊತ್ತಾಗಬೇಕು. ಇಲ್ಲದಿದ್ದರೆ ಅಂಬೇಡ್ಕರ್ ಕೈಕೊಂಡ ಕಾರ್ಯ ಅರಿವಾಗುವುದಾದರೂ ಹೇಗೆ? ಈ ಹೀನ ಬದುಕನ್ನು ನಾವೂ ಸ್ವಸಂತೋಷದಿಂದ ಸ್ವೀಕರಿಸದ್ದಲ್ಲ. ಒಂದು ವಿಶಿಷ್ಟ ಸಮಾಜ ನಮ್ಮ ಮೇಲೆ ಹೇರಿದ್ದು. ಆದ್ದರಿಂದ ನಾಚಿಕೆ ಪಡುವಂತಹದೇನೂ ಇಲ್ಲ. ಇಂದು ನಾವೂ ಆ ಸಂಸ್ಕೃತಿಯ ಆಚೆಗೆ ಹೋಗಿ ಬದುಕುತ್ತಿದ್ದೇವೆ. ಭೀಮರಾವ ನಮಗೆ ಸ್ವಾತಂತ್ರ್ಯ ನೀಡಿದ. ತಮಗಿಂತಲೂ ಮುಂದುವರಿದ ಒಂದು ಜನಸಮುದಾಯವಿರುವವರು ಸವರ್ಣಿಯರಿಗದು ಬೇಕಾಗಿರಲಿಲ್ಲ. ಹೀಗಾಗಿ ಹಲವು ಬಂಧನದಲ್ಲಿ ನಮ್ಮನ್ನು ಸಿಲುಕಿಸಿದರು. ಭೀಮರಾವ ಬಂದು ಆ ಸಂಕೋಲೆಯನ್ನು ಕಿತ್ತೊಗೆದ. ನಮ್ಮನ್ನು ಇಂದು ಯಾವ ಸ್ಥಿತಿಗೆ ತಂದು ಮುಟ್ಟಿಸಿದ, ಈ ಹಿಂದೆ ನಾವು ಯಾವ ಸ್ಥಿತಿಯಲ್ಲಿದ್ದೆವು, ಈ ಬಿಡುಗಡೆಗೆ ಯಾರು ಕಾರಣ ಎಂಬುದು ತಿಳಿಯಲೆಂದೇ ಹಿಂದಿನ ಸತ್ಯ ಹೇಳಿದ್ದೇನೆ."[೨೨]

ಅಂಬೇಡ್ಕರರ ಸಾಮಾಜಿಕ ಪರಿವರ್ತನೆಯ ಮಹತ್ವವನ್ನು ಮರುನಿರೂಪಿಸುವ ಮಾಧ್ಯಮವಾಗಿ ತನ್ನ ಆತ್ಮಕಥೆಯನ್ನು ಬೇಬಿತಾಯಿ ಕಾಂಬಳೆ ಬಳಸಿಕೊಂಡಿದ್ದಾರೆ. ದಲಿತೋದ್ಧಾರದ

ರೂವಾರಿ ಕೇವಲ ಅಂಬೇಡ್ಕರ್ ಮಾತ್ರ ಎಂಬ ನಿಲುವನ್ನು ಹೊಂದಿದ್ದಾರೆ. ಈಗಿನ ದಲಿತರ ಸ್ಥಿತಿಯ ಹಿಂದಿನ ಹೋರಾಟ ಎಂಥದು ಎಂಬುದನ್ನು ತಿಳಿಸಲು ಆತ್ಮಕಥೆ ಮುಖ್ಯವಾಗಿದೆ.

ಪ್ರೊ.ಎಸ್.ಆರ್. ಗುಂಜಾಳರವರು, “ನಾನು ಬಾಳಿನಲ್ಲಿ ಕಂಡುಂಡ ಸಿಹಿ ಕಹಿಗಳನ್ನು ಪ್ರಸ್ತುತ ಆತ್ಮಚರಿತ್ರೆಯಲ್ಲಿ ವಿನಮ್ರತೆಯಿಂದ ಹೇಳಿಕೊಂಡಿದ್ದೇನೆ. ಕಷ್ಟಮಯವಾದ ನನ್ನೀ ಜೀವನ ಕತೆಯನ್ನು ಏಕೆ ಬರೆಯುತ್ತಿದ್ದೇನೆ? ಏಕೋ ಬರೆಯುತ್ತಿದ್ದೇನೆ. ಆ ಜೀವನದ ಘಟನೆಗಳಿಂದ ತುಂಬಿದ ನನ್ನ ಅನುಭವದ ಪಾತ್ರೆ ತುಳುಕುತ್ತಿದೆ. ತುಳುಕಿ ಹರಿದರೆ ಅದರಿಂದ ನನಗೊಂದು ಬಗೆಯ ಸಮಾಧಾನ, ತೃಪ್ತಿ, ಆನಂದ ಇಂತಹದೇ ಅನುಭವ ಒಬ್ಬಿಬ್ಬ ಓದುಗರಿಗೆ ಆದರೆ ಇನ್ನೂ ಒಳಿತು.”[೨೩]

ತನ್ನ ಆತ್ಮಕಥೆಯನ್ನು ಹೇಳುವಲ್ಲಿ ವಿನಮ್ರತೆ ಇದೆಯೇ ಹೊರತು ಅಹಂಕಾರವಿಲ್ಲ ಎಂಬುದು ಗುಂಜಾಳರ ಮಾತಿನಿಂದ ತಿಳಿಯುತ್ತದೆ. ಇಂಥದ್ದೇ ಉದ್ದೇಶಕ್ಕೆಂದು ಬರೆಯುತ್ತಿಲ್ಲವಾದರೂ ಅನುಭವದ ಪಾತ್ರೆ ತುಂಬಿದ ಮೇಲೆ ಹರಿಯಲೇಬೇಕಲ್ಲ. ಅದರಿಂದ ಸಮಾಧಾನವೂ ಇದೆ. ಬೇರೆಯವರಿಗೆ ಅದರಿಂದ ಅನುಕೂಲವಾದರೂ ಆಗಲಿ ಎಂಬ ಭಾವ ಇದೆ.

ಶಿವರಾಮ ಕಾರಂತರವರು, “ಒಂದೂವರೆ ವರ್ಷದ ಬಳಿಕ **ಸ್ಮೃತಿ ಪಟಲದಿಂದ** ಎಂಬ ಬರಹದ ಮೂರನೆಯ ಸಂಪುಟವನ್ನು ವಾಚಕರ ಮುಂದಿರಿಸುತ್ತಿದ್ದೇನೆ. ಅದರಿಂದೊಬ್ಬರಲ್ಲ ಒಬ್ಬರಿಗೆ ಸ್ವಲ್ಪವಲ್ಲ ಸ್ವಲ್ಪ ಪ್ರಯೋಜನ ಸಿಗಬಹುದು. ನನ್ನ ಜೀವನದ ಆಸಕ್ತಿಯ ಆರೆಂಟು ಪ್ರಧಾನ ಕ್ಷೇತ್ರಗಳನ್ನಾಯ್ದು ಅವುಗಳಿಗೆ ನಾನು ಆಕರ್ಷಿತನಾದ ಬಗೆಯನ್ನೂ, ಅವುಗಳ ವಿಚಾರದಲ್ಲಿ ನಾನು ತೊಳಲಾಡಿದ ಬಗೆಯನ್ನೂ, ಅವು ನನಗೆ ಕೊಟ್ಟ ಸಂತೋಷವನ್ನೂ, ಅಥವಾ ಇನ್ನಿತರ ಪ್ರಯೋಜನಗಳನ್ನು ಕುರಿತು ಬರೆಯುವ ಕಾಲದಲ್ಲಿ ನನಗೆ ತೋಚಿದಂತೆ, ಎಂದರೆ ಸ್ಮರಣೆಯ ಎಟುಕಿಗೆ ಸಿಕ್ಕಿದಂತೆ ಬಣ್ಣಿಸಿದ್ದೇನೆ. ಅದು ಅವೇ ವಿಷಯಗಳಲ್ಲಿ ಕುತೂಹಲವುಳ್ಳವರಿಗೆ ಪ್ರಯೋಜನವಾದೀತು ಎಂಬ ನಂಬುಗೆಯಿಂದ. ಅಷ್ಟಾಗದೆ ಹೋದರೂ, ಇದೂ ತಮ್ಮ ಪರಿಗಣನೆಗೆ ತಂದುಕೊಳ್ಳಬೇಕಾದ ವಿಷಯ ಎಂದು ಓದುಗರಿಗೆ ಅನಿಸಿದರೂ ಸಾಕು.

ವಿವಿಧ ಸಂದರ್ಭಗಳಲ್ಲಿ ಅಂಥವರು ನನ್ನ ಬದುಕಿಗೆ ಒಂದಲ್ಲ ಒಂದು ಸಂಗತಿಯಲ್ಲಿ ಸಂತೋಷವನ್ನು ಕೊಟ್ಟಿದ್ದಾರೆ. ಆ ಬದುಕು ಸಹನೀಯವಾಗುವುದಕ್ಕೆ ಪ್ರತ್ಯಕ್ಷವೂ ಆದ ಉಣಿಸನ್ನಿತ್ತಿದ್ದಾರೆ. ಅವರಿಲ್ಲದೆ ಹೋಗಿದ್ದರೆ ಇಂದಿನ ನಾನು ನಾನಾಗುತ್ತಿರಲಿಲ್ಲ. ಆ ಒಬ್ಬ ನಾನು ಸುತ್ತಣ ಸಾಮಾಜಿಕರಿಗೆ ಎಷ್ಟೊಂದು ಋಣಿಯಾಗಿದ್ದೇನೆ ಎಂಬುದನ್ನು ನಾನು ಮರೆಯುವಂತೆ ಇಲ್ಲ. ಇಷ್ಟು ಮಾತುಗಳನ್ನು ಹೇಳಿ ಸಮಾಜಕ್ಕೆ, ಅದರಲ್ಲಿಯೂ ಕನ್ನಡ

ಓದಬಲ್ಲ ಸಮಾಜಕ್ಕೆ, ನನ್ನ ಬದುಕಿನ ಅನುಭವಗಳ ಸಾರವನ್ನು, ಚಿಂತನೆಗಳನ್ನು ನಮ್ರನಾಗಿ ಅರ್ಪಿಸಿ ವಿರಮಿಸುತ್ತೇನೆ."[೨೪]

ಸಮಾಜ ತನ್ನನ್ನು ರೂಪಿಸಿರುವುದಕ್ಕೆ ಅದರ ಋಣ ತೀರಿಸಲು ಈ ಆತ್ಮಕಥೆ ಬಂದಿದೆ. ಅವರು ಏನಾಗಿದ್ದರೋ ಅದು ಸುತ್ತಣ ಸಮಾಜದಿಂದಾಗಿದೆ. ಆದ್ದರಿಂದ ಸಮಾಜ ನೀಡಿದ ಉಣಿಸಿಗೆ ಪ್ರತಿಯಾಗಿ ಅವರ ಬದುಕಿನ ಅನುಭವ ಸಾರವನ್ನು ಅರ್ಪಿಸುವ ಉದ್ದೇಶ ಕಾರಂತರದ್ದು.

ಭಾಗೀರಥಿ ಹೆಗಡೆಯವರು, "ಆತ್ಮಕಥನ ಬರೆಯುವುದು ಸ್ವಲ್ಪ ಕಷ್ಟದ ಕೆಲಸವೇ ಹೌದು ಯಾಕೆಂದರೆ ಯಾರೋ ವೈರಿಗಳೊಂದಿಗೆ, ವೈರಿ ದೇಶದೊಂದಿಗೆ ಯುದ್ಧಮಾಡುವುದು. ವೀರಾವೇಶದ ಮಾತಾಡುವುದು. ಕಾರಣವಲ್ಲದ ಕಾರಣಕ್ಕಾಗಿ ಹುಂಬ ಆತ್ಮಾಹುತಿ ಮಾಡಿಕೊಳ್ಳುವುದು ಸುಲಭ. ಆದರೆ ನಿಂತ ನೆಲದ ಪದರುಗಳೊಳಗಿನ ಹಿಂಸೆಯನ್ನು ನಮ್ಮವರೆಂದು ನಂಬಿದವರ ಕ್ರೌರ್ಯವನ್ನು ಬಯಲ ಬೆಳಕಿಗೊಡ್ಡುವುದು ತುಂಬಾ ಕಷ್ಟ. ಯಾಕೆಂದರೆ ನಾವು ಜೀವನವಿಡೀ ಅದೇ ವಲಯದೊಳಗೆ ಕುಟುಂಬದ ಚೌಕಟ್ಟಿನೊಳಗೆ ನೆರೆಹೊರೆ ಸಮಾಜದೊಂದಿಗೆ ಸಹಜ ಸಂಬಂಧವನ್ನಿಟ್ಟುಕೊಂಡೇ ಬದುಕಬೇಕಾಗುತ್ತದೆ. ಮರ್ಯಾದೆ ಎಂಬ ಮೂರಕ್ಷರ ಮಧ್ಯಮ ವರ್ಗದವರನ್ನು ಕಾಡುವಷ್ಟು ಬೇರೆಯವರನ್ನು ಕಾಡುವುದಿಲ್ಲ. ಜೊತೆಗೆ 'ಸಂಸಾರದ ಗುಟ್ಟು ವ್ಯಾಧಿ ರಟ್ಟು' ಎಂಬ ಗಾದೆಯೇ ಇದೆ. ಇಷ್ಟೆಲ್ಲ ಅನುಮಾನಗಳ ಜೊತೆಗೆ ಅಪ್ಪ, ಅಣ್ಣ, ಗಂಡ, ಮಗ ಮುಂತಾಗಿ ಮನೆಯ ಗಂಡಸರ ವಿರುದ್ಧ ಬರೆದರೆ ಉಂಡ ಮನೆಯ ಗಳ ಎಣಿಸಿದಂತಾಗಿ ಬಿಟ್ಟಿತೊ ಎಂಬ ಆತ್ಮ ನಿಂದನೆಯೂ ನಮ್ಮನ್ನು ಕಾಡಿಯೇ ಕಾಡುತ್ತದೆ."[೨೫]

ಬೇರೆಯವರ ಮೋಸ ಕ್ರೌರ್ಯವನ್ನು ಧೈರ್ಯವಾಗಿ ಹೇಳುವುದು ಒಂದು ರೀತಿಯಾದರೆ ನಮ್ಮವರ ಮೋಸ ಕ್ರೌರ್ಯ ಇವನ್ನೆಲ್ಲ ಬಯಲು ಮಾಡುವುದು ಕಷ್ಟ ಎನ್ನುತ್ತಾರೆ. ಮಹಿಳೆ ಹೇಳುವ ಸಂಗತಿಗಳು ಭೂತ, ವರ್ತಮಾನ, ಭವಿಷ್ಯಗಳ ಜೊತೆ ತಳುಕು ಹಾಕಿಕೊಂಡಿರುತ್ತದೆ. ಪುರುಷನ ದೋಷಗಳನ್ನು ಪ್ರಶ್ನಿಸಿದರೆ, ಬಯಲು ಮಾಡಿದರೆ, ಅವರೊಂದಿಗಿನ ಮುಂದಿನ ಅವಳ ಬದುಕು ಕಷ್ಟವಾಗುತ್ತದೆ. ಮಹಿಳೆಯಾಗಿ ಆತ್ಮಕಥೆ ಬರೆಯುವುದೇ ಕಷ್ಟ ಎಂಬ ತೀರ್ಮಾನ ಭಾಗೀರಥಿ ಹೆಗಡೆಯವರದ್ದಾಗಿದೆ. ಮರ್ಯಾದೆಯ ಕವಚವನ್ನು ಹೆಣ್ಣಿಗೆ ತೊಡಿಸಿ ಸಂಸಾರದ ಗುಟ್ಟನ್ನು ಒಳಗೇ ಇಟ್ಟುಕೊಳ್ಳಬೇಕೆಂಬ ಒತ್ತಡ ಮಹಿಳೆಗಿದೆ ಎನ್ನುತ್ತಾರೆ.

ಎಸ್ ಎಲ್ ಭೈರಪ್ಪರವರು, "ಆತ್ಮವೃತ್ತಾಂತ ಬರೆಯುತ್ತೇನೆಂಬ ಕಲ್ಪನೆಯೂ ನನಗಿರಲಿಲ್ಲ. ಬರೆಯುತ್ತೀರಾ? ಎಂದು ಮೂರು ವರ್ಷದ ಹಿಂದೆ ಪ್ರಭು ಕೇಳಿದ್ದರು. ಏನಿದೆ? ಬರೆಯುವಂಥದ್ದು,

ಕಾದಂಬರಿಗಳಲ್ಲಿಯೇ ನನ್ನ ಜೀವನದ ಒಳಸತ್ವವು ಅಭಿವ್ಯಕ್ತವಾಗಿಲ್ಲವೇ? ಅಲ್ಲಿ ವ್ಯಕ್ತವಾಗದ ಯಾವ ಗಹನಭಾವ ಇಲ್ಲಿ ಬರಲು ಸಾಧ್ಯ? ಅಂತ ಹೇಳಿದ್ದೆ. ಆದರೆ ಎರಡು ವರ್ಷದಿಂದ ಬರೆಯಬೇಕೆನ್ನಿಸತೊಡಗಿತು. ಒಂದು ವರ್ಷದಿಂದಲಂತೂ ಅದುಮಿಡಲಾರದ ಒತ್ತಡವಾಯಿತು. ಮನಸ್ಸಿನಲ್ಲಿರುವ ಎರಡು ಕಾದಂಬರಿಗಳ ವಸ್ತುವನ್ನು ಬದಿಗೆ ಸರಿಸಿ ನನ್ನನ್ನು ಮೊದಲು ಬರೆ, ನಾನು ಹೊರಬರುವ ತನಕ ಬೇರಾವುದನ್ನೂ ಬೆಳೆಯಗೊಡುವುದಿಲ್ಲ ಎಂಬ ಬಲವಂತ ಮಾಡತೊಡಗಿತು. ಇದೆಲ್ಲಿಯ ಪ್ರಾರಬ್ಧ, ಇದರಿಂದ ಬಿಡಿಸಿಕೊಳ್ಳುವುದು ಹೇಗೆ ಎಂದು ಪರಿತಪಿಸುವ ಸ್ಥಿತಿ ಬಂತು. ಈ ಒತ್ತಡವನ್ನು ನಿವಾರಿಸುವ ಒಂದು ಉಪಾಯದ ಸೂಚನೆಯನ್ನು ನಾಯಕರು ಹೇಳಿದರು: 'ಇನ್ನೂ ಹದಿಮೂರುವರ್ಷ ಕಳೆದು ನಿಮಗೆ ಎಪ್ಪತ್ತಾಗಲಿ ಆಗ, ಕಾದಂಬರಿಗಳನ್ನು ಬರೆಯುವ ಸಂಭವ ಕ್ಷೀಣಿಸಿದಾಗ ಬರೆಯುವಿರಂತೆ. ಸಶಕ್ತ ಕಾದಂಬರಿಗಳಿಗಾಗಿ ಬೆಳೆಯಬಲ್ಲ ಅನುಭವದ ತುಣುಕುಗಳು ಆತ್ಮವೃತ್ತಾಂತದ ನಿರೂಪಣೆಯಲ್ಲಿ ಒಂದೆರಡು ಪ್ಯಾರಾಗ್ರಾಫುಗಳಾಗಿ ಹೊರಬಂದು ನಷ್ಟವಾಗುವ ಸಂಭವವಿರುತ್ತೆ.' ಇದು ಸಾಧುವೆಂದು ಅನ್ನಿಸಿದುದು ಮಾತ್ರವಲ್ಲ, ಮನಸ್ಸಿಗೆ ಸೂಚನೆ ಕೊಟ್ಟುಕೊಂಡು ಒತ್ತಡವನ್ನು ಪರಿಹರಿಸಿಕೊಳ್ಳುವ ಸಾಧನವೂ ಆಯಿತು"[೨೬]

ಕತೆ ಕಾದಂಬರಿ ಕಾವ್ಯ ಬರೆಯುವ ಸೃಜನಶೀಲ ಲೇಖಕರಾದ ಮಾಸ್ತಿ, ಬೀಚಿ, ಶಿವರಾಮ ಕಾರಂತ, ವ್ಯಾಸರಾಯ ಬಲ್ಲಾಳ, ಕುವೆಂಪು ಮುಂತಾದವರು ತಮ್ಮ ಅನುಭವಗಳನ್ನು ಕಲಾಕೃತಿಯಲ್ಲಿ ತಂದರೂ ಅವುಗಳಿಗೆಲ್ಲ ಕಾರಣವೇನು ಮತ್ತು ಸಾಹಿತ್ಯ ಸಂಸ್ಕಾರಗಳ ದಾರಿಯಲ್ಲಿ ಒದಗಿ ಬಂದ ಅವಕಾಶಗಳನ್ನೆಲ್ಲ ಬರೆಯಲು ಮತ್ತು ವೈಯುಕ್ತಿಕ ಏರಿಳಿತಗಳನ್ನು ಹೇಳಲು ಆತ್ಮಕಥೆ ಮುಖ್ಯವಾಗಿದೆ.

ಗೋದಾವರಿ ಪರುಳೇಕರರವರು, ಆತ್ಮಕಥೆಯ ಬರವಣಿಗೆಯ ಬಗ್ಗೆ ಹೇಳುವ ಈ ಮಾತು ಮಹತ್ವಪೂರ್ಣವಾಗಿದೆ. "ಆದಿವಾಸಿಯರು ಹಸಿವಿನಿಂದ ಬಳಲುತ್ತಿದ್ದ ದಿನಗಳವು. ಮುಂಜಾನೆಯಿಂದ ದುಡಿದರೂ ಸೇರಿಗಿಂತ ಹೆಚ್ಚು ಭತ್ತ ಸಿಗುತ್ತಿರಲಿಲ್ಲ. ಅದನ್ನು ತೆಗೆದುಕೊಂಡುಹೋಗಿ ಕುಟ್ಟಿ ಅನ್ನಮಾಡಿ ತಿನ್ನಬೇಕಾಗುತ್ತಿತ್ತು. ಈ ಒಂದು ತುತ್ತಲ್ಲದೆ ಮತ್ತಾವುದೂ ಅವರಿಗೆ ಸಿಗುತ್ತಿರಲಿಲ್ಲ. ತಮ್ಮ ಜಮೀನ್ದಾರ, ತಮ್ಮ ಹಳ್ಳಿ–ಈ ಎರಡನ್ನುಳಿದರೆ ಅವರಿಗೆ ಬೇರೆ ಜಗತ್ತೇ ಇಲ್ಲ. ಕತ್ತರಿಸುವ ಸಲುವಾಗಿ ಸಾಕುವ ಕುರಿಗಳಂತೆ ಅವರ ಬದುಕು ಪ್ರತಿಭಟನೆಯೊಂದನ್ನೂ ಕಂಡುದಿಲ್ಲ. ಉಪವಾಸ ಕೆಡವಿದರೂ, ಜೀವ ತೆಗೆದರೂ, ಹೆಂಡತಿಯರನ್ನು, ಸೋದರಿಯನ್ನು ಅಪಹರಿಸಿದರೂ ಮೌನದಿಂದ ಅವರು ಸಹಿಸುತ್ತಿದ್ದರು. ಈ ರೀತಿಯ ಬದುಕಿನಲ್ಲಿ ದಿನಗಳನ್ನೂ ವರ್ಷಗಳನ್ನೂ ಕಳೆದಿದ್ದರು. ಮೂಕಪ್ರಾಣಿಗಳಂತೆ. ಅವರ ಬದುಕಿನಲ್ಲಿ ಆನಂದ, ವೈಚಿತ್ರ್ಯ

ರಸ, ಸ್ವಾತಂತ್ರ್ಯ ಯಾವುದೂ ಇರಲಿಲ್ಲ. ಆದರೆ ಅಂತರಾಳದಲ್ಲಿ ಅಸಮಾಧಾನ ಬೂದಿ ಮುಚ್ಚಿದ ಕೆಂಡದಂತೆ ಮುಸುಕಿಕೊಂಡಿತ್ತು. ಅವರಿಗೆ ಮಾರ್ಗದರ್ಶನ ಮಾಡಲು ಸಿದ್ಧರಾದೆವು. ನಮ್ಮ ಆಧಾರ ಸಿಕ್ಕಮೇಲೆ ಅವರಿಗೂ ತಾವೂ ಮನುಷ್ಯರು ಎನ್ನುವ ಎಚ್ಚರವಾಗತೊಡಗಿತು. ಮನುಷ್ಯರಂತೆ ಬಾಳಲು ತಮಗೂ ಹಕ್ಕಿದೆ ಎಂದು ತಿಳಿದ ಮೇಲೆ ಪ್ರತಿಭಟನೆಗೂ, ಪ್ರತೀಕಾರಕ್ಕೂ ಅವರು ಹೇಗೆ ಸಿದ್ಧವಾದರು ಎಂಬುದನ್ನು ನನ್ನ ಪ್ರತ್ಯಕ್ಷ ಅನುಭವಗಳಿಂದ ಹೇಳುವ ಪ್ರಯತ್ನ ಇಲ್ಲಿಯದು"[೨೭]

ಇಲ್ಲಿ ಗೋದಾವರಿ ಹೇಳುವ ಹಾಗೆ ಕುರಿಗಳಂತೆ ಬದುಕುತ್ತಿದ್ದ ಜನರಲ್ಲಿ ಮನುಷ್ಯರಿಗೆ ಸಿಗುವ ಎಲ್ಲ ಸವಲತ್ತುಗಳಿಗೂ ಇವರು ಅರ್ಹರು ಎಂದು ಮನವರಿಕೆ ಮಾಡುವಲ್ಲಿ ಲೇಖಕಿಯ ವೈಯಕ್ತಿಕ ಬದುಕಿಗಿಂತ ಸಮಷ್ಟಿ ಹಿತವೇ ಮುಖ್ಯವಾಗಿದೆ. ವೈಯಕ್ತಿಕಕ್ಕಿಂತ ಸಾಮಾಜಿಕ ಆಯಾಮವೇ ಮುಖ್ಯವಾಗಿದೆ.

ಶಿವರಾಮ ಕಾರಂತರು, "ಮೂಲತಃ ಬರಹಗಾರ ಇಲ್ಲವೆ, ಯಾವನೇ ಕಲಾವಿದ, ತನ್ನ ಮನಸ್ಸನ್ನು ಬಿಂಬಿಸಲು ಪ್ರಯತ್ನಿಸಬೇಕಾದುದು ಅವನ ಆತ್ಮ ಸಂತೃಪ್ತಿಗಾಗಿಯೇ. ಆತನೇನು ಮೂಕ ಜೀವಿಯಲ್ಲ; ಇತರ ಮಾನವರೂ ಹಾಗಿಲ್ಲ. ಆದುದರಿಂದ ಅವನ ಕೃತಿಗಳು, ಅವನಂತೆಯೇ ಅನುಭವ ಸಾಮ್ಯವುಳ್ಳ ಇತರ ವ್ಯಕ್ತಿಗಳಿಗೂ, ಅನುಭವಾಪೇಕ್ಷಿಗಳಿಗೂ ಪ್ರಯೋಜನ ಕೊಡಬಹುದು. ಪರ್ಯಾಯವಾಗಿ ಅವು ಸಂತೋಷವನ್ನೂ ಕೊಡಬಹುದು." ಇವರ ಈ ಮಾತಿಗೆ ಪ್ರತಿಕ್ರಿಯಿಸುವುದಾದರೆ, ಆತ್ಮತೃಪ್ತಿಗಾದರೆ ಬರೆದು ಇಟ್ಟುಕೊಳ್ಳಬಹುದಿತ್ತು. ಆದರೆ ಅದನ್ನು ಪ್ರಕಟಪಡಿಸುವ ಅಗತ್ಯವಿದೆಯೇ? ಪ್ರಕಟವಾಗಿದೆ ಎಂದರೆ ಅದರ ಉದ್ದೇಶ ಅದನ್ನು ಮೀರಿಯೂ ಇದೆ ಎಂದಾಯಿತು. ಮನುಷ್ಯ ಸಂಘಜೀವಿ ಎಂದರೆ ಭಾವನೆಗಳನ್ನು ಹಂಚಿಕೊಳ್ಳುವುದೇ ಆಗಿದೆ."[೨೮]

ಮಾಸ್ತಿ ವೆಂಕಟೇಶ್ ಐಯ್ಯಂಗಾರ್ರವರು, "ಹತ್ತು ಜನದ ದೃಷ್ಟಿಯಿಂದ ಒಂದು ಬದುಕು ದೊಡ್ಡದಲ್ಲದೇ ಹೋಗಬಹುದು. ಲೋಕ ಅವರ ಅನುಭವವನ್ನು ಅದು ದೊಡ್ಡದೆಂಬ ಕಾರಣದಿಂದ ನೋಡಲಾಗದಿರಬಹುದು. ಹೀಗಿದ್ದರೂ ಅದು ಈ ಅನುಭವದ ಸ್ವರೂಪವೇನೆಂದು ತಿಳಿಯುವುದೂ ನೋಡುವುದೂ ಒಂದು ದೃಷ್ಟಿಯಿಂದ ಒಳ್ಳೆಯದು. ದೊಡ್ಡವರ ಸಂಖ್ಯೆ ಕಡಿಮೆ. ಅವರ ಕಷ್ಟ ಸುಖವನ್ನು ಅವರು ನೋಡಿಕೊಳ್ಳಬಲ್ಲರು, ತಿಳಿದುಕೊಳ್ಳಬಲ್ಲರು. ಸಾಮಾನ್ಯರ ಸಂಖ್ಯೆ ಬಹು ದೊಡ್ಡದು. ಅವರ ಕಷ್ಟ ಸುಖವನ್ನು ಪ್ರಾಪಂಚಿಕರು ನೋಡಿಕೊಳ್ಳಬೇಕಾಗುತ್ತದೆ. ಸಾಮಾನ್ಯ ವ್ಯಕ್ತಿತ್ವದ ಸಾಮಾನ್ಯ ಅನುಭವವೇನು ಎನ್ನುವುದನ್ನು ತಿಳಿದೇ ಸಮಾಜ ಬಹು ಜನಕ್ಕೆ ಯಾವುದು ಒಳ್ಳೆಯದೆಂಬುದನ್ನು ಗ್ರಹಿಸಬಹುದು ಪ್ರಯೋಗಿಸಬಹುದು ನಡೆಸಬಹುದು. ಈ ಕಾರಣದಿಂದ

ಮಹನೀಯವಲ್ಲದಿದ್ದರೂ ಇಂಥ ಒಂದು ಬಾಳ್ವೆಯ ಅನುಭವವನ್ನು ಲೋಕ ಅರಿಯುವುದು ಅವಶ್ಯಕ. ಹಸುಳೆ ತನ್ನ ಪಾಡಿಗೆ ತಾನು ಕುಳಿತು. ತನ್ನ ಕಾಲಿನ ಬೆರಳುಗಳನ್ನು ಹಿಡಿದುಕೊಂಡು ಪರೀಕ್ಷಿಸುವಂತೆ ಮನುಷ್ಯನಿಗೆ ತನ್ನ ಜೀವನದ ವಿಷಯವನ್ನು ತಾನು ವಿಚಾರಿಸಿ ನೋಡುವುದು ಒಂದು ರೀತಿ. ಕೇಳಿ ಅಥವಾ ವಿನೋದ ವ್ಯವಹಾರ ಇಂಥ ಪರೀಕ್ಷೆಯಿಂದ ಪ್ರಯೋಜನ ಕೂಡ ಉಂಟು. ಎಲ್ಲರ ಜೀವನದಲ್ಲೂ ತಪ್ಪುಗಳಾಗುತ್ತವೆ. ಎಲ್ಲರ ಜೀವನದಲ್ಲೂ ಅದನ್ನು ಕಾಯುವ ಶಕ್ತಿಯ ಒಂದು ಕರುಣೆ ಅಲ್ಲಲ್ಲಿ ಕಂಡಿರುತ್ತದೆ. ಎಲ್ಲರ ಜೀವನವೂ ಮುಂದಕ್ಕೆ ಯಾವ ದಾರಿಯನ್ನು ಹಿಡಿಯುವುದೆಂದು ಯೋಚನೆ ಮಾಡಬೇಕಾಗುತ್ತದೆ. ಈ ಸಂತೋಷ ಈ ಪ್ರಯೋಜನವನ್ನು ಪಡೆಯಬೇಕೆಂದು ಪ್ರಯತ್ನ ಪಡುವುದು ಎಷ್ಟು ಸಣ್ಣ ಜೀವನಕ್ಕಾದರೂ ಒಳ್ಳೆಯದೇ. ಎಲ್ಲರ ಜೀವನವೂ ಈ ರೀತಿಯ ಪರಿಶೀಲನೆಯನ್ನು ಬರೆದಿಡಬೇಕಾದದ್ದಿಲ್ಲ. ಕೆಲವರು ಬರೆದಿಡುವುದು ಎಲ್ಲರ ಪರವಾಗಿ ಬರೆದಂತೆ ಆಗಬಹುದು. ಜೀವನ ಎಷ್ಟು ಮಟ್ಟಿಗೆ ಸಾಮಾನ್ಯ ರೀತಿಯದಾದರೆ ಅಷ್ಟು ಮಟ್ಟಿಗೆ ಅದು ಈ ರೀತಿಯ ಪ್ರಾತಿನಿಧ್ಯವನ್ನು ಸಾಧಿಸುತ್ತದೆ. ನಾನು ಪರಿಶೀಲಿಸುವ ಜೀವನ ಈ ರೀತಿಯಾಗಿ ಬಹುಜನದ ಜೀವನದ ಪ್ರತಿನಿಧಿ ಎಂದು ನನ್ನ ನಂಬಿಕೆ"[೨೫]

ಮಾಸ್ತಿಯವರು ಬದುಕು ದೊಡ್ಡದು ಚಿಕ್ಕದು ಎನ್ನುವುದಕ್ಕಿಂತ ಪ್ರತಿಯೊಂದು ಜೀವಿಯ ಬದುಕೂ ಮುಖ್ಯ ಎಂದಿದ್ದಾರೆ. ಆದರೂ ಆ ದೊಡ್ಡ ಬದುಕಿನ ಅನುಭವಕ್ಕಿಂತ ಸಣ್ಣ ಬದುಕಿಗೆ ತನ್ನ ಅನುಭವ ದೊಡ್ಡದಾಗಿರುತ್ತದೆ. ದೊಡ್ಡದಲ್ಲದಿದ್ದರೂ ಮುಖ್ಯವಾಗಿರುತ್ತದೆ. ಅವರೇ ಹೇಳುವ ಹಾಗೆ ಈ ಬದುಕು ಲೋಕದ ಬದುಕಿನಲ್ಲಿ ಒಂದು ಅಂಗ. ವಿಶ್ವದ ಜೀವನ ತನ್ನನ್ನು ತಾನು ನೋಡಿಕೊಳ್ಳುವುದಕ್ಕೆ ಈ ಕೋಟ್ಯಂತರ ಜೀವನದಲ್ಲಿ ಆಕಾರಗೊಂಡಿದೆ. ಅದರಲ್ಲಿ ಈ ಒಂದೊಂದು ಕಣವೂ ಒಂದು ಕೇಂದ್ರವಾಗಿದೆ.

ವಿಡಂಬಾರಿಯವರು, "ಇದು ನನ್ನ ಕತೆಯೊ, ವ್ಯಥೆಯೊ ಅಥವಾ ಕಷ್ಟಕಾಲದಲ್ಲಿ ನನಗೆ ಊಟಕೊಟ್ಟು, ಜ್ಞಾನಕೊಟ್ಟು, ಮರ್ಯಾದೆ ಕೊಟ್ಟು, ಬದುಕಲು ಬಿಟ್ಟು ಹೃದಯವಂತರ ಕೃತಜ್ಞತೆಯ ಪಟ್ಟಿಯೊ ಏನೆಂಬುದನ್ನು ಓದುಗರು ಹೇಳಬೇಕು ನಾನು ಹೆಚ್ಚು ಕಲಿತವನಲ್ಲ. ಶಾಲೆಯಲ್ಲಿ ಓದಿದ್ದು ಅತ್ಯಲ್ಪ. ಶಾಲೆಯ ಹೊರಗೆ ಸಿಕ್ಕ ಸಿಕ್ಕ ಪುಸ್ತಕ, ಪತ್ರಿಕೆ ಓದಿ ತಿಳಿದುಕೊಂಡದ್ದೇ ಹೆಚ್ಚು. ಬಲ್ಲವರಿಂದ ಒಂದೊಂದು ನುಡಿ ಕಲಿತು ಸರ್ವಜ್ಞನಾಗದಿದ್ದರೂ ಸಾಧಾರಣ ಬರೆಯಲು ಓದಲು ಕಲಿತಿದ್ದೇನೋ ನಿಜ. ಇಲ್ಲಿರುವ ತಪ್ಪು ತಡೆಗಳನ್ನು ಸಹೃದಯ ಓದುಗರು ಹೊಟ್ಟೆಯಲ್ಲಿ ಹಾಕಿಕೊಳ್ಳುವರೆಂಬ ಭರವಸೆಯ ಮೇರೆಗೆ ಇದನ್ನು ಪ್ರಕಾಶಕರ ಕೈಗೆ ಒಪ್ಪಿಸಿದ್ದೇನೆ. ಇಂಥ ಒಂದು ಬರಹದ ವಿಚಾರವನ್ನು ನನ್ನ ತಲೆಯಲ್ಲಿ ಮೊಟ್ಟ ಮೊದಲು ಬಿತ್ತಿದ ಹಿರಿಯರಾದ

ಯಶವಂತ ಚಿತ್ತಾಲರನ್ನು ಈ ಸಂದರ್ಭದಲ್ಲಿ ಮತ್ತೊಮ್ಮೆ ಸ್ಮರಿಸುವುದರೊಂದಿಗೆ ಈ ಪುಸ್ತಕದ ಪ್ರಕಟಣೆಯ ಕೆಲಸದಲ್ಲಿ ನೆರವಾದ ಎಲ್ಲರನ್ನೂ ಕೃತಜ್ಞತೆಗಳೊಂದಿಗೆ ನೆನೆಯುತ್ತೇನೆ."[೩೦]

ವಿಡಂಬಾರಿಯವರ ಕತೆ ಮತ್ತು ವ್ಯಥೆಯ ಜೊತೆ ಹೃದಯವಂತರ ಕೃತಜ್ಞತೆಯ ಪಟ್ಟಿಯೂ ಆಗಿದೆ. ಶಾಲೆಯಲ್ಲಿ ಕಲಿತದ್ದಕ್ಕಿಂತ 'ಸಾಮಾಜಿಕ ಶಾಲೆ'ಯಲ್ಲಿ ಕಲಿತದ್ದೇ ಹೆಚ್ಚು ಎನ್ನುತ್ತಾರೆ. ಹಾಗಾಗಿ ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸಲು ಆತ್ಮಕಥೆ ಬಂದಿದೆ.

ಜೋಳದ ರಾಶಿ ದೊಡ್ಡನಗೌಡ ರವರು, "ಬಹಿರಂಗದ ಅಂಗಸೌಂದರ್ಯವನ್ನು ನೋಡಿ ಕೊಂಡು, ತಿದ್ದಿಕೊಳ್ಳುವುದಕ್ಕೆ ಕನ್ನಡಿಯು ಸಹಕಾರಿಯಾದಂತೆ, ಅಂತರಂಗದ ಸೌಂದರ್ಯವನ್ನು ಕಂಡು ಅದರ ಕುಂದು-ಕೊರತೆ ಕಶ್ಮಲಗಳನ್ನು ತೊಡೆದು ಹಾಕಲು, ಸತ್ಪುರುಷರ ಬೋಧೆ, ನಡತೆಗಳಲ್ಲಿ ನಂಬಿಗೆ ಇಟ್ಟು, ಸಾಧನಾಕ್ರಮವನ್ನು ಕೈಕೊಂಡು, ಕೃತಾರ್ಥನಾಗಲು ಸಾರಸ್ವತದರ್ಪಣವು ಸಹಕಾರಿಯಾಗುತ್ತದೆ."[೩೧]

ಇದರಲ್ಲಿ ಮುಖ್ಯವಾಗಿ, ತನ್ನನ್ನು ತಾನು ಕಂಡುಕೊಳ್ಳುವುದೇ ಗುರಿಯಾಗಿದೆ. ದೇಹಕ್ಕೆ ಹೇಗೆ ಸೌಂದರ್ಯ ಮುಖ್ಯವೋ ಮನಸ್ಸಿಗೂ ಒಂದು ಸೌಂದರ್ಯವಿದೆ. ಅದು ನಡವಳಿಕೆಯಿಂದ ಮಾತ್ರ ಗೊತ್ತಾಗುತ್ತದೆ. ಅಂತರಂಗದ ಕೊಳೆ ತೊಳೆದುಕೊಂಡು ವೈಯುಕ್ತಿಕ ಶಾಂತಿ ತನ್ಮೂಲಕ ಸಾಮಾಜಿಕ ಶಾಂತಿ ಕಾಪಾಡಲು ಸಾಧ್ಯ ಎನ್ನುತ್ತಾರೆ.

ಮಹಿಳೆಯರಿರಲಿ ಪುರುಷರಿರಲಿ ಆರೋಗ್ಯ ಕೆಟ್ಟು ಬದುಕುವುದು ಖಚಿತವಿಲ್ಲದಾಗ ಮನಸ್ಸು ಬರವಣಿಗೆ ಕಡೆ ಹೊರಳಿದೆ. ಅನುಪಮಾ, ಕಮಲಾದಾಸ್ ಇವರಲ್ಲೂ ಇದನ್ನು ಗುರುತಿಸಬಹುದು. ಬರವಣಿಗೆ ಕಡೆ ಗಮನ ಹರಿಸಿ ಸಾವನ್ನು ಮುಂದೂಡಿದ್ದಾರೆ ಎಂದು ಹೇಳಬಹುದು.

ವೀರೇಂದ್ರ ಸಿಂಪಿ(ಸಿಂಪಿ ಲಿಂಗಣ್ಣ ಅವರ ಮಗ)ರವರು, "ನಮ್ಮ ತಂದೆಯವರ ಜೀವನ ಅತ್ಯಂತ ಕ್ರಿಯಾಶೀಲವೆಂಬುದನ್ನು ಈ ಆತ್ಮಕಥೆ ಸ್ಪಷ್ಟಪಡಿಸುತ್ತದೆ (ಬಡತನದ ಪರಿಸರದಲ್ಲಿ ಹುಟ್ಟಿ ಬೆಳೆದು, ಬಾಲ್ಯದಲ್ಲಿಯೇ ತಾಯಿತಂದೆಗಳನ್ನು ಕಳೆದುಕೊಂಡು ಶಬ್ದಶಃ ಪರದೇಶಿಯಾಗಿ, ಅಣ್ಣ ಅತ್ತಿಗೆಯರ ಆಳಾಗಿ ಮನೆಯಲ್ಲಿ ಕಸಮುಸುರೆ ತೊಳೆದು, ನೀರು ಹೊತ್ತು, ಸಂತೆಯಲ್ಲಿ ಧಾನ್ಯದ ದೊಡ್ಡ ದೊಡ್ಡ ಚೀಲಗಳನ್ನು ಹೊತ್ತು ಚಾಕರಿ ಮಾಡುತ್ತ ಬಾಲ್ಯ ಕಳೆದರು. ಇಂಥ ಬಡತನದ ದುಃಖ ದುಮ್ಮಾನದ ಪರಿಸರದ ಮಧ್ಯದಲ್ಲಿಯೂ ಒಂದು ನಿಶ್ಚಿತ ಗುರಿಯಿರಿಸಿಕೊಂಡು ಬಾಳಿದ ಅವರ ಜೀವನಕಥೆ ಇಂದಿಗೂ ಬಹಳಷ್ಟು ಓದುಗರಿಗೆ ಸ್ಫೂರ್ತಿಯ ಸೆಲೆಯಾಗಬಲ್ಲುದು. ಪ್ರಾಮಾಣಿಕ ಜೀವನ ನಡೆಸಬೇಕೆನ್ನುವವರಿಗೆ ಒಂದು ಮಾದರಿಯೂ ಆಗಬಲ್ಲುದು. 'ಶೂನ್ಯಾಂಕ ಮೇಲಕ್ಕೆ' ಎನ್ನುವುದು ಅವರ ಆತ್ಮಕಥೆಯ ಪ್ರಮುಖ ಆಶಯವಾಗಿದೆ"[೩೨]

ಕಷ್ಟ ನಷ್ಟದ ಬದುಕು ಬೇರೆಯವರಿಗೆ ಕೆಲವೊಮ್ಮೆ ಸಾಂತ್ವನ ನೀಡಬಹುದು. ಕಡಿಮೆ ಕಷ್ಟ ಅನುಭವಿಸಿದವರು ಹೆಚ್ಚು ಕಷ್ಟ ಅನುಭವಿಸಿದ್ದನ್ನು ನೋಡಿ ಸಾಂತ್ವನಗೊಳ್ಳಬಹುದು ಎನ್ನುವ ಆಶಯ ವೀರೇಂದ್ರ ಸಿಂಪಿಯವರದ್ದಾಗಿದೆ. ಅದಕ್ಕಾಗಿ ಸಿಂಪಿ ಲಿಂಗಣ್ಣನವರ ನಂತರ ಅವರ ಬರವಣಿಗೆಯನ್ನು ಪ್ರಕಟಿಸುವ ಮನಸ್ಸು ಮಾಡಿದ್ದಾರೆ.

ಎಚ್ ಎಸ್ ದೊರೆಸ್ವಾಮಿಯವರು, “ಪ್ರಸಂಗಗಳನ್ನೂ, ಮಾತುಕತೆಗಳನ್ನೂ ಹೇಳುವಾಗ ಅವು ನಡೆದ ದಿನ, ತಿಂಗಳು, ವರ್ಷಗಳನ್ನು ನಮೂದಿಸುವ ಗೋಜಿಗೆ ನಾನು ಹೋಗಿಲ್ಲ. ಆದರೂ ಅವನ್ನೆಲ್ಲ ಬಹುಮಟ್ಟಿಗೆ ಒಂದು ಕ್ರಮದಲ್ಲಿ ನಿರೂಪಿಸಿದ್ದೇನೆಂದು ಹೇಳಬಲ್ಲೆ. ಈ ನನ್ನ ನೆನಪಿನ ಸುರುಳಿ ಬಹಳ ಮೌಲಿಕವಾದದ್ದು ಎಂಬ ಭ್ರಾಂತಿ ನನಗಿಲ್ಲ. ಅವು ಓದಿಸಿಕೊಂಡು ಹೋಗುತ್ತವೆ ಎಂಬ ಭರವಸೆಯನ್ನು ಮಾತ್ರ ನೀಡಬಲ್ಲೆ. ಇದು ಗಟ್ಟಿ ಸಾಹಿತ್ಯವಲ್ಲ, ಪೆಪ್ಪರ್‌ಮೆಟ್ ಚೀಪಿದಷ್ಟೇ ತೃಪ್ತಿ ಕೊಡಬಲ್ಲದು ಎಂಬ ಅರಿವು ನನಗುಂಟು”[೩೩]

ಆತ್ಮಕಥೆಯಲ್ಲಿ ಕಾಲಾನುಕ್ರಮದಲ್ಲೇ ನಿರೂಪಿಸಿಲ್ಲ ಎನ್ನುವ ಇವರು ತಾವು ಸಮಾಜಕ್ಕೆ ತಾನೇನೋ ಕೊಡುಗೆ ಕೊಡುತ್ತಿದ್ದೇನೆಂಬ ಭ್ರಮೆಗೆ ಒಳಗಾಗಿಲ್ಲ. ಸರಾಗವಾಗಿ ಓದಿಸಿಕೊಂಡು ಪೆಪ್ಪರ್‌ಮೆಂಟು ಚೀಪಿದಷ್ಟೇ ಸಂತೋಷ ಕೊಡಬಲ್ಲದು ಎಂದಿದ್ದಾರೆ.

ಮಧುರಚೆನ್ನರು, “ನಾನು ಎಲ್ಲಕ್ಕಿಂತ ಮೊದಲಿಗೆ ತಮಗೆ ಅರಿಕೆ ಪಡಿಸುವದೇನೆಂದರೆ, ಅನುಭಾವಿಯೆಂದು ಅನಿಸಿಕೊಳ್ಳುವ ಸಲುವಾಗಿ ನಾನು ನನ್ನ ಆತ್ಮಕಥೆಯನ್ನು ಬರೆದಿಲ್ಲ; ಅನುಭಾವರಾಜ್ಯದ ಅಸ್ತಿತ್ವದ ಸತ್ಯಾಸತ್ಯತೆಯನ್ನರಿಯಲೆಳೆಸಿ ನನ್ನಂತೆ ಬಳಲಿ ಬೆಂದು ಬೆಂಡಾಗುತ್ತಿರುವ ತರುಣ ಜಿಜ್ಞಾಸುಗಳಿಗೆ ತಿಲಮಾತ್ರವಾದರೂ ಉಪಯೋಗವಾಗಬೇಕೆಂಬ ಹೃದಯದ ಒಂದು ಉರ್ಮಿಯೇ ಹೊರತು ಇದಕ್ಕೆ ಅನ್ಯ ಅಹಂಕಾರದ ಸೋಂಕು ಲೇಶಮಾತ್ರವೂ ಇಲ್ಲವೆಂದು ನಾನು ಸತ್ಯಸತ್ಯವಾಗಿ ಹೇಳುತ್ತೇನೆ. ಹೀಗೆಂದೊಡನೆ ನನ್ನಲ್ಲಿಯ ಅಹಂಕಾರವು ಸಂಪೂರ್ಣವಾಗಿ ಲಯವಾಗಿದೆಯೆಂದು ನಾನು ಪ್ರತಿಪಾದಿಸುವೆನೆಂದು ತಾವು ತಿಳಿದುಕೊಳ್ಳ ಬಹುದು. ಹಾಗೇನೂ ಇಲ್ಲ, ಅದರ ವಿಷದ ಹಲ್ಲುಗಳು ಮಾತ್ರ ಬಿದ್ದುಹೋಗಿವೆಯೆಂದು ಸಂದೇಹವಿಲ್ಲದೆ ಹೇಳಬಲ್ಲೆನಾದರೂ ಅದರ ಮೊಳಕೆಯೇ ಮುರಿದುಹೋಗಿದೆಯೆಂದು ನಾನು ಸರ್ವಥಾ ತಿಳಿದುಕೊಂಡಿಲ್ಲವೆಂದು ತಮಗೆ ಪುನಃ ಪುನಃ ನಿವೇದಿಸದಿರಲಾರೆನು. ಆದರೆ ಇಲ್ಲಿ ನಾನು ಹಾಗೆ ಹೇಳಿದುದರ ಅರ್ಥವು ಇಷ್ಟೇ: ಅದೇನೆಂದರೆ ಅನುಭಾವ ಶಿಖರದ ಮೇಲೆ ಏರಬೇಕೆಂಬ ಆಶೆ ನನಗಿದೆಯೇ ಹೊರತು ಏರಿದವನೆಂದು ಅನಿಸಿಕೊಳ್ಳುವುದಕ್ಕೆ ನಾನಿದೆಲ್ಲಾ ಆಟವನ್ನು ಹೂಡಿಲ್ಲ. ನನ್ನ ನಾಡಿನ ಅಣ್ಣ ತಮ್ಮಂದಿರಿಗೆ ನನ್ನ ಈ ಮಾತಿನ ಮನವರಿಕೆಯಾಗದೆ ಹೋದರೆ ನನ್ನ ಈ ಸರ್ವಶ್ರಮವು ವ್ಯರ್ಥವೆಂಬುದು ನನಗೆ ತುಂಬಾ ತಿಳಿದ ಮಾತು. ನನ್ನ

ನಾಡಿನ ನವ ಅಧ್ಯಾತ್ಮಿಗಳ ದಾರಿಯ ದಣಿವು ಆರಿ ಅವರಲ್ಲಿ ತುಸುವಾದರೂ ಮುಂದಿನ ಆಶೆ ಭರವಸೆ ಹುಟ್ಟುವಂತಾದರೆ ನನ್ನ ಸರ್ವ ಶ್ರಮವು ಸಾರ್ಥಕವಾದಂತಾಗುವುದು"[೩೪]

ಈ ಪತ್ರ ಬರೆಯಲು ಕಾರಣವೇನೆಂದರೆ ಅಂತ ಬರೆಯುವವರಿದ್ದಾರೆ. ಅದೇ ರೀತಿ ಆತ್ಮಕಥೆ ಬರೆಯುವ ಉದ್ದೇಶವೇನೆಂದು ಆತ್ಮಕಥೆಯೇ ಕಾರಣ ಹೇಳುತ್ತದೆ. ಈ ರೀತಿ ಎರಡೂ ತರದ ಆತ್ಮಕಥೆಗಳಿವೆ. ಉದ್ದೇಶ ಹೇಳಿ ಬರೆಯುವ ವಿಧಾನ ಒಂದಾದರೆ ಉದ್ದೇಶದ ಬಗ್ಗೆ ಬರೆಯದೆ ಆತ್ಮಕಥೆ ಹೇಳುವ ವಿಧಾನ ಇನ್ನೊಂದು. ನಾನೊಬ್ಬ ಕಿರಿಯನೆಂದು ನಿವೇದಿಸಿಕೊಳ್ಳುತ್ತಾ ತಾನು ಆತ್ಮಕಥೆಯನ್ನು ಬರೆದ ಕಾರಣವನ್ನು ಮಧುರಚೆನ್ನರು ವಿನಯದಿಂದ ಬರೆಯುತ್ತಾರೆ.

ವೀಣಾ ಬನ್ನಂಜೆ, "ಒಂದು ನಾವೆ ನಮ್ಮನ್ನು ಆ ದಡಕ್ಕೆ ಮುಟ್ಟಿಸಿತು. ನಾವೆಯ ಕೆಲಸ ಮುಗಿಯಿತು. ದಡ ಮುಟ್ಟಿಸಿದ್ದಕ್ಕೆ ಕೃತಜ್ಞತೆಯೆಂದು ನಾವದನ್ನು ಹೊತ್ತು ನಡೆಯುವುದಿಲ್ಲ. ಹೊತ್ತು ನಡೆದರೆ ಅನಗತ್ಯ ಹೊರೆ. ಆದರೆ ಕಾಲಿನಿಂದ ಒದ್ದು ಸಾಗಬಾರದು. ದಡಕ್ಕೆ ಮುಟ್ಟಿದ್ದನ್ನು ಮನತುಂಬ ಸ್ಮರಿಸಿ, ವಂದಿಸಿ ಬಂದ ಕೆಲಸ ಮುಗಿಸಬೇಕು. ತಂದೆ ತಾಯಿಯು ನಮ್ಮನ್ನು ಇನ್ನೊಂದು ದಡಕ್ಕೆ ತಂದು ಮುಟ್ಟಿಸುವ ನಾವೆಗಳ. ಯಾವುದೋ ಮಹದುದ್ದೇಶದಿಂದ ಈಚೆಯ ದಡಕ್ಕೆ ತಂದಿದ್ದಾರೆ. ಆ ನಾವೆಗೆ ವಂದಿಸಿ ಮುಂದಿನದಕ್ಕೆ ಸಮರ್ಪಿಸಿಕೊಂಡು ನಡೆಯಬೇಕು. ನಾವೆಯಿಂದ ಇಳಿಯುವುದಿಲ್ಲ ಎಂದರೆ ಮೋಹವಾದೀತು, ಒದ್ದು ಸಾಗುವುದು ಎರಡು ಬಗೆವ ದ್ರೋಹ. ಚೇತನವನ್ನು ಹುಟ್ಟಿಸಿದ ತಂದೆ ತಾಯಿಯರನ್ನು ಅರಸಿ ನಡೆದು ಸಮರ್ಪಿಸಿಕೊಂಡರೆ ಮುಕ್ತಿ. ಮತ್ತೆ ಹುಟ್ಟು ಸಾವುಗಳಿಲ್ಲ. ತಂದೆ ತಾಯಿ ಎಂಬ ಎರಡು ಬೇಳೆ ಕೂಡಿ ಕಾಳಾಗಿ ಗರ್ಭದಲ್ಲಿ ಮಗುವನ್ನು ಬೆಚ್ಚಗೆ ಕಾಯ್ದಿವೆ. ತಂದೆ ತಾಯಿಯ ಬೆಚ್ಚಗೆಯನ್ನೇ ನೆಮ್ಮಿದರೆ ಒಳಗಿನ ಮಗುವಿಗೆ ಬೆಳವಣಿಗೆಯೇ ಇಲ್ಲ. ಮಗುವಿಗೆ ಎಚ್ಚರ ಮೂಡಿದ ದಿನ, ಅದು ಬಿದ್ದ ನೆಲವನ್ನು ಕಾಲಿನಿಂದ ಒದೆಯದೆ ಪ್ರೀತಿಯಿಂದ ತನ್ನನ್ನು ಆ ನೆಲಕ್ಕೆ ಸಮರ್ಪಿಸಿಕೊಳ್ಳುತ್ತದೆ. ಮುಂದೆ ನೆಲದ ಗರ್ಭದಲ್ಲಿ ಕಾಲೂರಿ ತಂದೆ ತಾಯಿಯನ್ನು ಪಕ್ಕಕ್ಕೆ ಹರಿದುಕೊಂಡು ತಾನು ಮುಗಿಲೆತ್ತರಕ್ಕೆ ಬೆಳೆಯುತ್ತದೆ."[೩೫]

ಜನ್ಮಕ್ಕೆ ಬಂದ ಮೇಲೆ ಕೇವಲ ಲೌಕಿಕ ಮೋಹಕ್ಕೆ ಅಂಟಿಕೊಂಡರೆ ಅದು ಅನಗತ್ಯ ಹೊರೆ. ಹಾಗಂತ ತಿರಸ್ಕರಿಸುವುದಲ್ಲ. ಈ ಜನ್ಮಕ್ಕೆ ಒಂದು ಉದ್ದೇಶ ಇರುತ್ತದೆ. ಅದರ ಕಡೆ ಗಮನ ಕೊಡಬೇಕು. ಇದು ಆತ್ಮದ ಉದ್ದೇಶವಾಗಿದೆ.

ಅಬ್ದುಲ್ ಕಲಾಮ್ರವರು, "ಇದು ಕೇವಲ ನನ್ನ ಕಥೆ ಮಾತ್ರವಲ್ಲ, ತಾಂತ್ರಿಕ ಮುನ್ನಡೆಗಾಗಿ ಆಧುನಿಕ ಭಾರತ ನಡೆಸಿದ ಸೋಲು-ಗೆಲುವುಗಳ ಸತತ ಹೋರಾಟದ ಚಿತ್ರಣವೂ ಹೌದು.

ರಾಷ್ಟ್ರೀಯ ಆಶೋತ್ತರ ಮತ್ತು ಸಾಂಘಿಕ ಪ್ರಯತ್ನಗಳ ಕಥೆಯೂ ಹೌದು. ವೈಜ್ಞಾನಿಕ ಕ್ಷೇತ್ರದಲ್ಲಿ ಸ್ವಾವಲಂಬನೆ ಮತ್ತು ತಾಂತ್ರಿಕ ಶಕ್ತಿ ಸಾಧಿಸುವ ಭಾರತ ದೇಶದ ಸಾರ್ಥಕ ಪ್ರಯತ್ನಗಳ ಒಂದು ಪಕ್ಷಿನೋಟವೂ ಹೌದು.”[೩೬]

ಇಲ್ಲಿ ಆತ್ಮಕಥೆ ವ್ಯಕ್ತಿಯ ಕಥೆಗಿಂತ ಸಾಮಾಜಿಕ, ರಾಷ್ಟ್ರೀಯ ಹಾಗೂ ವೈಜ್ಞಾನಿಕ ಬೆಳವಣಿಗೆಯ ಕಥೆಯೂ ಆಗಿದೆ. ಅಲ್ಲದೇ ದೇಶದ ಇತಿಹಾಸವನ್ನೂ ತಿಳಿಸುವ ಕಥೆಯೇ ಆಗಿದೆ.

ಕೃಷ್ಣ ಹತೀಸಿಂಗ್(ನೆಹರೂ ಸಹೋದರಿ)ರವರು, “ಕಳೆದ ಆಗಸ್ಟ್ ತಿಂಗಳ ಅಮಂಗಳದ ಭಾನುವಾರ ಆಕೆಯ ಇಡೀ ಕುಟುಂಬವೇ ಆದಿಯಾಗಿ ಹಲವಾರು ದೇಶಸೇವಕರು ಸೆರೆಮನೆಗೆ ನಡೆದರು. ಅಲ್ಲಿಂದೀಚೆಗಿನ ಸುದೀರ್ಘಾವಧಿಯ ಬೇಸರವನ್ನು ನೀಗಿಕೊಳ್ಳುವ ಸಲುವಾಗಿ ಕೈಗೊಂಡ ಪ್ರಯತ್ನದ ಫಲವೇ ಈ ಪುಸ್ತಕ.

ಗೊಂದಲ ಕಳವಳ ಮತ್ತು ಒಂಟಿತನಗಳು ನನ್ನನ್ನು ಸುತ್ತುಗಟ್ಟಿದಾಗ ಅನೇಕ ನೆನಪುಗಳು ತಂಡೋಪತಂಡವಾಗಿ ನುಗ್ಗಿ ಬಂದು ನನ್ನ ಮನೋಮಂದಿರದಲ್ಲಿ ಗುಂಪುಕೂಡಿವೆ. ಮೆದುಳಿಗೆ ಕೆಲಸ ಕೊಡುವ ನೆಪದಿಂದ ಆ ಸ್ಮೃತಿಗಳನ್ನು ಕಾಗದದ ಮೇಲೆ ಗೀಚಲಾರಂಭಿಸಿದೆನು. ಆ ನೆನಪುಗಳೇ ಕ್ರಮೇಣ ಹೊತ್ತಗೆಯ ರೂಪವನ್ನು ತಾಳಿವೆ. ಪುಸ್ತಕವನ್ನು ಬರೆಯುತ್ತಾ ಬರೆಯುತ್ತಾ ನಾನು ನನ್ನ ಬಾಲ್ಯ ಯೌವನಗಳ ಜೀವನವನ್ನು ಮತ್ತೆ ಮತ್ತೆ ಸವಿದಿದ್ದೇನೆ. ನೆನಪುಗಳಲ್ಲಿ ಸಿಹಿಕಹಿಗಳೆರಡೂ ಬೆರಕೆಯಾಗಿವೆ. ಹಳೆಯ ಘಟನೆಗಳನ್ನು ನೆನೆದು ನಕ್ಕೂ ಇದ್ದೇನೆ ಅತ್ತೂ ಇದ್ದೇನೆ. ಅವು ಸ್ವಲ್ಪ ಸಂತೋಷವನ್ನೂ, ವಿಮಲ ಶಾಂತಿಯನ್ನೂ, ಅನೇಕ ವೇಳೆ ಹೃದಯ ವೇದನೆಯನ್ನೂ ಉಂಟುಮಾಡಿವೆ.”[೩೭]

ದು.ಸರಸ್ವತಿ, ಶೈಲಜಾ, ನಾಗರಘಟ್ಟ ಕಮಲಾದಾಸ ರಂತಿ, ಕೃಷ್ಣಹತೀಸಿಂಗ್ ಕೂಡ ಹತಾಶೆಗೊಂದಲ ಒಂಟಿತನಕ್ಕೆ ಉತ್ತರವಾಗಿ ಆತ್ಮಕಥೆ ಬಂದಿದೆ. ಕಹಿಯನ್ನು ಬರೆಯುವಾಗ ನೋವನ್ನು, ಸಿಹಿಯನ್ನು ಬರೆಯುವಾಗ ಸಂತೋಷವನ್ನು ಅನುಭವಿಸಿ ಈ ಬದುಕು ಅಥವಾ ಅನುಭವ ಕಹಿ ಮಾತ್ರವಲ್ಲ ಎಂದಿದ್ದಾರೆ.

ಕೈಯ್ಯಾರ ಕಿಞ್ಞಣ್ಣ ರೈಯವರು “ನನ್ನ ಎಂಭತ್ತನೇಯ ವರ್ಷ ವರ್ಧಂತಿ ಅಭಿನಂದನ ಸಮಿತಿಯ ಸಂಚಾಲಕಿಯಾದ ಶ್ರೀಮತಿ ಇಂದಿರಾ ಹೆಗ್ಗಡೆಯವರೇ ಮೊದಲಾದವರು. ನನ್ನ ಅಭಿನಂದನ ಸಮಾರಂಭದ ಸಂದರ್ಭ ಬಿಡುಗಡೆಗೊಳಿಸಲು ಆತ್ಮಕಥನ ರೂಪದ ಪುಸ್ತಕವೊಂದನ್ನು ಬರೆಯಬೇಕೆಂದು ನನ್ನ ಮೇಲೆ ಉದಾರ ಪ್ರೀತಿ ವಿಶ್ವಾಸವಿಟ್ಟಂತೆ ಅವರ ಮಾತನ್ನು ನೆರವೇರಿಸಿದೆ

ಎಂಬುದು ನನಗೆ ಸಂತೋಷ. ಈ ಬರಹದ ಉಪಯುಕ್ತತೆಯ ನಿರ್ಧಾರ ಓದುಗರದ್ದು. ಒಳ್ಳೆಯದಿದ್ದರೆ ನನ್ನನ್ನು ಇದುವರೆಗೆ ಬದುಕಿನಲ್ಲಿ ತಿದ್ದಿ ತೀಡಿದ ಹಲವು ಮಹನೀಯರಿಗೆ, ಸಂಘಸಂಸ್ಥೆಗಳಿಗೆ ಆ ಪ್ರಸಂಸೆ ಸಲ್ಲಬೇಕು. ಅದಿಲ್ಲವಾದರೆ ನನ್ನ ವೈಯಕ್ತಿಕ ಜೀವನದ ಲೋಪ ದೋಷಗಳೆಂದು ಮನ್ನಿಸಬೇಕಾಗಿ ಅರಿಕೆ ಮಾಡಿಕೊಳ್ಳುತ್ತೇನೆ"[೨೮]

ಇಲ್ಲಿ ತನ್ನನ್ನು ತಿದ್ದಿ ಬೆಳೆಸಿದ ಮಹನೀಯರ ಮಾತನ್ನು ಆಜ್ಞೆಯಂತೆ ಪಾಲಿಸಿ ಸಂತೋಷಪಟ್ಟಿದ್ದಾರೆ. ತನ್ನನ್ನು ತಿದ್ದಿದ ಹಿರಿಯರಿಗೆ ಗೌರವ ಸಲ್ಲಿಸುವುದು ಒಂದು ಉದ್ದೇಶವಾದರೆ ವೈಯಕ್ತಿಕ ಜೀವನದ ಓರೆಕೋರೆಗಳನ್ನು ಮನ್ನಿಸಬೇಕೆಂದು ವಿನಂತಿಯಿದೆ.

ಸಾರಾ ಅಬೂಬಕರ್, "ತಾವು ಕಂಡುಂಡ ಬದುಕನ್ನು ಇತರರ ಮುಂದೆ ಪ್ರಮಾಣಿಕವಾಗಿ ಬಿಚ್ಚಿಡಲು ಮಹಿಳೆಯರಿಗೆ ಸುಲಭದಲ್ಲಿ ಸಾಧ್ಯವಾಗುವುದಿಲ್ಲ. ಆತ್ಮಚರಿತ್ರೆ ಎಂದರೆ ಅದು ಕೇವಲ ತಮ್ಮ ವೈಯಕ್ತಿಕ ಬದುಕೇ ಆಗಿದ್ದರೂ ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಇತರರ ಬದುಕೂ ಕೂಡ ತಮ್ಮ ಬದುಕಿನೊಂದಿಗೆ ಹೆಣೆದುಕೊಂಡಿರುವುದರಿಂದ ಆ ಇತರರ ಮನೋಭಾವ ಅವರ ಸ್ಥಾನಮಾನ ಮತ್ತು ಅದನ್ನು ಚಿತ್ರಿಸುವಾಗ ಆಗುವ ಪರಿಣಾಮ ಎಲ್ಲವನ್ನೂ ಗಮನಕ್ಕೆ ತಂದುಕೊಂಡೇ ಆತ್ಮಕಥೆ ಬರೆಯಬೇಕಾಗುತ್ತದೆ. ಕೆಲವರ ಮನಸ್ಸಿಗೆ ನೋವಾಗಬಹುದು ಎಂಬ ಕಾರಣಕ್ಕಾಗಿಯೇ ಹೇಳಹೊರಟ ಘಟನೆಗಳನ್ನು ಹೇಳದಿರಬೇಕಾಗುತ್ತದೆ. ಕಾದಂಬರಿಯನ್ನು ಬರೆಯುವಾಗ ಇಂತಹ ವಿಷಯಗಳ ಕುರಿತು ಚಿಂತಿಸಬೇಕಾಗಿಲ್ಲ. ಆದರೆ ಆತ್ಮತೆ ಬರೆಯುವಾಗ ಯಾವುದೋ ಒಂದು ಸುಳಿಯಲ್ಲಿ ನಾವು ಸುತ್ತುತ್ತಿರಬೇಕಾಗುತ್ತದೆ."[೨೯]

ಮಹಿಳೆಯರು ಆತ್ಮಕಥೆ ಬರೆಯುವಾಗ ವಹಿಸಬೇಕಾದ ಎಚ್ಚರದ ಕುರಿತು ಸಾರಾ ಹೀಗೆ ಹೇಳಿದ್ದಾರೆ. ಒಂದು ಕಾದಂಬರಿ ಕತೆಗಿಂತ ಮಹಿಳೆಯರಿಗೆ ಈ ಮಿತಿ ಹೆಚ್ಚಿರುವುದರಿಂದ ಮಹಿಳೆಯರ ಆತ್ಮಕಥೆ ಯಾಕೆ ಕಡಿಮೆ ಎನ್ನುವುದಕ್ಕೆ ಕೂಡ ಉತ್ತರವಾಗಿದೆ. ಆತ್ಮಕಥೆ ಬರಯುವುದಕ್ಕಿಂತ ಬರೆಯದಿರುವ ಹಾಗೆ ಒತ್ತಡಗಳು ಮಹಿಳೆಗಿವೆ ಎನ್ನುವುದನ್ನು ಹೇಳುತ್ತಾರೆ.

ಮಹಿಳೆಯರ ಆತ್ಮಕಥೆ ಪ್ರಮಾಣದಲ್ಲಿ ಏಕೆ ಕಡಿಮೆ ಎಂಬ ಪ್ರಶ್ನೆಗೆ ಉತ್ತರ ಹುಡುಕುವುದಾದರೆ ಹೆಣ್ಣು ತನ್ನ ಸ್ವಂತದನ್ನು ಹೇಳಿದರೆ ಪುರುಷ ಪ್ರಧಾನ ಸಮಾಜ ನೋಡುವ ರೀತಿಯನ್ನು ಗಮನಿಸಿದರೆ ಬರೆಯುವುದು ಇರಲಿ, ಮಾತಾಡುವುದಕ್ಕೂ ಅಂಜುವ ಪರಿಸ್ಥಿತಿ ಇದೆ. ಹೆಣ್ಣಿಗೆ ಬರೆಯುವ ಸಾಮರ್ಥ್ಯವಿಲ್ಲವೇ? ಕಾದಂಬರಿ ಬರೆಯಲು ಸಾಮರ್ಥ್ಯ ಇರುವ ಹೆಣ್ಣು ಆತ್ಮಕಥೆ ಬರೆಯಲಾರಳೆ ಎಂಬ ಪ್ರಶ್ನೆ ಹುಟ್ಟುತ್ತದೆ. ಇದಕ್ಕೆ ಪೂರಕವಾಗಿ ವರ್ಜೀನಿಯಾ ವುಲ್ಫ್ ಅನುಭವವನ್ನು ನೋಡಬಹುದು ತನಗೆ ಇಷ್ಟ ಬಂದ ಹಾಗೆ ಆಕೆ ಬರೆಯಲಾರಳು.

ಅವಳಿಗೆ ಹೊರಗಿನ ಮತ್ತು ಒಳಗಿನ ಅನೇಕ ಅಡೆತಡೆಗಳಿವೆ. ತನ್ನ ದೇಹ ಮತ್ತು ಅನುಭವಗಳ ಬಗ್ಗೆ ಸತ್ಯ ಹೇಳುವುದು ಅವಳಿಗೆ ಕಷ್ಟ. ತನಗನ್ನಿಸಿದ್ದನ್ನು ಮುಖ್ಯವಾಗಿ ಹೇಳುವ ಮಹಿಳೆಯ ಬಗ್ಗೆ ಗಂಡಸು ಏನು ಹೇಳಬಹುದು ಎನ್ನುವ ಆತಂಕ ಇರುತ್ತದೆ. ಅಂಥ ಸ್ವಾತಂತ್ರ್ಯ ಹೆಣ್ಣಿಗೆ ಇರಬಾರದೆಂದು ಗಂಡಸರು ಅಪೇಕ್ಷಿಸಿರುತ್ತಾರೆ.

ಪುರುಷರಿಗೆ ಹೋಲಿಸಿದರೆ ಮಹಿಳೆಯರ ಆತ್ಮಕಥೆ ಪ್ರಮಾಣದಲ್ಲಿ ಕಡಿಮೆಯೆಂದೇ ಹೇಳಬೇಕು. ತಲೆತಲಾಂತರದಿಂದ ನೋವನ್ನು ನುಂಗಿಕೊಳ್ಳುವುದೇ (ತಾಳ್ಮೆ) ಸಹಜ ಗುಣವೆಂಬಂತೆ ಹೆಣ್ಣಿಗೆ ಹೇರಲಾಗಿದೆ. ಇದು ಹೆಣ್ಣಿಗೇ ಗೊತ್ತಿಲ್ಲದಿರುವ ಸತ್ಯವಾಗಿತ್ತು. ಹೆಣ್ಣು ಕಷ್ಟ ಸುಖವನ್ನು ಯಾರಲ್ಲೂ ಹೇಳಿಕೊಳ್ಳಬಾರದು ಎಂದೇ ಕಲಿಸಿಕೊಡಲಾಗಿದೆ. ಹೇಳಿಕೊಳ್ಳಲಾಗದ ಈ ಗುಣದಿಂದ ಅವಳು ಕತೆ ಕಾದಂಬರಿಯಲ್ಲಿ ತನ್ನ ನೋವನ್ನು ಪಾತ್ರದ ಮೂಲಕ ಹೊರಹಾಕುತ್ತಿದ್ದಳು. ಕತೆ ಕಾದಂಬರಿ ಪ್ರಕಾರದಲ್ಲಿ ಮೇಲುಗೈ ಸಾಧಿಸಿದ ಮಹಿಳೆ ಆತ್ಮಕಥೆ ಬರೆಯಲಾರಳೆ? ಕತೆ ಕಾದಂಬರಿಯಲ್ಲಿ ತಾನೇ ಒಂದು ಪಾತ್ರವಾಗಿ ನಿಭಾಯಿಸುವ ತಂತ್ರ ಇದ್ದರೆ ಆತ್ಮಕಥೆಯಲ್ಲಿ ಅವಳು ತಾನೇ ನೇರವಾಗಿ ಹೇಳಿಕೊಳ್ಳಬೇಕಾಗುತ್ತದೆ. ಹಿಂಸೆಯನ್ನು ಕತೆ ಕಾದಂಬರಿಯಲ್ಲಿ ತರಬಹುದು. ಆತ್ಮಕಥೆಯಲ್ಲಿ ಅದು ನೇರವಾಗಿ ಬಂದರೆ ಮತ್ತೆ ಅವರ ಜೊತೆಯಲ್ಲೇ ಬದುಕುವುದು ಕಷ್ಟವಾಗುತ್ತದೆ. ಆತ್ಮಕಥೆಯಲ್ಲಿ ಒಂದುವೇಳೆ ಧೈರ್ಯವಾಗಿ ತಂದರೂ ಅದರ ಸಾಮಾಜಿಕ ಆಯಾಮಗಳನ್ನು ಎದುರಿಸುವುದು ಕಷ್ಟವಾಗುತ್ತದೆ. ಇವೆಲ್ಲಾ ಮಿತಿಗಳು ಹೆಣ್ಣಿಗೆ ಮಾತ್ರ ಇರುವುದಾಗಿದೆ.

ಇನ್ನೊಂದು ಆಯಾಮದಲ್ಲಿ ನೋಡುವುದಾದರೆ ಸಾಮಾಜಿಕ ಗೌರವ ಅವರನ್ನು ಕಾಡಿದೆಯೇ ಅಥವಾ ಹೇಳಬೇಕಾದದ್ದು ಕತೆ ಕಾದಂಬರಿಯ ಮೂಲಕ ಹೇಳಿದ ಮೇಲೆ ಹೇಳುವುದಕ್ಕೆ ಏನು ಉಳಿದಿಲ್ಲವೇ. ಹೆಣ್ಣು ಮಕ್ಕಳ ಬದುಕು ಅತಂತ್ರವಾಗಿರುವುದಕ್ಕೆ ಸಾಮಾಜಿಕ ಆಯಾಮ ಕೂಡ ಇದೆ. ಹೆಣ್ಣು ಮಗುವನ್ನು ಸಾಮಾಜಿಕ ಪ್ರಕ್ರಿಯೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಗೆ ಒಗ್ಗಿಕೊಳ್ಳುವಂತೆ ಬೆಳೆಸಲಾಗುತ್ತದೆ. ಈ ಪ್ರಕ್ರಿಯೆ ಅವರ ಬದುಕಲ್ಲೂ ಪ್ರತಿಫಲಿಸುತ್ತದೆ.

ಎಷ್ಟೋ ಮಹಿಳಾ ಆತ್ಮಕಥೆಗಳನ್ನು ಗಮನಿಸಿದರೆ ಎಷ್ಟೋ ತಾಯಂದಿರು ಪುರುಷರಿಗೆ ಸಮಾನವಾಗಿ ಸ್ಪರ್ಧಿಸಲು ಹೋಗಿದ್ದರೆ ಎಷ್ಟೋ ಮಕ್ಕಳು ಬೀದಿಯಲ್ಲಿರಬೇಕಿತ್ತು. ಪುರುಷರ ಸಾಧನೆ ಹೋರಾಟಗಳೇ ಬೇರೆ. ಮಹಿಳೆಯ ಸಾಧನೆ ಹೋರಾಟಗಳೇ ಬೇರೆ, ಒಂದಕ್ಕೊಂದು ಹೋಲಿಸಲು ಸಾಧ್ಯವಾಗುವುದಿಲ್ಲ. ಪುರುಷ ಹೇಗೆಂದರೆ ಪುರುಷ ಏನಾದರೂ ಸಾಧಿಸಲೇಬೇಕೆಂಬ ಹಠವಿದ್ದರೆ ವೈಯುಕ್ತಿಕ ಜವಾಬ್ದಾರಿ ಬಿಟ್ಟು ಹೋಗುವುದನ್ನು ಸಮಾಜ ಒಪ್ಪುತ್ತದೆ. ಆದರೆ ಅದೇ ಮಹಿಳೆ ಜವಾಬ್ದಾರಿಯನ್ನು ಬಿಟ್ಟರೂ ಸರಿಯಾಗಿ ನಿರ್ವಹಿಸಿದರೂ ಅದು

ಮುಖ್ಯವಾಗುವುದೇ ಇಲ್ಲ. ಪುರುಷರಿಗೆ ೬೦ ನಿವೃತ್ತಿ ವಯಸ್ಸಾದರೆ, ಅದೇ ಮಹಿಳೆಗೆ ಜವಾಬ್ದಾರಿಗಳು ಜಾಸ್ತಿ ಹೇಗೆಂದರೆ ಅವಳ ಆರೋಗ್ಯ, ಮೊಮ್ಮಕ್ಕಳು, ಸೊಸೆ, ಅಳಿಯ ಇವೆಲ್ಲದರಿಂದ ಅವಳು ತಲೆ ಸುತ್ತಿ ಬೀಳುವಂತಾಗುತ್ತದೆ. ಬೇರೆ ಸ್ವಾತಂತ್ರ್ಯ ಇಲ್ಲದಿದ್ದರೂ ಕನಸು ಕಾಣಲೂ ಸ್ವಾತಂತ್ರ್ಯ ಇರುವುದಿಲ್ಲ. ಹೆಣ್ಣಿಗೆ ಬಾಲ್ಯ ಒಂದು ಬಂಧನವಾದರೆ, ಯೌವ್ವನ ಇನ್ನೊಂದು ಬಂಧನದ್ದು. ಮುಪ್ಪಿನಲ್ಲಿ ಬಂಧನ ಇಲ್ಲವೆಂದರೂ ಅವಳೇ ಬಂಧನದ ಬಾವಿಯಲ್ಲಿ ಇರುತ್ತಾಳೆ. ಅವಳ ಬದುಕು ಅವಳಿಗೆ ಅದನ್ನೇ ಕಲಿಸಿರುತ್ತದೆ. ಪ್ರತಿಯೊಬ್ಬ ಮಹಿಳೆಯರ ಬದುಕೇ ಕಾದಂಬರಿ ಕತೆ ನಾಟಕ. ಆ ನೋವುಗಳನ್ನು ಅನುಭವಿಸಲೇ ಸಮಯ ಇಲ್ಲದಿರುವಾಗ ಬರೆಯಲು ಎಲ್ಲಿಂದ ಸಮಯ ಸಿಗುತ್ತದೆ. ಕೊರತೆ ನೀಗುವುದಕ್ಕಾಗಿ ಬರೆಯಲೇಬೇಕಾಗುತ್ತದೆ. 'ತಾಯಿ' ಮತ್ತು 'ಒಳ್ಳೆಯ ಗೃಹಿಣಿ' ಎನ್ನುವ ಪದಗಳು ಅವಳು ತನಗಾಗಿ ಬದುಕಿಲ್ಲ ಎಂಬ ಅರ್ಥವನ್ನು ಹೇಳುತ್ತದೆ.

ತೃತೀಯ ಲಿಂಗಿ (ಮಂಗಳಮುಖಿ) **ಲಿವಿಂಗ್ ಸ್ಮೈಲ್ ವಿದ್ಯಾ** "ನಾನು ಮೊದಲಿನಿಂದಲೂ ನನ್ನ ಬ್ಲಾಗ್ ನಲ್ಲಿ ಹಾಗೂ ಸಣ್ಣ ಪುಟ್ಟ ಪತ್ರಿಕೆಗಳಲ್ಲಿ ಹಿಜಡಾ ಜನಾಂಗದವರ ಕಷ್ಟ ಸುಖಗಳ ಬಗ್ಗೆ, ಅವರು ಎದುರಿಸುವ ನಾನಾ ರೀತಿಯ ಸಮಸ್ಯೆಗಳ ಬಗ್ಗೆ ಬರೀತಿದ್ದೆ. ಆದರೆ ಅವೆಲ್ಲವೂ ನಮ್ಮ ಸಮೂಹವನ್ನು ಪ್ರತಿನಿಧಿಸುವಂತಹ ಬರಹಗಳೇ ಆಗಿರುತ್ತಿದ್ದವು. ಇದರಲ್ಲಿ ನನ್ನ ವೈಯಕ್ತಿಕ ಬದುಕಿನ ವಿವರಗಳನ್ನೆಲ್ಲ ಹೇಳಿಕೊಂಡಿದ್ದೇನೆ. ಇದನ್ನೆಲ್ಲ ಹೇಳಿಕೊಳ್ಳುವುದರ ಮೂಲಕ ನಮ್ಮಂತಹವರ ಬದುಕಿನ ಸಮಸ್ಯೆಗಳನ್ನು ಇತರರಿಗೂ ಮನವರಿಕೆ ಮಾಡಿಕೊಳ್ಳಬಹುದೇನೋ ಅನ್ನಿಸ್ತು."[೮೦]

ತೃತೀಯ ಲಿಂಗದವರಿಗೆ ತಾವು ಸಮಾಜದ ಭಾಗ, ಸಮಾಜದ ಒಬ್ಬ ವ್ಯಕ್ತಿಗೆ ಏನೇನು ಅನುಭವಿಸಬೇಕೋ ಅವನ್ನು ತಾವೂ ಅನುಭವಿಸಬೇಕು. ತಮ್ಮ ಕಷ್ಟಗಳೇನು ಎಂಬುದು ಬೇರೆಯವರಿಗೆ ಅರ್ಥವಾಗಬೇಕು. ಸಮಾಜ ಸಹಾನುಭೂತಿಯಿಂದ ನಮ್ಮನ್ನು ಸ್ವೀಕರಿಸಬೇಕು ಮತ್ತು ಮುಖ್ಯವಾಹಿನಿಗೆ ಸೇರಬೇಕೆನ್ನುವ ತಹತಹ ಎದ್ದುಕಾಣುತ್ತದೆ.

ಅರವಿಂದ ಮಾಲಗತ್ತಿ "ಕನ್ನಡ ಸಾಹಿತ್ಯದಲ್ಲಿ ಆತ್ಮಕಥೆಯನ್ನು ಬರೆಯುವುದು ಸಾಮಾನ್ಯವಾಗಿ, ಕೂದಲು ನೆರೆತು ತಲೆ ಅಲುಗಾಡುವಾಗ, ಅನುಭವಗಳನ್ನು ಹೇಳಿಕೊಳ್ಳಬೇಕಾದರೆ ಕೂದಲು ನೆರೆಯುವ ವರೆಗೆ ಕಾಯಬೇಕೆ? ಕಾಯುವುದಾದರೆ ಯಾವ ಕಾರಣಕ್ಕಾಗಿ? ಇನ್ನಷ್ಟು ಅನುಭವಗಳು ಸಂಗ್ರಹವಾಗಲಿ ಎಂದೇ? ಅಥವಾ ಅಪಕ್ವ ವಯಸ್ಸು ಎಂದು ನಿರಾಕರಿಸುವುದೇ? ಇಲ್ಲವೇ ಎಲ್ಲವೂ ಏಕಕಾಲಕ್ಕೆ ಬರೆಯಬಹುದು ಎನ್ನುವ ವಿಚಾರವೇ? ಇಂಥ ಹಲವಾರು ಪ್ರಶ್ನೆಗಳು ನನ್ನೆದುರು ಕುಣಿದಿವೆ. ಅನುಭವಗಳನ್ನು ಹೇಳಿಕೊಳ್ಳಲು ಕೂದಲು ನೆರೆಯಬೇಕಾಗಿಲ್ಲ. ಮುಖದ

ಮೇಲೆ ಎಷ್ಟು ಗೆರೆಗಳು ಮೂಡಿರುತ್ತವೆಯೋ ಅಷ್ಟು ಅನುಭವಗಳು ಮಾಗಿರುತ್ತವೆ ಎನ್ನುವುದೇನೋ ನಿಜ. ಹೀಗೆಂದ ಮಾತ್ರಕ್ಕೆ ಜವ್ವನಿಗರ ಮುಖದ ಮೇಲೆ ಗೆರೆಗಳೇ ಇಲ್ಲ. ಅವರ ಅನುಭವಗಳು ಅನುಭವಗಳೇ ಅಲ್ಲ ಎನ್ನುವ ವಿಚಾರವೂ ಸಲ್ಲ. ನಾವು ಇಂಥ ಮನೋಭಾವನೆಯಿಂದ ಹೊರಬರುವ ಅವಶ್ಯಕತೆಯೂ ಇದೆ. ಹೀಗಾಗಿಯೇ ಅನುಭವಗಳನ್ನು ಹೇಳಿಕೊಳ್ಳಲು ಕೂದಲು ನೆರೆಯಬೇಕಾಗಿಲ್ಲ. ಬಾಯೊಳಗಿನ ಹಲ್ಲು ಉದುರಬೇಕಾಗಿಲ್ಲ. ಬದುಕಿನ ವಾಸ್ತವದ ಸಂಗತಿಗಳನ್ನು ಯಥಾವತ್ತಾಗಿ ಕೊಡುವುದು ಎಂದರೆ, ಬದುಕಿರುವಾಗಲೇ ಜನತೆಯ ಬಾಯಿಗೆ ಎಲೆ- ಅಡಿಕೆ ಆಗುವುದು ಎಂದರ್ಥ. ಆದರೆ ಹಿರಿಯರು ತಮ್ಮ ಆತ್ಮಕಥೆಯನ್ನು ತಮ್ಮ ಆತ್ಮತೃಪ್ತಿಗಾಗಿ ಬರೆದುಕೊಂಡದ್ದೇ ಹೆಚ್ಚು. ಆದರೆ ಈ ಆಶಯ ಅದನ್ನು ಹೊರತುಪಡಿಸಿ ಬಂದಿದೆ ಎನ್ನುವುದನ್ನು ಓದಿದವರಿಗೆ ಬಿಡಿಸಿ ಹೇಳುವ ಅಗತ್ಯವಿಲ್ಲ ಎಂದುಕೊಂಡಿರುವೆ"[೪೧]

ನವೋದಯ ಸಂದರ್ಭದಲ್ಲಿ ಆತ್ಮಕಥೆ ಎಂದರೆ ಪೂರ್ವಜರಿಂದ ಹಿಡಿದು ತಮ್ಮ ಬಾಲ್ಯ, ಯೌವನ, ಮುಪ್ಪು ಈ ಎಲ್ಲದರ ಅನುಭವಗಳ ಸಮ್ಮಿಶ್ರಣಕತೆಯಾಗಿತ್ತು. ಅದಕ್ಕೆ ವ್ಯತಿರಿಕ್ತವಾಗಿ ಆತ್ಮಕಥೆ ಎಂದರೆ ಅನುಭವ ಅದರಲ್ಲಿ ಒಂದು ಅನುಭವವಾದರೂ ಪಕ್ವವಾದರೆ ಅದನ್ನು ಆತ್ಮಕಥೆಯೆಂದು ಯಾಕೆ ಕರೆಯಬಾರದು ಎಂಬುದು ಮಾಲಗತ್ತಿಯವರ ಪ್ರಶ್ನೆ. ಒಂದು ಅನುಭವ ಒಂದು ಘಟನೆಯೂ ಆತ್ಮಕಥೆಯೇ ಎನ್ನುವ ಹೊಸ ವಿವರಣೆಯನ್ನು ಮಾಲಗತ್ತಿ ಕೊಡುತ್ತಿದ್ದಾರೆ.

ಗೀತಾ ನಾಗಭೂಷಣರವರು, "ಆತ್ಮಕಥೆ ಬರೆಯುವ ಕೈಗಳು, ಅವೆಷ್ಟು ಪ್ರಾಮಾಣಿಕವಾಗಿ ವಸ್ತುನಿಷ್ಠವಾಗಿ ತಮ್ಮ ಬದುಕನ್ನು ಬಿಚ್ಚಿಡುತ್ತವೆ ಎನ್ನುವ ಸಂದೇಹ ನನಗಿದೆ. ತಮ್ಮ ಜೀವನದಲ್ಲಿನ ಒಳ್ಳೆಯದನ್ನೇ ವೈಭವೀಕರಿಸಿ ಕೆಟ್ಟದ್ದನ್ನು ನೆಲದೊಳಗೆ ಹೂಳಿ ಸಾರಿಸುವ ಪ್ರಯತ್ನಗಳೆ ಬಹಳಷ್ಟು ನಡೆಯುತ್ತಿರುವುದು ಸುಳ್ಳಲ್ಲ. ಗತವನ್ನು ಕೆದಕುವುದರಿಂದ ಗಳಿಸಿಕೊಂಡಿರುವ ಸಾಮಾಜಿಕ ಸ್ಥಾನ ಮಾನಗಳು ಎಲ್ಲಿ ಕುಸಿದು ಬಿದ್ದು ನೆಲಸಮವಾಗುತ್ತವೋ ಎಂಬ ಭಯ ಆ ಮನಸ್ಸುಗಳನ್ನು ಕಾಡುತ್ತಿರಬಹುದೇನೊ?"[೪೨]

ಆತ್ಮಕಥೆಯೆಂದರೆ ಅವರ ಕತೆಯೇನೋ ನಿಜ. ಆದರೆ ಅದರಲ್ಲಿ ಪ್ರಾಮಾಣಿಕತೆ ಎಷ್ಟಿದೇ ಎಂಬುದು ಗೀತಾ ಅವರ ಪ್ರಶ್ನೆ. ಪ್ರಾಮಾಣಿಕವಾಗಿದ್ದರೆ ಈಗಿನ ಸ್ಥಾನಮಾನ ಗೌರವಕ್ಕೆ ಧಕ್ಕೆ ಬರುತ್ತಲ್ಲ ಎಂಬ ಯೋಚನೆಯಿಂದ ಅದನ್ನು ವರ್ಣರಂಜಿತವಾಗಿ ಮಾಡುವ ಸಾಧ್ಯತೆಗಳೇ ಹೆಚ್ಚಿರುವಾಗ ಇಂಥದನ್ನು ಆತ್ಮಕಥೆ ಎಂದು ಕರೆಯುವುದು ಹೇಗೆಂದು ಗೀತಾ ಅವರು ಕೇಳುವ ವಿಚಾರ. ವರ್ಣರಂಜಿತವಾಗಿರುವುದು ಸಹಜ ಎನ್ನುವುದಾದರೆ ನಿಜವಾದ ಆತ್ಮಕಥೆಯ ಸ್ವರೂಪವೇನು ಎಂಬುದು ಗೀತಾ ಅವರ ಪ್ರಶ್ನೆಯಾಗಿದೆ.

ಈಗಾಗಲೇ ನಾನು ಉದಾಹರಿಸಿದ ಹಲವಾರು ಆತ್ಮಕಥೆಗಳನ್ನು ನನ್ನ ಓದಿನ ಹಿನ್ನೆಲೆಯಲ್ಲಿ ಕೆಲವು ವಿಭಾಗೀಕರಣ ಮಾಡಿಕೊಳ್ಳಬಹುದೆಂದು ಅನ್ನಿಸುತ್ತದೆ ಏಕೆಂದರೆ ಆತ್ಮಕಥೆ ಎನ್ನುವುದು ಅನೇಕ ಲೇಖಕರು ತಾವು ಪರಿಭಾವಿಸಿದಂತೆ ತಮಗೆ ಸರಿಯೆನ್ನಿಸಿದಂತೆ ತಮ್ಮದೇ ಆದ ವಿಧಾನಗಳನ್ನು ಅನುಸರಿಸಿ ಬರೆದಿದ್ದಾರೆ. ಗಾಂಧೀಜಿಯವರಿಂದ ಹಿಡಿದು ಹೊಸ ತಲೆಮಾರಿನ ಕುಂ.ವೀ. ಮತ್ತು ಲಕ್ಷ್ಮಣ ಗಾಯಕವಾಡ ಅವರವರೆಗೆ ಆತ್ಮಕಥೆಗಳಲ್ಲಿ ಅನೇಕ ಬಗೆಯ ವಿನ್ಯಾಸಗಳಿರುವುದನ್ನು ಗಮನಿಸಬಹುದಾಗಿದೆ. ಈ ಹಿನ್ನಲೆಯಲ್ಲಿ ಆತ್ಮಕಥೆಯ ಭಾಗಗಳನ್ನು ಈ ಮುಂದಿನಂತೆ ವಿಭಾಗೀಕರಿಸಬಹುದಾಗಿದೆ.

- ಆತ್ಮಶೋಧನೆಗಾಗಿ ಆತ್ಮಕಥೆ
- ಆತ್ಮಕಥೆಯೆಂಬುದು ಸಮಾಜದ ಚರಿತ್ರೆಯೂ ಹೌದು
- ಆತ್ಮಕಥೆ ಸಮಕಾಲೀನ ತಲೆಮಾರುಗಳ/ಎಲ್ಲರ ಆತ್ಮಕಥೆಯೂ ಹೌದು
- ಆತ್ಮಕಥೆ ತನ್ನ ಸಮುದಾಯದ ನೋವು ನಲಿವುಗಳನ್ನು ಆತ್ಮಕಥನಕಾರರ ಮೂಲಕ ಹೇಳಿಕೊಳ್ಳುವ ಮಾರ್ಗ
- ಆತ್ಮಕಥೆಯೆಂಬುದು ಮಹಿಳೆಯರ ಖಾಸಗಿ ಬದುಕಿನ ಒಂದು ಕಥನ.

ಈ ಮೇಲಿನ ವಿವಿಧ ಬಗೆಯ ಆತ್ಮಕಥನಗಳಲ್ಲಿ ನಾಲ್ಕು ಪ್ರಧಾನ ಅಂಶಗಳನ್ನು ಗುರುತಿಸಬಹುದಾಗಿದೆ. ಗಾಂಧೀಜಿಯವರು ಹೇಳುವ ಹಾಗೆ ಅದೊಂದು ಆತ್ಮ ಪರಿವೀಕ್ಷಣೆ. ಹಾಗೆಯೇ ತಾನು ಕೈಗೊಂಡ ಆಧ್ಯಾತ್ಮ ಸಾಧನೆಯ ವಿವರಣೆ ಸತ್ಯವನ್ನು ಕಾಣಲು ಹೊರಟ ವ್ಯಕ್ತಿತ್ವವೊಂದರ ಸುದೀರ್ಘ ಪಯಣ. ಒಟ್ಟಿನಲ್ಲಿ ಅದೊಂದು ಸತ್ಯ ಶೋಧನೆಯ ಮಾರ್ಗ.

ತಮ್ಮ ಆತ್ಮಕಥೆಯೆಂಬುದು ತಮಗೆ ಮಾತ್ರ ಸೀಮಿತವಲ್ಲ ಸಮಾಜದ ಪ್ರಾತಿನಿಧಿಯಾಗಿ ನಾವು ಬರೆದಿರುತ್ತೇವೆಯೇ ಹೊರತು ಅದು ಒಬ್ಬನ ಆತ್ಮಕಥೆಯಾಗಲು ಸಾಧ್ಯವಿಲ್ಲ ಎನ್ನುವ ಮೂಲಕ ಆಯಾ ಕಾಲಘಟ್ಟದ ಇಡೀ ಸಮಾಜದ ಆಗುಹೋಗುಗಳನ್ನು ಪ್ರತಿನಿಧಿಕವಾಗಿ ದಾಖಲಿಸಲಾಗುತ್ತದೆ ಎಂಬುದನ್ನು ಕೂಡ ಅನೇಕ ಆತ್ಮಕಥೆಗಳ ಮೂಲಕ ಅರಿಯಲು ಸಾಧ್ಯ.

ಇದಕ್ಕೆ ತದ್ವಿರುದ್ದವಾಗಿ ಕೆಲವರ ಆತ್ಮಕಥೆಗಳು ಸಮಾಜಕ್ಕೆ ಆದರ್ಶ ಎಂಬ ಅಭಿಪ್ರಾಯಗಳು ಇದೆ. ಅನೇಕರು ತಮ್ಮ ಬದುಕೇ ಒಂದು ಆದರ್ಶ, ತಮ್ಮ ಸಾಧನೆ ಎಲ್ಲೆ ಮೀರಿದ್ದು ಎಂಬ ಮನೋಭಾವದಲ್ಲಿ ಆತ್ಮಕಥೆಯನ್ನು ಬರೆಯುತ್ತಾರೆ. ಇಂಥ ಆತ್ಮಕಥೆಗಳ ಬಗೆ ಎಂ.ಎನ್.ರಾಯ್‌ರಂಥ ಚಿಂತಕರು ಆಕ್ಷೇಪ ವ್ಯಕ್ತಪಡಿಸುತ್ತಾ ಸ್ವ ವಿಮರ್ಶೆಯಿಲ್ಲದ ಆತ್ಮಕಥನ

ಅದು ಕೇವಲ ರಂಜಕವಾಗಿರುತ್ತದೆಯೇ ಹೊರತು ಮತ್ತೇನನ್ನೂ ಹೇಳುವುದಿಲ್ಲ ಎಂದು ಹೇಳಿ ಅಂಥ ಆತ್ಮಕಥೆಗಳಲ್ಲಿ ನನಗೆ ನಂಬಿಕೆಯಿಲ್ಲ ಎಂದು ತಿಳಿಸುತ್ತಾರೆ. ಮೇಲೆ ನಾನು ವಿಶ್ಲೇಷಿಸಿರುವ ಗೋವಿಂದರಾಜು ಮತ್ತು ಪರಶಿವಮೂರ್ತಿಯಂಥ ಆತ್ಮಕಥನಕಾರರು ಇದೊಂದು ಒಳಬೇಗುದಿ ಅಂತರಂಗದಲ್ಲಿ ಅದುಮಿಟ್ಟು ಅಪಮಾನ ನೋವು ಮುಂತಾದ ಸಂಗತಿಗಳನ್ನು ಹೇಳಿಕೊಳ್ಳಲು ಸಾಧ್ಯವಾಗದ ಸಂದರ್ಭಗಳಲ್ಲಿ ನಾವು ಬರೆಯಲೇ ಬೇಕಾಯಿತು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಬೇರೆಯವರಿಗೆ ಅನುಕೂಲವಾಗುತ್ತದೋ ಇಲ್ಲವೋ ಆದರೆ ನಮಗಂತೂ ನಮ್ಮ ನೋವನ್ನು ಹೊರಹಾಕಿದ ತೃಪ್ತಿ ಎಂದು ಅಭಿಪ್ರಾಯವೂ ಇದೆ. ಇದೇ ಸಂದರ್ಭದಲ್ಲಿ ಶಾಂತಾ ಹುಬ್ಬಳೀಕರ್ ಅವರ ಅಭಿಪ್ರಾಯ ಬಹಳ ಮುಖ್ಯ ಎನಿಸುತ್ತದೆ. ಅನಂತ ಸುಖ ದುಃಖಗಳ ನಡುವೆ ಹುಟ್ಟಿದ ಪ್ರಶ್ನೆಗಳಿಗೆ ಉತ್ತರವೇ ಈ ನನ್ನ ಆತ್ಮಕಥನ ಎಂದು ಹೇಳುವ ಮೂಲಕ ಬದುಕಿನಲ್ಲಿ ಉದ್ಭವಿಸಿದ ಜಟಿಲ ಪ್ರಶ್ನೆಗಳಿಗೆ ಸಿಗಲಾರದ ಉತ್ತರಗಳನ್ನು ಆತ್ಮಕಥೆಯ ಮೂಲಕ ಕಂಡುಕೊಳ್ಳುವ ಪ್ರಯತ್ನ ಎಂದಿದ್ದಾರೆ. ಮಲಯಾಳಂನ ಕಮಲಾದಾಸ್ ಜೀವನದ ರಹಸ್ಯಗಳನ್ನು ಬಯಲಾಗಿಸಿ ನನ್ನನ್ನು ಖಾಲಿ ಮಾಡಿಕೊಂಡು ಪರಿಶುದ್ಧ ಅಂತರಂಗ ಹೊತ್ತು ಹೋಗುವ ಹಂಬಲದಿಂದ ನನ್ನ ಆತ್ಮಕಥೆಯನ್ನು ಬರೆದೆ ಎನ್ನುವ ಮಾತುಗಳು ದಿಟ್ಟ ಲೇಖಕಿಯೊಬ್ಬಳ ಅಂತರಂಗದ ಪರಿವೀಕ್ಷಣೆಯಾಗಿಯೇ ಕಾಣಿಸಿಕೊಳ್ಳುತ್ತದೆ. ಭಾರತದ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸಬೇಕಾಗಿ ಬಂದ ನೋವು, ತಲ್ಲಣ, ಮಾನಸಿಕ ಆಘಾತಗಳನ್ನು ನೇರ ಮತ್ತು ಪರೋಕ್ಷ ಶೋಷಣೆಗಳನ್ನು ಹೇಳಿಕೊಳ್ಳಲು ಸಾಧ್ಯವಾಗದ ಅನಿವಾರ್ಯತೆಯಲ್ಲಿ ಈ ಆತ್ಮಕಥನವೆಂಬುದು ಒಂದು ಬಿಡುಗಡೆಯ ಹಾದಿಯಾಗಿ ಅವರಿಗೆ ಕಾಣಿಸಿದೆ. ಶಾಂತಾ ಹುಬ್ಬಳೀಕರ, ಕಮಲಾದಾಸ್, ಅನುಪಮಾ ನಿರಂಜನ್, ದು.ಸರಸ್ವತಿ ಮುಂತಾದವರ ಆತ್ಮಕಥೆಗಳು ಮೇಲಿನ ನನ್ನ ಈ ಮಾತುಗಳಿಗೆ ಪೂರಕವಾಗಿದೆ. ಶೈಲಜಾ ನಾಗರಘಟ್ಟ ಅವರ 'ಯಾರಿಗೂ ಕಾಣಿಸದಂತೆ ಜಾರಿದ ಕಣ್ಣೀರಿನ ಹಾಗೆ ಆಗಾಗ ಹುಟ್ಟಿದ ಸ್ಮೃತಿಗಳ ಕಥನವೇ ಈ ಕಿಚ್ಚಿಲ್ಲದ ಬೇಗೆ' ಎಂಬ ಅರ್ಥಪೂರ್ಣವಾದ ಮಾತುಗಳೂ ಕೂಡ ಆತ್ಮಕಥನಕ್ಕೆ ಸಾಕ್ಷಿ ಪ್ರಜ್ಞೆಯಂತೆ ಕಾಣಿಸಿಕೊಳ್ಳುತ್ತದೆ.

ಸ್ವಾತಂತ್ರ್ಯಾ ನಂತರದ ದಶಕಗಳಲ್ಲಿ ಹುಟ್ಟಿಕೊಂಡ ದಲಿತ ಸಂವೇದನೆಯ ಆತ್ಮಕಥೆಗಳು ಬೇರೆಯದೇ ಜಗತ್ತೊಂದನ್ನು ಸಾಕ್ಷೀಕರಿಸುತ್ತದೆ. ಸ್ವಾತಂತ್ರ್ಯ ಬಂದ ನಂತರವೂ ಅನೇಕ ವರ್ಷಗಳವರೆಗೂ ತಮ್ಮ ಅಸ್ತಿತ್ವವನ್ನೇ ಗುರುತಿಸಿಕೊಳ್ಳದ ಅಲೆಮಾರಿ ಮತ್ತು ದಲಿತ ಸಮುದಾಯದ ಕಥನಗಳು ನಮ್ಮನ್ನು ಬೆಚ್ಚಿ ಬೀಳಿಸುವಷ್ಟರ ಮಟ್ಟಿಗೆ ರೋಚಕವಾಗಿದೆ. ಅದರಲ್ಲಿಯೂ ಎರಡು ಬಗೆ ತನ್ನ ಇಡೀ ಸಮುದಾಯದ ಕಥೆಯನ್ನು ಹೊರಗಿನ ನಾಗರಿಕ ಜಗತ್ತಿಗೆ ತಿಳಿಸುತ್ತೇನೆ

ಮತ್ತು ಆ ಮೂಲಕ ತನ್ನ ಸಮುದಾಯದ ಅಂತರಂಗದ ಕಷ್ಟಗಳನ್ನು ಅರಿಯುವ ಪ್ರಯತ್ನ ಮಾಡುತ್ತೇನೆ ಎಂಬ ದೃಷ್ಟಿಯಲ್ಲಿ ಬರೆದ ಉಚಲ್ಯಾದಂಥ ಆತ್ಮಕಥನಗಳು ನಿಜಕ್ಕೂ ಕಾಣಲಾಗದ ಜಗತ್ತೊಂದನ್ನು ಹಾಗೂ ಅಲ್ಲಿನ ರೋಚಕ ಜಗತ್ತನ್ನು ಎಲ್ಲ ವಿವರಗಳೊಂದಿಗೆ ಕಟ್ಟಿ ಕೊಡುತ್ತದೆ.

ದಲಿತ ಸಮುದಾಯದ ಮತ್ತೊಂದು ಬಗೆಯ ಆತ್ಮಕಥನವೆಂದರೆ ದಲಿತ ಕವಿ ಸಿದ್ದಲಿಂಗಯ್ಯನವರ 'ಊರುಕೇರಿ' ಇಂಥ ಆತ್ಮಕಥನಗಳು ಕೇವಲ ನೋವು, ಸಿಟ್ಟು, ಆಕ್ರೋಶ ಅಥವಾ ವಿಷಾದವನ್ನೆಲ್ಲದೇ ಒಂದು ಸಮತೋಲನ ದೃಷ್ಟಿಯಿಂದ ಹಾಗೂ ಹಾಸ್ಯ ಪ್ರಜ್ಞೆಯಿಂದ, ಆತ್ಮಕಥನವೆಂಬುದು ಕೇವಲ ದುಃಖದ ಸಂಗತಿಯಲ್ಲ, ಅಥವಾ ವೈಭವೀಕರಣವೂ ಅಲ್ಲ. ಇವುಗಳ ನಡುವೆ ಸ್ವಾತಂತ್ರ್ಯ ನಂತರದ ಭಾರತದ ಜಾತಿ ವ್ಯವಸ್ಥೆ, ಅರ್ಥವ್ಯವಸ್ಥೆ ಸಾಮಾಜಿಕ ವಿಸಂಗತಿಗಳನ್ನು ಹಾಗೂ ದೇಸಿ ಜಗತ್ತಿನ ವಿಸ್ಮಯಗಳನ್ನು ಹೊರಹಾಕುವ ಒಂದು ವಿಶಿಷ್ಟ ಪ್ರಯತ್ನವಾಗಿ ನಮಗೆ ಕಾಣಿಸಿಕೊಳ್ಳುತ್ತದೆ.

ಒಟ್ಟಿನಲ್ಲಿ ಆತ್ಮಕಥೆಯೆಂಬುದು ಒಬ್ಬ ವ್ಯಕ್ತಿಯ ಜೀವಮಾನದ ಸಾಧನೆ ಅಥವಾ ಕೇವಲ ವ್ಯಕ್ತಿ ಚಿತ್ರಣವಾಗಿರದೇ ಅದೊಂದು ಸಂಕೀರ್ಣ ಸ್ವರೂಪಕ ವ್ಯಕ್ತಿ ಮತ್ತು ಸಮಾಜಗಳೆರಡನ್ನು ಏಕಕಾಲದಲ್ಲಿ ಸುಸಂಘಟಿತವಾಗಿ ಕಟ್ಟಿ ಕೊಡುವ ಒಂದು ಸಂಕೀರ್ಣ ಕಥನವಾಗಿ ಕಾಣಿಸುತ್ತದೆ. ತನ್ನ ಬದುಕಿನ ವಿವಿಧ ವ್ಯಕ್ತಿ ಏನನ್ನು ಅನುಭವಿಸಿರಬಹುದು ಆದರೆ ಬರೆಯುವ ಸಂದರ್ಭಕ್ಕೆ ಅದು ಅನುಭವ ಮತ್ತು ಅನುಭಾವದ ನಡುವಿನ ವಿಶಿಷ್ಟ ಸಂಗತಿಯಾಗಿ ಕಾಣಿಸಿಕೊಳ್ಳಬೇಕು. ಈ ಅನುಭವ ಮತ್ತು ಅನುಭಾವ ಎರಡನ್ನು ಮಿಳಿತಗೊಳಿಸಿ ಬರೆಯುವ ಆತ್ಮಕಥೆ ಶ್ರೀಮತಿ, ಕೃಷ್ಣ ಹತೀಸಿಂಗ್ ಹೇಳುವಂತೆ 'ನೆನಪು ಕಹಿಯಲ್ಲ'.

ಕೊನೆ ಟಿಪ್ಪಣಿಗಳು

೧. ಬೀಚಿ, ನನ್ನ ಭಯಾಗ್ರಫಿ, ಮುನ್ನುಡಿ

೨. ಶಿವರಾಮ ಕಾರಂತ, ಹುಚ್ಚುಮನಸ್ಸಿನ ಹತ್ತು ಮುಖಗಳು, ಮುನ್ನುಡಿ

೩. ಬೀಚಿ, ನನ್ನ ಭಯಾಗ್ರಫಿ, ಪು.೨೨

೪. ಜಿ.ಎಸ್.ಶಿವರುದ್ರಪ್ಪ, ಅಸಮಗ್ರ ಆತ್ಮಕಥೆ, ಮುನ್ನುಡಿ

೫. ಗಾಂಧೀಜಿ, ನನ್ನ ಸತ್ಯಾನ್ವೇಷಣೆಯ, ಮುನ್ನುಡಿ

೬. ಎಂ.ಎನ್.ರಾಯ್, ಬೆಕ್ಕಿನ ಆತ್ಮಕಥೆ, ಮುನ್ನುಡಿ

೭. ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ, ಮುನ್ನುಡಿ

೮. ಕೆ. ಗೋವಿಂದರಾಜು, **ಮನವಿಲ್ಲದವರ ಮಧ್ಯೆ**, ಮುನ್ನುಡಿ

೯. ಶಾಂತಾ ಹುಬ್ಳೀಕರ್, **ನಾಳೀನ ಚಿಂತ್ಯಾಕ**, ಮುನ್ನುಡಿ,

೧೦. ಕುಂ.ವೀ, **ರಾಯಲ ಸೀಮಾ**, ಮುನ್ನುಡಿ

೧೧. ಕಮಲಾದಾಸ್, **ನನ್ನ ಕತೆ**, ಮುನ್ನುಡಿ

೧೨. ಅನುಪಮಾ ನಿರಂಜನ, **ನೆನಪು: ಸಿಹಿ–ಕಹಿ**, ಮುನ್ನುಡಿ

೧೩. ಅನುಪಮಾ ನಿರಂಜನ, **ಬರಹಗಾರ್ತಿಯ ಬದುಕು**, ಮುನ್ನುಡಿ

೧೪. ಶೈಲಜ ನಾಗರಘಟ್ಟ, **ಕಿಚ್ಚಿಲ್ಲದ ಬೇಗೆ**, ಮುನ್ನುಡಿ

೧೫. ಅಗ್ನಿ ಶ್ರೀಧರ್, **ದಾದಾಗಿರಿಯ ದಿನಗಳು ೧**, ಮುನ್ನುಡಿ

೧೬. ಎಂ.ಎಸ್.ಪರಶಿವಮೂರ್ತಿ, **ಗೆರೆ ದಾಟಿದ ಮೇಲೆ**, ಮುನ್ನುಡಿ

೧೭. ನೆಬ್ಬೂರು ನಾರಾಯಣ ಭಾಗವತ, ನಿರೂ>ಜಿ.ಎಸ್.ಭಟ್ಟ, ನೆಬ್ಬೂರಿನ ನಿನಾದ, ಮುನ್ನುಡಿ

೧೮. ಕಡಿದಾಳ್ ಮಂಜಪ್ಪ, **ನನಸಾಗದ ಕನಸು**, ಮುನ್ನುಡಿ

೧೯. ಎಚ್. ವಿಶ್ವನಾಥ, **ಹಳ್ಳಿಯ ಹಕ್ಕಿಯ ಹಾಡು**, ಮುನ್ನುಡಿ

೨೦. ಲಕ್ಷ್ಮಣ ಗಾಯಕವಾಡ್, **ಉಚಲ್ಯಾ**, ಮುನ್ನುಡಿ

೨೧. ಬಿ.ಡಿ.ಜತ್ತಿ, **ನನಗೆ ನಾನೇ ಮಾದರಿ**, ಮುನ್ನುಡಿ

೨೨. ಬೇಬಿತಾಯಿ ಕಾಂಬಳೆ, **ಬದುಕು ನಮ್ಮದು**, ಮುನ್ನುಡಿ

೨೩. ಪ್ರೊ.ಎಸ್.ಆರ್. ಗುಂಜಾಳ, **ನಾನು ಆತ್ಮಚರಿತ್ರೆ**, ಮುನ್ನುಡಿ

೨೪. ಶಿವರಾಮ ಕಾರಂತ, **ಸ್ಮೃತಿ ಪಟಲದಿಂದ, ಸಂಪುಟ ೩**, ಮುನ್ನುಡಿ

೨೫. ಭಾಗೀರಥಿ ಹೆಗಡೆ, **ಲೇಖಲೋಕ**, ಮುನ್ನುಡಿ

೨೬. ಎಸ್.ಎಲ್.ಭೈರಪ್ಪ, **ಭಿತ್ತಿ**, ಮುನ್ನುಡಿ

೨೭. ಗೋದಾವರಿ ಪುರುಳೇಕರ, ಅನು, ಸರಸ್ವತಿ ರಿಸಬೂಡ, ಮನವ ಎಚ್ಚೆತ್ತಾಗ, ಮುನ್ನುಡಿ

೨೮. ಶಿವರಾಮ ಕಾರಂತ, **ಹುಚ್ಚು ಮನಸ್ಸಿನ ಹತ್ತು ಮುಖಗಳು**, ಮುನ್ನುಡಿ

೨೯. ಮಾಸ್ತಿ, **ಭಾವ ೧**, ಮುನ್ನುಡಿ

೩೦. ವಿಡಂಬಾರಿ, **ಅಂಚೆಪೇದೆಯ ಆತ್ಮಕಥನ**, ಮುನ್ನುಡಿ

೩೧. ಜೋಳದ ರಾಶಿ ದೊಡ್ಡನಗೌಡ, ನಂದೇನಾನೋದಿದೆ, ಮುನ್ನುಡಿ

೩೨. ವೀರೇಂದ್ರ ಸಿಂಪಿ, ಬಾಳಸಂಜೆಯ ಹಿನ್ನೋಟ, ಪ್ರಸ್ತಾವನೆ

೩೩. ಎಚ್.ಎಸ್.ದೊರೆಸ್ವಾಮಿ, ನೆನಪಿನ ಸುರುಳಿ ತೆರೆದಾಗ, ಮುನ್ನುಡಿ

೩೪. ಗುರುಲಿಂಗ ಕಾಪಸೆ(ಸಂ), ಕಾಳರಾತ್ರಿಯ, ಮಧುರಚೆನ್ನ, ಆತ್ಮಶೋಧ, ಮುನ್ನುಡಿ

೩೫. ವೀಣಾ ಬನ್ನಂಜೆ, ಎಚ್ಚರದ ಕನಸು?

೩೬. ಅಬ್ದುಲ್ ಕಲಾಮ್, ಅಗ್ನಿಯ ರೆಕ್ಕೆಗಳು, ಮುನ್ನುಡಿ

೩೭. ಕೃಷ್ಣ ಹತೀಸಿಂಗ್, ನೆನಪು ಕಹಿಯಲ್ಲ, ಮುನ್ನುಡಿ

೩೮. ಕಯ್ಯಾರ ಕಿಞ್ಞಣ್ಣ ರೈ, ದುಡಿತವೇ ನನ್ನ ದೇವರು, ಮುನ್ನುಡಿ

೩೯. ಸಾರಾ ಅಬೂಬಕರ್, ಮಹಿಳಾ ಆತ್ಮಕಥನಗಳ ಬರವಣಿಗೆಯ ಸಾಧ್ಯತೆ ಮತ್ತು ಸವಾಲುಗಳು, ಪು.೧೮

೪೦. ಲಿವಿಂಗ್ ಸ್ಮೈಲ್ ವಿದ್ಯಾ, ತಮಿಳ್ ಸೆಲ್ವಿ ಅವರ ಸಂದರ್ಶನದಲ್ಲಿ, ನಾನು ಅವನಲ್ಲ ಅವಳು, ಪು.೨೧೨

೪೧. ಅರವಿಂದ ಮಾಲಗತ್ತಿ, ಗೌರ್ಮೆಂಟ್ ಬ್ರಾಹ್ಮಣ, ಮುನ್ನುಡಿ

೪೨. ಗೀತಾ ನಾಗಭೂಷಣ, ಲೇಖ-ಲೋಕ ೪, ಮುನ್ನುಡಿ

ಅಧ್ಯಾಯ ನಾಲ್ಕು

ಆತ್ಮ ಕಥೆಗಳಲ್ಲಿ ಜಾತಿಯ ಸಾಮಾಜಿಕ ವಿನ್ಯಾಸ

೪.೧. ವಸಾಹತುಶಾಹಿ ಮತ್ತು ಜಾತಿ ನಿರೂಪಣೆ

೪.೨. ಮಧ್ಯಮ ಜಾತಿಯ ತಾಕಲಾಟಗಳು

೪.೩. ಅಸ್ಪೃಶ್ಯ & ಕೆಳಜಾತಿಗಳ ಜಾತಿ ನಿರೂಪಣೆಯ ಸವಾಲುಗಳು

ಅಧ್ಯಾಯ ನಾಲ್ಕು

ಆತ್ಮಕಥೆಗಳಲ್ಲಿ ಜಾತಿಯ ಸಾಮಾಜಿಕ ವಿನ್ಯಾಸ

ಸಾಮಾಜಿಕ ಜೀವನವೇ ಮಾನವ ಸಮಾಜದ ಹೆಗ್ಗುರುತು. ಈ ಸಮಾಜದ ಪ್ರತಿ ವ್ಯಕ್ತಿಯೂ ತನ್ನದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾನೆ. ಅವನ ನಡೆನುಡಿಗಳ ಮೇಲೆ ಸಮಾಜವೂ ಅಗಾಧ ರೀತಿಯಲ್ಲಿ ಪ್ರಭಾವ ಬೀರುತ್ತದೆ. ಇಂತಹ ಕ್ರಿಯೆ–ಪ್ರತಿಕ್ರಿಯೆಗಳ ಫಲಶ್ರುತಿಯೇ ಸಾಮಾಜಿಕ ಜೀವನವಾಗಿರುತ್ತದೆ. ಸಮಾಜದ ಅವಶ್ಯಕಥೆಗಳು ಬಹುಮುಖೀಯವಾಗಿರುವುದರಿಂದ ಅಲ್ಲಿ ಆಗುವ ಬದಲಾವಣೆಗಳು ವಿಧವಿಧವಾಗಿರುತ್ತದೆ. ಸಮಾಜ ವ್ಯಕ್ತಿಯ ಮೇಲೆ, ವ್ಯಕ್ತಿ ಸಮಾಜದ ಮೇಲೆ ಪ್ರಭಾವ ಪರಸ್ಪರವಿರುತ್ತದೆ. ಇದರಿಂದ ಕೆಲವು ಬದಲಾವಣೆಗಳು ಅತ್ಯಂತ ಸಹಜವಾಗಿ ಜರುಗುತ್ತವೆ.

ಭಾರತೀಯರ ಬದುಕಿನಲ್ಲಿ ಜಾತಿ ಹುಟ್ಟಿನೊಂದಿಗೇ ಅಂಟಿಕೊಂಡಿರುವ ಸಂಗತಿಯಾಗಿದೆ. ಅದನ್ನು ತಾತ್ವಿಕವಾಗಿ ನಿರಾಕರಿಸಿದರೂ ಕೂಡ ದಿನನಿತ್ಯದ ಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಜಾತಿ ಆಚರಣೆಯಲ್ಲಿದೆ. ಜಾತಿಯ ಆವರಣದಲ್ಲಿಯೇ ಭಾರತೀಯರ ಬದುಕು ಸಾಗುತ್ತಿದೆ.

ಆತ್ಮಕಥೆಯಲ್ಲಿ ಜಾತಿಯಿಂದಾದ ಸಮಸ್ಯೆಗಳು, ಅಪಮಾನಗಳು ಪ್ರಕಟವಾಗಿದೆ. ಜಾತಿಯ ಅಸ್ತಿತ್ವದಿಂದ ಸಂಕಟಕ್ಕೊಳಗಾದ ಒಂದು ವರ್ಗವಿದ್ದರೆ, ಜಾತಿಯ ಅಸ್ತಿತ್ವವಿಲ್ಲದೆ ಸಂಕಟಕ್ಕೊಳಗಾದ ವರ್ಗ ಇನ್ನೊಂದು. ಅಂದರೆ ಜಾತಿ ಇದ್ದರೆ ಸಮಸ್ಯೆಗಳೇ ಒಂದು ರೀತಿ. ಜಾತಿ ಇಲ್ಲದಿದ್ದರೂ ಕೆಲ ಸಮಸ್ಯೆಗಳು ಅನ್ನುವುದಾದರೆ ಜಾತ್ಯತೀತರಾಗಲು ಸಾಧ್ಯವೇ?. ಭಾರತ ಜಾತ್ಯತೀತ ರಾಷ್ಟ್ರ ಎಂದು ಹೇಳುತ್ತಿದ್ದರೂ, ಒಂದಲ್ಲ ಒಂದು ರೀತಿಯಲ್ಲಿ ಜಾತಿಯ ಚೌಕಟ್ಟಿನೊಳಗೆ ಇರಬೇಕಾದ ಪರಿಸ್ಥಿತಿ ಇದೆ.

ಭಾರತೀಯ ಸಮಾಜವನ್ನು 'ಬಹುತ್ವ ಸಮಾಜ' ಎಂದು ವ್ಯಾಖ್ಯಾನಿಸುವಾಗಲೇ ಇನ್ನೊಂದು ಮುಖದಲ್ಲಿ ಭಾರತೀಯ ಸಮಾಜ 'ಜಾತಿ ಆಧಾರಿತ ಸಮಾಜ' ಎನ್ನುವುದು ನಿಚ್ಚಳ ಸತ್ಯ.

ಸಮಾಜವನ್ನು ಸಮಾನತೆಯ ನೆಲೆಯಲ್ಲಿ ಒಗ್ಗಟ್ಟಾಗಿಸುವ ಪ್ರಯತ್ನ ನಡೆದರೂ ಸಹಿತ(ಉದಾ: ವಚನ ಚಳವಳಿ) ಈ ಚಳುವಳಿಯು ಜಾತಿ ಭೇದ ನಿವಾರಿಸುವಲ್ಲಿ ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಒಂದು ಬಗೆಯಲ್ಲಿ ಮಧ್ಯಕಾಲೀನ ಭಾರತ ಹಾಗೂ ಕರ್ನಾಟಕ ಸಮಾಜೋ-ಧಾರ್ಮಿಕ ಕ್ರಾಂತಿ ತಾತ್ಕಾಲಿಕವಾದ ಜಾಗೃತಿಯಾಗಿದೆ. ಮತ್ತೆ ಮುಂದುವರೆದ ಹಂತದಲ್ಲಿ ಸಮಾಜೋ-ಧಾರ್ಮಿಕ ಕ್ರಾಂತಿಯ ಭಾಗವಾಗಿದ್ದ ಮುಂದುವರೆದ ತಲೆಮಾರಿನವರು ಮತ್ತೆ ಹೊಸ ಜಾತಿ ಶೀರ್ಷಿಕೆ ಹಚ್ಚಿಕೊಂಡು ನಡೆದರು. ಭಾರತಕ್ಕೆ ವಸಾಹತುಶಾಹಿಯ ಆಗಮನವಾಗಿ ದೇಶದ ಆಡಳಿತವನ್ನು, ತನ್ನ ತೆಕ್ಕೆಗೆ ತೆಗೆದುಕೊಂಡಿತು. ಆನಂತರದಲ್ಲಿ ಇಂಗ್ಲಿಷ್ ಶಿಕ್ಷಣದ ಮೂಲಕ ಹೊಸ ವೈಚಾರಿಕ ಎಚ್ಚರ ಮೂಡಿತು. ಅದರಿಂದ ಜಾತಿ ಆಧಾರಿತ ಸಮಾಜವನ್ನು ವಿಶ್ಲೇಷಣೆಗೆ ಒಳಪಡಿಸಿತು. ಮೇಲ್ಜಾತಿಯಿಂದ ಹಾಗೂ ಮಧ್ಯಮ ಜಾತಿಗಳಿಂದ ಬಂದ ಶಿಕ್ಷಿತ ವರ್ಗ ತಮ್ಮ ಹೊಸ ಅರಿವಿನಿಂದ ವೈಚಾರಿಕವಾಗಿ ಅಕಡೆಮಿಕ್ ನೆಲೆಗಳಲ್ಲಿ ಸುಧಾರಣಾ ದೃಷ್ಟಿಯಿಂದ ಚಿಂತಿಸತೊಡಗಿತು. ಸಾಹಿತ್ಯ ಪ್ರಕಾರಗಳಲ್ಲಿ ಜಾತಿ ಆಧಾರಿತ ಸಮಾಜದ ಸಂಕೀರ್ಣ ಸ್ವರೂಪ ಪ್ರತಿಫಲನಗೊಂಡಿತು. ಅಂತೆಯೇ ಆತ್ಮಕಥೆಗಳಲ್ಲಿ ಜಾತಿ ಪ್ರತಿನಿಧೀಕರಣ ಕಂಡು ಬರುತ್ತದೆ. ಅಧ್ಯಯನದ ಅನುಕೂಲಕ್ಕಾಗಿ ಮೂರು ಕ್ರಮಗಳಲ್ಲಿ ಮೇಲ್ಜಾತಿ, ಮಧ್ಯಮ ಜಾತಿ ಮತ್ತು ಕೆಳಜಾತಿಗಳೆಂದು ವಿಂಗಡಿಸಿಕೊಳ್ಳಲಾಗಿದೆ. ಬ್ರಾಹ್ಮಣರನ್ನು ಮೇಲ್ಜಾತಿಯೆಂತಲೂ ಅಸ್ಪೃಶ್ಯರನ್ನು ಕೆಳಜಾತಿ ಎಂತಲೂ ಇವೆರಡನ್ನೂ ಹೊರತಾದ ಜಾತಿಗಳನ್ನು ಮಧ್ಯಮ ಜಾತಿಯೆಂತಲೂ ವಿಂಗಡಿಸಿಕೊಳ್ಳಲಾಗಿದೆ. ಮುಂದಿನ ಭಾಗಗಳಲ್ಲಿ ಇವುಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಕರ್ನಾಟಕದಲ್ಲಿ ದಲಿತ ಚಳುವಳಿ ಸಂದರ್ಭದಲ್ಲಿ ಹುಟ್ಟಿಕೊಂಡ ಆತ್ಮಕಥೆಗಳಿಗೂ ಅನಂತರ ಮುಂದಿನ ತಲೆಮಾರಿನಲ್ಲಿ ಹುಟ್ಟಿಕೊಂಡ ದಲಿತರ ಆತ್ಮಕಥೆಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿರುವುದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಉದಾ: ಅರವಿಂದ ಮಾಲಗತ್ತಿ, ಸಿದ್ದಲಿಂಗಯ್ಯ ಮುಂತಾದವರ ಆತ್ಮಕಥೆಗಳಿಗೂ ಪರಶಿವಮೂರ್ತಿ, ತುಂಬಾಡಿ ರಾಮಯ್ಯ ಮುಂತಾದವರ ಆತ್ಮಕಥೆಗಳ ಸ್ವರೂಪದಲ್ಲಿ ಸಾಕಷ್ಟು ಭಿನ್ನತೆಗಳಿವೆ. ಇದಕ್ಕೆ ಸಾಮಾಜಿಕ, ಆರ್ಥಿಕ, ರಾಜಕೀಯ, ಕೌಟುಂಬಿಕವೂ ಸೇರಿದಂತೆ ಒಟ್ಟಾರೆ ಸಾಂಸ್ಕೃತಿಕ ಕಾರಣಗಳಿವೆ. ಎಪ್ಪತ್ತರ ದಶಕಕ್ಕೂ ಮೊದಲು ಸ್ವಾತಂತ್ರ್ಯಾ ನಂತರವೂ ಭಾರತೀಯ ಸಮಾಜದಲ್ಲಿನ ಜಾತಿ ವ್ಯವಸ್ಥೆಯ ಪಿಡುಗಿನಿಂದಾಗಿ ದಲಿತರನ್ನು ಪರಿಗಣಿಸುವ ರೀತಿಯೇ ಭಿನ್ನವಾಗಿತ್ತು. ಎಪ್ಪತ್ತರ ದಶಕದಲ್ಲಿ ಕರ್ನಾಟಕದ ದಲಿತ ಚಳುವಳಿಯ ಪರಿಣಾಮವಾಗಿ ದಲಿತರ ಬದುಕಿಗೆ ಹೊಸ ತಿರುವು ದೊರಕಿತು. ಇದರ ಪರಿಣಾಮವನ್ನು ಅವರ ಆತ್ಮಕಥೆಗಳಲ್ಲಿ ಢಾಳಾಗಿ ಗುರುತಿಸಬಹುದಾಗಿದೆ. ಆರಂಭದಲ್ಲಿ ಮೊದಲ ತಲೆಮಾರಿನ ದಲಿತ ಲೇಖಕರೆಂದು ಗುರುತಿಸುವ ಸಿದ್ಧಲಿಂಗಯ್ಯನವರ 'ಊರುಕೇರಿ, ಮಾಲಗತ್ತಿಯವರ-'ಗೌರ್ಮೆಂಟ್ ಬ್ರಾಹ್ಮಣ'

ಕೃತಿಗಳನ್ನು ಗಮನಿಸಿದರೆ ಸಾಮಾಜಿಕವಾಗಿ ಗುರುತಿಸಿಕೊಳ್ಳುವ ಬಡತನ, ಶಿಕ್ಷಣ, ಕೌಟುಂಬಿಕ ವಾತಾವರಣ, ಸಾಮಾಜಿಕ ಸ್ಥಾನಮಾನ ಮುಂತಾದ ಮೂಲಭೂತ ಅಗತ್ಯಗಳಿಗೆ ಹೋರಾಟ ಮಾಡಬೇಕಾದಂತಹ ಪರಿಸ್ಥಿತಿ ಇತ್ತು. ಆದರೆ ದಲಿತ ಚಳುವಳಿಯ ನಂತರ ಮೊದಲ ತಲೆಮಾರಿನ ಲೇಖಕರಿಗಿದ್ದ ಬದುಕಿನ ಕಷ್ಟಗಳು ಎರಡನೇ ತಲೆಮಾರಿನ ದಲಿತ ಲೇಖಕರಿಗೆ ಇರಲಿಲ್ಲ. ಅವರಿಗೆ ದೊರೆತ ಅನುಕೂಲಗಳು ಅವರ ಮನೋಭಾವದಲ್ಲಿಯೂ ಮೊದಲ ತಲೆಮಾರಿಗಿದ್ದ ಆಕ್ರೋಶ ಆವೇಶಗಳು ಮಾಯವಾಗಿ ಮಾನವೀಯ ನೆಲೆಯಲ್ಲಿರುವುದನ್ನು ಕಾಣುತ್ತೇವೆ. ಆ ವೇಳೆಗಾಗಲೇ ಸಾಮಾಜಿಕವಾಗಿ ಹೋರಾಟಗಳು ನಡೆದು ಕೆಲವು ಬದಲಾವಣೆಗಳನ್ನು ಕಂಡಿದ್ದ ಕಾಲವೂ ಅವರಿಗೆ ಇತ್ತು. ಹಾಗಾಗಿ ಸಾಮಾಜಿಕ ಸ್ಥಾನಮಾನ, ಉದ್ಯೋಗ, ಕೌಟುಂಬಿಕ ವಾತಾವರಣ ಮುಂತಾದವು ಸುಧಾರಣೆಗೊಂಡಿದ್ದವು. ಇವುಗಳು ಆತ್ಮಕಥೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

೪.೧. ವಸಾಹತುಶಾಹಿ ಮತ್ತು ಜಾತಿ ನಿರೂಪಣೆ

ಗಿರೀಶ್ ಕಾರ್ನಾಡ್ ಅವರು ಹೇಳುವಂತೆ "ಇದೆಲ್ಲ ಆ ಕಾಲದಲ್ಲಿ-ಇಂದಿನ ಕಾಲದಲ್ಲಿ ಕೂಡ-ಬಡ ಸಾಮಾಜಿಕ ಸ್ತರದ ತರುಣ ವಿಧವೆಯ ಸಾಮಾನ್ಯ ಹಣೆಬರಹ. ಅದೃಷ್ಟದ ಮಾತೆಂದರೆ ೧೯೨೦ರ ಅವಧಿಯೊಳಗೆ ಚಿತ್ರಾಪುರ ಸಾರಸ್ವತ ಸಮಾಜ ವಿಧವೆಯ ಮುಂಡನ ಮಾಡುವ ರಾಕ್ಷಸೀ ಪದ್ಧತಿಯನ್ನು ಕೈಬಿಟ್ಟಿತ್ತು. ಹೀಗಾಗಿ ಮುಡಿ ಬಿಚ್ಚಿದರೆ ಸಾಕು ಮೊಣಕಾಲವರೆಗೆ ಸಳಸಳ ಧುಮುಕುವ ಆಕೆಯ ಕೇಶರಾಶಿ ಕತ್ತರಿಯಿಂದ ಬಚಾವಾಯಿತು. ಇಂಥ ದುರ್ಧರ ಪರಿಸ್ಥಿತಿಯಲ್ಲೂ ತಾನು ಕಲಿಯಬೇಕು ಏನಾದರೂ ಮಹತ್ವದನ್ನು ಸಾಧಿಸಿ ತೋರಿಸಬೇಕು. ಸಾಧ್ಯವಾದರೆ ಡಾಕ್ಟರ್ ಆಗಬೇಕು ಎಂಬ ಹುಂಬ ಹಂಬಲ ಕುಟ್ಟಾಬಾಯಿಯಲ್ಲಿ ತುಡಿಯುತ್ತಿತ್ತು. ಆ ಕಾಲದಲ್ಲಿ ಬ್ರಿಟಿಷ್ ಸರಕಾರ ಹಾಗೂ ಮಿಷನರಿಗಳ ಪ್ರಯತ್ನದಿಂದ ಸ್ತ್ರೀ ಶಿಕ್ಷಣವನ್ನೇ ಗುರಿಯಾಗಿಟ್ಟುಕೊಂಡ ಹೊಸ ಹೊಸ ಸಂಸ್ಥೆಗಳು ಗಡಿಯಾಚೆ ಮಹಾರಾಷ್ಟ್ರದಲ್ಲಿ ಉದಯವಾಗ ಹತ್ತಿದ್ದವು. ಹೀಗಾಗಿ ಹೊಸ ದಿಗಂತ ಕೈಯ ಚಾಚಿನೊಳಗೆಯೇ ಇತ್ತು.[೧]

ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಹಲವು ಬದಲಾವಣೆಗಳಾದವು. ಭಾರತದಲ್ಲಿದ್ದ ಆಗಿನ ಸಂದರ್ಭದಲ್ಲಿ ಆಚರಣೆಯಲ್ಲಿದ್ದ ಸಹಗಮನ, ಬಾಲ್ಯವಿವಾಹ, ಬ್ರಾಹ್ಮಣರಲ್ಲಿದ್ದ ಕೇಶಮುಂಡನ ಮುಂತಾದ ಸಮಸ್ಯೆಗಳನ್ನು ಹೋಗಲಾಡಿಸುವ ಪ್ರಯತ್ನ ನಡೆಯಿತು. ಆಗಿನ ಸಂದರ್ಭದಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬ್ರಿಟಿಷರು ಪ್ರೋತ್ಸಾಹಿಸಿದರು. ಈ ರೀತಿ ವಸಾಹತೀಕರಣದಿಂದ ಮಹಿಳೆಗೆ ಅನುಕೂಲವಾಯಿತು.

ಅಲ್ಲದೇ ವಿಧವಾ ಪುನರ್ ವಿವಾಹ ಕೂಡ ನಡೆಯಿತು, ಇವೆಲ್ಲವೂ ಕೂಡ ವಸಾಹತೀಕರಣದಿಂದ ಆದ ಪರಿಣಾಮಗಳೇ ಆಗಿವೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್, "ಹಬ್ಬದ ದಿನ ನಿಜವಾಗಿಯೂ ಸಂಭ್ರಮದ ಮತ್ತು ಬಿಡುವಿನ ವಾತಾವರಣ. ಜನ ತಾವು ತಾವೇ ಸಂತೋಷವನ್ನ ಅನುಭವಿಸುತ್ತಿದ್ದರು. ನಾವು ಹಿಂದುಗಳೇ ಆದರೂ ಬಾಲ್ಯದಲ್ಲಿ ಸಹ ನಮಗೆ ಮುಸಲ್ಮಾನರ ಹಬ್ಬಗಳಾದ ಬಕ್ರೀದ್, ರಂಜಾನ್ ಮತ್ತು ಮೊಹರಂಗಳಲ್ಲಿಯೂ ಮುಖ್ಯವಾಗಿ ಆಸಕ್ತಿಯಿತ್ತು. ಆಗ ಮೊಹರಮ್ ಹಬ್ಬವನ್ನು ಹತ್ತು ದಿನಗಳು ಆಚರಿಸುತ್ತಿದ್ದರು. ಮೊದಲನೇ ದಿನ ಮಸೀದಿ ಬಳಿ ಹೊಲೆಯರ ತಮಟೆಯ ಮೂಲಕ ಮೊಹರಂನ ಪ್ರಾರಂಭೋತ್ಸವ ಘೋಷಿಸಲ್ಪಡುತ್ತಿತ್ತು. ನಾಲ್ಕನೆಯ ದಿನ ಒಂದು ಬಡ ಹುಲಿ(ಹುಲಿ ವೇಷ ಹಾಕಿದ ಮನುಷ್ಯ) ತಮಟೆ ಜೊತೆ ಊರಿನ ಬೀದಿಗಳಲ್ಲಿ ಮೆರವಣಿಗೆ ಬರುತ್ತಿತ್ತು. ಆ ಸದ್ದನ್ನು ಕೇಳಿದ ಕೂಡಲೇ ಊರಿನ ಹಿಂದೂ ಮುಸಲ್ಮಾನ್ ಬಾಲಕರು ಕೆಲವು ಹಿರಿಯರು ಮಸೀದಿಯ ಬಳಿ ಸೇರುತ್ತಿದ್ದರು. ನಿತ್ಯ ಕಾಲು ಘಂಟೆ ಅರ್ಧ ಘಂಟೆಯಾದರೂ ಮಸೀದಿಯ ಬಳಿ ತಮಟೆ, ಹುಡುಗರ ಗುಂಪು, ಲಾಗ ಹಾಕುವುದು, ಹುಲಿಗಳಂತೆ ವೇಷವಿಲ್ಲದೇ ಕುಣಿಯುವುದು ನಡೆಯುತ್ತಿದ್ದಿತು.

ಮೊಹರಂನ ಬೆಳಗಿನ ಜಾವ ನರಸಿಂಹಸ್ವಾಮಿ ರಥೋತ್ಸವದ ಕಾಲದಲ್ಲಿ ಹೊರಡುವ ಕುದುರೆ ಉತ್ಸವ ಮುಂತಾದುವನ್ನು ನೋಡುವುದಕ್ಕೆ ನಮ್ಮ ಸ್ತ್ರೀ ಪುರುಷರು ಎದ್ದು ಕಣ್ಣು ಹೊಸಕಿಕೊಳ್ಳುತ್ತಾ ನಿಲ್ಲುವಂತೆ ಮೊಹರಂ ಬೆಳಗಿನ ಜಾವದ ಚಿಕ್ಕ ಉತ್ಸವಕ್ಕೂ ನಿಲ್ಲುತ್ತಾರೆ.

ಮುಸಲ್ಮಾನ ಸ್ತ್ರೀ ಪುರುಷರು ಹುಡುಗರು ಎಷ್ಟು ಉತ್ಸಾಹದಿಂದ ನರಸಿಂಹ ಸ್ವಾಮಿ ದೇವರ ಉತ್ಸವಗಳಲ್ಲಿ ಭಾಗಿಗಳಾಗುತ್ತಾರೋ ಹಿಂದೂಗಳು ಅಷ್ಟೇ ಉತ್ಸಾಹದಿಂದ ಮುಸಲ್ಮಾನರ ಹಬ್ಬಗಳಲ್ಲಿಯೂ ಭಾಗಿಯಾಗುತ್ತಾರೆ ನಮ್ಮ ಊರಿನಲ್ಲಿ ಕ್ರೈಸ್ತರು ಯಾರೂ ಇಲ್ಲ. ಇದ್ದಿದ್ದರೆ ನಮ್ಮ ಜನ ಕ್ರಿಸ್‌ಮಸ್ ನಲ್ಲಿಯೂ ಹಾಗೇ ಸೇರುತ್ತಿದ್ದುದರೆಂಬುದರಲ್ಲಿ ಸಂಶಯವಿಲ್ಲ. ಊರಿನಲ್ಲಿರುವ ಎಲ್ಲ ಜನತೆಯ ಹಬ್ಬಗಳು ಎಲ್ಲರಿಗೂ ರಾಷ್ಟ್ರೀಯ ಹಬ್ಬಗಳೇ ಆಗಿದ್ದವು."[೨]

ಧಾರ್ಮಿಕ ಆಚರಣೆಯಲ್ಲಿ ಜಾತಿಗಳ ಸಾಮರಸ್ಯ ಇರುವುದರ ಬಗ್ಗೆ ಹೀಗೆ ಹೇಳುವ ಗೊರೂರು ಅವರು, "ವೈಯಕ್ತಿಕವಾಗಿ ನಮ್ಮ ಮನೆಯಲ್ಲಿ ಸಹ ಸಂಪ್ರದಾಯ ನಿಷ್ಠ ಮಡಿ–ಮೈಲಿಗೆಗಳ ಆವಾಂತರ ಹೆಚ್ಚಾಗಿತ್ತು. ನಾವು ಮೊಹರಂ ಮಂಟಪಗಳ ಜೊತೆ ಊರೆಲ್ಲ ಸುತ್ತಿಕೊಂಡು ಬಂದ ಮೇಲೆ ನಮ್ಮ ತಾಯಿ ನಮ್ಮ ಬಟ್ಟೆಗಳನ್ನೆಲ್ಲ ಬಿಚ್ಚಿಸಿ ಅದಕ್ಕೆ ನೀರು ಹಾಕಿ ನಮಗೂ ನೀರು ಹಾಕುತ್ತಿದ್ದರು. ಆದರೆ ನಾವು ಪ್ರತಿ ದಿನವೂ ಎರಡು ಹೊತ್ತು ಶಾಲೆಗೆ ಹೋಗಿ ಅಲ್ಲಿ ಎಲ್ಲರನ್ನು ಮುಟ್ಟಿಸಿಕೊಂಡು ಬಂದರೂ ನಮಗೆ ಸ್ನಾನ ಇಲ್ಲ. ನನ್ನ ಚಿಕ್ಕ

ವಯಸ್ಸಿನಲ್ಲಿಯೂ ಈ ಆಭಾಸ ನನಗೆ ಅರ್ಥವಾಗಿತ್ತು. ನಾನು ಅದನ್ನು ಹೇಳಿದಾಗ ನಮ್ಮ ತಾಯಿ ಅದು ಸರಸ್ವತೀ ಮಂದಿರ ಅಲ್ಲಿ ಮೈಲಿಗೆ ಇಲ್ಲ ಎನ್ನುತ್ತಿದ್ದರು(ಪು.೨೩- ಗೊರೂರು).

ಜಾತಿ ಧರ್ಮಗಳ ಭೇದವಿಲ್ಲದ ಸಾಮಾಜಿಕ ವಾತಾವರಣವನ್ನು ಗೊರೂರು ಹೇಳಿದ್ದಾರೆ. ಗೊರೂರು ಅವರು ಸಾಂಸ್ಕೃತಿಕ ಸಂಬಂಧ ಹಾಗೂ ಸಾಮಾಜಿಕ ಸಂಬಂಧಗಳು ಸೌಹಾರ್ದದಿಂದ ಇದ್ದವು ಎಂಬುದನ್ನು ಹೇಳಿದ್ದಾರೆ. ಸ್ವತಃ ಮೇಲ್ಜಾತಿಯವರಾದ ಅವರ ಕೌಟುಂಬಿಕ ವಾತಾವರಣದಲ್ಲಿ ಮಡಿ ಮೈಲಿಗೆಯ ಆಚರಣೆ ಇದ್ದರೂ ಇಂಗ್ಲಿಷ್ ಶಿಕ್ಷಣದ ಪರಿಣಾಮದಿಂದ ಅದು ಸಡಿಲಗೊಳ್ಳುತ್ತಿರುವ ಸೂಚನೆಯನ್ನು ಹೇಳಿದ್ದಾರೆ. ಜಾತಿ ಸಾಮರಸ್ಯವಲ್ಲದೇ, ಧರ್ಮ ಸಾಮರಸ್ಯವು ಇವೆಲ್ಲವುಗಳಿಗಿಂತ ಸಾಮಾಜಿಕ ಸಾಮರಸ್ಯ ಇರುವುದು ಕಂಡುಬರುತ್ತದೆ.

ಇದೇ ರೀತಿ ಶಾಲೆ ಅನುಭವದ ಬಗ್ಗೆ ಶಿವರಾಮ ಕಾರಂತರು ಹೀಗೆ ಹೇಳುತ್ತಾರೆ, "ಬ್ರಾಹ್ಮಣರಲ್ಲಿ ಹುಟ್ಟಿದ ನನಗೆ ನೆರೆಕರೆಯ ಒಬ್ಬಿಬ್ಬರು ಮಕ್ಕಳಲ್ಲದೇ ಹೆಚ್ಚಿನ ಗೆಳೆಯರಿರಲಿಲ್ಲ. ಮಡಿ ಮೈಲಿಗೆ ಹೊಂದಿದ ನಮ್ಮ ಮನೆಯಲ್ಲಿ ಶೂದ್ರರ ಮಕ್ಕಳೊಂದಿಗೆ ಆಟವಾಡುವುದು ನಮ್ಮ ಹಿರಿಯರಿಗೆ ಸಹನೆಯಾಗದ ವಿಷಯ. ಆಗ ಬಿಲ್ಲವರ(ಹೆಂಡ ಇಳಿಸುವ ಜನ) ಮಕ್ಕಳಿಗೆ ಶಾಲೆಯಲ್ಲಿ ಪ್ರವೇಶವೂ ಇದ್ದಿರಲಿಲ್ಲ. ಅವರನ್ನು ನಾವು ಮುಟ್ಟಿದರೆ ಸ್ನಾನ ಮಾಡಬೇಕಿತ್ತು. ನಾವು ಶಾಲೆಗೆ ಹೋಗುವ ದಾರಿಯಲ್ಲಿ ಹೊಲೆಯರು ಯಾರಾದರೂ ಬಂದರೆ ಅವರ ನೀಳವಾದ ನೆರಳನ್ನು ತಪ್ಪಿಸಿಕೊಂಡೇ ನಡೆಯಬೇಕಿತ್ತು. ಮಧ್ಯಾಹ್ನದ ಬಿಸಿಲಿಗೆ ತುಸು ಸಮೀಪದಲ್ಲಿ ಹೋಗಬಹುದು. 'ಶಾಲೆ ಮೈಲಿಗೆ' ಬಟ್ಟೆಗಳನ್ನು ಮನೆಯ ಹೊರ ಚಾವಡಿಯಲ್ಲಿರಿಸಿ ಕೈಕಾಲು ತೊಳೆದು ಕೌಪೀನಧಾರಿಗಳಾಗಿಯೇ ನಾವು ಮನೆಯಲ್ಲಿ ಸುತ್ತಾಡಬೇಕು. ನಾರು ಬಟ್ಟೆಯ ಆ ಕೌಪೀನ ಹೇಗೇ ಇರಲಿ ಸದಾ ಮಡಿಯೆಂದು ನಮ್ಮ ನಂಬಿಕೆ. ಮಕ್ಕಳ ಮೈಲಿಗೆಯನ್ನು ಮುಟ್ಟಿ ದಿನಕ್ಕೆ ಎಂಟು ಸಾರಿ ಸ್ನಾನ ಮಾಡಬೇಕಾಗುತ್ತಿತ್ತು ನಮ್ಮ ತಾಯಿ ಮತ್ತು ಅಜ್ಜಿಯರು. ನಮ್ಮ ತಂದೆ ಊಟಕ್ಕೆ ಬರುವಾಗ ಅಂಗಡಿ ಮೈಲಿಗೆಯನ್ನು ಕಳಚಿ ಪೀತಾಂಬರವನ್ನು ಉಟ್ಟು ಬರುತ್ತಿದ್ದರು."[೩]

ಶಿವರಾಮ ಕಾರಂತರು ಮೇಲ್ಜಾತಿಯವರಾದರೂ ಅವರ ಅನುಭವ ಗೊರೂರಿಗಿಂತ ತುಸು ಭಿನ್ನವಾಗಿದೆ. ಗೊರೂರು ಅವರ ಬರವಣಿಗೆಯಲ್ಲಿ ಸ್ಕೂಲಿನ ಮಡಿ ಮೈಲಿಗಳ ಬಗ್ಗೆ ಕೊಂಚ ಸಡಿಲಿಕೆ ಇದ್ದರೆ ಕಾರಂತರು ಕುಟುಂಬದಲ್ಲಿ ಆಚರಿಸುವ ಮಡಿ ಮೈಲಿಗೆಗಳ ಬಗ್ಗೆ ತಾತ್ಸಾರ ಭಾವನೆ ವ್ಯಕ್ತಪಡಿಸಿದ್ದಾರೆ. ಕೇವಲ ಕುಟುಂಬದಲ್ಲಿ ಮಾತ್ರವಲ್ಲದೇ ಸಮಾಜದಲ್ಲೂ ಜಾತಿ ಪದ್ಧತಿಯ ಆಚರಣೆ ಇದ್ದುದರಿಂದ ಶೂದ್ರರ ಮಕ್ಕಳೊಂದಿಗೆ ಆಟವಾಡುವುದೂ

ಸಾಧ್ಯವಿರುತ್ತಿರಲಿಲ್ಲ. ಮುಟ್ಟಿದರೆ ಸ್ನಾನ ಮಾಡುವುದಿರಲಿ ಹೊಲೆಯರ ನೆರಳನ್ನೂ ಕೂಡ ತಪ್ಪಿಸಿಕೊಂಡೇ ಓಡಾಡಬೇಕಿತ್ತು ಎಂದಿದ್ದಾರೆ.

ಬ್ರಾಹ್ಮಣರಾದ ಚಂದ್ರಶೇಖರ ಉಡುಪರು, "ಕಾಟು ಮಾವಿನ ಗಿಡಕ್ಕೆ ಒಳ್ಳೆಯ ಮಾವಿನ ಗಿಡದ ಕಸಿ ಮಾಡಿ ಉತ್ಕೃಷ್ಟ ತಳಿ ತಯಾರಿಸಿದಂತೆಯೇ ಈ ಆಧ್ಯಾತ್ಮಿಕ ಪ್ರಯೋಗಶಾಲೆಯಲ್ಲಿ ಶ್ರೀ ಗುರೂಜಿ ಇಂಥ ಕ್ರಾಂತಿಕಾರಿ ಪ್ರಯೋಗ ನಿರತರಾಗಿದ್ದಾರೆ. ಕ್ರಿಶ್ಚಿಯನ್, ಮುಸ್ಲಿಮ್ ಬಂಧುಗಳ ಶ್ರದ್ಧೆ ನಿಷ್ಠೆಯ ನಡವಳಿಕೆಯನ್ನು ಮೈಗೂಡಿಸಿಕೊಳ್ಳಲು ಹಿಂದೂಗಳಿಗೂ ಅವರು ಕರೆ ಕೊಟ್ಟಿದ್ದಾರೆ. ಎಲ್ಲರೂ ನಿಜ ಅರ್ಥದಲ್ಲಿ ಬ್ರಾಹ್ಮಣರು–ಎಂದರೆ ಬ್ರಹ್ಮನ ಅಥವಾ ಆ ದೇವರ ಗುಣಗಳಾದ ನಿಸ್ವಾರ್ಥತೆ, ಪ್ರೀತಿ, ತಾಳ್ಮೆ, ಕ್ಷಮೆ, ಕರ್ತವ್ಯಪರತೆಗಳನ್ನು ಮೈಗೂಡಿಸಿಕೊಂಡವರು ಆಗಬೇಕೆಂಬುದೇ ಅವರ ಕಳಕಳಿ. ಈ ನಿಟ್ಟಿನಲ್ಲಿ 'ಕೇವಲ ಜುಟ್ಟು, ಜನಿವಾರ, ಒದ್ದೆ ಪಂಚೆ, ನಾಮಗಳಿಂದ ಬ್ರಾಹ್ಮಣರೆಂದು ಗುರುತಿಸುವ ಬ್ರಾಹ್ಮಣರಲ್ಲಿ ಹೆಚ್ಚಿನವರು ಅಬ್ರಾಹ್ಮಣರೇ' ಎನ್ನುತ್ತಾರೆ. ಬ್ರಾಹ್ಮಣ್ಯದ ನಿರ್ಧಾರ ಹುಟ್ಟಿನಿಂದಲ್ಲ, ಜುಟ್ಟಿನಿಂದಲ್ಲ–ಸದ್ವರ್ತನೆಯ ಕಟ್ಟಿನಿಂದ ಎಂಬುದು ಅವರ ನುಡಿ. ಇದೇ ಕ್ರಾಂತ ದೃಷ್ಟಿಯಿಂದ ಹುಟ್ಟಿನಿಂದ ಹಿಂದುಳಿದವರೆನಿಸಿಕೊಂಡ ಅನೇಕರಿಗವರು ಮಂತ್ರೋಪದೇಶ ಮಾಡಿದ್ದಾರೆ. ದೇವರಿಗೆ ನಿಮ್ಮ ಆಂತರ್ಯದ ಪಕ್ವತೆ ಬೇಕೇ ಹೊರತು ಜಾತಿಯ ಹಣೆ ಪಟ್ಟಿಯಲ್ಲ ಎಂಬುದು ಗುಣೈಕಪಕ್ಷಪಾತಿಯಾದ ಅವರ ವಾದ. ಜಾತಿ ಮತಗಳ ಅಡ್ಡಗೋಡೆಗಳನ್ನೆಲ್ಲ ಕಿತ್ತೊಗೆದು ವಿಶ್ವಮಾನವ ಧರ್ಮದ ನೆಲೆಯಲ್ಲಿ 'ನಾವೆಲ್ಲರೂ ಒಂದೇ ಜಾತಿ ಒಂದೇ ಕುಲ' ಎಂಬ ಅನ್ಯೋನ್ಯ ಪ್ರೀತಿಯ ಬೆಸುಗೆಯಿಂದ ಮನುಕುಲವೆಲ್ಲ ವಿಶ್ವಬಂಧು ಪರಿಷತ್ತಾಗಿ ನಲಿಯಬಲ್ಲ ದಿನ ಬೇಗ ಬರುವಂತಾಗಬೇಕೆಂಬ ಉದಾರ ಚರಿತರು ಅವರು."

ಜಾತಿ ಹುಟ್ಟಿನಿಂದಲ್ಲ. ಓದಿ ಬ್ರಾಹ್ಮಣನಾಗು ಕಾದಿ ಕ್ಷತ್ರಿಯನಾಗು ಹಾಗೆಯೇ ಜುಟ್ಟು ಜನಿವಾರಗಳಿಂದ ಯಾರೂ ಬ್ರಾಹ್ಮಣನಾಗುವುದಿಲ್ಲ. ಹುಟ್ಟಿನಿಂದ ಯಾವ ಜಾತಿಯಲ್ಲಿ ಜನಿಸಿದರೂ ಬ್ರಾಹ್ಮಣರಾಗುವುದು ಸಾಧ್ಯ ಎಂಬುದನ್ನು ಪ್ರಾಯೋಗಿಕವಾಗಿ ಎಲ್ಲರಿಗೂ ಮುಕ್ತವಾಗಿರುವ ಮಂತ್ರೋಪದೇಶದ ಮೂಲಕ ತೋರಿಸಿಕೊಟ್ಟಿದ್ದಾರೆ. ವಿವೇಕಾನಂದರು ಸಾರಿರುವ ವಿಶ್ವಮಾನವ ಸಂದೇಶವನ್ನು ಆಚರಿಸುತ್ತಾ ಜಗತ್ತನ್ನೇ ವಿಶ್ವಮಾನವ ಧರ್ಮದೆಡೆಗೆ ಕೊಂಡೊಯ್ಯುತ್ತಿದ್ದಾರೆ.

ಕೆಳಜಾತಿಯವರಾದ ಮಾಲಗತ್ತಿಯವರಲ್ಲಿ ಬರುವ "ಸ್ವಾತಂತ್ರ್ಯದ ಸಂದರ್ಭದಲ್ಲಿಯೇ ನಮ್ಮ ಮನೆಯವರು ವೀರಶೈವ ಮತಕ್ಕೆ ಮತಾಂತರ ಹೊಂದಿದವರು(ಇಲ್ಲಿ ನನಗೆ ಕ್ರೈಸ್ತ ಧರ್ಮ, ಪಾದ್ರಿಗಳು, ಗಾಂಧಿ, ಅಂಬೇಡ್ಕರ್ ಮುಂತಾದವರು ನೆನಪಾಗುತ್ತಾರೆ) ಇವರಿಗೂ

ಮೇಲುಜಾತಿಯವರೆನ್ನಿಸಿಕೊಳ್ಳುವ ಬಯಕೆ. ಹೀಗಾಗಿ ದೀಕ್ಷೆಯನ್ನು ಪಡೆದುಕೊಂಡರು. ಶಿವ ದಾರದ ಜೊತೆಗೆ ಬಗಲಲ್ಲಿ ಲಿಂಗವು ಜೋತಾಡತೊಡಗಿತು."[೫]

ಅಂಬೇಡ್ಕರ್ ಮತಾಂತರ ಹೊಂದಿದ್ದು ಅವರನ್ನು ಮುಖ್ಯವಾಹಿನಿಯಿಂದ ಹೊರಗಿಟ್ಟಿದ್ದೇ ಕಾರಣವಾಗಿದೆ. ಅದೇ ರೀತಿ ಮಾಲಗತ್ತಿಯವರೂ ಕೂಡ ಮುಖ್ಯವಾಹಿನಿಗೆ ಬರಬೇಕೆನ್ನುವ ಕಾತರ ಅವರ ಮತಾಂತರದಲ್ಲಿ ಕಾಣುತ್ತದೆ. ಮುಖ್ಯವಾಹಿನಿಯಲ್ಲಿ ಮುಖ್ಯವಾಗಿ ಲಿಂಗಾಯತರು ಇದ್ದುದು ಗೋಚರವಾಗುತ್ತದೆ.

ವಸಾಹತೀಕರಣದಿಂದ ಮೇಲ್ಜಾತಿಯಲ್ಲಿ ಆದ ಬದಲಾವಣೆ ಒಂದು ರೀತಿಯಾದರೆ, ಕೆಳಜಾತಿಗಳು ಮತಾಂತರ ಹೊಂದುವುದರ ಮೂಲಕ ಮುಖ್ಯವಾಹಿನಿಗೆ ಸೇರಿಕೊಳ್ಳುವ ತವಕ ಎದ್ದು ಕಾಣುತ್ತದೆ.

೪.೨. ಮಧ್ಯಮ ಜಾತಿಗಳ ಜಾತಿ ತಾಕಲಾಟಗಳು

ಕುವೆಂಪು ಬೇರೆಯದೇ ರೀತಿಯಲ್ಲಿ ಬ್ರಾಹ್ಮಣರನ್ನು ಚಿತ್ರಿಸಿದ್ದಾರೆ. ಅವರೇ ಹೇಳುವ ಹಾಗೆ, "ಶಾಲೆಯ ಚಟುವಟಿಕೆಗಳನ್ನು ಬಿಟ್ಟರೆ ನಾವು ಯಾವ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಭಾಗವಹಿಸಿದ್ದು ನೆನಪಿಲ್ಲ. ಅಂತಹ ಸಾಂಸ್ಕೃತಿಕ ಚಟುವಟಿಕೆಗಳು ಇದ್ದುದು ಅಷ್ಟಕಷ್ಟೇ ಎಂದು ತೋರುತ್ತದೆ. ಇದ್ದರೂ ಅವೆಲ್ಲ ಬ್ರಾಹ್ಮಣ ವರ್ಗಕ್ಕೇ ಮೀಸಲಾಗಿದ್ದುದರಿಂದ ನಮಗೆ ಅಲ್ಲಿ ಪ್ರವೇಶವಿರುತ್ತಿರಲಿಲ್ಲ. ದೇವಸ್ಥಾನಕ್ಕಂತೂ ಒಮ್ಮೆಯೂ ಬಳಿಸಾರಿದ ನೆನಪಿಲ್ಲ. ಶೂದ್ರರಾದ ನಮ್ಮನ್ನು ಹತ್ತಿರಕ್ಕೆ ಸೇರಿಸದಿದ್ದ ಆ ಬ್ರಾಹ್ಮಣರಲ್ಲಿ ನಮಗೆ ತಿರಸ್ಕಾರ ಇದ್ದೀತೆ ಹೊರತು ಭಯ ಇರಲಿಲ್ಲ. ಅವರ ಉಡುಗೆ-ತೊಡುಗೆ, ಜನಿವಾರ, ಹೊಟ್ಟೆ, 'ಅರೆ-ನಗ್ನತೆ', ಇವುಗಗಳನ್ನು ಕುರಿತು ಕ್ರೈಸ್ತ ಉಪಾಧ್ಯಾಯರಿಂದ ಕಲಿತಿದ್ದ ರೀತಿಯಲ್ಲಿ ಪರಿಹಾಸ್ಯವನ್ನು ಮಾಡುತ್ತಿದ್ದೆವು."[೬] ಅಂದಿನ ಮಲೆನಾಡಿನಲ್ಲಿ ಚಾಲ್ತಿಯಲ್ಲಿದ್ದ ಜಾತಿ ವ್ಯವಸ್ಥೆಯನ್ನು ಕುವೆಂಪು ರೋಚಕವಾಗಿಯೇ ತಮ್ಮ ಆತ್ಮಕಥೆಯಲ್ಲಿ ನಮ್ಮ ಮುಂದಿಡುತ್ತಾರೆ. ತಮ್ಮನ್ನು ತಾವು ಶೂದ್ರರು ಎಂದು ಕರೆದು ಕೊಳ್ಳಲು ಅವರು ಹೆಮ್ಮೆಪಡುತ್ತಾರೆ.

ಮೀನಿನ ವಾಸನೆಯಿಂದ ಬ್ರಾಹ್ಮಣ ಹುಡುಗರು ಅವರ ಬಳಿ ಕುಳಿತುಕೊಳ್ಳಲು ಇಷ್ಟ ಪಡಲಿಲ್ಲ. ಅದನ್ನು ಕುವೆಂಪು ಹೀಗೆ ಬರೆಯುತ್ತಾರೆ. "ಸಾರ್, ಅವರ್ಹತ್ರ ಕೆಟ್ಟವಾಸ್ನೆ! ಎಂದು ಮೂಗು ಮುಚ್ಚಿಕೊಂಡರು. ನಿಜಾಂಶವನ್ನು ಪರೀಕ್ಷಿಸಲೆಂದು ಮೇಷ್ಟರು (ಪಾಪ! ಹಾರುವರು!) ನಮ್ಮ ಬಳಿ ಸಾರಿ ಮೈಕೈ ಮೂಸಿ, 'ಥೂ ಥೂ ಥೂ ಶೂದ್ರ ಮುಂಡೇವು' ಎಂದು ದೂರ ಓಡಿ, ಬೆತ್ತದಿಂದಲೇ ನೂಕಿ, 'ತೊಳೆದುಕೊಂಡುಬನ್ನಿ' ಎಂದು ಮನೆಗೆ ಕಳಿಸಿದರು. ನಮಗೋ ಖುಷಿಯೋ ಖುಷಿ! ಸುಲಭದಲ್ಲಿ ರಜಾ ಸಿಕ್ಕತಲ್ಲ ಎಂದು"[೭]

ತಾರಿಣಿಯವರು ಹೇಳುವ ಹಾಗೆ ಕುವೆಂಪು ಅವರು ಮಕ್ಕಳಿಗೆಲ್ಲ ತಲಾ ಒಂದೊಂದು ಕೋಳಿ ಮರಿಯನ್ನು ಸಾಕಲು ಕೊಟ್ಟಿರುತ್ತಾರೆ. ಕೋಳಿಗಳನ್ನು ಮತ್ತು ನಾಯಿಯನ್ನು ಒಟ್ಟಿಗೆ ಸಾಕಿದ್ದರಿಂದ ಅವು ಸೌಹಾರ್ದವಾಗಿಯೇ ಬದುಕುತ್ತಿದ್ದವು. ಕಂತ್ರಿ ನಾಯಿಯೊಂದು ಇವರು ಸಾಕಿದ ಕೋಳಿಯನ್ನು ಹಿಡಿದಿತ್ತು. ತಾರಿಣಿಯವರು ಹೇಳುವ ಹಾಗೆ, "ತಂದೆಯವರು ಓಡಿ ಬಂದು ಗೋಡೆ ಆಚೆ ಗಲ್ಲಿಯಲ್ಲಿ ಬಗ್ಗಿ ನೋಡಿದಾಗ ಕೋಳಿ ಹಿಡಿದ ಕಂತ್ರಿ ನಾಯಿಯೊಂದು ಮನೆ ಹಿಂಭಾಗಕ್ಕೆ ಓಡುತ್ತಿದೆ. ಕೋಳಿ ರಕ್ಷಿಸಲು ತಂದೆಯವರು ಕೂಡಲೇ ಕಾಂಪೌಂಡ್ ಹಾರಿ ನಾಯಿ ಹಿಂದೆ ಓಡಿದರು. ನಾಯಿ ಕೋಳಿ ಕಚ್ಚಿಕೊಂಡು ನಮ್ಮ ಮನೆಯ ಹಿಂದಿನ ರಸ್ತೆಯಲ್ಲಿದ್ದ ಮನೆಗೆ ಓಡಿ ಹೋಗಿತ್ತು. ಆ ಮನೆಯವರೆಲ್ಲ ಗಲಾಟೆ ಕೇಳಿ ಹೊರಬಂದು ನೋಡುತ್ತಾ ನಿಂತಿದ್ದರು. ಕೋಳಿಯನ್ನು ಬಿಡಿಸಲೂ ಇಲ್ಲ ಬ್ರಾಹ್ಮಣರಾದ ಅವರು ಕೋಳಿ ಮುಟ್ಟುವಂತಿಲ್ಲ. ಕೊನೆ ಪಕ್ಷ ಕಲ್ಲಾದರೂ ಹೊಡೆದು ಕೋಳಿಯನ್ನು ಬಿಡಿಸುವ ಪ್ರಯತ್ನಕ್ಕೆ ಮುಂದಾಗಬಹುದಿತ್ತು. ಕೋಳಿ ಸಮೇತ ನಾಯಿ ಬ್ರಾಹ್ಮಣರ ಮನೆ ಹೊಕ್ಕು ಕೋಳಿ ತಿನ್ನುವ ಉಪಾಯ ಮಾಡಿತ್ತು. ಅದಕ್ಕೇನು ಗೊತ್ತು ಬ್ರಾಹ್ಮಣರ ಮನೆಯೊಳಗೆ ಕೋಳಿ ತೆಗೆದುಕೊಂಡು ಹೋಗಬಾರದೆಂದು? ಆದರೆ ತಂದೆಯವರು ನಾಯಿ ಹಿಂದೆಯೇ ಆ ಮನೆಯೊಳಗೆ ನುಗ್ಗಲು ನಾಯಿಗೆ ಗಾಬರಿಯಾಗಿ ಕಾಂಪೌಂಡ್ ಹಾರಿ ಓಡಿ ಹೋಯಿತು. ಕೋಳಿ ಅಲ್ಲೇ ಬಿದ್ದಿತ್ತು. ತಂದೆಯವರು ಹೋಗಿ ನೋಡಿದಾಗ ಕೋಳಿ ಕೊನೆಯುಸಿರೆಳೆದಿತ್ತು."[೮]

ಇಲ್ಲಿ ಕುವೆಂಪುರವರು ಆ ಘಟನೆಯೊಳಗಿದ್ದೂ ಅದರಿಂದ ದೂರ ನಿಂತವರಂತೆ ಹೇಳುತ್ತಾರೆ. ಕೋಳಿಯ(ಸಾಕುವ /ತಿನ್ನುವ) ಅಭ್ಯಾಸವೇ ಇರದ ಬ್ರಾಹ್ಮಣರು ಏನು ಮಾಡಬೇಕೆಂದು ತಿಳಿಯದೇ ನೋಡುತ್ತಿದ್ದುದನ್ನು ಬ್ರಾಹ್ಮಣರ ಬಗ್ಗೆ ಕೋಳಿಯನ್ನು ಬಿಡಿಸಲೂ ಇಲ್ಲ. ಕೊನೇ ಪಕ್ಷ ಕಲ್ಲು ಹೊಡೆದೂ ಕೋಳಿಯನ್ನು ಬಿಡಿಸಲಿಲ್ಲ. ಕೋಳಿ ಸಮೇತ ನಾಯಿ ಬ್ರಾಹ್ಮಣರ ಮನೆ ಹೊಕ್ಕು ಕೋಳಿ ತಿನ್ನುವ ಉಪಾಯ ಮಾಡಿತ್ತು ಎನ್ನುವಲ್ಲಿ ನಾಯಿಗೆ ಕೋಳಿ ಬೇಕಿತ್ತೇ ವಿನಃ ಶೂದ್ರರದು ಅಥವಾ ಬ್ರಾಹ್ಮಣರದು ಮುಖ್ಯವಲ್ಲ. ಅಲ್ಲದೇ ಕೋಳಿ ತಿನ್ನುವ ನಾಯಿಗೆ ಬ್ರಾಹ್ಮಣರ ಮನೆ ಶೂದ್ರರ ಮನೆ ಎಂಬ ಬೇಧವಿದೆಯೇ? ಎಲ್ಲಕ್ಕಿಂತ ಹೆಚ್ಚಾಗಿ ನಾಯಿಗೇನು ಗೊತ್ತು. ಬ್ರಾಹ್ಮಣರ ಮನೆಯೆಂದು. ಒಂದು ನಾಯಿ ಕೋಳಿಯನ್ನು ತಿನ್ನುವುದು ಅತ್ಯಂತ ಸಹಜವಾದ ಆಹಾರ ಕ್ರಮವಾಗಿದೆ. ತಮ್ಮ ಮಗಳ ಕೋಳಿ ಸತ್ತದ್ದಕ್ಕೆ ಆ ನಾಯಿಗೆ ಆರೋಪ ಹೊರಿಸುವುದು ಸಮಂಜಸವೆನಿಸುವುದಿಲ್ಲ.

ಈ ಘಟನೆಯ ಬಗ್ಗೆ ಕುವೆಂಪುರವರು ಈ ರೀತಿ ಪದ್ಯ ಬರೆಯುತ್ತಾರೆ.

"ಬ್ರಾಹ್ಮ ನಾಯಿ-ಶೂದ್ರಕೋಳಿ
ಶೂದ್ರಕೋಳಿ ಮೇಯುತ್ತಿತ್ತು
ಗಲ್ಲಿಯಲ್ಲಿ,
ಬ್ರಾಹ್ಮನಾಯಿ ಹೊಂಚುತಿತ್ತು
ಅಲ್ಲಿ ಇಲ್ಲಿ,
ಶೂದ್ರಕೋಳಿಗೇನು ಗೊತ್ತು,
ಪಾಪ, ನಾಯಿ ಬ್ರಾಹ್ಮ ಎಂದು?
ತಮ್ಮ ಮನೆಯ ನಾಯಿಯಂತೆ
ಎಂದು ಸುಮ್ಮ ಮೇಯುತಿತ್ತು."[5]

ತಾರಿಣಿಯವರು ಕಂತ್ರಿ ನಾಯಿ ಕೋಳಿ ಹಿಡಿದ ವಿವರವನ್ನು ಹೀಗೆ ಹೇಳುತ್ತಾರೆ. ಕುವೆಂಪುರವರು ಶೂದ್ರ ಕೋಳಿ ಎಂತಲೂ ಬ್ರಾಹ್ಮ(ಣ) ನಾಯಿ ಎಂತಲೂ ಹೇಳುತ್ತಾರೆ. ತಮ್ಮ ಪೂರ್ವಗ್ರಹಗಳನೆಲ್ಲ ನಾಯಿಗೆ ಆರೋಪಿಸಿ ತೃಪ್ತಿ ಪಟ್ಟುಕೊಳ್ಳುತ್ತಾರೆ. ಕಂತ್ರಿ ನಾಯಿಯಾದರೂ ಬ್ರಾಹ್ಮ ನಾಯಿ ಎಂತಲೂ ಆರೋಪಿಸಿರುವುದು ಜಾತಿಯ ಗೊಡವೆಯೇ ಇಲ್ಲದಿರುವ ಕೋಳಿ ಮತ್ತು ನಾಯಿಯ ಮೇಲೂ ಜಾತಿ ಹೇರಿರುವುದು ತಿಳಿಯುತ್ತದೆ. ಇಲ್ಲಿ ನಿರ್ದಿಷ್ಟ ಮನೋಧರ್ಮ ಕೆಲಸ ಮಾಡಿರುವುದು ಕಂಡು ಬರುತ್ತದೆ.

ಜಾತಿಗಳ ಕಲ್ಪನೆ ಇಲ್ಲದ ಎಮ್ಮೆಯ ಮೇಲೂ ಜಾತಿ ಆರೋಪಿಸಿರುವುದು ಮಾಲಗತ್ತಿಯವರ ಆತ್ಮಕಥೆಯಲ್ಲಿ ಕಂಡುಬರುತ್ತದೆ. ಆದರೂ ಮನುಷ್ಯನನ್ನು ಮೀರಿ ಪ್ರಾಣಿಗಳು ಒಂದಾಗುವುದರ ಮೂಲಕ ಮನುಷ್ಯರ ಕೃತಕ ರೀತಿ ನೀತಿಗಳನ್ನು ಮೀರಿ ಪ್ರಕೃತಿದತ್ತವಾದ ಗಂಡು ಹೆಣ್ಣಿನ ಮಿಲನ ಸಹಜವಾದದ್ದೆಂದು ತೋರಿಸಿದವು. ಇಲ್ಲಿ ಎಮ್ಮೆಯ ಮೇಲೆ ಜಾತಿ ಆರೋಪಿಸಿರುವುದಾದರೆ ಅದೇ ರೀತಿ ಕುವೆಂಪುರವರಲ್ಲಿಯೂ ಬ್ರಾಹ್ಮ ನಾಯಿ ಶೂದ್ರ ಕೋಳಿ ಎನ್ನುವ ಪದ್ಯ ಬರುತ್ತದೆ. ನಾಯಿಗೆ ಬ್ರಾಹ್ಮಣತ್ವವೂ ಇಲ್ಲ. ಕೋಳಿಗೆ ಶೂದ್ರತ್ವವೂ ಇಲ್ಲ.

ಜಾತಿಯ ಬಗ್ಗೆ ಕೆಲವು ಭ್ರಮೆಗಳಿದ್ದು ಹೃದಯ ವೈಶಾಲ್ಯವಾದದ್ದರ ಬಗ್ಗೆ ಕುವೆಂಪು ಅವರೇ ಹೀಗೆ ಹೇಳಿಕೊಳ್ಳುತ್ತಾರೆ, "೧೯೨೨ನೇ ಇಸವಿಯಲ್ಲಿ ನನ್ನ ಇಂಗ್ಲಿಷ್ ಕವನಗಳು ಪ್ರಕಟವಾದ ಮೇಲೆ ಹಿಂದೆ ನನ್ನನ್ನು ಕಿಲಸ್ತರ ಜಾತಿಗೆ ಸೇರಿ ಜಾತಿಗೆಟ್ಟವನೆಂದು ತಮ್ಮ ವಿದ್ಯಾರ್ಥಿ ನಿಲಯಕ್ಕೆ ಸೇರಿಸಿಕೊಳ್ಳದೇ ಹೊರ ದೂಡಿದ ಬಯಲು ಸೀಮೆಯ ಒಕ್ಕಲಿಗರು ನನಗೆ ಮಾನ್ಯತೆ ತೋರಿದರು, ತಮ್ಮ ಜಾತಿಯವನೆಂದು ಒಪ್ಪಿಕೊಂಡು! ಆದರೆ ಅಷ್ಟರಲ್ಲಿಯೇ ನನ್ನ ಚೇತನ ಜಾತಿ ಗೀತಿಗಳನ್ನೆಲ್ಲ ಮೀರಿ ನಿಂತಿತ್ತು. ಸ್ವಾಮಿ ವಿವೇಕಾನಂದರ ಕೃಪೆಯಿಂದ,

ನನ್ನ ಆಪ್ತ ಸ್ನೇಹಿತರಲ್ಲಿ ಬ್ರಾಹ್ಮಣರಿದ್ದರು, ವೈಶ್ಯರಿದ್ದರು, ಮುಸಲ್ಮಾನರಿದ್ದರು, ಕ್ರೈಸ್ತರಿದ್ದರು, ಶೂದ್ರರ ಬೇರೆ ಬೇರೆ ಪಂಗಡಗಳವರೂ ಇದ್ದರು. ನನಗೆ ಜಾತಿಯತಾ ದೃಷ್ಟಿಯಿಂದ ನೋಡುವ ಮನೋಧರ್ಮವೇ ಲುಪ್ತವಾಗಿತ್ತು. ಭಾವನೆಯಲ್ಲಿ ಮಾತ್ರವಲ್ಲ, ನಿಜ ವರ್ತನೆಯಲ್ಲಿಯೂ. ಆ ಮತದವರು, ಈ ಮತದವರು ಎಂಬ ಭೇದವಿಲ್ಲದೇ ಎಲ್ಲರೊಡನೆಯೂ ಕುಳಿತು ಊಟ ತಿಂಡಿ ಮಾಡುತ್ತಿದ್ದೆ.' ಬ್ರಾಹ್ಮಣರೊಡನೆ ಅವರ ಮನೆಗಳಲ್ಲಿ ಪಾಯಸ ಉಂಡು, ಮುಸಲ್ಮಾನರೊಡನೆ ಅವರ ಮನೆಗಳಲ್ಲಿ ಪಲಾವು ತಿನ್ನುತ್ತಿದ್ದೆ. ಅದನ್ನೆಲ್ಲ ತುಂಬ ಸಹಜವಾಗಿಯೇ ಮಾಡುತ್ತಿದ್ದೆ. ನಾನೊಬ್ಬ ಸುಧಾರಕ ಎಂಬ ಪ್ರತಿಷ್ಠೆಯಿಂದಲ್ಲ."[೧೦]

ಸ್ವಾಮಿ ವಿವೇಕಾನಂದರ ಪ್ರಭಾವದಿಂದ ಕುವೆಂಪು ಜಾತೀಯತೆಯ ಭಾವನೆಗಳಿಂದ ಬಿಡುಗಡೆಗೊಂಡ ವಿವರ ಇಲ್ಲಿ ಬರುತ್ತದೆ. ಅನುಭವ ಮಾಗಿದಂತೆಯೇ ವ್ಯಕ್ತಿತ್ವ ಕೂಡ ಬೆಳಗುತ್ತದೆ. ವ್ಯಕ್ತಿತ್ವದ ವಿಕಾಸವನ್ನು ಈ ಮೇಲಿನ ವಿವರಗಳಿಂದ ತಿಳಿಯಬಹುದು.

ಕಯ್ಯಾರ ಕಿಞ್ಞಣ್ಣ ರೈ– "ಮೊಗೇರ ಎಂಬ ಪಂಗಡಕ್ಕೆ ಸೇರಿದ ದಲಿತ ಸಮಾಜದ ಮೂಲದವರು ಮನೆಮಂದಿಯೊಡನೆ ಬೇಸಾಯದ ಕೆಲಸಗಳಲ್ಲಿ ತಮ್ಮದೇ ಮನೆಯ ಕೆಲಸವೆಂಬಂತೆ ದುಡಿಯುತ್ತಿದ್ದುದನ್ನು ಕಂಡಿದ್ದೇನೆ. ಮೂಲದವರು ಎಂದು ಹೇಳುವುದರಲ್ಲಿ ಹೆಚ್ಚು ಅರ್ಥವಿತ್ತು. ಬಹಳ ಹಿಂದಿನ ಕಾಲದಲ್ಲಿ ಅವರೇ ಈ ಆಸ್ತಿ ಬದುಕಿಗೆ ಮೂಲದವರು ಒಡೆಯರಾಗಿರಬೇಕು. ಆಮೇಲೆ ಆಸ್ತಿ ಬದುಕು ಬೇರೆಯವರಿಗಾದರೂ ಅವರೇ ಮೂಲದವರೆಂಬ ಅಭಿಮಾನ ಮತ್ತೂ ಇತ್ತು. ಮನೆತನದ ಒಳಿತು ಕೆಡುಕು ತಮ್ಮದೆಂದೇ ಅವರಿಗೂ ಭಾವನೆ ಇತ್ತು. ಹಿಂದೆ ತುಳು ನಾಡಿನ ಈ ಭಾಗವನ್ನು ಈ ದಲಿತ ಜನಾಂಗದವರು ಆಳಿಕೊಂಡಿದ್ದರೆಂಬ ಚರಿತ್ರೆಯಿದೆ. ಅಲ್ಲಲ್ಲಿ ಮಾಯಿಲಕೋಟೆಯೆಂಬ ದಲಿತ ಮುಖಂಡನ ಹೆಸರಿನ ಕೋಟೆಯಿದೆ. ನಾನು ಚಿಕ್ಕವನಿರುವಾಗ ಮೂಲದವರೆಂಬ ಈ ಮೊಗೇರ ವಂಶದ ಹುಡುಗರು ಆಡಲು ಇರುತ್ತಿದ್ದರು. ಹಟ್ಟಿಯ ಜಾನುವಾರುಗಳನ್ನು ಗುಡ್ಡೆಗೆ ಮೇವಿಗೆ ಹೊಡೆದುಕೊಂಡು ಹೋಗುವ ಕೆಲಸವನ್ನು ಆ ಮೂಲದ ಹುಡುಗರು ಮಾಡುತ್ತಿದ್ದಾಗ ನಾನು ಹಲವು ಸಲ ಅವರ ಜೊತೆ ಆಟವಾಡಿ ಜಾನುವಾರು ಮೇಯಿಸಿ ಬಂದಿದ್ದೇನೆ. ಶಾಲೆಯ ಪಾಠವನ್ನು ತಪ್ಪಿಸಿಯೂ ಆ ಹುಡುಗರ ಜೊತೆ ಸೇರಿ ಆಟವಾಡುವುದು ದನ ಮೇಯಿಸುವುದು ಆಗ ತುಂಬ ಹಿತಕರವಾಗಿತ್ತು. ಮಧ್ಯಾಹ್ನದ ನಂತರ ಮನೆತನದ ಜವ್ವನಿಗರ ವಿನೋದಗಳಲ್ಲಿ ಕಾಲ್ಚೆಂಡಾಟವೂ ಒಂದು. ಒಂದು ಮನೆತನದ ಜವ್ವನಿಗರು ಒಂದು ಪಂಗಡ ಇನ್ನೊಂದರ ಜವ್ವನಿಗರು ಇನ್ನೊಂದು ಪಂಗಡ. ಮನೆಯವರು ಆಟಕ್ಕೆ ಹೋಗುವಾಗ ಅವರ ಜೊತೆಗೆ ದಲಿತ ಜವ್ವನಿಗರೂ ಹೋಗುವರು. ಸ್ಪರ್ಧೆ ತೀವ್ರವಾದಾಗ ಕಾಲಿನ ಹೊಡೆದಾಟದೊಡನೆ ಕೈ ಕೈ ಗುದ್ದಾಟವೂ ಆಗುವ ಸಂಭವವಿತ್ತು.

ಹಾಗಾಗಿ ಎರಡು ಪಂಗಡದವರು ಜೊತೆಗೆ ಇತರ ಜವ್ವನಿಗರನ್ನೂ ಕರೆತರುವರು. ಆದರೆ ಊರ ಹಿರಿಯರು ಈ ಸ್ಪರ್ಧೆ ನೋಡಲು ಬರುತ್ತಿದ್ದ ಕಾರಣ ಹೊೖಕೈ ತಪ್ಪುತ್ತಿತ್ತು. ಊರ ಹಿರಿಯರು ಸಮಾಧಾನಗೊಳಿಸುವರು. ಇದೇ ರೀತಿ ಕೋಳಿ ಅಂಕವೂ ಯಾವುದೇ ಗೊಂದಲ ಗಲಾಟೆಯಿಲ್ಲದೆ ಶಾಂತರೀತಿಯಿಂದ ಉತ್ಸಾಹಕರವಾಗಿ ನಡೆಯುವುದು. ಈಗಿನಂತೆ ಆಗ ಕೋಳಿ ಅಂಕದಲ್ಲಿ ಜುಗಾರಿ ಇರಲೇಇಲ್ಲ."[೧೧]

ಮಧ್ಯಮ ಜಾತಿಯವರಾದ ರೈ ಅವರಲ್ಲಿ ತಮಗಿಂತ ಕೆಳಜಾತಿಯವರಾದ ದಲಿತರ ಬಗ್ಗೆ ಅನುಕಂಪವಿದೆ. ಸಹಜೀವಿಗಳು ಎಂಬ ಸಮಾನತೆಯ ನೆಲೆಯಲ್ಲಿಯೇ ಅವರು ನೋಡಿದ್ದಾರೆ. ಆಟ ಪಾಠಗಳಲ್ಲಿಯೂ ಅವರನ್ನು ದೂರವಿಡುವ ಮನೋಭಾವ ಕಾಣುವುದಿಲ್ಲ. ಇವರಲ್ಲಿ ಜಾತೀಯತೆ ಒಂದು ಸಮಸ್ಯೆಯಾಗಿಲ್ಲ ಎಂದು ತಿಳಿಯುತ್ತದೆ. ಮಕ್ಕಳ ಮುಗ್ಧ ಮನಸ್ಸು ಜಾತಿಯನ್ನು ಆಚರಿಸುವುದಿಲ್ಲವಾದರೂ ಅಲ್ಲಿಯೂ ಜಾತಿ ಸಾಮರಸ್ಯ ಇರುವುದರ ಬಗ್ಗೆ ರೈ ಹೇಳಿದ್ದಾರೆ. ಮಕ್ಕಳ ಆಟದಲ್ಲಿ ಸಾಮರಸ್ಯ ಒಂದು ರೀತಿಯಾದರೆ ಜವ್ವನಿಗರಲ್ಲಿಯೂ ಸಾಮರಸ್ಯವಿತ್ತು. ಅದನ್ನು ಹಿರಿಯರು ಯಾವುದೇ ರೀತಿ ಭೇದ ಮಾಡದೇ ಅದನ್ನು ಸರಿದೂಗಿಸುತ್ತಿದ್ದರು. ದೊಡ್ಡವರ ಕೋಳಿ ಅಂಕದ ಸ್ಪರ್ಧೆಯಲ್ಲಿಯೂ ಜಾತೀಯತೆಯ ಜುಗಾರಿಯ ಸಮಸ್ಯೆ ಇರಲಿಲ್ಲ ಎಂದಿದ್ದಾರೆ. ಇಂಗ್ಲಿಷ್ ಶಿಕ್ಷಣದ ಪ್ರಭಾವವೂ ಇಲ್ಲಿ ಗೋಚರವಾಗುತ್ತದೆ.

ಕೆ ಉಷಾ ಪಿ ರೈ– "ಪಪ್ಪನ ಗೆಳೆಯರ ಬಳಗದಲ್ಲಿ ಬ್ರಾಹ್ಮಣರಿಂದ ಹಿಡಿದು ಕ್ರಿಶ್ಚಿಯನ್ ಮುಸ್ಲಿಮ್ ಎಲ್ಲರೂ ಇದ್ದರು. ನಾವು ಕ್ರಿಶ್ಚಿಯನ್ ಶಾಲೆಗೆ ಹೋಗುತ್ತಿದ್ದುದರಿಂದ ಎಲ್ಲ ಜಾತಿಯವರೊಡನೆಯೂ ಸ್ನೇಹವಿತ್ತು. ನಾವೆಂದೂ ಹಿಂದೂ ಮುಸ್ಲಿಮ್‌ಗಳ ಮಧ್ಯೆ ಜಗಳವಾಗುವುದನ್ನು ನೋಡಿಲ್ಲ. ಈಗಿನ ಕೋಮುಗಲಭೆಗಳನ್ನು ನೋಡುವಾಗ ನಿಜಕ್ಕೂ ಅಚ್ಚರಿಯಾಗುತ್ತದೆ ಗಾಬರಿಯಾಗುತ್ತದೆ. ಬ್ರಾಹ್ಮಣರು ತಮ್ಮ ತಮ್ಮ ಮನೆಯೊಳಗೆ ಅವರ ಮಡಿ ಧರ್ಮ ಪಾಲಿಸುತ್ತಿದ್ದರೂ ನಮಗೆ ಅವರು ನಮ್ಮನ್ನು ದೂರ ಇಡುತ್ತಿದ್ದಾರೆಂದು ಯಾವಾಗಲೂ ಅನಿಸಿರಲಿಲ್ಲ. ಬ್ರಾಹ್ಮಣರಲ್ಲದ ಪಪ್ಪನಿಗೆ ಪ್ರೆಸ್ ನಡೆಸಲು ಜಾಗ ಕೊಟ್ಟವರೆ ಉಡುಪಿಯ ಮಠದವರು. ಈಗ ಪಪ್ಪ ಇಲ್ಲವಾದರೂ 'ನವಯುಗ' ಪೇಪರ್ ನಿಂತು ಹೋಗಿರುವುದಾದರೂ ಬೇರೆ ಬೇರೆ ಸ್ವಾಮಿಗಳು ಮಠಾಧಿಪತಿಗಳಾಗಿ ಬಂದಿದ್ದರೂ ಇವತ್ತಿಗೂ ನವಯುಗ ಪ್ರೆಸ್ ಅದೇ ಕಟ್ಟಡದಲ್ಲಿದೆ. ಮಾನ್ಯ ಸಿದ್ಧರಾಮಯ್ಯನವರು ಮಂತ್ರಿಯಾಗಿದ್ದಾಗ ಉಡುಪಿಯ ಕೃಷ್ಣ ಮಠದವರ ಮೇಲೆ ಸಮರ ಸಾರಿದಾಗ ನನಗೆ ಬೇಸರವಾಗಿತ್ತು. ನಾವು ಯಾವತ್ತೂ ಮಠದಲ್ಲಿ ಊಟ ಮಾಡಲು ಹೋಗಿರಲಿಲ್ಲವಾದುದರಿಂದ ನಮಗೆ ಈ ಪಂಕ್ತಿ ಬೇಧದ ಅನುಭವ ಆಗಿರಲಿಕ್ಕಿಲ್ಲ. ಅಲ್ಲಿ ನಡೆಯುವ ಅನ್ನ ಸಂತರ್ಪಣೆ ಹಲವಾರು ಬಡವಿದ್ಯಾರ್ಥಿಗಳಿಗೆ

ವರದಾನವಾಗಿದೆ. ಹಲವಾರು ಯಾತ್ರಿಕರಿಗೆ ಅನುಕೂಲವಾಗಿದೆ. ಯಾವುದಾದರೂ ಒಂದು ವಿಷಯದಲ್ಲಿ ಕೆಟ್ಟದ್ದನ್ನು ಹುಡುಕುವ ಬದಲು ಅದರಿಂದ ಒಳ್ಳೆಯದೇನಾಗಿದೆ ಎಂದು ತಿಳಿಯುವ ಪ್ರಯತ್ನ ಮಾಡಿದರೆ ಇಂಥಹ ವೈಮನಸ್ಸುಗಳು ಬರುವುದಿಲ್ಲ ಎನ್ನುವುದು ನನ್ನ ನಂಬುಗೆ."[೧೨]

ಮೇಲು ಜಾತಿಯವರ ಬಗ್ಗೆ ಅವರ ಅಭಿಪ್ರಾಯ ಈ ರೀತಿಯಾಗಿದೆ. ಕೆಳಜಾತಿಯವರ ಬಗ್ಗೆ ಉಷಾ ರವರು, " ಕೆಳವರ್ಗದವರನ್ನು ಮೇಲ್ವರ್ಗದವರು ಮುಟ್ಟಿಸಿಕೊಳ್ಳದಿದ್ದರೂ ಕೆಳವರ್ಗದವರ ಸಹಕಾರವಿಲ್ಲದೇ ಜೀವನ ಕಷ್ಟವಾಗಿತ್ತು. ಡ್ರೈನೇಜ್ ಇಲ್ಲದ ಆ ಕಾಲದಲ್ಲಿ ಕಕ್ಕಸು ಕ್ಲೀನ್ ಮಾಡಲು ತೋಟಿಗಳೇ ಬೇಕಿತ್ತು. ನನಗೆ ಈಗಲೂ ನಮ್ಮ ಮನೆಯ ಕಕ್ಕಸು ಕ್ಲೀನ್ ಮಾಡಲು ಬರುತ್ತಿದ್ದ 'ಕೊರಪಳು'ವಿನ ಮುಖ ನೆನಪಿದೆ. ನಮ್ಮ ಮನೆಯ ದನಗಳಿಗೆ ಹುಲ್ಲು ತರುತ್ತಿದ್ದ ಹಾಗೂ ಕಾಂಪೌಂಡ್ ಕ್ಲೀನ್ ಮಾಡುತ್ತಿದ್ದ ಹೊಲತಿ 'ಬಿಡುಗು'ವಿನ ನೆನಪಿದೆ. ಅವರಿಗೆ ನಮ್ಮ ಮೇಲಿದ್ದ ಪ್ರೀತಿಯ ನೆನಪಿದೆ. ವರುಷಕ್ಕೊಮ್ಮೆ ಒಂದು ಅಮಾವಾಸ್ಯೆಯಂದು ಮುಸ್ಸಂಜೆ ಹೊತ್ತಿನಲ್ಲಿ ಚಿಕ್ಕ ಮಕ್ಕಳನ್ನು ಕೊರಪಳುವಿನ ಮಡಿಲಲ್ಲಿ ಅಮ್ಮ ಕೂರಿಸುತ್ತಿದ್ದರು. ಮಕ್ಕಳ ಮೇಲಿನ ದೃಷ್ಟಿ ತೆಗೆಯುವ ವಿಧಾನ ಅದೆಂದು ಆಮೇಲೆ ನನಗೆ ತಿಳಿದದ್ದು. ಆ ದಿನ ಕೊರಪಳು ಮತ್ತು ಕೊರಗ ಸ್ನಾನ ಮಾಡಿ ಹೊಸ ಬಟ್ಟೆ ಉಟ್ಟು ತುಂಬ ಕ್ಲೀನಾಗಿ ಬರುತ್ತಿದ್ದರು. ಅವರಿಗೆ ಅಮ್ಮ ಅಂದು ದೊಡ್ಡ ಬುಟ್ಟಿ(ಕುರುವೆ) ತುಂಬ ಅನ್ನ, ದೊಡ್ಡ ಪಾತ್ರೆಯಲ್ಲಿ ಮಂಗಳೂರು ಸೌತೇಕಾಯಿ ಸಾರು, ಒಂದು ಪಲ್ಯ, ಪಾಯಸ ಎಲ್ಲಾ ಮಾಡಿ ದಾನವಾಗಿ ಕೊಡುತ್ತಿದ್ದರು. ಜೊತೆಗೆ ಹೊಸ ಬಟ್ಟೆ ಮತ್ತು ಹಣ ತಲೆಗೆ ಬೇಕಾದಷ್ಟು ಎಣ್ಣೆ ಸುರಿಯುತ್ತಿದ್ದರು. ಕೊರಪಳುಗೆ ನಮ್ಮನ್ನೆಲ್ಲ ಮಡಿಲಲ್ಲಿ ಕುಳ್ಳಿರಿಸಿದಾಗ ಆಗುವ ಆನಂದವನ್ನು ನಾನು ನನ್ನ ಚಿಕ್ಕ ತಮ್ಮಂದಿರಿಬ್ಬರನ್ನು ಕುಳ್ಳಿರಿಸಿದಾಗ ಗಮನಿಸಿದ್ದೇನೆ."[೧೩]

ಮಧ್ಯಮ ಜಾತಿಯ ಮಹಿಳೆಯಾದ ಉಷಾ ಪಿ ರೈ ಜಾತಿ ಧರ್ಮಗಳನ್ನು ಮೀರಿ ಸಾಮರಸ್ಯವಿರುವುದನ್ನು ಹೇಳಿದ್ದಾರೆ ಮತ್ತು ಮೇಲ್ಜಾತಿಯವರ ಮಡಿ ಮೈಲಿಗೆಯ ಬಗ್ಗೆ ಪ್ರಶ್ನಿಸುವ ಗೋಜಿಗೆ ಹೋಗದೇ ಅದು ಇರುವುದೇ ಹಾಗೆ ಎನ್ನುವ ಸಹಮತ ವ್ಯಕ್ತಪಡಿಸಿದ್ದಾರೆ. ಮಡಿ ಮೈಲಿಗೆ ಮನೆಯಲ್ಲಿ ಆಚರಿಸಿದರೂ ಉಳಿದಂತೆ ಜಾತಿ ಜಾತಿಗಳಲ್ಲಿ ಸಹಾಯ ಮಾಡುವ ಗುಣವನ್ನು ಸ್ಮರಿಸಿದ್ದಾರೆ. ಮಧ್ಯಮ ಜಾತಿಯ ಮಹಿಳೆ ಮತ್ತು ಮಧ್ಯಮ ಜಾತಿಯ ಪುರುಷ ಇಬ್ಬರೂ ಮೇಲ್ಜಾತಿ ಮತ್ತು ಕೆಳಜಾತಿ ಅಲ್ಲದೇ ಎಲ್ಲ ಜಾತಿಗಳಲ್ಲೂ ಸಾಮರಸ್ಯವಿರುವುದನ್ನು ಹೇಳಿದ್ದಾರೆ.ಇವರಿಬ್ಬರ ಅಭಿಪ್ರಾಯಗಳಲ್ಲೂ ಸಾಮ್ಯತೆ ಇದೆ. ಇಂಗ್ಲೀಷ್ ಶಿಕ್ಷಣದ ಕ್ರಮದ ಪರಿಣಾಮವಾಗಿ ಈ ರೀತಿ ಪ್ರಾದೇಶಿಕವಾಗಿ ಒಂದೇ ಅಭಿಪ್ರಾಯ ಹೊಂದಿದ್ದಾರೆಂದು ಅನಿಸುತ್ತದೆ.

ಮೇಲ್ಜಾತಿ, ಮಧ್ಯಮ ಜಾತಿ ಕೆಳಜಾತಿಗಳಿದ್ದರೂ ಕೂಡ ಅವೆಲ್ಲವೂ ಸೌಹಾರ್ದಯುತವಾಗಿತ್ತು ಎನ್ನುವುದು ಉಷಾರವರ ಅಭಿಪ್ರಾಯವಾಗಿದೆ.

೪.೩. ಅಸ್ಪೃಶ್ಯ ಮತ್ತು ಕೆಳಜಾತಿಗಳ ಜಾತಿ ನಿರೂಪಣೆಯ ಸವಾಲುಗಳು

ಮಾಲಗತ್ತಿಯವರಲ್ಲಿ ಜಾತಿಯ ಬಗೆಗಿನ ವಿಚಾರದಲ್ಲಿ ಅವರು ಹೀಗೆ ಹೇಳುತ್ತಾರೆ, "ಒಂದು ಬಾರಿ ನಾನು ಶಾಲೆಗೆ ಹೋಗಲಾರೆ ಎಂದು ಹಠ ಮಾಡಿದೆ. ಯಾಕೆ ಎಂದು ಅಜ್ಜಿ ಪ್ರಶ್ನಿಸಿದಾಗ ನಾ ಕೊಟ್ಟ ಕಾರಣ: ಅವ್ರೆಲ್ಲ ಮಣಿ ಮ್ಯಾಗ ಕುಂದ್ರತಾರ ನಮಗ ನೆಲದ ಮ್ಯಾಲಿ ಕುಂದ್ರಸ್ತಾರ. ನಾವಲ್ಯ ಹೋಗುದಿಲ್ಲ... ಎಂದಿದ್ದೆ ಅದಕ್ಕೆ ನನ್ನ ಅಜ್ಜಿ ಕಟಗಿ ಮಣಿ ಏನ ಮಾಡುದು? ಕುಂತ್ರ ಅದು ನಡತೈತಿ. ನಿನಗೆ ಸಣ್ಣ ಕೌದಿ ಹೊಲ್ದ ಕೊಡ್ತಿನಿ ಎಂದಳು. ಅದು ನನಗೆ ಕೀಳಾಗಿ ಕಂಡದ್ದರಿಂದ ನಿರಾಕರಿಸಿದೆ. ಹೊಸ ತಟ್ಟ ಕೊಡ್ತಿನಿ ತಗೊಂಡ ಹೋಗು ಎಂದಳು. ಒಪ್ಪಿಕೊಂಡು ಮರುದಿನ ತಟ್ಟು ತೆಗೆದುಕೊಂಡು ಠೀವಿಯಿಂದ ಹೋಗಿ ಹಾಸಿಕೊಂಡು ಗೆಲುವಿನ ಮುಖದಲ್ಲಿ ಕುಳಿತಿದ್ದೆ. ಹಾಸು ಮಣೆಯ ಮೇಲೆ ಕುಳಿತುಕೊಳ್ಳುವ ಜನ ಇದನ್ನು ನೋಡಿ ಅವಾಕ್ಕಾಗುತ್ತಾರೆಂದು ಭಾವಿಸಿದ್ದೆ ಆದರೆ ಆದದ್ದು ತದ್ವಿರುದ್ಧ. ಅವರೆಲ್ಲ ನನ್ನನ್ನು ನೋಡಿ ಅಪಹಾಸ್ಯ ಮಾಡಿ ಚಪ್ಪಾಳೆ ತಟ್ಟಿ ನಗತೊಡಗಿದರು."[೧೪]

ಆಸನದ ವ್ಯವಸ್ಥೆ ಯಾವ ಜಾತಿಯವರಿಗೂ ಇರಲಿಲ್ಲ. ಅಥವಾ ಮೇಲ್ಜಾತಿಯವರಿಗೆ ಇರದಿದ್ದರೂ ವ್ಯವಸ್ಥೆ ಹುಟ್ಟು ಹಾಕಿದ್ದೋ ಅಥವಾ ವ್ಯಕ್ತಿ ನೆಲೆಯದೋ ಗೊತ್ತಾಗುವುದಿಲ್ಲ. ಗೌರ್ಮೆಂಟ್ ಸ್ಕೂಲುಗಳಲ್ಲಿ ಎಲ್ಲ ವಿದ್ಯಾರ್ಥಿಗಳು ಕಸ ಗುಡಿಸುತ್ತಿದ್ದರೂ ಮಾಲಗತ್ತಿಯವರ ಬರಹದಲ್ಲಿ ಅವರ ಸ್ಕೂಲಲ್ಲಿ ದಲಿತರಿಗೆ ಮಾತ್ರ ಕಸ ಗುಡಿಸುವ ಕೆಲಸ ಸೀಮಿತವಾಗಿತ್ತು. ಅಲ್ಲದೇ ಅವರ ಹೆಸರನ್ನೂ ಸಹ ಸರಿಯಾಗಿ ಬರೆಯುತ್ತಿರಲಿಲ್ಲ. ಅದಕ್ಕವರು ಪ್ರತಿಕ್ರಿಯಿಸುವ ರೀತಿಯೆಂದರೆ 'ನಮ್ಮ ಹೆಸರನ್ನು ಕರಿ ಹಲಗೆಯ ಮೇಲೆ ಯಥಾ ಸ್ಥಿತಿಯಲ್ಲಿ ಬರೆಯಲು ಅವರ ಹೇಸುತ್ತಿದ್ದರೆಂದು ತೋರುತ್ತದೆ. ದೇವ್ಯ, ಮಲ್ಯ, ಬಸ್ಯ ಎಂದು ಹೆಸರು ಮಗುಚಿ ಬರೆಯುತ್ತಿದ್ದರು' ಇಲ್ಲಿ ಹೆಸರು ಮಗಚುವುದಕ್ಕಿಂತ ಎಲ್ಲ ಜಾತಿಯಲ್ಲೂ ಇಂಥ ಹೆಸರುಗಳಿದ್ದೇ ಇವೆ. ನಾರಾಯಣ– ನಾಣಿಯಾದರೆ ನಾಗೇಂದ್ರ ಕುಮಾರ ನಾಗನಾಗುವುದು, ಮಂಜುನಾಥನು ಮಂಜು ಆಗುವುದು ಹೊಸತೇನಲ್ಲ. ಇದು ವ್ಯವಸ್ಥೆಯ ಒಂದು ಸಹಜ ವರ್ತನೆಯೇ ಹೊರತು ಅಸಹಜವಲ್ಲ. ಇದು ಎಲ್ಲ ಲಿಂಗ ಜಾತಿ ವರ್ಗಗಳಲ್ಲಿಯೂ ಕಂಡುಬರುವ ಸಹಜ ಪ್ರಕ್ರಿಯೆಯಾಗಿದೆ.

ತುಂಬಾಡಿ ರಾಮಯ್ಯನವರ ಮಣೆಗಾರ ಕೃತಿಯಲ್ಲಿ ಬರುವ ಜಾತಿಯ ಬಗೆಗಿನ ವಿವರಗಳು ಆಶ್ಚರ್ಯವನ್ನು ಉಂಟು ಮಾಡುತ್ತದೆ. "ನಮ್ಮೊಂದಿಗಿನ ಹೊಲೆಯರ ನಡವಳಿಕೆ

ಇನ್ನೂ ವಿಚಿತ್ರವಾಗಿತ್ತು. ನಮ್ಮ ಹಳ್ಳಿಯಲ್ಲಿ ಮಣೆಗಾರರಿಗೆ ಒಂದು ಬಾವಿ, ಹೊಲೆಯರಿಗೇ ಒಂದು ಬಾವಿ ಇತ್ತು. ಅವರ ಬಾವಿಯಲ್ಲಿ ನಾವಾಗಲೀ ಅಥವಾ ನಮ್ಮ ಬಾವಿಯಲ್ಲಿ ಹೊಲೆಯರಾಗಲೀ ಎಂದೂ ನೀರು ಸೇದುವಂತಿರಲಿಲ್ಲ! ಹೊಲೆಯರ ಹೆಂಗಸರು ನಮ್ಮ ಹಟ್ಟಿಗೆ ಕೂಲಿಯಾಳುಗಳನ್ನು ಕರೆಯಲು ಬಂದಾಗ, ಕೆಂಡದ ಮೇಲೆ ನಡೆದು ಬರುವಂತೆ ಬಂದು ಹೋಗುತ್ತಿದ್ದರು. ತಮ್ಮ ಹಟ್ಟಿಗೆ ಹೋದ ಕೂಡಲೆ ಸಗಣಿ-ಗಂಜಲ ತುಳಿದು ತಮ್ಮ ಕಾಲುಗಳನ್ನು ಪಾವನವಾಗಿಸಿಕೊಳ್ಳುತ್ತಿದ್ದರು. ಆ ಕಾಲಕ್ಕಾಗಲೆ ಹೊಲೆಯರಲ್ಲಿ ಮನೆಗೊಬ್ಬರಂತೆ ಸರ್ಕಾರಿ ನೌಕರರಿದ್ದರು. ಈ ಕಾರಣಕ್ಕಾಗಿಯೇ ಅವರು ದನದ ಮಾಂಸ, ಕೋಣದ ಮಾಂಸವನ್ನು ತಿನ್ನುವುದನ್ನು ಬಿಟ್ಟಿದ್ದರು. ಆದರೂ ಹೊಲೆಯರ ಪೈಕಿ ತಿರುಮಲಪ್ಪ ತಾತನವರು ತಮ್ಮ ಮಗ ಹೈಸ್ಕೂಲು ಮೇಸ್ತ್ರಾಗಿದ್ದರೂ ತಾವು ಮಾತ್ರ ಕುಲಕಸುಬಾದ ತೋಟಿ ಕೆಲಸ ಬಿಟ್ಟಿರಲಿಲ್ಲ. ಅವರ ಹೆಂಡತಿ ಮುದ್ದಕ್ಕ ನಮ್ಮ ಮನೆಗಳ ಹತ್ತಿರ ಬಂದು ದನದ ಮಾಂಸ ನಮ್ಮಿಂದ ತೆಗೆದುಕೊಂಡು ಹೋಗಿ ಕದ್ದು-ಮುಚ್ಚಿ ತಿನ್ನುತ್ತಿದ್ದರು. ಭೀಮಣ್ಣ ಮೇಸ್ತ್ರು, ಚಿಕ್ಕಪ್ಪಯ್ಯ ಮೇಸ್ತ್ರು ಯಾವ ಎಗ್ಗೂ ಇಲ್ಲದೆ ನಮ್ಮ ಹಟ್ಟಿಗೆ ಬಂದು ಚಪ್ಪಲಿ ರಿಪೇರಿ ಮಾಡಿಸಿಕೊಳ್ಳುತ್ತಿದ್ದರು.”[೧೫]

ಹೊಲೆಯರು ಮಣೆಗಾರರು ಸಾಮಾಜಿಕವಾಗಿ ಕೆಳಸ್ತರದಲ್ಲಿದ್ದರೂ ಅವರಲ್ಲಿ ಇದ್ದ ಶ್ರೇಣೀಕರಣ, ಭೇದಭಾವ ಆಶ್ಚರ್ಯ ಮೂಡಿಸುತ್ತದೆ. ಮೇಲ್ಜಾತಿಯ ಬಾವಿಯನ್ನು ಕೆಳ ಜಾತಿಯವರು ಮುಟ್ಟುತ್ತಿರಲಿಲ್ಲ ಎನ್ನುವ ಹಾಗೆ ಹೊಲೆಯರು ಮತ್ತು ಮಣೆಗಾರರಲ್ಲಿ ಬಾವಿ ನೀರಿಗೂ ನಿಷೇಧ ಇತ್ತೆಂದು ತಿಳಿಯುತ್ತದೆ. ಹೊಲೆಯರಾದರೂ ಮಣೆಗಾರರಿಗಿಂತ ತಾವು ಮೇಲೆಂಬ ಭಾವನೆ ಇಲ್ಲಿ ಹೊಲೆಯರಿಗಿದೆ. ಅದಕ್ಕಾಗಿಯೇ ಸಗಣಿ ಗಂಜಲಗಳನ್ನು ಹಾಕಿ ಕಾಲನ್ನು ಪಾವನ ಮಾಡಿಕೊಳ್ಳುತ್ತಿದ್ದರು. ಆ ಕಾಲದಲ್ಲೇ ಮೀಸಲಾತಿಯ ಪರಿಣಾಮದಿಂದ ಸರ್ಕಾರಿ ನೌಕರಿಯಲ್ಲಿದ್ದುದು ಸಾಮಾಜಿಕ ಬದಲಾವಣೆಯನ್ನು ಹೇಳುತ್ತದೆ. ಇಲ್ಲಿ ಜಾತಿ ಆಚರಣೆ ತುಂಬಾ ಸೂಕ್ಷ್ಮ ನೆಲೆಯಲ್ಲಿದೆ. ಅಂದರೆ ಶ್ರೇಣೀಕರಣ ಎಲ್ಲ ನೆಲೆಗಳಲ್ಲಿಯೂ ಕೆಲಸ ಮಾಡುತ್ತಿದೆ. ವೃತ್ತಿಯಿಂದ ಜಾತಿ ಆಚರಣೆ ಇದ್ದದ್ದು ಸಾಮಾಜಿಕ ಬದಲಾವಣೆಯಿಂದ ವೃತ್ತಿಯನ್ನು ಬಿಡುವಂತೆ ಮಾಡಿದೆ. ವೃತ್ತಿಗೂ ಜಾತಿಗೂ ನಿಕಟ ಸಂಬಂಧವಿದೆ. ವೃತ್ತಿ ಬದಲಾವಣೆಯಿಂದ ನಿಧಾನವಾಗಿ ಜಾತೀಯತೆಯ ಭೂತ ಸ್ವಲ್ಪ ಮಟ್ಟಿಗೆ ಬಿಡಿಸಿಕೊಂಡಂತಾಗಿದೆ. ಅದಕ್ಕೆ ಸರ್ಕಾರದ ಅಂಗೀಕಾರವೂ ಇದ್ದುದರಿಂದ ಸಮಾಜ ಬದಲಾವಣೆಯಾಗಿದೆ. ಯಾವುದೇ ಬದಲಾವಣೆಗೆ ಸಮಾಜದ ಮನಸ್ಸಿಗಿಂತ ಪ್ರಭುತ್ವದ ಅಂಗೀಕಾರ ಕೂಡ ಮುಖ್ಯವಾಗುತ್ತದೆ.

ಹೆಣದ ದುಡ್ಡು ಮತ್ತು ಮದುವೆ ಊಟ-ಮಾಲಗತ್ತಿ ಅವರೇ ಹೇಳುವ ಹಾಗೆ-ಊರಲ್ಲಿ ಯಾರು ಸತ್ತರೂ ನಮಗೆ ಸಂತೋಷವೇ-ಒಬ್ಬರ ಸಂತೋಷ ಇನ್ನೊಬ್ಬರ ದುಃಖಕ್ಕೆ

ಮೂಲವಾಗುತ್ತದೆ. ಹಾಗೆ "ವೀರಶೈವರ ಮನೆಯಲ್ಲಿ ಯಾರೋ ಸತ್ತಾಗ ಹೆಣ ಬ್ಯಾಂಡ್ ಬಾಜಾದೊಂದಿಗೆ ,ಸ್ಮಶಾನಕ್ಕೆ ತೆಗೆದುಕೊಂಡು ಹೋಗುವಾಗ ಹೆಣದ ಮೇಲೆ ಹಣ ತೂರುವುದೊಂದು ಸಂಪ್ರದಾಯ. ಅದು ಅವರಿಗೆ ಪ್ರತಿಷ್ಠೆಯ ಹೆಗ್ಗುರುತು. ನಾವು ಬಂದಿರುವುದನ್ನು ಖಚಿತ ಪಡಿಸಿಕೊಂಡೇ ಹೆಣವನ್ನು ಮೇಲಕ್ಕೆ ಎತ್ತುತ್ತಿದ್ದರು. ಹೆಣದ ಮೇಲೆ ತೂರುವ ಹಣ ನೆಲಕ್ಕೆ ಬಿದ್ದಮೇಲೆ ಕಚ್ಚಾಡಿ ಎತ್ತಿಕೊಳ್ಳುವುದು ದಲಿತರ ಕೆಲಸ. ದಲಿತರು ಇರದೇ ಹೋದರೆ ಅವರು ತೂರುವ ಹಣಕ್ಕೆ ಬೆಲೆಯಾದರೂ ಏನು? ಅವರು ಹಣ ತೂರಬೇಕು ತೂರಿದ ಹಣ ಉರುಳುತ್ತ ಹಾಸುಗಲ್ಲಿನ ರಸ್ತೆ ಇದ್ದಾಗ ಹೆಣ ಹೊತ್ತವರ ಕಾಲಲ್ಲಿ, ಹಿಂದೆ ಅಳುತ್ತ ಬರುವವರ ಕಾಲಲ್ಲಿ ಹೋಗಬೇಕು. ಅವರು ಅದನ್ನ ದಾಟಿ ಪಾಪ ಕಳೆದುಕೊಳ್ಳಬೇಕು. ಅವರೆಲ್ಲ ತುಳಿದು ಹೋದ ಮೇಲೆ ನಾವು ಅದನ್ನು ಎತ್ತಿಕೊಳ್ಳಬೇಕು. ಅವರ ಕಾಲಡಿಯಲ್ಲಿ ಹೋಗಿ ಅವರಿಗೆ ತೊಡಕಾಲು ಬಿದ್ದಾಗ ಅವರು ನೆಲಕ್ಕೆ ಬೀಳುವ ಸಂದರ್ಭ. ಆಗ ಅವರ ಗಾಂಭೀರ್ಯ ಅಲ್ಲಿಂದ ಓಡಿಹೋಗುತ್ತಿತ್ತು. ಕೆಲಸಲ ನಮ್ಮನ್ನು ಕಾಯುವುದಕ್ಕಾಗಿಯೇ ಕೋಲು ಹಿಡಿದು ಆಳುಗಳನ್ನು ನಿಲ್ಲಿಸುತ್ತಿದ್ದರು. ನಮಗೆ ಅದು ಸ್ಪರ್ಧೆಯ ಕ್ರೀಡಾಂಗಣವಾಗಿತ್ತು. ಆ ನಾಣ್ಯಕ್ಕಾಗಿ ನಮ್ಮ ನಮ್ಮಲ್ಲಿಯೇ ಕಚ್ಚಾಟಗಳಾಗುತ್ತಿದ್ದವು."[೧೬] ಎನ್ನುವಲ್ಲಿ ದಲಿತರು ಬಂದದ್ದನ್ನು ಖಚಿತಪಡಿಸಿ ಕೊಂಡೇ ಹೆಣ ಎತ್ತುತ್ತಿದ್ದರು ಎನ್ನುವ ವಾಕ್ಯಕ್ಕೂ ಕೆಲಸಲ ನಮ್ಮನ್ನು ಕಾಯುವುದಕ್ಕಾಗಿಯೇ ಕೋಲು ಹಿಡಿದು ಆಳುಗಳನ್ನು ನಿಲ್ಲಿಸುತ್ತಿದ್ದರು ಅನ್ನುವಲ್ಲಿ ವಿರೋಧಾಭಾಸವಿದೆ. ದಲಿತರಿಗೋಸ್ಕರ ಕಾಯುವುದಾದರೆ ಮತ್ತು ಕೋಲು ಹಿಡಿದುಕೊಂಡು ನಿಲ್ಲುವ ಅಗತ್ಯವಾದರೂ ಏನಿದೆ? ಅಲ್ಲದೇ ಹೆಣದ ದುಡ್ಡು ತುಳಿಯುವುದರ ಮೂಲಕ ಯಾರ ಪಾಪ ಕಳೆಯುತ್ತಿದೆ ದಲಿತರದೋ ಅಥವ ಸಂಬಂಧಿಕರದೊ? ಎನ್ನುವ ಪ್ರಶ್ನೆ ಕೂಡ ಇದೆ.

ಅರವಿಂದ ಮಾಲಗತ್ತಿಯವರೇ ಹೇಳುವ ಹಾಗೆ, "ಬೆದಗಿ ಬಿದ್ದ ಎಮ್ಮೆಯ ಮೇಲೆ ಹಾರಿಸಲು ನಮ್ಮೂರಿನಲ್ಲಿ ಕೋಣವಿರಲಿಲ್ಲ. ನಮ್ಮೂರಿನ ಪಕ್ಕದ ಎರಡು ಹಳ್ಳಿಗಳಲ್ಲಿ ಅಂದರೆ ಕುಂಟೋಜಿ ಮತ್ತು ಬಸರಕೋಡ ಎಂಬ ಹಳ್ಳಿಗಳಲ್ಲಿ ಎರಡು ಕೋಣಗಳಿದ್ದವು. ಆ ಕೋಣಗಳನ್ನು ಊರಿನ ಪ್ರಮುಖರೇ ಸಾಕಿದ್ದರು. ಸಾಕಿದ ಕೋಣಗಳ ಕೆಲಸವೆಂದರೆ ಬೆದಗಿ ಬಿದ್ದ ಎಮ್ಮೆಯ ಮೇಲೆ ಹಾರುವುದು. ಕಾಲು ಕೆದರಿ "ಬುಸ್ಸು"ಗುಟ್ಟುವುದು. ಆ ಊರ ಎಮ್ಮೆಗಳ ರಾಜನಷ್ಟೇ ಆಗಿರದೇ ಆತ ಸುತ್ತಲೂರಿನ ಎಮ್ಮೆವ್ವಗಳ ಅರಸನೂ ಆಗಿರುತ್ತಿದ್ದ. ಕುಂಟೋಜಿಗೆ ತಲುಪಿದಾಗ ಅಲ್ಲಿ, "ಅಲ್ಲವ್ವ ಮುದುಕಿ ನಿನಗೆ ಈ ಮೊದಲೊಮ್ಮೆ ಬಂದಾಗ ಹೇಳಿದ್ದಿಲ್ಲ. ಕ್ವಾಣದ ಬೀಜ ಒಡೆಸಿವಿ, ಅದು ಎಮ್ಮಿ ಮ್ಯಾಲಿ ಬಿಡುದಿಲ್ಲ. ಮಟ್ಟಿಗಿ ಹಚ್ಚೀವಿ ಅಂತ ಹೇಳಿಲ್ಲ ಎಂದ ಅಜ್ಜಿ ಯಾವ ಪರಿಯಲ್ಲಿ ಬೇಡಿಕೊಂಡರೂ ಪ್ರಯೋಜನವಾಗಲಿಲ್ಲ. ಕುಂಟೋಜಿಗೆ ಬಂದರೂ ಪ್ರಯೋಜನವಾಗದ್ದಕ್ಕೆ ಅಜ್ಜಿ ಮತ್ತು ಮೊಮ್ಮಗ ಬಸರಕೋಡಕ್ಕೆ ಬರುತ್ತಾರೆ. "ದೇಸಾಯಿಯವರ

ಮನೆಯ ಹಿತ್ತಲ ಬಾಗಿಲಿಗೆ ಎಮ್ಮೆಯೊಂದಿಗೆ ನಾವು ಬಂದು ನಿಂತೆವು. ಆದರೆ ಅಲ್ಲಿಯೂ ಆಳರಸರ ರಾಜಕೀಯವೇ ಅಧಿಕವಾಗಿತ್ತೆಂದು ತೋರುತ್ತದೆ. ಹೀಗಾಗಿ ಕುಂಟೋಜಿಯಲ್ಲಾದ ಹಾಗೆ ಇಲ್ಲಿಯೂ ಆಯಿತು. ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಎಮ್ಮೆಯೊಂದಿಗೆ ನಮ್ಮೂರಿಗೆ ಹೊರಡಲು ಪಯಣ ಪ್ರಾರಂಭವಾಯಿತು. ಅಜ್ಜಿ ನಿಂತಲ್ಲಿಯೇ ಬಾಯಿಬಡಿಯ ತೊಡಗಿದಳು. ನಮ್ಮ ಎಮ್ಮೆ ಇದ್ದಕ್ಕಿದ್ದಂತೆ ಓಟಕೊಟ್ಟಿತು. ಆಗ ಅಜ್ಜಿಯ ಬಾಯಿ ಇನ್ನೂ ಜೋರಾಯಿತು. ಆತ ಅಜ್ಜಿಯನ್ನೊಮ್ಮೆ ತಮ್ಮ ದನಗಳನ್ನೊಮ್ಮೆ ನೋಡುತ್ತಿದ್ದ. ಆಗಲೇ ಆ ಯುವಕನ ಕೈಯಿಂದ ಕೋಣ ಜಾರಿಕೊಂಡಿತ್ತು. ಎಮ್ಮೆ ಮುಂದೆ ಮುಂದೆ ಓಡುತ್ತಿತ್ತು. ಯುವಕನ ಕೈಯಿಂದ ತಪ್ಪಿಸಕೊಂಡ ಕೋಣ ಅದೇ ವೇಗದಲ್ಲಿಯೇ ಪಲಾಯನ ಮಾಡುತ್ತಿತ್ತು. ಎತ್ತಿನ ಹಿಂದೆ ಇದ್ದ ಯುವಕನಿಗೆ ಇನ್ನುಳಿದ ದನಗಳನ್ನು ಬಿಟ್ಟು ಕೋಣವನ್ನು ಬೆನ್ನಟ್ಟಿಕೊಂಡು ಓಡುವ ಮನಸ್ಸಾಗಿರಲಿಕ್ಕಿಲ್ಲ. ಅನಂತರದಲ್ಲಿ ಓಡಿ ಬಂದ ವ್ಯಕ್ತಿ ಕೆಲ ಸಮಯ ಹಿಂಬಾಲಿಸಿದ, ಪ್ರಯೋಜನವಾಗದೇ ಹೋದಾಗ ಅಜ್ಜಿಯನ್ನು ದುರುಗುಟ್ಟಿಕೊಂಡು ನೋಡತೊಡಗಿದನು. ಕತ್ತಲಾದರೂ ಎಮ್ಮೆ ಸಿಗದೇ ನಿರಾಶೆಯ ಉಸಿರಿನ ಭಾರ ಹೊತ್ತು ಮನೆಗೆ ತಲುಪಿದೆವು. ಬೆಳಿಗ್ಗೆ ಎದ್ದು ನೋಡಿದರೆ, ನಮ್ಮ ಮನೆಯ ಹಿತ್ತಲಲ್ಲಿ ದೇಸಾಯಿಯವರ ಕೋಣ ಮತ್ತು ನಮ್ಮ ಎಮ್ಮೆ ಎರಡೂ ಬಂದು ನಿಂತಿದೆ"[೧೭] ಜಾತಿಯ ಗೊಡವೆಯೇ ಇಲ್ಲದ ಕೋಣ ಮತ್ತು ಎಮ್ಮೆಗೂ ಮನುಷ್ಯನಿಗೆ ಹಿಡಿದ ಜಾತಿಯ ಭೂತವನ್ನು ಆರೋಪಿಸುವುದು ಕಂಡುಬರುತ್ತದೆ.

!ಅರವಿಂದ ಮಾಲಗತ್ತಿಯವರು ಮನುಷ್ಯರು ಯಾರೂ ಅನುಭವಿಸಲಾಗದ ಅನುಭವಗಳನ್ನು ಈ ರೀತಿ ಬರೆಯುತ್ತಾರೆ."ಆ ಕೊಳದ ನೀರು ಎಲ್ಲೆಲ್ಲಿಂದ ಸಂಗ್ರಹಿಸಿಕೊಂಡು ಹರಿಯುತ್ತಿತ್ತು ಎನ್ನುವುದು ಅಂದು ನನಗೆ ಗೌಪ್ಯದ ವಿಚಾರವಾಗಿದ್ದರೂ ಇಂದು ಅದನ್ನು ಸ್ಮರಿಸಿಕೊಂಡರೆ ಹೇಸಿಗೆಯೆನಿಸುತ್ತದೆ. ಊರ ಜನಗಳ ಮನೆಯ ಒಳಚರಂಡಿಯ ನೀರು ಅದಾಗಿತ್ತು. ಹೀಗಾಗಿ ವರ್ಷವೆಲ್ಲ ಬತ್ತದ ಗಂಗೆಯಾಗಿ ಹರಿಯುತ್ತಿತ್ತು. ಒಮ್ಮೊಮ್ಮೆ ಬಟ್ಟೆ ತೊಳೆಯುವಾಗ 'ಪ್ರಸಾದ'ವೂ ಬರುತ್ತಿತ್ತು. ಆಗ ಬಟ್ಟೆ ತೊಳೆಯುವುದನ್ನು ಬಿಟ್ಟು ಅದು ಮುಂದಕ್ಕೆ ಹೋಗಲು ದಾರಿ ಮಾಡಿ ಕೊಡುತ್ತಿದ್ದರು. ಆದರೆ ನಮ್ಮ ಅವ್ವೆಯವರಿಗೆ ಅದು ಗುಡ್ಡದ ನೀರು ಎನ್ನುವ ಭ್ರಮೆ! ಇಂಥ ಒಳಚರಂಡಿಯ ನೀರಿನಲ್ಲಿ ಸ್ನಾನ ಮಾಡಿದ್ದೀರಾ? ಬಟ್ಟೆ ತೊಳೆದಿದ್ದೀರಾ? ಅವೇ ನೀರು ಬಾಯಿಯಲ್ಲಿ ಹಾಕಿಕೊಂಡು ಹಲ್ಲುಜ್ಜಿದ್ದೀರ?"[೧೮] ಯಾರೂ ಅನುಭವಿಸಿರದ ನೋವುಗಳನ್ನು, ಅನುಭವಗಳನ್ನು ಮಾಲಗತ್ತಿ ಅವರು ಇಲ್ಲಿ ದಾಖಲಿಸಿದ್ದಾರೆ. ಸಾಮಾಜಿಕವಾಗಿ ದಲಿತರನ್ನು ಮುಖ್ಯವಾಹಿನಿಯಿಂದ ದೂರವಿಟ್ಟಿದ್ದು ಅವರು ಅದರಿಂದ ಅನುಭವಿಸಿದ ನೋವು, ಅವಮಾನ ವ್ಯಕ್ತವಾಗಿದೆ. ಒಳಚರಂಡಿಯ ನೀರಿನಲ್ಲಿ ಸ್ನಾನ ಮಾಡುವುದು, ಹಲ್ಲುಜ್ಜುವುದು ಯಾವ

ಮನುಷ್ಯರಿಗೂ, ಯಾವ ಜಾತಿಯವರಿಗೂ ಸಾಧ್ಯವಾಗಲಾರದ್ದು, ಇಂಥ ಅನುಭವಗಳೆಲ್ಲ ಭಾರತದಲ್ಲಿ ಕೇವಲ ಕೆಳ ಜಾತಿಯಲ್ಲಿ ಹುಟ್ಟಿದ ಕಾರಣಕ್ಕೆ ಮಾತ್ರ ಸಾಧ್ಯವಾಗಿದೆ.

ಲಕ್ಷ್ಮಣ ಗಾಯಕವಾಡ ಅವರ ಉಚಲ್ಯ ಕೃತಿಯಲ್ಲಿ "ಹೊಲ ಮನೆಯಿಲ್ಲ. ನಿಶ್ಚಿತವಾದ ಒಂದು ಊರಿಲ್ಲ. ಅಷ್ಟೇ ಏಕೆ? ಜಾತಿಯೂ ಇಲ್ಲದಂಥ ಒಂದು ಅಲೆಮಾರಿ ಪಂಗಡದಲ್ಲಿ ಜನಿಸಿದೆ. ನಮ್ಮದು ಕಳ್ಳರ ಜಾತಿ ಎಂಬ ಕಾರಣಕ್ಕಾಗಿ ಯಾರೂ ಅಪ್ಪನಿಗೆ ಕೆಲಸ ಕೊಡುತ್ತಿರಲಿಲ್ಲ. ಧೋಂಡಪ್ಪನನ್ನು ಹೊಲ ಕೆಲಸಕ್ಕೆ ಕಳಿಸುತ್ತಿರಲಿಲ್ಲ. ಕೊನೆಗೆ ಮನೆ ಖರ್ಚು ಸಾಗಿಸಲು ಅಜ್ಜಿಯೇ ಕಳ್ಳ ಕಸುಬು ಪ್ರಾರಂಭಿಸಿದಳು. ಜಾತ್ರೆಯಲ್ಲಿ ಮಕ್ಕಳ ಹಾರ, ಹೆಂಗಸರ ಕೊರಳ ಹಾರ, ರಿಂಗು, ಓಲೆ ಇತ್ಯಾದಿ ಹರಿತವಾದ ಬ್ಲೇಡಿನಿಂದ ಕತ್ತರಿಸಿ ಕಳ್ಳತನ ಮಾಡುತ್ತಿದ್ದಳು. ಅದನ್ನು ಸಾಹುಕಾರರಿಗೆ ಮಾರಿ ಮನೆ ನಡೆಸುತ್ತಿದ್ದಳು. ಒಮ್ಮೊಮ್ಮೆ 'ಉಚಲ್ಯ' (ಗಂಟು ಚೋರ) ಆನರ ಮನೆಗಳನ್ನು ತಪಾಸಣೆ ಮಾಡಲು ಪೋಲಿಸರು ಬರುತ್ತಿದ್ದರು. ಆಗ ಕದ್ದ ಮಾಲು ತೆಗೆದುಕೊಂಡ ಸಾಹುಕಾರ, ಊರ ಪೋಲೀಸ ಪಾಟೀಲರು ಪೋಲಿಸರಿಗೆ ಒಂದಿಷ್ಟು ಹಣ ಕೊಟ್ಟು ಸಮಾಧಾನಪಡಿಸಿ ಕಳಿಸುತ್ತಿದ್ದರು. ಪೋಲೀಸ ಪಾಟೀಲರ ಅನುಮತಿ ಪತ್ರವಿಲ್ಲದೇ ನಮ್ಮ ಜಾತಿಯ ಜನ ಪರ ಊರಿಗೆ ಹೋಗುವ ಹಾಗಿರಲಿಲ್ಲ."[೧೯]

ಉಚಲ್ಯಾ ಕೃತಿಯಲ್ಲಿ ನಿರ್ದಿಷ್ಟ ಜಾತಿಯ ಜನರಿಗೆ ಕೆಲಸ ಮಾಡಲು ಸಮಾಜದಲ್ಲಿ ಅವಕಾಶವಿಲ್ಲ. ಆದರೂ ಹೊಟ್ಟೆಯಂತೂ ಇದೆ. ಅದನ್ನು ತುಂಬಿಸಲು ದಾರಿ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ಅನಿವಾರ್ಯತೆ ಹೊರನೋಟಕ್ಕೆ ವೈಯಕ್ತಿಕ ನೆಲೆಯಂತೆ ಕಂಡರೂ ಆಳದಲ್ಲಿ ಇದು ಸಾಮಾಜಿಕವೇ ಆಗಿದೆ. ಆದರೆ ಕೆಲವೊಮ್ಮೆ ಸಮಾಜ ಕೆಲವು ಬದಲಾವಣೆಯನ್ನು ನಂಬುವುದಿಲ್ಲ. ಉದಾ:ವೇಶ್ಯೆಯಾದವಳು ಒಳ್ಳೆ ರೀತಿ ಬದುಕಲು ಅವಕಾಶ ಕೊಡದಿರುವುದು. ರೌಡಿಯಾದವನು ಸಂಭಾವಿತನಂತೆ ಬದುಕಲು ಅವಕಾಶ ಇಲ್ಲದಿರುವುದು. ಇಲ್ಲಿ ಕದ್ದಂತಹ ಮಾಲನ್ನು ತೆಗೆದುಕೊಳ್ಳುವ ಸಾಹುಕಾರ ಕೂಡ ಅಪ್ರತ್ಯಕ್ಷವಾಗಿ ಕಳ್ಳತನದಲ್ಲಿ ಭಾಗಿಯಾದಂತೆಯೇ ಆಗಿದೆ. ಆದರೂ ಶ್ರೀಮಂತರಿಗೊಂದು ನ್ಯಾಯ ಬಡವರಿಗೆ ಇನ್ನೊಂದು ನ್ಯಾಯ ಇದು ವ್ಯವಸ್ಥೆಯ ತಂತ್ರವಾಗಿದೆ.

ಆತ್ಮಕಥೆಯಲ್ಲಿ ಜಾತಿವ್ಯವಸ್ಥೆಯ ಪ್ರತಿನಿಧೀಕರಣಗೊಳ್ಳುವಾಗ 'ಲಿಂಗ' ಕೂಡ ಪ್ರಮುಖ ಪಾತ್ರವಹಿಸುತ್ತದೆ. ಮೇಲ್ಜಾತಿಯ ಪುರುಷರು ಕೆಳಜಾತಿಯ ಮಹಿಳೆಯನ್ನು ನೋಡುವ ರೀತಿಯನ್ನು ನೇತ್ರರವರು ಹೀಗೆ ಹೇಳುತ್ತಾರೆ. "ಎಂದಿನಂತೆ ಶಾಲೆ ಮುಗಿದ ನಂತರ ಹುಡುಗರ ಜೊತೆ ಆಟವಾಡಿಕೊಳ್ಳಲು ಹೋದೆ. ಭಜನೆಮನೆಯ ಪಕ್ಕದಲ್ಲಿ ವೆಂಕಟರಮಣಸ್ವಾಮಿ ದೇವಸ್ಥಾನದ ಕಾಂಪೌಂಡಿನೊಳಗೆ ಹೋಗಿ ಆಡುತ್ತಿದ್ದೆವು. ದೇವಸ್ಥಾನಕ್ಕೆ ಬಂದ ಶ್ರೀನಿವಾಸಗೌಡ ನನ್ನ ರಟ್ಟೆ

ಹಿಡಿದು ಎಳೆದು ತಂದು ರಪರಪನೆ ಕೆನ್ನೆಗೆ ಬಾರಿಸಿ ಏ ಏನು, ಮಾನ ಮರ್ಯಾದೆ ಐತೋ ಇಲ್ವೋ ನಿನಗೆ, ಇದೇನಾ ನಿಮ್ಮ ಮನೆಯಲ್ಲಿ ಹೇಳಿಕೊಟ್ಟಿರೋದು. ಎಲ್ಲಿ ಆಟ ಆಡಬೇಕು ಅಂತ ಗೊತ್ತಾಗಲ್ಲ? ಎಂದು ಗದರಿಸಿ ಹೊರಟೇ ಹೋದರು. ಸುಮ್ಮನೇ ಅಳುತ್ತಿದ್ದೆ ಅಷ್ಟೇ. ಆದರೆ ಬೇರೆ ಏನೂ ಯೋಚನೆ ಮಾಡಲಿಕ್ಕೆ ಹೋಗಲಿಲ್ಲ. ಮರುದಿನದಿಂದ ಆ ದೇವಸ್ಥಾನದ ಎದುರು ಹೋಗಲು ಹೆದರುತ್ತಿದ್ದೆ."[೨೦] ಆಗಿನ ಸಂದರ್ಭದಲ್ಲಿ ಕೆಳಜಾತಿಯವರಿಗೆ ದೇವಸ್ಥಾನ ಪ್ರವೇಶ ಇರಲಿಲ್ಲ. ಹಾಗೂ ಕೆಳಜಾತಿಯವರು ದೇವಸ್ಥಾನಕ್ಕೆ ಬಂದಿದ್ದು ಅವರಿಗಿಂತ ಮೇಲ್ಜಾತಿಯವರಾದ ಶ್ರೀನಿವಾಸ ಗೌಡರಿಗೆ ತಪ್ಪಾಗಿ ಕಂಡಿದೆ. ತಪ್ಪನ್ನು ಸರಿಮಾಡುವುದು ಅವರ ಪ್ರಕಾರ ಸರಿಯಾಗಿದೆ. ಇದರಲ್ಲಿ ಆಗಿನ ಸಾಮಾಜಿಕ ಸಂದರ್ಭವನ್ನು ಕಾಣಬಹುದು.

ಸೋಬಾನೆ ಹೊನ್ನಮ್ಮ ಹೇಳುವ ಈ ಮಾತುಗಳು "ಗೌಡರ ಮನೆಯಲ್ಲಿ ಸತ್ತ ದನಕರು ಎಮ್ಮೆಗಳನ್ನು ಸಾಗಿಸಬೇಕಾಗಿತ್ತು. ಅವರ ಮನೆಯ ಸೌದೆಗಳನ್ನು ಒಡೆದು ಮನೆಗೆ ಸಾಗಿಸುವುದು ಇತ್ಯಾದಿ ಕೆಲಸಗಳನ್ನು ಗಂಡಸರು ಮಾಡುತ್ತಿದ್ದರು. ಹೆಂಗಸರು ಬಳಿಯುವುದು, ತಿಪ್ಪೆಗೆ ಹಾಕುವುದು, ಅವರ ಗದ್ದೆಯಲ್ಲಿ ತಳ್ಳು ಬಿಡಿಸುವುದು. ತೆಂಗಿನಕಾಯಿ ಹೊರುವುದು ಇತ್ಯಾದಿ ಕೆಲಸಗಳನ್ನು ಮಾಡಬೇಕಾಗಿತ್ತು. ಇದನ್ನು ಮಾಡುವುದಿಲ್ಲ ಎಂದು ವಿರೋಧಿಸಿದಾಗ ಗೌಡರ ಮನೆಯ ಹೊಲದ ಮೇಲೆ ಹಾದು ನೀರನ್ನು ತರುವುದನ್ನು ತಡೆದರು. ನಮ್ಮ ಮಡಿಕೆ, ಗಡಿಗೆಗಳನ್ನು ಒಡೆದು ಚೂರು ಮಾಡಿದರು. ಅಂದಿನಿಂದ ನಾವು ಗೌಡರ ಬಾವಿಯಲ್ಲಿ ನೀರು ತರುವುದನ್ನು ನಿಲ್ಲಿಸಿದೆವು. ಕಾಲುವೆಯಿಂದ ನೀರು ತರಲಾರಂಭಿಸಿದೆವು."[೨೧]

ಇಲ್ಲಿ ಮೇಲ್ಜಾತಿಯವರು ಹೇಳಿದ್ದನ್ನೆಲ್ಲಾ ಕೇಳಬೇಕಾಗಿಲ್ಲ. ಎನ್ನುವ ಎಚ್ಚರ ಕೆಳಜಾತಿಯವರಿಗೆ ಮೂಡಿದೆ. ಸತ್ತ ದನಗಳನ್ನು ಸಾಗಿಸುವುದು ಕೆಳಜಾತಿಯವರೇ ಮಾಡುವುದು ಮತ್ತು ಮಾಡಬೇಕಾಗಿರುವುದು ಎಂಬ ನಂಬಿಕೆ ಬಲವಾಗಿತ್ತು. ಅದನ್ನು ವಿರೋಧಿಸಿದಾಗ ಅವರನ್ನು ಹತ್ತಿಕ್ಕುವ ಕಾರ್ಯ ಕೂಡ ನಡೆಯುತ್ತದೆ. ಇಲ್ಲಿ ಮೇಲ್ಜಾತಿಯವರ ಹಿಡಿತದಿಂದ ಬಿಡಿಸಿಕೊಳ್ಳುವ ಪ್ರಯತ್ನ ಕಾಣುತ್ತೇವೆ.

ಒಟ್ಟಿನಲ್ಲಿ ಭಾರತದಲ್ಲಿ ಜಾತಿ ಶ್ರೇಣೀಕರಣ ಎಲ್ಲ ನೆಲೆಗಳಲ್ಲಿ ಕೆಲಸ ಮಾಡಿದೆ. ಮೇಲ್ಜಾತಿಯವರಿಗೆ ಮೇಲರಿಮೆಯನ್ನು ಹುಟ್ಟಿಸುವುದರ ಜೊತೆಗೆ ಕೆಳಜಾತಿಯವರಿಗೆ ಕೀಳರಿಮೆಯನ್ನು ಹುಟ್ಟು ಹಾಕಿದೆ. ಕೆಳಜಾತಿಯವರಿಗೆ ಜಾತಿಯಿಂದ ಆದ ತೊಂದರೆ ಒಂದು ರೀತಿಯಾದರೆ ಮೇಲ್ಜಾತಿಯವರು ಇದರಿಂದ ಆರಾಮವಾಗಿದ್ದರಂತೇನೂ ಇಲ್ಲ. ಈ ಅಸಮತೋಲನ ಸರಿಪಡಿಸುವುದಕ್ಕಾಗಿ ಪ್ರಾರಂಭದಲ್ಲಿ ಮೇಲ್ಜಾತಿಯವರೇ ಮುಂಚೂಣಿಯಲ್ಲಿದ್ದ ರೆಂಬುದು ತಿಳಿಯುತ್ತದೆ., ಗಾಂಧೀಜಿ, ಎಚ್.ಎಸ್ ದೊರೆಸ್ವಾಮಿ, ಇಂಥವರ ಬರವಣಿಗೆಯಲ್ಲಿ

ಇದನ್ನು ಗುರುತಿಸುತ್ತೇವೆ. ಕೆಳಜಾತಿಯವರು ಈ ಸಾಮಾಜಿಕ ಅಸಮತೋಲನದಿಂದ ಕೀಳರಿಮೆಯಿಂದ ನರಳಿ ವಿದ್ಯಾಭ್ಯಾಸ ಮತ್ತು ಮೀಸಲಾತಿಯಂಥ ಬೆಳವಣಿಗೆಯಿಂದ ಸಮತೋಲನ ಕಾಪಾಡಿಕೊಳ್ಳಲು ಪ್ರಯತ್ನ ನಡೆದರೂ ನಿರ್ದಿಷ್ಟ ಪ್ರಮಾಣದಲ್ಲಿ ಗುರಿ ಮುಟ್ಟದಿರುವುದು ತಿಳಿಯುತ್ತದೆ. ಕೆಳಜಾತಿಯ ಕೆಲವರಿಗಾದರೂ ಈ ಮೀಸಲಾತಿಯಿಂದ ಅನುಕೂಲವಾಗಿದೆ ಎಂಬುದು ನಿಜ.

ಮಹಿಳೆಗೆ ಮಹಿಳೆಯಾಗಿ ಕೀಳರಿಮೆ ಒಂದು ರೀತಿಯಾದರೆ ಜಾತಿ ಕೀಳರಿಮೆ ಇನ್ನೊಂದು ರೀತಿ. ಇದನ್ನು ಪರಶಿವಮೂರ್ತಿಯವರ ಬರವಣಿಗೆಯಲ್ಲಿ ಹೀಗೆ ಗುರುತಿಸಬಹುದು. 'ನನಗೆ ಹೆಣ್ಣು ಮಗು ಹುಟ್ಟಿದರೆ ನನ್ನದೇನು ತಪ್ಪು? ಯಾಕಿಂಗೆ ನನಗೆ ಚಿತ್ರಹಿಂಸೆ ಕೊಡುತ್ತಾರೆ. ನನ್ನ ಗಂಡ ಇನ್ನೊಂದು ಮದುವೆ ಮಾಡಿಕೊಂಡು ಬಂದಾಗ ನಾನು ಒಂದು ಮಾತೂ ಆಡಲಿಲ್ಲ. ನಿನ್ನ ಕಟ್ಟಿಕೊಂಡು ಜವರಯ್ಯನ ಬಾಳು ಹಾಳಾಯ್ತು ಅಂತ ದೂರುತ್ತಾರೆ ಜನ. ನನ್ನ ಬಾಳು ಹಾಳಾಯಿತಲ್ಲ. ಇದು ಯಾರ ಕಣ್ಣಿಗೂ ಬೀಳಲಿಲ್ವಾ? ಮೂರೊತ್ತೂ ಹಿಟ್ಟು ಬೇಯಿಸುವುದೇ ಆಯ್ತು ಜೀವನ."[೨೨]

ಈ ಪುರುಷ ಪ್ರಧಾನ ಸಮಾಜ ಹೆಣ್ಣು ಮಗು ಹುಟ್ಟಿದರೆ ತಾಯಿ ಕಾರಣ ಎಂದು ನಿಂದಿಸಿದೆ ಆ ಕಾರಣಕ್ಕೆ ಪುರುಷ ಇನ್ನೊಂದು ಮದುವೆ ಮಾಡಿಕೊಳ್ಳುವುದನ್ನು ಸಮಾಜ ಒಪ್ಪಿದೆ. ಅಷ್ಟಲ್ಲದೇ ನಿನ್ನಿಂದ ಅವನ ಬಾಳು ಹಾಳಾಯ್ತು' ಎನ್ನುವುದು ವಾಸ್ತವಕ್ಕೆ ವಿರುದ್ಧವಾಗಿದೆ. ಬಾಳು ಹಾಳಾಗಿದ್ದು ಯಾರದ್ದು? ಹಾಳು ಮಾಡಿದ್ದು ಯಾರು? ಅನುಕೂಲವಾಗಿದ್ದು ಯಾರಿಗೆ? ಅನನುಕೂಲವಾಗಿದ್ದು ಯಾರಿಗೆ? ಇವೆಲ್ಲಕ್ಕೂ ಮಾನವೀಯ ನೆಲೆಯಿಂದ ನೋಡಿದಾಗ ಉತ್ತರ ಸಿಗುತ್ತದೆ. ಇದು ನಿರ್ದಿಷ್ಟ ಜಾತಿಯ ಹೆಣ್ಣಿನ ಮನಸ್ಥಿತಿ ಒಂದೇ ಆಗಿರದೆ ಕೇವಲ ಹೆಣ್ಣಾಗಿರುವುದಕ್ಕೆ ಅನುಭವಿಸುವ ನೋವುಗಳಾಗಿವೆ.

ದಲಿತ ಪುರುಷ ಇತರ ಎಲ್ಲ ಜಾತಿಗಳಿಂದ ಶೋಷಿತನಾಗಿದ್ದರೂ ದಲಿತ ಮಹಿಳೆಗೆ ಶೋಷಕನಾಗಿಯೇ ಇರುತ್ತಾನೆ. ಹಾಗೆಯೇ ಬ್ರಾಹ್ಮಣ ಮಹಿಳೆ ಶೋಷಕ ಜಾತಿಗೆ ಸೇರಿದ್ದರೂ ಬ್ರಾಹ್ಮಣ ಪುರುಷರಿಂದ ಶೋಷಿತಳೇ ಆಗಿದ್ದಾಳೆ.

ಹೆಣ್ಣಿಗೆ ಜಾತಿ ಎನ್ನುವುದಿಲ್ಲ. ಅದು ಒಂದು ರೀತಿಯ ವ್ಯಂಜನ ಇದ್ದಹಾಗೆ ಸ್ವರದ ಜೊತೆ ಸೇರಿದರೆ ಹೇಗೆ ವ್ಯಂಜನಕ್ಕೆ ಅರ್ಥ ಬರುತ್ತದೆಯೋ ಹಾಗೆ. ಅವಳು ಯಾವ ಜಾತಿಯ ಗಂಡನ್ನು ಮದುವೆ ಯಾಗುತ್ತಾಳೋ ಆ ಜಾತಿಯನ್ನು ಪ್ರತಿನಿಧಿಸುತ್ತಾಳೆ. ಸಜಾತಿಯಲ್ಲಿ ಮದುವೆಯಾದರೆ ಈ ವಿಷಯ ಗೋಚರವಾಗುವುದಿಲ್ಲ. ಯಾವ ಜಾತಿಯ ಪುರುಷನನ್ನು ಮದುವೆಯಾದರೂ ಪುರುಷನ ಜಾತಿಯೇ ಇಲ್ಲಿ ಮುಖ್ಯವಾಗುತ್ತದೆ. ಪುರುಷ ಮೇಲ್ಜಾತಿಯವನಿರಲಿ ಅಥವಾ ಕೆಳಜಾತಿಯವನಿರಲಿ ಅಂತರ್ಜಾತಿ ವಿವಾಹವಾದ ಸಂದರ್ಭದಲ್ಲಿ ಗಂಡ ಸತ್ತರೆ

ಅಥವಾ ಬಿಟ್ಟರೆ, ಹೆಣ್ಣು ಯಾವ ಜಾತಿಯೇ ಆಗಿರಲಿ ತನ್ನ ಜಾತಿಯನ್ನು ಮುಂದುವರೆಸುವುದೂ ಕಷ್ಟ, ಜಾತಿಯನ್ನು ಬಿಟ್ಟು ಬದುಕುವುದೂ ಕಷ್ಟ. ಇದು ಜಾತಿಯ ಕಾರಣಕ್ಕೆ ಮಹಿಳೆ ಅನುಭವಿಸುವ ನೋವಾಗಿದೆ.

ಅಂತರ್ಜಾತಿ ಮದುವೆಯಾದ ಸಂದರ್ಭದಲ್ಲಿ ಗಂಡ ಸತ್ತಾಗ ಗಂಡನ ಜಾತಿಯನ್ನು ಮುಂದುವರೆಸುವುದು ಕಷ್ಟ. ತನ್ನ ತಂದೆಯ ಜಾತಿಯನ್ನು ಮುಂದುವರೆಯುವುದೂ ಕಷ್ಟ. ಇಂಥ ಸಂದರ್ಭದಲ್ಲೆಲ್ಲ ಮಹಿಳೆಗೆ ಜಾತಿ ಹೇಗೆ ರಕ್ಷಣೆ ಕೊಡುತ್ತದೆ? ಕೆಲವು ಸಂದರ್ಭದಲ್ಲಿ ಮಹಿಳೆ ಜಾತಿ ಇಲ್ಲದವಳಾದರೂ ಕೂಡ ಜಾತಿ ರಕ್ಷಣೆಯ ಹೊಣೆ ಮಾತ್ರ ಹೆಣ್ಣಿಗಿರುತ್ತದೆ. ಇದು ಪುರುಷಪ್ರಧಾನ ಸಮಾಜದ ತಂತ್ರವಾಗಿದೆ. ಇದು ಹೇಗಿದೆಯೆಂದರೆ ಹೆಣ್ಣು ಹೆಸರಿಗೆ ಯಜಮಾನಿ ಕೆಲಸ ಮಾತ್ರ ಸೇವಕಿಯದು. ಕೇವಲ ಸೇವೆಯೆಂದರೆ ಒಪ್ಪದೇ ಇರುವುದಕ್ಕೆ ನೀನು ಯಜಮಾನಿ ಅಂತ ಉಬ್ಬಿಸಲಾಗುತ್ತದೆ. ಇಲ್ಲಿ ಜಾತಿ ಯಾವ ಸಂದರ್ಭಗಳಲ್ಲಿ ಮಹಿಳೆಗೆ ರಕ್ಷಣೆ ಕೊಡುತ್ತದೆ? ಉತ್ತರ ಕಂಡುಕೊಳ್ಳಬೇಕಾಗಿದೆ.

ಗೀತಾ ನಾಗಭೂಷಣ, "ಹಾರುವರ ಓಣಿಯಲ್ಲಿದ್ದ ನಾನು ಅವರ ಹೆಣ್ಣುಮಕ್ಕಳಂತೆ ಶಾಲೆಗೆ ಹೋಗುವುದು ಮಾತ್ರ ಅದೇ ಗಲ್ಲಿಯ ಸುಂದ್ರಾಬಾಯಿಯಂಥ ಕೆಲ ಮಡಿವಂತ ಮನಸ್ಸುಗಳಿಗೆ ಪಸಂದಿರಲಿಲ್ಲ. ಓದುವುದರಲ್ಲಿ ಅವರ ಮಕ್ಕಳಿಗಿಂತ ತುಸು ಮುಂದಿದ್ದ ನನ್ನ ಬಗ್ಗೆ ಅವರಿಗೆ ಒಳಗೊಳಗೇ ಹೊಟ್ಟೆ ಕಿಚ್ಚಿತ್ತೋ ಏನೊ. ನನ್ನಂಥ ಬಡ ನಿರ್ಗತಿಕ ಕುಟುಂಬದವರಿಗೆ ಅದರಲ್ಲಿಯೂ ತಳವಾರ, ವಾಲೀಕಾರ, ನಾಡೀಕಾರರಂಥ ತೀರ ಹಿಂದುಳಿದ ಜಾತಿಯ ಹೆಣ್ಣು ಮಕ್ಕಳಿಗೆ ಓದುವುದೇ ಒಂದು ಸಂಘರ್ಷವಾಗಿದ್ದ ದಿನಗಳವು. ನಾನು ಅನುಭವಿಸಿದ ಉತ್ತಮರ ತಿರಸ್ಕಾರ ಅಪಮಾನಗಳ ಸೇಡು ಈಗ ಈ ನನ್ನ ಬರಹದ ಮೂಲಕ ತೀರಿಸಿಕೊಳ್ಳುತ್ತಿದ್ದೇನೆಯೇ ಎಂಬ ಗುಮಾನಿಯೂ ಇದೆ. ಆ ಹಾರುವರ ಹೆಂಗಸರು ನನ್ನನ್ನು ಅಪಮಾನಿಸಿದ ಪ್ರಸಂಗಗಳೆಷ್ಟು? ನನ್ನ ಎಳೆ ಮನಸ್ಸನ್ನು ಘಾಸಿಗೊಳಿಸಿದ ಬಗೆಗಳೆಷ್ಟು. ಇಂಥ ಅಪಮಾನದ ನೋವು ನನ್ನೊಬ್ಬಳಿಗೆ ಮಾತ್ರವಲ್ಲ. ಗಲ್ಲಿಯ ಎಲ್ಲ ಶೂದ್ರರಿಗೆ ಆಗುತ್ತಿದ್ದುವಾದರೂ ಅವರ‍್ಯಾರೂ ನನ್ನಷ್ಟು ಕೀಳರಿಮೆ ಅನುಭವಿಸುತ್ತಿರಲಿಲ್ಲ."[೨೩]

ಇಲ್ಲಿ ಇಬ್ಬರು ಮಹಿಳೆಯರಾದರೂ ಒಬ್ಬ ಸುಂದ್ರಾಬಾಯಿಯಂತ ಮೇಲ್ಜಾತಿಯ ಹೆಣ್ಣು ಗೀತಾಳಂಥ ಕೆಳಜಾತಿಯ ಹೆಣ್ಣನ್ನು ಕೀಳಾಗಿ ನಡೆಸಿಕೊಂಡಿರುವುದು. ಪುರುಷ ಪ್ರಧಾನ ವ್ಯವಸ್ಥೆಯ ಬಿಗಿಮುಷ್ಟಿಯಲ್ಲಿರುವುದು ಕಂಡುಬರುತ್ತದೆ. ಇಲ್ಲಿ ಕೆಳಜಾತಿಯ ಹೆಣ್ಣಿನಲ್ಲಿ ನೋವು ಅಪಮಾನ ಕಂಡರೆ ಮೇಲ್ಜಾತಿಯ ಹೆಣ್ಣಿಗೆ ಇವೆಲ್ಲವೂ ಸಹಜ ಎನ್ನುವಂತೆ ಚಿತ್ರಿತವಾಗಿದೆ. ಈ ಪುರುಷ ಪ್ರಧಾನತೆಯಿಂದ ಬಿಡಿಸಿಕೊಳ್ಳುವ ಮನಃಸ್ಥಿತಿಯಿದ್ದ ಗೀತಾಗೆ ನೋವು ಕೀಳರಿಮೆಯಾಗಿದೆ

ಮತ್ತು ಬೇರೆಯವರು ಇದನ್ನು ಅನುಭವಿಸಿದರೂ ನನ್ನಷ್ಟು ಅನುಭವಿಸುತ್ತಿರಲಿಲ್ಲ ಎನ್ನುವಲ್ಲಿ ಅವರು ವ್ಯವಸ್ಥೆಯನ್ನು ಪ್ರಶ್ನೆ ಮಾಡದೇ ಒಪ್ಪಿಕೊಂಡಿರುವುದರ ಸೂಚನೆಯೂ ಆಗಿದೆ.

ಹೆಣ್ಣು ಯಾವ ಜಾತಿಯೇ ಆಗಿರಲಿ. ಗಂಡಿನ ಮೂಲಕವೇ ಅವಳ ಜಾತಿಯನ್ನು ಅಳೆಯಲಾಗುತ್ತದೆ. ಅಂತರ್ಜಾತಿ ವಿವಾಹವಾದ ಶೈಲಜ ಒಂದು ರೀತಿಯಾದರೆ, ಅಕ್ರಮ ಸಂತಾನದ ಶರಣಕುಮಾರನ ತಾಯಿಯ ಪರಿಸ್ಥಿತಿ ಇನ್ನೊಂದು ಬಗೆಯದು. ಹೇಗೆಂದರೆ ಶರಣಕುಮಾರ ಹೇಳುವ ಈ ಮಾತು, "ನಾನು ಸವರ್ಣನೇ? ಆದರೆ ತಾಯಿ ಅಸ್ಪೃಶ್ಯಳು, ನಾನು ಅಸ್ಪೃಶ್ಯನೇ? ಆದರೆ ತಂದೆ ಸವರ್ಣ. ನಾನು ಜರಾಸಂಧನಂತೆ. ಅರ್ಧ ಊರಲ್ಲಿ ಅರ್ಧ ಊರ ಹೊರಗೆ ಚೆಲ್ಲಲ್ಪಟ್ಟವನು. ನಾನು ಯಾರು? ನನ್ನ ಗುರಿ ಯಾವುದು?"[೨೪]

ಜಾತಿಯ ಬಗ್ಗೆ ಮಾಡುತ್ತಿರುವ ಭೇದವನ್ನು ಕುರಿತು ಹೀಗೆ ಹೇಳುತ್ತಾರೆ, "ಕುಡುಕರಿಗೆ ಹೊಲೆಯರ ಮನೆಯ ಸಾರಾಯಿ ನಡೆಯುತ್ತಿತ್ತು. ಆದರೆ ನೀರು ನಡೆಯುತ್ತಿರಲಿಲ್ಲ. ಹೆಂಗಸು ಬೇಕಾಗುತ್ತಿತ್ತು. ಆದರೆ ಆಕೆಯ ಕೈಯ ರೊಟ್ಟಿ ನಡೆಯುತ್ತಿರಲಿಲ್ಲ"(ಪು.೪೫).

ಅನಿವಾರ್ಯವಾಗಿ ವೇಶ್ಯಾವೃತ್ತಿ ಕೈಗೊಂಡ ಓರ್ವ ಅಸ್ಪೃಶ್ಯ ಮಹಿಳೆ ಹಾಗೂ ಲಿಂಗಾಯತ ಗೌಡನ ಸಂತಾನವಾಗಿ ಹುಟ್ಟಿದ ಶರಣಕುಮಾರನಿಗೆ, "ನಾನು ನಾಲ್ಕು ಐದು ದಿನ ಶಾಲೆಗೆ ಹೋದ ಬಳಿಕ ಮಾಸ್ತರು ನನ್ನ ಹೆಸರನ್ನು ಹಾಜರಿಯಲ್ಲಿ ಹಾಕಲು ನಿರ್ಧರಿಸಿದ. ನನ್ನ ತಂದೆಯ ಹೆಸರು ಕೇಳಿದ. ಆದರೆ ನನಗೆ ತಂದೆಯ ಹೆಸರು ಗೊತ್ತಿರಲಿಲ್ಲ. ನನಗೂ ತಂದೆ ಇರುವ ಸಾಧ್ಯತೆ ಇದೆ ಎಂಬ ಕಲ್ಪನೆ ನನಗೆ ವಿಚಿತ್ರವಾಗಿ ಕಂಡಿತು"(ಪು.೫೯).

"ಕಾಕಾನಿಗೆ ಎರಡನೆಯ ಮನೆಯಿದೆ, ಹೆಂಡತಿ ಮಕ್ಕಳಿದ್ದಾರೆ ಆದರೆ ಕಾಕಾ ನಮ್ಮ ಮನೆಗೇಕೆ ಬರುತ್ತಾನೆ? ಆದರೆ ನನಗೆ ಕಾಕಾ ಅವ್ವ ಗಂಡ ಹೆಂಡತಿ ಎಂದೆನಿಸುತ್ತಿತ್ತು. ಆದರೆ ಎಲ್ಲವೂ ರಹಸ್ಯವಾಗಿ ತೋರುತ್ತಿತ್ತು. ನಮ್ಮ ಮನೆಗೆ ಕಾಕಾ ಕಣ್ಣು ತಪ್ಪಿಸಿ ಬರುತ್ತಿದ್ದ, ಕುಳಿತುಕೊಳ್ಳುತ್ತಿದ್ದ, ಮಾತನಾಡುತ್ತಿದ್ದ, ನಗುತ್ತಿದ್ದ, ಮನೆಯ ಮನುಷ್ಯನಂತೆ ವರ್ತಿಸುತ್ತಿದ್ದ, ಕಾಕಾ ನಮಗೆ ತಂದೆಯಂತೆ ಆಧಾರವಾಗಿದ್ದ. ಇನ್ನೊಂದು ಸಲ ಒಂದು ಮನೆಯಲ್ಲಿ ನನಗೆ ಕಾಕಾ ಕಂಡನು. ಕಾಕಾನ ವಾಡೆ ಸಿಕ್ಕಿತು. ಇನ್ನು ಕಾಕಾ ನನ್ನನ್ನು ನೋಡಬೇಕು, ಮನೆಯೊಳಗೆ ಕರೆಯಬೇಕು, ಉಣ್ಣಲು ಕೊಡಬೇಕು, ಇದಕ್ಕಾಗಿ ನಾನು ಕಾಕಾನ ಮನೆಯ ಮುಂದೆ ಮುದ್ದಾಂ ತಿರುಗಾಡಿದೆ. ಕಾಕಾ ನನ್ನನ್ನು ನೋಡಿದ, ಕಾಕಾ ನನ್ನನ್ನು ಒಳಗೆ ಕರೆಯಬಹುದೆಂದು ಭಾವಿಸಿದೆ. ಆದರೆ ಕಾಕಾ ಮನೆಯ ಬಾಗಿಲನ್ನು ಮುಚ್ಚಿಕೊಂಡನು ಮತ್ತು ನಾನು ಕುಂದಿದ ಮುಖದಿಂದ ಮರಳಿದೆ.

ಕಾಕಾ ಮನೆಗೆ ಬಂದರೆ ತಂದೆಯಂತೆ ವರ್ತಿಸುತ್ತಾನೆ. ಆದರೆ ಈಗ ಪರಕೀಯನಂತೆ ಏಕೆ ನಡೆದುಕೊಂಡ? ನನ್ನನ್ನೇಕೆ ಮಾತನಾಡಿಸಲಿಲ್ಲ? ಕಾಕಾ ನನಗೆ ತಂದೆಯಂತೆ ತೋರಲಿಲ್ಲ. ಕಾಕಾನ ಬಗೆಗೆ ಸಿಟ್ಟು ಬರುತ್ತಿತ್ತು. ನಾನೂ ಕೂಡ ಎಂದಾದರೂ ಕಾಕಾನ ತಾಯಿಯ ಮೇಲೆ ಬಲಾತ್ಕಾರ ಮಾಡಬೇಕೆಂಬ ಸಂತಾಪವಾಗುತ್ತಿತ್ತು, ತಲೆಯಲ್ಲಿ ಬೆಂಕಿ ಹತ್ತಿಕೊಳ್ಳುತ್ತಿತ್ತು”[೨೫]

ಇಲ್ಲಿ ಹೆಣ್ಣಿಗೆ ಗಂಡಿನ ಜೊತೆ ಗುರುತಿಸಿಕೊಳ್ಳಲಾಗದೇ ಹೋದದ್ದಕ್ಕೆ ಮಗ(ಪುರುಷ)ನಾದ ಶರಣಕುಮಾರ ಕೂಡ ಇಲ್ಲಿ ಜಾತಿಯನ್ನು ಗುರುತಿಸಿಕೊಳ್ಳಲಾಗುತ್ತಿಲ್ಲ. ಅವರೇ ಹೇಳುವ “ನಾನು ಮನುಷ್ಯ. ಮಾನವ ಶರೀರವನ್ನುಳಿದು ನನ್ನ ಹತ್ತಿರ ಏನಿದೆ? ಇಲ್ಲಿ ಮನುಷ್ಯನು ಜಾತಿಯಿಂದ ಗುರುತಿಸಲ್ಪಡುತ್ತಾನೆ, ತಂದೆಯಿಂದ ಗುರುತಿಸಲ್ಪಡುತ್ತಾನೆ. ನನ್ನಲ್ಲಿ ತಂದೆಯ ಹೆಸರು, ಧರ್ಮ ಜಾತಿ ಇರಲಿಲ್ಲ. ನಾನು ಯಾವ ತಂದೆಯ ವಾರಸ್ದಾರನೂ ಆಗಿರಲಿಲ್ಲ.”[೨೬]

ಇಲ್ಲಿ ಮಹಿಳೆ ಅಸ್ಪೃಶ್ಯಳಾಗಿ ಅವರಿಗಿಂತ ಮೇಲುಜಾತಿಯ ಗೌಡನ ಸಂಪರ್ಕದಿಂದ ಹುಟ್ಟಿದ ಮಗನ ಪರಿಸ್ಥಿತಿ ಭಿನ್ನವಾಗಿದೆ. ಬೇರೆಯವರಿಗೆ ಹೊಲೆಯರ ಮನೆಯ ಸಾರಾಯಿ ನಡೆಯುತ್ತಿತ್ತು. ಆದರೆ ನೀರು ನಡೆಯುತ್ತಿರಲಿಲ್ಲ ಎನ್ನುವಲ್ಲಿ ಪ್ರಭುತ್ವ ಇಲ್ಲಿ ತನಗೆ ಬೇಕಾದಂತೆ ನಡೆಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಕಾಕಾ ತನ್ನ ಸ್ವಾರ್ಥಕ್ಕೋಸ್ಕರ ಈ ಹೆಣ್ಣನ್ನು ಬಳಸಿಕೊಂಡಿರುವುದು ತಿಳಿಯುತ್ತದೆ. ಅಲ್ಲದೇ ಮಾನವೀಯತೆಯಿಂದಾದರೆ ಶರಣಕುಮಾರ ಅವರ ಮನೆಯ ಹತ್ತಿರ ಹೋದಾಗ ಮಾತಾಡಿಸಬಹುದಿತ್ತು. ಅವನು ಕಂದಿದ ಮುಖದಿಂದ ವಾಪಸ್ಸು ಬರುವ ಅಗತ್ಯವಿರಲಿಲ್ಲ. ಮನೆಯಲ್ಲಿ ತಂದೆಯಂತೆ ವರ್ತಿಸುತ್ತಿದ್ದ ಕಾಕಾ ಏಕೆ ಅಪರಿಚಿನಂತೆ ನಡೆದುಕೊಂಡ ಎಂಬ ಪ್ರಶ್ನೆಗೆ ಶರಣನಿಗೆ ಉತ್ತರವಿಲ್ಲ. ಇದರಿಂದ ಕಾಕಾನ ತಾಯಿಯ ಮೇಲೆ ಬಲಾತ್ಕಾರ ಮಾಡಬೇಕೆಂಬ ಆಲೋಚನೆಯನ್ನು ಗಮನಿಸಿದರೆ ಸಮಾಜ ಮಕ್ಕಳನ್ನು ನಡೆಸಿಕೊಳ್ಳುವ ರೀತಿಯನ್ನು ತೋರಿಸುತ್ತದೆ.

ಇಲ್ಲಿ ಹೆಣ್ಣನ್ನು ಗಂಡಿನ ಮೂಲಕವೇ ಗುರ್ತಿಸಲಾಗುತ್ತದೆ. ಇಲ್ಲಿ ಗಂಡ ಹೆಂಡತಿ ಸಂಬಂಧವಲ್ಲದಿದ್ದರೂ ಗಂಡಿನ ಮೂಲಕವೇ ಗುರುತಿಸಲಾಗಿದೆ(ಪು.೧೨೪). ಕುಟುಂಬದಲ್ಲಿ ಹೆಣ್ಣನ್ನು ಮೊದಲು ತಂದೆಯ ಮೂಲಕ ನಂತರ ಗಂಡನ ಹೆಸರಿನ ಜೊತೆ ಗುರುತಿಸಲಾಗುತ್ತದೆ. ಮಗನನ್ನು ತಂದೆಯ ವಾರಸುದಾರ ಎಂದು ಗುರುತಿಸಲಾಗುತ್ತದೆ. ಇಲ್ಲಿ ತಂದೆಯ ವಾರಸುದಾರನಾಗದೇ ಇರುವುದು ಮಗನಿಗೆ ನೋವು ತಂದಿದೆ.

ಬಿ.ಡಿ.ನಾರಾಯಣದಾಸ್ ಅವರು ಹೇಳುವ– “ಊರಲ್ಲಿ ಯಾರ ದನವಾದರೂ ಸತ್ತರೆ ಊರು ರೋಷಗೊಳ್ಳುತ್ತಿತ್ತು. ಹೊಲಗೇರಿಯನ್ನು ಒತ್ತಾಯದಿಂದ ಪುಕ್ಕಟ್ಟೆ ಕೆಲಸಕ್ಕೆ ಹಚ್ಚುತ್ತಿದ್ದರು.

ಎಲ್ಲ ಹೊಲೆಯರನ್ನು ಕಂಬಕ್ಕೆ ಕಟ್ಟಿ ದನ ಹೊಡೆದಂತೆ ಹೊಡೆಯುತ್ತಿದ್ದರು. ನೀವೇ ನಮ್ಮ ದನವನ್ನು ಔಷಧಿ ಹಾಕಿ ಕೊಂದಿರುವಿರಿ ಎಂದು ಹೇಳುತ್ತಿದ್ದರು. ಹೆಂಗಸರು ಹುಡುಗರು ಅಳುತ್ತಿದ್ದರು. ಹೊಲಗೇರಿಯ ಎಲ್ಲ ಗಂಡಸರೂ ಹೊಡೆತ ತಿನ್ನುತ್ತಿದ್ದರು. ಹೊಲೆಯರಿಗೆ ಊರು ಬಹಿಷ್ಕಾರ ಹಾಕುತ್ತಿತ್ತು. ಹೊಲೆಯರನ್ನು ಊರಲ್ಲಿ ತಿರುಗಾಡಲು ಬಿಡುತ್ತಿರಲಿಲ್ಲ. ಹೊಲಗಳಲ್ಲಿ ಕೂಲಿ ನಾಲಿ ಸಿಗುತ್ತಿರಲಿಲ್ಲ. ಅಂಗಡಿಗಳಲ್ಲಿ ಹಣ ಕೊಟ್ಟರೂ ಅನ್ನ ಧಾನ್ಯ ಕೊಡುತ್ತಿರಲಿಲ್ಲ. ಎಲ್ಲ ಕಡೆಗೆ ಆತಂಕ ಉಂಟಾಗುತ್ತಿತ್ತು. ಹೊಲೆಯರು ಸಂಕಟ ಪಡುತ್ತಿದ್ದರು. ಕಷ್ಟಕ್ಕೆ ಒಳಗಾಗುತ್ತಿದ್ದರು."[೨೬]

ಮೇಲ್ಜಾತಿಯ ಬ್ರಾಹ್ಮಣರ ಅನುಭವಗಳು ಈ ರೀತಿಯಾದರೆ ಹೊಲೆಯರಾದ ಬಿ. ಡಿ ನಾರಾಯಣದಾಸ್, "ಊರ ಒಳಗಡೆ ಚೆಲುವಯ್ಯ ಎಂಬುವ ಮಾಸ್ತರು ಒಂದು ಸ್ಕೂಲು ನಡೆಸುತ್ತಿದ್ದರು. ಆದರೆ ಹೊಲೆಯರಾದ ನಮ್ಮನ್ನು ಸೇರಿಸುತ್ತಿರಲಿಲ್ಲ. ನಮ್ಮೂರಿನ ತೋಪೇಗೌಡರು ಹಿರಿ ಸಾವೆಯಿಂದ ನಂಜಪ್ಪ ಎಂಬ ಮಾಸ್ತರನ್ನು ಕರೆತಂದು ಒಕ್ಕಲಿಗರ ಹುಡುಗರಿಗೋಸ್ಕರ ಜವರಪ್ಪನವರ ಜಗಲಿಯ ಮೇಲೆ ಸ್ಕೂಲು ಪ್ರಾರಂಭಿಸಿದರು. ಆಗ ದೊಡ್ಡ ಮನಸ್ಸು ಮಾಡಿ ನಮ್ಮ ನಾಲ್ಕು ಜನರನ್ನು ಆ ಶಾಲೆಗೆ ಸೇರಿಸಿಕೊಂಡರು. ಸರ್ಕಾರಿ ಶಾಲೆಯಲ್ಲ. ಖಾಸಗಿಶಾಲೆ. ಒಕ್ಕಲಿಗರು, ಕುರುಬರು ಒಂದು ಜಗಲಿ. ನಾವು ನಾಲ್ಕು ಜನ ಹೊಲೆಯರ ಹುಡುಗರು ಬೇರೆ ಜಗಲಿಯಲ್ಲಿ ಕುಳಿತುಕೊಳ್ಳಬೇಕಾಗಿತ್ತು. ಒಟ್ಟಿಗೆ ಕುಳಿತುಕೊಳ್ಳುವಂತಿರಲಿಲ್ಲ.

ನಂಜಪ್ಪ ಮಾಸ್ತರರು ತಿಪಟೂರಿನಿಂದ ಫುಟ್‌ಬಾಲ್ ತಂದು ಮೊದಲನೇ ಸಾರಿ ನನ್ನನ್ನು ಸೇರಿಸಿಕೊಂಡು ನಮ್ಮ ಊರಿನ ಬಾರೆಯ ಮೈದಾನದಲ್ಲಿ ಫುಟ್‌ಬಾಲ್ ಆಡಿಸಿದರು. ಆ ದಿನ ನಮ್ಮ ಊರಿನ ಒಕ್ಕಲಿಗರಲ್ಲಿ ಏನೋ ಆಕಾಶ ತಲೆಯ ಮೇಲೆ ಬಿದ್ದಂತೆ ಅಲ್ಲೋಲ ಕಲ್ಲೋಲವಾಗಿ ಎಲ್ಲರ ಮನೆ ಮಾತಾಯಿತು. ಕಾರಣವಿಷ್ಟೆ ಹೊಲೆಯರ ದ್ಯಾವಣ್ಣನ ಮಗ ದೊಡ್ಡ ಕೆಂಗಯ್ಯ(ಆಗ ನನ್ನ ಹೆಸರು ದೊಡ್ಡ ಕೆಂಗಯ್ಯ ಎಂದಿತ್ತು)ನನ್ನು ಸೇರಿಸಿಕೊಂಡು ಈ ಮಾಸ್ಟರ್‌ರವರು ಫುಟ್ಬಾಲ್ ಆಡಿಸಿದರಲ್ಲ! ಈ ಹೊಲೆಯರ ಹುಡುಗನ ಕಾಲು ನಮ್ಮ ಹುಡುಗರಿಗೆ ತಾಗಲಿಲ್ಲವೇ. ನಮ್ಮ ಹುಡುಗರ ಜಾತಿ ಕೆಡಲಿಲ್ಲವೇ. ಇದೇ ಇಡೀ ರಾತ್ರಿ ಎಲ್ಲರ ಮನೆಯಲ್ಲಿ ಮಾತು. ಬೆಳಿಗ್ಗೆ ಮೇಸ್ಟರ ಗಮನಕ್ಕೂ ತಂದರು. ಇದಕ್ಕೆಲ್ಲ ಬೆದರುವ ವ್ಯಕ್ತಿಯಲ್ಲ ಮಾಸ್ಟರು! ಅವರಿಗೆಲ್ಲಾ ಸೂಕ್ತ ಉತ್ತರ ಹೇಳಿ ಅವರ ತಲೆಯಲ್ಲಿ ತುಂಬಿದ್ದ ಜಾತಿ ವಾದವನ್ನು ಸ್ವಲ್ಪ ಕಡಿಮೆ ಮಾಡಿದರು. ಇವರಿಗೆ ಬಿ ಚಿಕ್ಕಣ್ಣನವರ ಮತ್ತು ಬೊಮ್ಮೇಗೌಡರ ಮತ್ತು ನಂಜೇಗೌಡರ ಸಹಕಾರ ಮತ್ತು ಬೆಂಬಲ ಇತ್ತು. ಇನ್ನೊಂದು ಸಾರಿ ನನ್ನನ್ನು ಸೇರಿಸಿಕೊಂಡು 'ನಾಗರಿಕ' ಎಂಬ ನಾಟಕ ಮಾಡಿದಾಗಲೂ ಹಾಗೆಯೇ ಆಯಿತು. ಆದರೆ ನಂಜಪ್ಪನವರು

ಇಂಥದಕ್ಕೆಲ್ಲ ಸೊಪ್ಪು ಹಾಕುತ್ತಿರಲಿಲ್ಲ. ಇವರ ಕಾಲದಲ್ಲೇ ನಮ್ಮ ಊರಿನ ಜನಗಳಿಗೆ ಬಹಳ ತಿಳುವಳಿಕೆ ಬಂದದ್ದು."[೨೭]

ಇಲ್ಲಿ ಚೆಲುವಯ್ಯ ಮೇಷ್ಟ್ರು ಹೊಲೆಯರನ್ನು ಸೇರಿಸುತ್ತಿರಲಿಲ್ಲ ಎನ್ನುತ್ತಾರೆ. ಆದರೆ ಮೇಷ್ಟ್ರು ಯಾವ ಜಾತಿಯೆಂಬುದನ್ನು ನಮೂದಿಸಿಲ್ಲ. ಆದರೆ ಮೇಲ್ನೋಟಕ್ಕೆ ದಲಿತರಿಗಿಂತ ಮೇಲು ಜಾತಿಯವರೆಂದೆನಿಸುತ್ತದೆ. ಅಷ್ಟೇ ಅಲ್ಲದೇ ನಂಜಪ್ಪ ಮಾಸ್ಟರ್ ವಿಚಾರವಾಗಿಯೂ ಇಲ್ಲಿ ಪ್ರಸ್ತಾಪಿಸುತ್ತಾರೆ. ಇಲ್ಲಿಯೂ ಕೂಡ ಅವರ ಜಾತಿ ಪ್ರಸ್ತಾಪವಾಗಿಲ್ಲ. ಆದರೆ ಇವರು ಹೊಲೆಯರ ಪರವಾಗಿದ್ದರು ಎಂಬುದು ಇವರ ಬರಹವೇ ಹೇಳುತ್ತದೆ. ಮೊದಲು ಹೊಲೆಯ ಎಂದು ಗುರ್ತಿಸಿಕೊಳ್ಳಲು ಅಂಜುತ್ತಿದ್ದ ಕಾಲದಲ್ಲಿ ದೊಡ್ಡ ಕೆಂಗಯ್ಯನಾಗಿದ್ದು ಆಮೇಲೆ ಬಿ. ಡಿ. ನಾರಾಯಣದಾಸ್ ಆಗಿ ಬದಲಾದ ಇವರು ಹೇಳದಿರುವ ಚರಿತ್ರೆಯನ್ನೂ ಹೇಳುತ್ತದೆ

ಜಾತಿ ಮತ ಮನುಷ್ಯ ತನ್ನ ಅನುಕೂಲಕ್ಕೆ ಮಾಡಿಕೊಂಡ ಕೃತಕ ಕ್ಯಾಬಿನ್‌ಗಳು. ಅದರ ದುರುಪಯೋಗ ಮಾಡಿ ಹೊಡೆದಾಡುವ ಅಗತ್ಯವಿಲ್ಲ. ನಿಜವಾದ ಮಾನವರು ಅದನ್ನೆಲ್ಲ ಮೀರಬೇಕಾದ ಅಗತ್ಯವಿದೆ. ಬ್ರಾಹ್ಮಣನಾದ ಗೊರೂರು ರವರು, "ಪ್ರತಿ ವರ್ಷ ಆಷಾಢ ಮಾಸದಲ್ಲಿ ಒಂದು ಗೊತ್ತಾದ ದಿನ ಕಾವೇರಿ ಸಂಗಮಿಸಿದ ದಿನವೆಂದು ಭಕ್ತಾದಿಗಳು ಎಲ್ಲ ಕೋಮಿನವರು ಪಾಲ್ಗೊಂಡು ಜಾತ್ರೆ ನಡೆಸಿ ಉತ್ಸವ ಪರಿಷೆ, ದೇವತಾ ಭಜನೆ, ಹಳ್ಳಿ ಕುಣಿತ, ನಾಟಕ ಮುಂತಾದ ಸಂಸ್ಕೃತಿಯ ಕಾರ್ಯಕ್ರಮಗಳನ್ನು ನಡೆಸಿ ಸಂತೋಷ ಪಡುತ್ತಾರೆ."[೨೮] ಒಂದು ಸಮುದಾಯಕ್ಕೆ ಅದು ಗ್ರಾಮದಲ್ಲಿ ಸಮುದಾಯವಾಗಿ ಕೆಲಸ ಮಾಡುತ್ತದೆ. ಅದೇ ನಗರದಲ್ಲಿ ಪಾಶ್ಚಾತ್ಯ ಪ್ರಭಾವದಿಂದ ಐಕ್ಯತೆ ಕನಸಾಗಿದೆ ಎನ್ನುತ್ತಾರೆ.

ಸ್ಕೂಲಿನ ವಿಚಾರವಾಗಿ ಗೊರೂರು ಅವರು, "ಅಂದಿನ ಕಾಲದಲ್ಲಿ ಗೊರೂರು ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಆಸನಗಳು ಇರಲಿಲ್ಲ.(ಈ ೧೯೭೯ನೇ ವರ್ಷದಲ್ಲಿಯೂ ಬೆಂಗಳೂರಿನಲ್ಲಿ ಸಹ ಅನೇಕ ಪ್ರಾಥಮಿಕ ಶಾಲೆಗಳು ಗಾಡಿ ಖಾನೆಗಳಲ್ಲಿ[ಕಾರ್ ಶೆಡ್] ನಡೆಯುತ್ತಿವೆ) ಧೂಳು, ಗುಂಡಿಗಳು ತುಂಬಿದ ನೆಲದ ಮೇಲೆ ಕುಳಿತುಕೊಳ್ಳಲು ಮನೆಗಳಿಂದ ಚಾಪೆಗಳನ್ನು ತೆಗೆದುಕೊಂಡು ಹೋಗಬೇಕೆಂದು ನಮಗೆ ಉಪಾಧ್ಯಾಯರು ಗೊತ್ತು ಮಾಡಿದ್ದರು. ಸ್ವಲ್ಪ ಧನಿಕರಾದವರು ಚಚ್ಚೌಕವಾಗಿ ಚೆನ್ನಾಗಿದ್ದ ಜಮಖಾನಗಳನ್ನು ಅಚ್ಚುಕಟ್ಟಾಗಿ ಮಡಿಸಿಕೊಂಡು ಬರುತ್ತಿದ್ದರು. ಉಳಿದವರು ಜೊಂಡಿನ ಕೂರುವ ಚಾಪೆ(ಇದಕ್ಕೆ ಕುಂಡ್ರಿಕೆ ಎಂದು ಹೆಸರು) ತರುತ್ತಿದ್ದರು."[೨೯]

ದಲಿತರಾದ ಮಾಲಗತ್ತಿಯವರಲ್ಲಿ ಬರುವ ವಿಚಾರ ಏನೆಂದರೆ ಸ್ಕೂಲುಗಳಲ್ಲಿ ಮೇಲ್ಜಾತಿಯವರಿಗೆ ಆಸನದ ವ್ಯವಸ್ಥೆ ಇತ್ತು ಎನ್ನುತ್ತಾರೆ. ಆದರೆ ಗೋರೂರು ಅವರಲ್ಲಿ

ಮೇಲ್ಜಾತಿಯವರಾದರೂ ಆಸನದ ವ್ಯವಸ್ಥೆ ಇರಲಿಲ್ಲ. ಮನೆಯಿಂದಲೇ ಜಮಖಾನೆ ಅಥವಾ ಚಾಪೆ ತರಬೇಕೆನ್ನುವುದರಲ್ಲಿ ಪ್ರಾದೇಶಿಕ ವ್ಯತ್ಯಾಸ ಗುರುತಿಸಬಹುದು. ಮಾಲಗತ್ತಿಯವರು ತಂದ ಗೋಣಿ ತಟ್ಟನ್ನು ನೋಡಿ ಉಳಿದವರು ನಕ್ಕರು. ಗೋರೂರಲ್ಲಿ ಶ್ರೀಮಂತರು ಜಮಾಖಾನಗಳನ್ನು ಅಚ್ಚುಕಟ್ಟಾಗಿ ತರುತ್ತಿದ್ದರು ಎನ್ನುವಲ್ಲಿ ಶ್ರೀಮಂತರ ಮತ್ತು ಮೇಲ್ಜಾತಿಯವರ ಮೇಲರಿಮೆ ಕೆಳಜಾತಿ ಮತ್ತು ಬಡವರಲ್ಲಿ ಕೀಳರಿಮೆ ಗುರುತಿಸಬಹುದು.

ಬ್ರಾಹ್ಮಣರಾದ ಬೀಚಿ, "ನಮ್ಮ ಊರಾದ ಹರಪನಹಳ್ಳಿಯಲ್ಲಿ ಇಂದಿಗೂ ಜಾತಿ ಕೇರಿಗಳಿವೆ. ಕುರುಬಗೇರಿ, ಬ್ಯಾಡರಕೇರಿ, ಗೌಳಿಗರ ಕೇರಿ, ಸವಕಾರಗೇರಿ(ಇಲ್ಲಿ ಬರೀ ಜೈನ ಶ್ರೀಮಂತರೇ ಇದ್ದರು. ಈಗ ಅವರು ಬರೀ ಜೈನರಾಗಿದ್ದಾರೆ) ಬಣಗಾರಪೇಟೆ, ಮ್ಯಾಗಳಗೇರಿ(ಇದು ಹೆಚ್ಚಾಗಿ ವೀರಶೈವರ ಕಾಲೋನಿ), ಗುಡಿಕೇರಿ, ಮಡುವಿನಕೇರಿ ಮತ್ತು ಮಠದಕೇರಿ(ಇವು ಕೇವಲ ಮಾಧ್ವ ಬ್ರಾಹ್ಮಣರ ಮೀಸಲು ಅಗ್ರಹಾರ), ಪಾತರಗೇರಿ–ವ್ಯಭಿಚಾರ ಹೆಮ್ಮೆ ಎನಿಸುತ್ತಿದ್ದ ಕಾಲದಲ್ಲಿ ಈ ಕೇರಿ ಬಹು ಉಚ್ಛ್ರಾಯ ಸ್ಥಿತಿಯಲ್ಲಿತ್ತು(ಈಗ ವ್ಯಭಿಚಾರ ಹೋಗಿಲ್ಲ. ಆದರೆ ಅದನ್ನು ಬಹಿರಂಗವಾಗಿ ಮಾಡುವ ಪ್ರಾಮಾಣಿಕಥೆ ಮಾತ್ರ ಹೋಗಿದೆ), ಚಿತ್ತಾರಗೇರಿ ಮುಸ್ಲಿಮರಿಗಾಗಿ, ಕೊನೆಯಲ್ಲಿ ಜೋಯಿಸರ ಕೇರಿ– ಇದು ಸ್ಮಾರ್ತ ಬ್ರಾಹ್ಮಣರಿಗೆ ಮಾತ್ರ– ಈ ರೀತಿಯ ಜಾತಿಯ ಕೋಟೆಗಳನ್ನು ಕಟ್ಟಿಕೊಂಡು ಕೂಪಸ್ಥ ಮಂಡೂಕದಂತೆ ಬಾಳುತ್ತಿದ್ದ ನಮಗೆ ಪಕ್ಕದ ಕೇರಿಯ ಜನಜೀವನದ ಪರಿಚಯವೇ ಆಗುತ್ತಿರಲಿಲ್ಲ. ಬೇಕೂ ಇರಲಿಲ್ಲ. ಈ ಕೇರಿಯವರು ಆ ಕೇರಿಗೆ ಹೋಗುತ್ತಲೇ ಇರಲಿಲ್ಲವೆಂದಲ್ಲ. ಯಾವಾಗಲಾದರೂ ಯಾರಾದರೂ ಹೋಗಿ ಬರುತ್ತಿದ್ದರು. ಆದರೆ ಕೇವಲ ಕಾರ್ಯ ನಿಮಿತ್ತವಾಗಿ ಮಾತ್ರ– ಮಂತ್ರಿಗಳು ಸ್ವಂತ ಖರ್ಚಿನಲ್ಲಿ ಫಾರಿನ್‌ಗೆ ಹೋದಂತೆ. ಈಗ ಪರಿಸ್ಥಿತಿ ಕೊಂಚ ಮೇಲು. ಪರಸ್ಪರ ಹೊಕ್ಕು ಬಳಕೆ ಆಗುತ್ತಲಿದೆ. ಯುವಕರು ಬಂದು ಹೋಗುವುದು ಊಟ ಉಪಚಾರಗಳು ಅಲ್ಲಲ್ಲಿ ಕಾಣುತ್ತಿವೆ. ಅರ್ಧ ಶತಮಾನದ ಹಿಂದೆ ಇದ್ದ ಪರಿಸ್ಥಿತಿಯಲ್ಲಿ ಇತರ ಜಾತಿಯ ಜನದ ಜೀವನ ಅಭಿರುಚಿ, ಚಾತುರ್ಯ ಮುಂತಾದೊಂದೂ ನಮಗೆ ತಿಳಿಯಲು. ಆಸ್ಪದವೇ ಇರಲಿಲ್ಲ. ಈ ದಡ್ಡ ಪದ್ಧತಿಯಿಂದಾಗಿ ನನಗೆ ಬಾಲ್ಯದಲ್ಲಿ ಅರಿವಾಗದಿದ್ದುದು ನನಗಾದ ನಷ್ಟ. ಈ ಅರಿವು ನನಗಾಗುತ್ತಿರುವುದು ಈಗ. ಇದರಿಂದೇನು ಪ್ರಯೋಜನ?"[೩೦]

ಬೀಚಿ ಹೇಳುವ ಹಾಗೆ ಊರಲ್ಲಿ ಎಲ್ಲ ಜಾತಿಯ ಜನರೂ ಇದ್ದರು. ಜಾತಿಬೇಧ ಕಂಡೂ ಕಾಣದ ಹಾಗೆ ಇತ್ತು. ಚಿಕ್ಕವರಾದ ನಮಗೆ ಬೇಧ ಗೊತ್ತಾಗುತ್ತಿರಲಿಲ್ಲ ಎಲ್ಲವೂ ಸಹಜ ಎನ್ನುವಂತೆ ನಡೆಯುತ್ತಿತ್ತು. ಇದರಿಂದ ನನಗೆ ಬಾಲ್ಯದಲ್ಲಿ ಅರಿವಾಗಿಲ್ಲ. ಈಗ ಅರಿವಾಗಿಯೂ ಪ್ರಯೋಜನವಿಲ್ಲ ಎಂಬ ತೀರ್ಮಾನಕ್ಕೆ ಬರುತ್ತಾರೆ. ಇಲ್ಲಿ ಇವರೇ ಹೇಳುವ ಹಾಗೆ ಮೊದಲು ಅರಿವಾಗಿದ್ದರೂ ಒಂದೇ. ಈಗ ಅರಿವಾಗುತ್ತಿರುವುದೂ ಒಂದೇ ಎಂಬ ಮನಸ್ಥಿತಿ ಲೇಖಕರದ್ದಾಗಿದೆ.

ಎ ಎನ್ ಮೂರ್ತಿ ರಾವ್ ರವರು ಬೇರೆ ಜಾತಿಯ ಜನಜೀವನದ ಬಗ್ಗೆ ಹೆಚ್ಚು ಪರಿಚಯವಿಲ್ಲದಿರುವುದನ್ನು ಹೇಳುತ್ತಾರೆ. ಅದನ್ನು ಪುಟ್ಟಯ್ಯನವರು ಗುರುತಿಸಿದ್ದಾರೆ.

ಮಹಿಳೆಯಾಗಿ ಅಂತರ್ಜಾತಿ ವಿವಾಹವಾದ ಶೈಲಜ ನಾಗರಘಟ್ಟ ತಮ್ಮ ಆತ್ಮಕಥೆಯಲ್ಲಿ ಹೇಳುವ, "ಈಗ ನನಗೆ ನನ್ನ ಗೆಳೆಯ ಹಾಗೂ ಮಗುವೇ ಲೋಕ, ಜಾತಿಯನ್ನು ತೊರೆದು ಅಸ್ಪೃಶ್ಯನನ್ನು ವಿವಾಹವಾದ ಕಾರಣದಿಂದ ನನ್ನ ಕುಟುಂಬದಿಂದ ಬಹಿಷ್ಕೃತಳಾಗಿದ್ದೇನೆ. ನನ್ನ ಬಾಲ್ಯದ ಹಾಗೂ ಯವ್ವನದ ಮೂರು ದಶಕಗಳು ನನ್ನ ಹುಟ್ಟೂರಿನಲ್ಲಿ ಉಳಿದಿವೆ. ಅನೇಕ ಸಲ ನೆನಪುಗಳಾಗಿ ನನ್ನೆದುರು ನಿಲ್ಲುತ್ತವೆ. ಆಗ ನಾನು ದುಃಖ ಪಡುವುದಿಲ್ಲ. ಸಂಭ್ರಮಿಸುತ್ತೇನೆ. ಆದರೆ ಆ ಸಂಭ್ರಮವು ನನ್ನ ಕಣ್ಣಲ್ಲಿ ನೀರಾಗುವ ಸತ್ಯವನ್ನು ಮರೆಮಾಚಲಾರೆ. ಜಾತಿ ಎಂಬ ಮಾಯಾ ಸೌಂದರ್ಯದ ಬಯಲಲ್ಲಿ ಸಿಕ್ಕಿರುವ ಸಮಾಜ ನನ್ನನ್ನು ಕುಲಗೆಟ್ಟವಳೆಂದು ನಿಂದಿಸಬಹುದು. ಆದರೆ ಕುಲಗೆಡುವುದರಲ್ಲಿ ವ್ಯಕ್ತಿ ವಿಕಾಸವಿದೆ ಹಾಗೂ ಸ್ವಾತಂತ್ರ್ಯವಿದೆ ಎಂದು ನಂಬಿದ್ದೇನೆ."[೩೧]

ಜಾತಿ ಎನ್ನುವುದು ಮಾಯಾ ಸೌಂದರ್ಯದ ಬಲೆಯೇ ಹೌದು. ಇಲ್ಲಿ ಜಾತಿ ಎನ್ನುವುದು ಪುರುಷ ಮತ್ತು ಮಹಿಳೆಗೆ ಹೋಲಿಸಿದರೆ ಪುರುಷನಿಗಿಂತ ಮಹಿಳೆಗೆ ಉರುಳೇ ಆಗಿದೆ. ಹಾಗಾಗಿ ಈ ಉರುಳಿನಿಂದ ತಪ್ಪಿಸಿಕೊಂಡಿದ್ದಕ್ಕೆ ಸಂಭ್ರಮ ವ್ಯಕ್ತವಾಗಿದೆ.

ಜಾತಿ ಪದ್ಧತಿ ಹಿಂದೂ ಧರ್ಮದ ಒಂದು ಅವಿಭಾಜ್ಯ ಅಂಗ. ಕೇವಲ ಹುಟ್ಟಿನ ಆಕಸ್ಮಿಕದ ಮೇಲೆ ಒಬ್ಬನ ಗುಣಾವಗುಣಗಳನ್ನು ಜೀವನ ಪರ್ಯಂತ ಅಳೆಯುವುದು ಅಪೂರ್ವ ಅನ್ಯಾಯ. ಜಾತಿ ಪದ್ಧತಿ ಬಹಳ ಕ್ರೂರ. ಅಮಾನವೀಯ ಕೆಟ್ಟ ಪದ್ಧತಿ. ಜಾತಿ ಪದ್ಧತಿ ಅಂತ ಹೇಳಿದ ತಕ್ಷಣ ಕೆಲವರಿಗೆ ಮುಜುಗರವಾಗುತ್ತದೆ. ಜಾತಿ ಪದ್ಧತಿ ಹೇಗೆ, ಯಾವಾಗ, ಯಾವ ಉದ್ದೇಶದಿಂದ ಮೊದಲಾಯಿತು ಎನ್ನುವುದು ಈಗ ಅಪ್ರಸ್ತುತ. ಆದರೆ ಈಗಿನವರಾರೂ ಜಾತಿ ಪದ್ಧತಿಗೆ ಜವಾಬ್ದಾರರಲ್ಲ. ಜಾತಿ ಪದ್ಧತಿಯಿಂದ ಅನೇಕ ಅನಾಹುತಗಳಾಗಿವೆ. ನಮ್ಮ ದೇಶದ ಬಹುತೇಕ ಮುಸ್ಲಿಮರ ಪೂರ್ವಜರು ಹಿಂದೂಗಳು(ಮುಸ್ಲಿಮರಾದ ಖಾನ್ ಅಬ್ದುಲ್ ಗಫಾರ್ ಖಾನ್ ಇವರೂ ಕೂಡ ನನ್ನ ಬಾಳುವೆಯ ಹೋರಾಟದಲ್ಲಿ ಇದನ್ನು ಹೇಳಿದ್ದಾರೆ). ಸಾಮಾಜಿಕ ಅನ್ಯಾಯದಿಂದ ಕೂಡಿದ ಜಾತಿ ವ್ಯವಸ್ಥೆಯ ಸಾಕಷ್ಟು ಕೆಳವರ್ಗದವರು ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದವರು. ಜಾತಿ ಪದ್ಧತಿ ನಮ್ಮ ದೇಶವನ್ನು ಧರ್ಮದ ಆಧಾರದ ಮೇಲೆ ಒಡೆಯಿತು. ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಜಾತಿ ಪದ್ಧತಿಯ ಫಲ. ನಮ್ಮ ದೇಶದ ಈಶಾನ್ಯ ಮೂಲೆ ಮತ್ತು ಇನ್ನೂ ಕೆಲವು ಪ್ರದೇಶಗಳ ಕ್ರಿಶ್ಚಿಯನ್ ಧರ್ಮದ ಮತ್ತು ರಾಜಕೀಯ ಸಮಸ್ಯೆಗಳು ಜಾತಿ ಪದ್ಧತಿಯಿಂದಲೇ ಉದ್ಭವಿಸಿವೆ. ಇಂಥ ಜಾತಿ ಪದ್ಧತಿಯನ್ನು

ಹೋಗಲಾಡಿಸಲು. ಹಲವಾರು ಮುಖಂಡರು ಪ್ರಯತ್ನ ಪಟ್ಟರು. ಆದರೆ ವಿಪರ್ಯಾಸವೆಂದರೆ ಅವರು ಹೋದ ಮೇಲೆ ಅವರ ಹೆಸರಿನಲ್ಲೇ ಜಾತಿ ನಿರ್ಮಾಣವಾಯಿತು.

ಕೊನೆ ಟಿಪ್ಪಣಿಗಳು

೧. ಗಿರೀಶ್ ಕಾರ್ನಾಡ್, **ಆಡಾಡತ ಆಯುಷ್ಯ**, ಪು.೨-೩

೨. ಗೋರೂರು, **ಬಾಲ್ಯದ ಆತ್ಮಕಥೆ**, ಪು.೧೮

೩. ಶಿವರಾಮ ಕಾರಂತ, **ಹುಚ್ಚು ಮನಸ್ಸಿನ ಹತ್ತು ಮುಖಗಳು**, ಪು.೧೫

೪. ಚಂದ್ರಶೇಖರ ಉಡುಪ, **ನನಗೊಲಿದ ಗುರೂಜಿ ನಿಮಗೊಲಿಯಲಿ**, ಪು.೨೫

೫. ಅರವಿಂದ ಮಾಲಗತ್ತಿ, **ಗೌರ್ಮೆಂಟ್ ಬ್ರಾಹ್ಮಣ**, ಪು.೩೯

೬. ಕುವೆಂಪು, **ನೆನಪಿನ ದೋಣಿಯಲ್ಲಿ**, ಪು.೬೬

೭. ಅದೇ, ಪು.೭೫

೮. ತಾರಿಣಿ ಚಿದಾನಂದ, **ಮಗಳು ಕಂಡ ಕುವೆಂಪು**, ಪು.೨೦೨

೯. ಅದೇ, ಪು.೨೦೪

೧೦. ಕುವೆಂಪು, **ನೆನಪಿನ ದೋಣಿಯಲ್ಲಿ**, ಪು.೧೦೫

೧೧. ಕಯ್ಯಾರ ಕಿಞ್ಞಣ್ಣ ರೈ, **ದುಡಿತವೇ ನನ್ನ ದೇವರು**, ಪು.೫

೧೨. ಉಷಾ ಪಿ.ರೈ, **ನಮ್ಮ ಬದುಕಿನ ಪುಟಗಳು**, ಪು.೨೪-೨೫

೧೩. ಅದೇ, ಪು.೨೫

೧೪. ಅರವಿಂದ ಮಾಲಗತ್ತಿ, **ಗೌರ್ಮೆಂಟ್ ಬ್ರಾಹ್ಮಣ**, ಪು.೮-೯

೧೫. ತುಂಬಾಡಿ ರಾಮಯ್ಯ, **ಮಣೆಗಾರ**, ಪು.೧೦

೧೬. ಅರವಿಂದ ಮಾಲಗತ್ತಿ, **ಗೌರ್ಮೆಂಟ್ ಬ್ರಾಹ್ಮಣ**, ಪು.೨

೧೭. ಅದೇ, ಪು.೧೭

೧೮. ಅದೇ, ಪು.೨೩

೧೯. ಲಕ್ಷ್ಮಣ ಗಾಯಕವಾಡ, **ಉಚಲ್ಯಾ**, ಪು.೧೨

೨೦. ನೇತ್ರ, ಒಕ್ಕಲಿಗರ ಮನೆಯಲ್ಲಿ ಹುಟ್ಟಿದಿದ್ರೆ, ಪು.೪೪೮

೨೧. ಸೋಬಾನೆಹೊನ್ನಮ್ಮ, ತಲಪರಿಗೆ, ಪು.

೨೨. ಪರಶಿವಮೂರ್ತಿ, ಗೆರೆ ದಾಟಿದ ಮೇಲೆ, ಪು.೬೦

೨೩. ಗೀತಾ ನಾಗಭೂಷಣ, ಲೇಖಲೋಕ, ಪು.೫೩

೨೪. ಶರಣಕುಮಾರ ಲಿಂಬಾಳೆ, ಅಕ್ರಮ ಸಂತಾನ, ಪು.

೨೫. ಅದೇ,

೨೬. ಅದೇ,

೨೭. ಬಿ.ಡಿ ನಾರಾಯಣದಾಸ್, ತಲಪರಿಗೆ, ಪು.೩೫೧-೩೫೨

೨೮. ಗೋರೂರು, ಗೊರೂರುರವರ ಬಾಲ್ಯದ ಆತ್ಮಕಥೆ, ಪು.೬

೨೯. ಅದೇ, ಪು.೮

೩೦. ಬೀ.ಚಿ., ನನ್ನ ಭಯಾಗ್ರಫಿ, ಪು.೭೫

೩೧. ಶೈಲಜಾ ನಾಗರಘಟ್ಟ, ಕಿಚ್ಚಿಲ್ಲದ ಬೇಗೆ, ಪು.೯೫

ಅಧ್ಯಾಯ ಐದು

ಲಿಂಗಭಿನ್ನತೆಯ ಪ್ರತಿನಿಧೀಕರಣ

೫.೧. ಲಿಂಗ ಸಂಬಂಧಿ ಆಯಾಮಗಳು

೫.೨. ಪುರುಷರ ಆತ್ಮಕಥೆಗಳಲ್ಲಿ ಮಹಿಳೆಯ ನಿರೂಪಣೆ

೫.೩. ಮಹಿಳೆಯರ ಆತ್ಮಕಥೆಗಳಲ್ಲಿ ಪುರುಷ ನಿರೂಪಣೆ

೫.೪. ಪುರುಷರ ಆತ್ಮಕಥೆಗಳಲ್ಲಿ ಪುರುಷ ನಿರೂಪಣೆ

೫.೫. ಮಹಿಳಾ ಆತ್ಮಕಥೆಗಳಲ್ಲಿ ಮಹಿಳಾ ನಿರೂಪಣೆ

೫.೬. ತೃತೀಯ ಲಿಂಗ ವಿಭಿನ್ನ ನೆಲೆಗಳು

ಅಧ್ಯಾಯ ಐದು

ಆತ್ಮಕಥೆಗಳಲ್ಲಿ ಲಿಂಗಭಿನ್ನತೆಯ ಪ್ರತಿನಿಧೀಕರಣ

ಲಿಂಗ ಭಿನ್ನತೆಯ ಪ್ರತಿನಿಧೀಕರಣ

ಹತ್ತೊಂಭತ್ತನೇ ಶತಮಾನದಲ್ಲಿನ ಔದ್ಯೋಗಿಕ ಕ್ರಾಂತಿ ಇಂಗ್ಲೆಂಡ್ ಮತ್ತು ಯುರೋಪ್ ದೇಶಗಳನ್ನು ಆರ್ಥಿಕ ಪ್ರಗತಿಯೆಡೆಗೆ ಕೊಂಡೊಯ್ದಿತು. ಅದರ ಜೊತೆಗೆ ಶೋಷಣೆಯ ಶಾಪವನ್ನು ಮಡಿಲಲ್ಲಿ ಕಟ್ಟಿಕೊಂಡಿತ್ತು. ಶೋಷಣೆಯ ವಿರುದ್ಧ ಶೋಷಿತರು ಬಂಡೆದ್ದರು. ಮಹಿಳೆ ಒಂದು ಯಂತ್ರವಲ್ಲ. ಸಂವೇದನೆಯಿರುವ ಜೀವಿ. ಪ್ರತಿ ಮಹಿಳೆಯನ್ನು ಗೌರವಿಸಬೇಕು ಎಂಬ ಉದಾರವಾದ ಮಾನವತಾವಾದ ಪ್ರಾರಂಭವಾಯಿತು. ಈ ಉದಾರವಾದದ ಬೆನ್ನಲ್ಲೇ ಹುಟ್ಟಿಕೊಂಡಿರುವುದು ಸ್ತ್ರೀ ಸಂವೇದನೆ. ಈ ಸ್ತ್ರೀ ಸಂವೇದನೆ ಹೇಳುತ್ತಿರುವುದು ಮಾನವತಾ ವಾದವನ್ನೇ. ಮಹಿಳೆ ಶ್ರೀಮಂತ ವರ್ಗಕ್ಕೆ ಸೇರಿರಲಿ, ಬಡ ವರ್ಗಕ್ಕೆ ಸೇರಿದವರಾಗಿರಲಿ, ಶಿಕ್ಷಣ ಪಡೆದವರಿರಲಿ, ಶಿಕ್ಷಣ ಪಡೆಯದವರಿರಲಿ, ಮೇಲು ಜಾತಿಯವರಿರಲಿ ಅಥವಾ ಕೆಳಜಾತಿಯವರಿರಲಿ ಆಕೆ ಪುರುಷ ಪ್ರಧಾನವಾದ ಸಮಾಜದಲ್ಲಿ ಕಾಲಾಂತರದಿಂದ ಶೋಷಣೆಗೆ ಗುರಿಯಾಗಿದ್ದಾಳೆ. ಗರ್ಭದಿಂದಲೇ ಅವಳ ಬೆಳವಣಿಗೆಯನ್ನು ತಡೆಯಲಾಗುತ್ತಿದೆ. ಹುಟ್ಟಿನಿಂದಲೇ ಆಕೆಯ ವಿಷಯದಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಬೆಳವಣಿಗೆಯ ಕ್ರಮದಲ್ಲೂ ಇದೇ ಧೋರಣೆಯನ್ನು ಅನುಸರಿಸಲಾಗುತ್ತಿದೆ.

ಧರ್ಮದ ಹೆಸರಿನಲ್ಲಿ ಜಾತಿಯ ಹೆಸರಿನಲ್ಲಿ ಆಕೆಯನ್ನು ಅನೇಕ ರೀತಿಯಲ್ಲಿ ನಿರ್ಬಂಧಿಸಲಾಗಿದೆ. ಎಲ್ಲಾ ಅಧಿಕಾರ ಮತ್ತು ಸವಲತ್ತುಗಳನ್ನು ಪಡೆದುಕೊಂಡ ಪುರುಷ ಆಕೆಯನ್ನು ಶಾಶ್ವತವಾಗಿ ಪಂಜರದಲ್ಲಿ ಇಟ್ಟಿದ್ದಾನೆ. ಈ ಪಂಜರ ಬಂಗಾರ, ಬೆಳ್ಳಿ, ಕಬ್ಬಿಣದ್ದು ಯಾವುದೇ ಅದರೂ ಪಂಜರವು ಪಂಜರವೇ ತಾನೇ. ಇವೆಲ್ಲವುಗಳಿಂದ ಆಕೆಗೆ ಸ್ವಾತಂತ್ರ್ಯ ಬೇಕಾಗಿತ್ತು. ಇಲ್ಲಿ ಸ್ತ್ರೀವಾದಿ ಆಂದೋಲನವು ಇವೆಲ್ಲವುಗಳ ವಿರುದ್ಧ ಪ್ರತಿಭಟಿಸಿತು.

ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿದ್ದ ಅಸಮಾನತೆ ಅನ್ಯಾಯ ತಾರತಮ್ಯ ಮೂಢನಂಬಿಕೆ ಮುಂತಾದವುಗಳ ವಿರುದ್ಧ ಮಹಿಳೆ ಸಿಡಿದೆದ್ದುದು ಮೊದಲನೆಯ ಘಟ್ಟವಾಗಿದೆ. ಈ ಆಂದೋಲನದ ಸ್ವರೂಪ ಬೇರೆಬೇರೆ ದೇಶಗಳಲ್ಲಿ ಆಯಾ ದೇಶದ ಸಾಮಾಜಿಕ ಪರಿಸ್ಥಿತಿ ಮತ್ತು ಸಂಸ್ಕೃತಿಗಳ ಪ್ರಕಾರ ಬೇರೆ ಬೇರೆ ರೂಪಗಳನ್ನು ತಾಳಿರುವುದು ನಿಜ. ಆದರೆ ಒಂದೇ ಒಂದು ವಿಷಯದಲ್ಲಿ ಮಾತ್ರ ಅವೆಲ್ಲವುಗಳಲ್ಲಿ ಸಹಮತವಿತ್ತು. ಮಹಿಳೆ ಯಾವ ದೇಶದಲ್ಲಿಯೇ ಇರಲಿ ಯಾವ ಭಾಷೆಯನ್ನೇ ಮಾತಾಡಲಿ ಆಕೆ ಶೋಷಿತಳೇ ಆಗಿದ್ದಾಳೆ, ಭಾರತದಲ್ಲಿ ಮಹಿಳೆಯ ಏಳಿಗೆಗಾಗಿ ಗಾಂಧಿ, ರಾನಡೆ, ರಾಜಾರಾಮ್ ಮೋಹನ್ ರಾಯ್, ಮುಂತಾದವರು ಮುಖಂಡತ್ವ ವಹಿಸಿದರು. ಅದೇ ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರೇ ಆಂದೋಲನದಲ್ಲಿ ಪ್ರಧಾನ ಪಾತ್ರ ವಹಿಸಿದರು. ಪ್ರಾರಂಭದಲ್ಲಿ ಸ್ತ್ರೀವಾದಿ ಚಳುವಳಿ ಹೊರನೋಟಕ್ಕೆ ಪುರುಷ ವಿರೋಧವಾಗಿಯೇ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ. ಯಾಕೆಂದರೆ ಸಮಾಜದಲ್ಲಿ ಪುರುಷರೇ ಎಲ್ಲಾ ಪ್ರತಿಷ್ಠಿತ ಸ್ಥಾನದಲ್ಲಿದ್ದರು. ತಾವು ಯಾವುದರಲ್ಲಿಯೂ ಪುರುಷರಿಗಿಂತ ಕಡಿಮೆಯಿಲ್ಲವೆಂದು ತೋರಿಸಬೇಕಾದರೆ ತಾವು ಪುರುಷರಂತೆಯೆ ಸಮಾಜದಲ್ಲಿ ವ್ಯವಹರಿಸಬೇಕೆಂಬ ವಿಚಾರವನ್ನು ಮಹಿಳೆಯರು ತಳೆದರು. ಒಂದು ಕಡೆಗೆ ಪುರುಷ ವಿರೋಧಿ ನೀತಿ ಇನ್ನೊಂದೆಡೆ ಆತನನ್ನು ಅನುಸರಿಸುವ ವಿಧಾನದಿಂದ ಒಂದು ತರಹದ ವಿರೋಧಾಭಾಸದಿಂದ ಕೂಡಿತ್ತು. 'ವಿಮೋಚನೆ' ಮತ್ತು 'ಸ್ವಾತಂತ್ರ್ಯ' ಎಂದರೆ ಪುರುಷನನ್ನು ಅನುಸರಿಸುವುದು ಎಂಬ ವಿಚಾರ ಬೆಳೆದು ಬಂತು. ನಿಜವಾದ ಅರ್ಥದಲ್ಲಿ ಸ್ತ್ರೀವಾದ ಎಂದರೆ ನಿರ್ಬಂಧಿಸಿದ ಕಟ್ಟುಪಾಡುಗಳನ್ನು ತೆಗೆದುಹಾಕಿ ಪ್ರತಿಯೊಬ್ಬರಿಗೂ ಪ್ರಕೃತಿ ನೀಡುವ ಎಲ್ಲ ಸದವಕಾಶಗಳನ್ನು ಸರಿಯಾಗಿ ಯಾವ ನಿರ್ಬಂಧವಿಲ್ಲದೆ ಉಪಯೋಗಿಸಿಕೊಂಡು ಮಹಿಳೆಯರ ವ್ಯಕ್ತಿತ್ವದ ಬೆಳವಣಿಗೆಗೆ ಪೂರಕವಾಗಿರುವುದೇ ಸ್ತ್ರೀವಾದ.

ಮಹಿಳಾ ವಿಮೋಚನಾ ಆಂದೋಲನವು ಪ್ರಾರಂಭವಾಗಲು ಮುಖ್ಯ ಕಾರಣವೆಂದರೆ ಸಮಾಜದಲ್ಲಿ ಮಹಿಳೆಗೆ ಕೊಡಲ್ಪಟ್ಟ ಕೆಳದರ್ಜೆಯ ಸ್ಥಾನಮಾನಗಳ ವಿಷಯದಲ್ಲಿ ಆಕೆಗೆ ಹುಟ್ಟಿದ ಅಸಂತೋಷ. ಆಕೆ ಬಂಡೆದ್ದದ್ದು ದಬ್ಬಾಳಿಕೆ, ಅನ್ಯಾಯ ಮತ್ತು ಅಸಮಾನತೆಯ ವಿರುದ್ಧ.

ಕಾಲಾಂತರದಿಂದ ಮಹಿಳೆ ತನ್ನ ಸೇವಕಿ ತನ್ನ ಸೇವೆಗಾಗಿಯೇ ಸೃಷ್ಟಿಸಲ್ಪಟ್ಟವಳು ಎಂದು ಭಾವಿಸಿದ್ದ ಪುರುಷ ಪ್ರಧಾನ ಮನಸ್ಸು ಪರಿವರ್ತನೆಯಾಗುವುದು ಅಷ್ಟೊಂದು ಸುಲಭದ ವಿಷಯವಾಗಿರಲಿಲ್ಲ. ಮಹಿಳೆ ಅದಕ್ಕೆ ಹೋರಾಡಲೇಬೇಕಾಯಿತು. ಇಲ್ಲಿ ಪುರುಷ ಪ್ರಧಾನತೆ ಕೇವಲ ಪುರುಷರಲ್ಲಿಲ್ಲ. ಪುರುಷಪ್ರಧಾನತೆಯ ಬೇರು ಎಷ್ಟು ಆಳವಾಗಿ

ಬೇರೂರಿದೆಯೆಂದರೆ ಅದರ ಪರಿಣಾಮ ಮಕ್ಕಳು ಮತ್ತು ಮಹಿಳೆಯರಲ್ಲೂ ಇದೆ. ಮಹಿಳೆ ಹೋರಾಡುತ್ತಾ ಇದ್ದದ್ದು ಪುರುಷಪ್ರಧಾನ ವ್ಯವಸ್ಥೆ ಮತ್ತು ಪುರುಷಪ್ರಧಾನ ಮನಸ್ಥಿತಿಯ ವಿರುದ್ಧವೇ ಹೊರತು ಕೇವಲ ಪುರುಷರ ವಿರುದ್ಧವಲ್ಲ. ಸ್ತ್ರೀ ಸಂವೇದನೆ ಹೊಂದಿದ ಪುರುಷರೂ ಇದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯ ಪರ ಇರುವ ಮಹಿಳೆಯರೂ ಇದ್ದಾರೆ. ಇಲ್ಲಿ ಹೋರಾಟದ ಮುಖ್ಯ ಗುರಿ ಮಹಿಳೆ ಅಥವಾ ಪುರುಷ ಎನ್ನುವುದಕ್ಕಿಂತ ಮಾನವತಾವಾದವೇ ಆಗಿದೆ. ರಾಜಕೀಯವಾಗಿ ತಾನೂ ಒಂದು ಶಕ್ತಿಯಾಗಬೇಕೆಂದು ಆಕೆ ಮತದಾನದ *ಹಕ್ಕಿಗಾಗಿ ಹೋರಾಡಬೇಕಾಯಿತು. ಭಾರತದಲ್ಲಿ ಮತದಾನದ ಹಕ್ಕಿಗಾಗಿ ಹೋರಾಡುವ ಅವಶ್ಯಕಥೆ ಬೀಳಲಿಲ್ಲ. ಆಕೆ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪುರುಷರೊಂದಿಗೆ ಪುರುಷರಿಗೆ ಸಮನಾಗಿ* ಹೋರಾಡಿದಳು. ಆದರೆ ವಿದೇಶಗಳಲ್ಲಿಯ ಪರಿಸ್ಥಿತಿ ಬೇರೆಯಾಗಿತ್ತು. ಆನಂತರ ಮಹಿಳೆ ಹೋರಾಡಲು ಪ್ರಾರಂಭಿಸಿದ್ದು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಮತ್ತು ಕೆಲವು ಅನಿಷ್ಟಗಳ ವಿರುದ್ಧ. ಈ ಹೋರಾಟದ ಪರಿಣಾಮ ಸಾಹಿತ್ಯದ ಮೇಲೂ ಆಯಿತು. ಈ ಸ್ತ್ರೀವಾದಿ ವಿಚಾರಗಳಿಂದ ಪ್ರಭಾವಿತರಾಗಿ ಅನೇಕ ಕಥೆ ಕಾದಂಬರಿಗಳು ಬಂದವು.

ಉಳಿದ ಕ್ಷೇತ್ರಗಳಂತೆ ಸಾಹಿತ್ಯ ಕ್ಷೇತ್ರದಲ್ಲಿಯೂ ಮಹಿಳೆಯರನ್ನು ತಾತ್ಸಾರ ಭಾವನೆಯಿಂದಲೇ ನೋಡಲಾಗುತ್ತಿತ್ತು. ಆಕೆಯ ಕಾರ್ಯಕ್ಷೇತ್ರವೆಂದರೆ ಮನೆ. ಆಕೆಯ ಪ್ರಧಾನ ವಿಷಯವೆಂದರೆ ತನ್ನ ಬಗ್ಗೆ ಮಾತ್ರ. ಆಕೆ ಭಾವನಾ ಪ್ರಧಾನಳು. ಆಕೆಯ ಬೌದ್ಧಿಕ ಶಕ್ತಿ ಪುರುಷರಿಗಿಂತ ಕಡಿಮೆ. ಮುಂತಾದ ವಿಚಾರಗಳನ್ನು ಹೊಂದಿದ ಸಮಾಜ ಆಕೆ ಬರೆಯಬಲ್ಲಳು ಸಾಹಿತಿಯಾಗಬಲ್ಲಳು ಎಂಬುದನ್ನು ಸ್ವೀಕರಿಸುವುದು ಕಷ್ಟವಾಗಿತ್ತು. ನಂತರ ಮಹಿಳೆಯರು ಬರೆದದ್ದನ್ನು ಲಘುವಾಗಿ ಕಾಣುವುದು ಮತ್ತು ಮಹಿಳೆಯನ್ನು ತಮಗೆ ಇಷ್ಟ ಬಂದಂತೆ ಸಾಹಿತ್ಯದಲ್ಲಿ ಚಿತ್ರಿಸುವುದು. ಇವು ಸಾಹಿತ್ಯ ಕ್ಷೇತ್ರದಲ್ಲಿ ನಡೆದು ಬಂದ ಪರಂಪರೆಗಳಾಗಿದ್ದವು. ಭಾರತ ದೇಶದಲ್ಲಿಯೂ ಪರಿಸ್ಥಿತಿ ಹೆಚ್ಚು ಭಿನ್ನವಾಗಿರಲಿಲ್ಲ. ಸ್ತ್ರೀವಾದಿ ವಿಮರ್ಶೆ ಪ್ರಾರಂಭವಾದದ್ದು ಸಾಹಿತ್ಯ ಕೃತಿಗಳಲ್ಲಿ ಚಿತ್ರಣವಾದ ಸ್ತ್ರೀ ಪಾತ್ರಗಳ ಅಭ್ಯಾಸದೊಂದಿಗೆ. ಮುಂದೆ ಅದು ತನ್ನ ದೃಷ್ಟಿಯನ್ನು ಕ್ರೋಢೀಕರಿಸಿತು. ಪುರುಷರಿಂದ ನಿರ್ಮಿಸಲ್ಪಟ್ಟ ಮತ್ತು ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಅನ್ವಯಿಸುವಂತಹವು ಎಂದು ಕರೆಯಲಾಗುವ ವಿಮರ್ಶೆಯ ಅಳತೆಗೋಲುಗಳು. ಮಹಿಳೆಯರ ಸಾಹಿತ್ಯವನ್ನು ವಿಮರ್ಶಿಸಲು ಸೂಕ್ತವಾಗಿವೆಯೇ. ಸೂಕ್ತವಾಗಿದ್ದರೆ ಮಹಿಳಾ ಸಾಹಿತ್ಯವನ್ನು ಏಕೆ ಉಪೇಕ್ಷಿಸಲಾಗುತ್ತಿದೆ. ಎಂಬುದು ಅವರ ಪ್ರಶ್ನೆಯಾಗಿತ್ತು. ಸ್ತ್ರೀವಾದಿಗಳ ಪ್ರಕಾರ ಮಹಿಳೆಯ ಅನುಭವ ಮತ್ತು ಮನೋಭಾವ ಪುರುಷರ ಅನುಭವ ಮತ್ತು ಮನೋಭಾವಗಳೊಡನೆ ಹೋಲಿಸಿದರೆ ಯಾವ ರೀತಿಯಲ್ಲಿಯೂ ಕಡಿಮೆ ಅಲ್ಲ. ಆದರೆ ಅದಕ್ಕಿಂತ ಭಿನ್ನವಾಗಿದೆ. ಭಿನ್ನವಾದದ್ದನ್ನು ವ್ಯಕ್ತಮಾಡಲು ಭಿನ್ನವಾದ ಭಾಷೆ ಬೇಕು, ಭಿನ್ನವಾದ ಸಾಹಿತ್ಯಪ್ರಕಾರಗಳು

ಬೇಕು. ಆದ್ದರಿಂದ ಸ್ತ್ರೀವಾದಿ ವಿಮರ್ಶೆ ಸಾಹಿತ್ಯಕ್ಕೆ ಬಳಸಲಾಗುತ್ತಿರುವ ಭಾಷೆಯ ಆಳವಾದ ಅಭ್ಯಾಸದೆಡೆಗೆ ತನ್ನ ಗಮನ ಹರಿಸಿತು.

ಕನ್ನಡದಲ್ಲಿ ಪ್ರಕಟವಾಗಿರುವ ಆತ್ಮಕಥೆಗಳನ್ನು ಕಲೆಹಾಕಿಕೊಂಡು ಅಧ್ಯಯನ ಮಾಡಿ ಅವುಗಳಲ್ಲಿ ಲಿಂಗ ಭಿನ್ನತೆ ಹೇಗೆ ಪ್ರಾತಿನಿಧಿಕ ಸ್ವರೂಪ ಪಡೆದುಕೊಂಡಿದೆ ಎಂದು ವಿಶ್ಲೇಷಿಸುವುದಕ್ಕೆ ಸ್ತ್ರೀವಾದಿ ವಿಮರ್ಶೆ ವೈಧಾನಿಕವಾಗಿ ನೆರವಿಗೆ ಬಾರದಿದ್ದರೂ ಸ್ಥೂಲವಾಗಿ ಕೆಲವೊಂದು ಆಯಾಮಗಳಲ್ಲಿ ಲಿಂಗ ಭಿನ್ನತೆಯ ಪ್ರತಿನಿಧೀಕರಣವನ್ನು ಗುರುತಿಸಿಕೊಳ್ಳಲು ನೆರವಾಗಿದೆ.

೫.೧. ಲಿಂಗ ಸಂಬಂಧಿ ಆಯಾಮಗಳು

ಲಿಂಗ ಸಂಬಂಧಿ ಆಯಾಮಗಳನ್ನು ಪ್ರಸ್ತುತ ಅಧ್ಯಾಯದ ಕೆಳಕಂಡ ಅಂಶಗಳೊಂದಿಗೆ ಚರ್ಚಿಸಲಾಗಿದೆ.

- ಪುರುಷರ ಆತ್ಮಕಥೆಗಳಲ್ಲಿ ಮಹಿಳಾ ನಿರೂಪಣೆಯ ಆಯಾಮಗಳು
- ಮಹಿಳೆಯರ ಆತ್ಮಕಥೆಗಳಲ್ಲಿ ಪುರುಷ ನಿರೂಪಣೆಯ ಆಯಾಮಗಳು
- ಪುರುಷರ ಆತ್ಮಕಥೆಗಳಲ್ಲಿ ಪುರುಷ ನಿರೂಪಣೆಯ ಆಯಾಮಗಳು
- ಮಹಿಳಾ ಆತ್ಮಕಥೆಗಳಲ್ಲಿ ಮಹಿಳಾ ನಿರೂಪಣೆಯ ಆಯಾಮಗಳು
- ತೃತೀಯ ಲಿಂಗ: ವಿಭಿನ್ನ ನೆಲೆಗಳು

ಆತ್ಮಕಥೆಗಳಲ್ಲಿ ಲಿಂಗ ಭಿನ್ನತೆಯ ಪ್ರತಿನಿಧೀಕರಣವನ್ನು ಗುರುತಿಸುವುದು ಬಹಳ ಸೂಕ್ಷ್ಮವಾದ ಕೆಲಸ. ಇದನ್ನು ಮಂಡಿಸುವ ಮೊದಲು ಲಿಂಗ ಪ್ರತಿನಿಧೀಕರಣ ಎಂದರೇನು ಎಂಬುದನ್ನು ಅರ್ಥೈಸಿಕೊಳ್ಳಬೇಕು. ಇದನ್ನು ಈ ಮುಂದೆ ಸ್ಪಷ್ಟೀಕರಿಸಿಕೊಳ್ಳಲಾಗಿದೆ. ಸಮಾಜ ಬಳಸುವ ಭಾಷೆ ಪುರುಷರ ನಿಯಂತ್ರಿತ ಭಾಷೆಯಾಗಿದೆ. ಪುರುಷನ ಭಾಷೆಯನ್ನೇ ಮಹಿಳೆ ಅನುಕರಿಸಿದ್ದಾಳೆ. ಪುರುಷರ ಬರವಣಿಗೆಯಲ್ಲಿ ಮಹಿಳೆ ಹೇಗೆ ಚಿತ್ರಿತವಾಗಿದ್ದಾಳೆ. ಮಹಿಳೆಯರ ಬರವಣಿಗೆಯಲ್ಲಿ ಮಹಿಳೆ ಹೇಗೆ ಚಿತ್ರಿತವಾಗಿದ್ದಾಳೆ. ಮಹಿಳೆಯರ ಬರವಣಿಗೆಯಲ್ಲಿ ಪುರುಷ ಹೇಗೆ ಚಿತ್ರಿತವಾಗಿದ್ದಾನೆ. ಪುರುಷರ ಬರವಣಿಗೆಯಲ್ಲಿ ಪುರುಷ ಹೇಗೆ ಚಿತ್ರಿತವಾಗಿದ್ದಾನೆ ಎಂಬುದನ್ನೇ ಲಿಂಗ ಪ್ರತಿನಿಧೀಕರಣ ಎಂದು ಗುರುತಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಸ್ತ್ರೀ ಪುರುಷರಿಬ್ಬರೂ ತಮ್ಮ ಲಿಂಗತ್ವ ಮೀರಿ ಅಭಿಪ್ರಾಯಗಳನ್ನು ಪ್ರತಿನಿಧಿಸಲಾರರು ಏಕೆಂದರೆ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಪಿತೃ ಪ್ರಧಾನ ಮೌಲ್ಯಗಳು ಮತ್ತು ಸ್ತ್ರೀತ್ವ ಕೆಲವೊಮ್ಮೆ ಮಾತು ಹೆಣ್ಣಿನದಾದರೂ ಭಾವ ಪುರುಷಪ್ರಧಾನ ವಾಹಿನಿಯ

ಮುಖವಾಣಿಯೇ ಆಗಿರುತ್ತದೆ. . ಆತ್ಮಕಥೆಗಳಲ್ಲಿ ಕೂಡ ಈ ಬಗೆಯ ಅಭಿವ್ಯಕ್ತಿ ಕಂಡುಬರುತ್ತದೆ. ಆತ್ಮಕಥೆಯಲ್ಲಿ ಕಂಡುಬರುವ ಈ ಬಗೆಯ ಅಭಿವ್ಯಕ್ತಿಯನ್ನು ಲಿಂಗ ಪ್ರತಿನಿಧೀಕರಣ ಎಂದು ಗುರುತಿಸಿಕೊಳ್ಳಲಾಗಿದೆ.

೫.೨. ಪುರುಷರ ಆತ್ಮಕಥೆಗಳಲ್ಲಿ ಮಹಿಳಾ ನಿರೂಪಣೆಯ ಆಯಾಮಗಳು

ಆತ್ಮಕಥೆ ಎಂಬುದು ಸ್ತ್ರೀ–ಪುರುಷರ ವೈಯಕ್ತಿಕ ಅಭಿವ್ಯಕ್ತಿಯಾದರೂ ಅದು ಲಿಂಗ ವ್ಯವಸ್ಥೆಯನ್ನು ಮೀರಿ ಪ್ರತಿನಿಧೀಕರಣಗೊಳ್ಳದು. ಇದಕ್ಕೆ ಉದಾಹರಣೆಯಾಗಿ.

ಬಿ ವಿ ಕಾರಂತರಲ್ಲಿ ಮಹಿಳೆಯ ಬಗ್ಗೆ ಬರುವ ಈ ಮಾತುಗಳು ಮುಖ್ಯವಾಗುತ್ತದೆ. "ಶೀಲದ ಪ್ರಶ್ನೆ ಬಂದಾಗೆಲ್ಲಾ ವೀರಣ್ಣನವರು ಶಿಕ್ಷೆ ಕೊಟ್ಟದ್ದೂ ಹೆಚ್ಚಾಗಿ ಹೆಂಗಸರಿಗೇ. ಒಮ್ಮೆ ಒಬ್ಬ ವಿಧವೆ ಬಂದಿದ್ದಳು ಕಂಪನಿಗೆ ಸೇರಿಕೊಳ್ಳುವುದಕ್ಕೆ (ಆಕೆ ಮುಂದೆ ಕನ್ನಡ ಸಿನೆಮಾದಲ್ಲಿ ಪೋಷಕನಟಿಯಾಗಿ ಹೆಸರು ಗಳಿಸಿದಳು) ಆಗ ಅವಳಿಗಿನ್ನೂ ೨೩–೨೪ ವರ್ಷ. ಕಂಪನಿಯಲ್ಲಿ ಸಿದ್ಧಲಿಂಗಯ್ಯ ಅಂತ ಒಬ್ಬ ಇದ್ದ. ಒಂದು ದಿನ ರಾತ್ರಿ ಎಲ್ಲರೂ ಮಲಗಿದ್ದಾಗ ಆತ ಆ ನಟಿಯ ಹತ್ತಿರ ಹೋದ ಅಂತ ಪಂಚಾತಿಕೆ ಶುರುವಾಯಿತು. ವೀರಣ್ಣನವರು ಆಗ ಕರೆಕಳಿಸಿದ್ದು ನಟಿಗೆ. ಅವಳ ಹತ್ತಿರ "ಏನಮ್ಮಾ ಕೆಳಗಿಂದ ಬಿಸಿ ತಟ್ತಾ?" ಅಂತ ಕೇಳಿದರೇ ಹೊರತು ಸಿದ್ಧಲಿಂಗಯ್ಯನವರಿಗೆ ಏನೂ ಹೇಳಲಿಲ್ಲ. ಅವರ ಪ್ರಕಾರ ಕಂಪನಿಯ ಹೆಸರು ಕೆಡೋದು ನಟರಿಂದಲ್ಲ ನಟಿಯರಿಂದ"[೧]

ವಿಧವೆಯಾದ ನಟಿಯ ಬಳಿ ಪುರುಷನು ಹೋದಾಗ ಗುಬ್ಬಿ ವೀರಣ್ಣನವರು ಪ್ರಶ್ನಿಸಬೇಕಾದದ್ದು ನಟನನ್ನಾಗಿತ್ತು. ಆದರೆ ಅವರು ನಟಿಗೆ ಹೇಳುವ ಮಾತು ಪುರುಷ ಪ್ರಧಾನತೆಯನ್ನು ಎತ್ತಿ ಹಿಡಿಯುತ್ತದೆ. ಅತ್ಯಂತ ಉಗ್ರವಾದ ವ್ಯಂಗ್ಯವಾಗಿ, ಸ್ತ್ರೀತ್ವವನ್ನು ಅಪಮಾನಿಸುವ ಭಾಷೆಯಾಗಿ ಅಶ್ಲೀಲವಾಗಿ ಇಲ್ಲಿ ಕಂಡುಬರುತ್ತದೆ. ಪುರುಷನ ನೀತಿಗೆಡುವಿಕೆಗೆ, ತಪ್ಪು ದಾರಿಗೆ ಸ್ತ್ರೀ ಪ್ರೇರಕಳು, ಕಾರಣಳು ಎಂಬ ಪೂರ್ವಗ್ರಹ ಇಲ್ಲಿದೆ. ಪುರುಷ ಯಜಮಾನಿಕೆ ಹೆಣ್ಣನ್ನು ಹದ್ದುಬಸ್ತಿನಲ್ಲಿಡುವ ವಿಧಾನ ಕೂಡ ಇಲ್ಲಿದೆ.

ಬೀಚಿ ಅವರ ನನ್ನ ಭಯಾಗ್ರಫಿಯಲ್ಲಿ ಬರುವ "ಪುಷ್ಪಕ್ಕ ಕಸುಬಿಗೆ ಇಳಿದಿರುವುದು ನಿಜ. ಹೀಗಾಗಬಾರದಿತ್ತು. ಆದರೆ ಹೀಗೇಕಾಯಿತು? ಇದಕ್ಕೆ ಹೊಣೆ ಯಾರು? ಆಕೆಗೂ ಹೊಟ್ಟೆಯಿದೆ. ಒಂದಲ್ಲ ಎರಡಿವೆ. ಬಕಾಸುರನಂತಹ ಹೊಟ್ಟೆಗಳು. ತಾಯಿಯೂ ಉಣ್ಣುವುದು ಬೇಡವೇ? ಅವಿದ್ಯಾವಂತ ಅನಾಥ ಹೆಣ್ಣು ಹೊಟ್ಟೆ ತುಂಬಿಕೊಳ್ಳಲು ಬೇರಾವ ಮಾರ್ಗವನ್ನು ನಮ್ಮ ಸಮಾಜ ಕಲ್ಪಿಸಿಕೊಟ್ಟಿದೆ? ನಾನು ಈ ನೌಕರಿ ಮಾಡುತ್ತಿದ್ದೇನೆ. ಆಕೆ ಆ ಚಾಕರಿ

ಮಾಡುತ್ತಿದ್ದಾಳೆ. ಇದರಲ್ಲಿ ಪವಿತ್ರರಾರು ಅಪವಿತ್ರರಾರು? ಮರ್ಯಾದಿ ಯಾವುದು,ಅಲ್ಲ ಯಾವುದು? ಇದರ ನಿರ್ಣಯಾಧಿಕಾರ ನನಗಿದೆಯೇ”[೨]

ಈ ಎರಡೂ ಪ್ರಸಂಗಗಳಲ್ಲಿ ಮೇಲ್ಜಾತಿಯ ಪುರುಷರು ವೀಕ್ಷಕರಾಗಿದ್ದಾರೆ. ಹಾಗೂ ಮಹಿಳೆಯರ ಪರವಾಗಿಯೇ ಸಹಾನುಭೂತಿ ವ್ಯಕ್ತಪಡಿಸಿದ್ದಾರೆ. ಬಿ.ವಿ. ಕಾರಂತರು ಪುರುಷನನ್ನು ತರಾಟೆಗೆ ತೆಗೆದುಕೊಳ್ಳದೇ ವಿಧವೆ ನಟಿಯನ್ನು ತರಾಟೆಗೆ ತೆಗೆದುಕೊಂಡಿರುವುದನ್ನು ಉಲ್ಲೇಖಿಸಿರುವುದರ ಉದ್ದೇಶವೇ ವೀರಣ್ಣನವರ ಪೌರುಷ ಖಂಡನೆಗಾಗಿ. ಹಾಗೆಯೇ ಬಿ.ಚಿ. ಯವರು ಬ್ರಾಹ್ಮಣ ವಿಧವೆ ಆಶ್ರಯಹೀನ ಸ್ಥಿತಿಯಲ್ಲಿ ವೇಶ್ಯಾವೃತ್ತಿ ಆಶ್ರಯಿಸಿದ ಪ್ರಕರಣದಲ್ಲಿ ಸಮಾಜವನ್ನು ದೋಷಿಯನ್ನಾಗಿ ನಿರೂಪಿಸುತ್ತಾರೆ. ಈ ಎರಡೂ ಸಂದರ್ಭಗಳಲ್ಲಿ ಮಹಿಳೆ ತಪ್ಪಿತಸ್ಥಳಲ್ಲದಿದ್ದರೂ ತಪ್ಪನ್ನು ತನ್ನದೇ ಎಂದು ಒಪ್ಪಿಕೊಳ್ಳುವಂತೆ ಪುರುಷ ಪ್ರಧಾನ ವ್ಯವಸ್ಥೆ ಮಾಡಿದೆ. ಈ ಆರೋಪಕ್ಕೆ ಅವಳು ಅರ್ಹಳು ಎಂಬಂತೆ ಒತ್ತಾಯದ ಹೇರಿಕೆಯಾಗಿದೆ. ತಪ್ಪು ತನ್ನದಲ್ಲದಿದ್ದರೂ ತನ್ನದೇ ತಪ್ಪು ಎನ್ನುವ ಭ್ರಮೆಯನ್ನು ಹುಟ್ಟು ಹಾಕಿದೆ.

ಶರಣಕುಮಾರ ಲಿಂಬಾಳೆಯವರ ಅಕ್ರಮ ಸಂತಾನದಲ್ಲಿ ಬರುವ ಈ ಸಾಲುಗಳನ್ನು ಗಮನಿಸಿದರೆ “ದಾನವ್ವ ದೇವಪ್ಪನ ಹಿರಿಯ ಮಗಳು. ಆಕೆಯ ಲಗ್ನವಾಗುವುದೇ ಕಠಿಣವಾಗಿತ್ತು. ಆಕೆಗೆ ತಂದೆಯಿಂದಲೇ ದಿನ ತುಂಬಿದವು. ದಾನವ್ವ ದೇವಕಿಯ ಕೈಕಾಲು ಬೀಳುತ್ತಿದ್ದಳು. ಮುಚ್ಚಿ ಇಟ್ಟಿದ್ದರಿಂದ ದಿವಸ ಬಹಳವಾದವು. ರೇವಪ್ಪ ಹೇಳುತ್ತಿದ್ದ ‘ನಾನಾಽ ಗಿಡ ಹಚ್ಚೇನಿ ನಾನ್ಯಾಕ ಫಲ ತಿನಬಾರ್ದು.’ ತಂದೆ ಮಗಳು, ಗಿಡ ಹಣ್ಣು, ಬೀಜಧಾರಣ, ದಾನವ್ವ ಮನೆಯ ಮುಂದೆ ಹಾಯ್ದು ಹೋಗುತ್ತಿದ್ದಾಗ ನಾನು ದಿನಾಲು ನೋಡುತ್ತಿದ್ದೆ. ಒಮ್ಮೊಮ್ಮೆ ಅವ್ವನ ಹತ್ತಿರ ಬಂದು ಕುಳಿತುಕೊಳ್ಳುತ್ತಿದ್ದಳು ಅಳುತ್ತಿದ್ದಳು.”[೩]

ಇಂಥ ನಿರೂಪಣೆ ಕೇವಲ ಪುರುಷರ ಬರವಣಿಗೆಯಲ್ಲಿ ಸಾಧ್ಯವಾಗಿದೆ. ಇಲ್ಲಿ ದಾನವ್ವಳ ಹೀನಸ್ಥಿತಿಗೆ ಅವಳ ತಂದೆ ಕಾರಣನಾದರೂ ಅವಳ ಪರ ನಿಂತು ಪ್ರಶ್ನಿಸುವುದು ಕಷ್ಟವಾಗಿದೆ. ಕಷ್ಟವಾದರೂ ತಂದೆಯ ಉತ್ತರ ಸಿದ್ಧವಾಗಿದೆ. ಇವೆಲ್ಲ ತೊಂದರೆಗಳಿಗೂ ಪುರುಷನೇ ಕಾರಣನಾದರೂ ತಪ್ಪು ಮಹಿಳೆಯದೇ ಎನ್ನುವಂತೆ ಚಿತ್ರಿತವಾಗಿದೆ. ಇಲ್ಲಿ ಮಹಿಳೆ ತನಗಾದ ಅನ್ಯಾಯವನ್ನು ಹೇಳಿದರೂ ಸಮಾಜ ಅವಳದೇ ಮರ್ಯಾದೆ ಎನ್ನುವಂತೆ ನೋಡುತ್ತದೆ. ತಂದೆಯಿಂದ ಗರ್ಭಧರಿಸಿದ ನೋವು ಒಂದು ರೀತಿಯದಾದರೆ ಪರಿಣಾಮದ ನೋವಿನ ಸ್ವರೂಪ ಇನ್ನೊಂದು ಬಗೆಯದಾಗಿದೆ.

ತಂದೆಯಿಂದ ದಿನ ತುಂಬಿದ್ದನ್ನು ಯಾವ ಹೆಣ್ಣೂ ಹೇಳಲಾರಳು, ಬರೆಯಲಾರಳು. ಹೇಳಿದರೂ ಪುರುಷಪ್ರಧಾನ ವ್ಯವಸ್ಥೆಯಲ್ಲಿ ನ್ಯಾಯ ನೀಡುವವರು ಪುರುಷರೇ ಆಗಿರುವಾಗ

ಅನ್ಯಾಯವಾಗಿರುವ ನೋವು ಒಂದು ಕಡೆಯಾದರೆ ಮತ್ತೆ ಶಿಕ್ಷೆಯ ಭಯ ಇನ್ನೊಂದು ಕಡೆ. ಹಾಗಾಗಿ ಹೇಗೂ ಅನ್ಯಾಯವಾಗಿದೆ. ಕೇವಲ ಅನ್ಯಾಯದ ನೋವು ಸಹಿಸಿದರಾಯಿತೆಂದು ಸುಮ್ಮನಿದ್ದು ಬಿಡುತ್ತಾರೆ. ಇವರನ್ನೆಲ್ಲ ಶಿಕ್ಷಿಸುವವರು ಯಾರು? ಇವೆಲ್ಲ ಪ್ರಶ್ನೆಯಾಗಿಯೇ ಉಳಿಯುತ್ತದೆ. ಪುರುಷರು ಸಮಾಜ ಬಾಹಿರವನ್ನೇ ಹೇಳಲಿ, ಪುರುಷ ಪ್ರಧಾನ ಸಮಾಜ ಅದನ್ನು ಸಹಜವೆಂಬಂತೆ ಸ್ವೀಕರಿಸುತ್ತದೆ. ಮಹಿಳೆ ಕೂಡ ತನ್ನ ಮುಚ್ಚಿಟ್ಟ ಅನುಭವ ಹೇಳಿದರೂ ಅದರ ಪರಿಣಾಮ ಮಾತ್ರ ಅವಳ ಮೇಲೆ ಭೀಕರವಾಗಿರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಹೋದವರ ಜೀವನ ಮತ್ತು ಅದರ ಪರಿಣಾಮ ಹೇಗಿರುತ್ತದೆ ಎನ್ನುವುದಕ್ಕೆ ಪ್ರತಿಮಾ ಬೇಡಿಯ ಆತ್ಮಕಥೆಯೇ ಸಾಕ್ಷಿಯಾಗಿದೆ.

ಹೆಣ್ಣಿನ ಬಗ್ಗೆ ಪುರುಷನ ಪ್ರತಿಕ್ರಿಯೆಗೆ ಉದಾಹರಣೆಯಾಗಿ ನೆಬ್ಲೂರು ನಾರಾಯಣ ಭಾಗವತರು, "ಸಾಕಷ್ಟು ಶ್ರೀಮಂತಿಕೆ ಸಮೃದ್ಧಿ ಇದ್ದ ಕುಟುಂಬದಿಂದ ಬಂದವಳು ಅವಳು. ತವರು ಮನೆಯದು ಅರವತ್ತು ಎಪ್ಪತ್ತು ಜನರ ಕುಟುಂಬ. ಒಡನಾಟವೂ ಹೆಚ್ಚು. ಮನೆಯಲ್ಲಿ ಇದ್ದವರ ಹತ್ತಿರ ಮನೆಗೆ ಬಂದವರೊಡನೆ ಹೇಗೆ ನಡೆದುಕೊಳ್ಳಬೇಕು, ಜನರನ್ನು ಹೇಗೆ ಸಂಬಾಳಿಸಬೇಕು ಎನ್ನುವ ಸಂಸ್ಕಾರವೆಲ್ಲ ತುಂಬ ಇದ್ದವಳು. ಮನೆಗೆ ಜನ ಬಂದ ಹಾಗೇ ಖುಷಿ. ಆದರಾತಿಥ್ಯ ಸತ್ಕಾರಗಳಲ್ಲಿ ತುಂಬ ಆಸಕ್ತಿ ಉತ್ಸಾಹ. ನನಗೂ ಸಾಕಷ್ಟು ಜನಬಳಕೆ ಇತ್ತಲ್ಲವಾ? ಮನೆಗೆ ಅತಿಥಿಗಳಾಗಿ ಯಾರು ಬಂದರೂ ಅವಳಿಗೆ ಬೇಜಾರೇನೂ ಇರಲಿಲ್ಲ. ಅಗದೀ ಖುಷಿಯಿಂದ ಹಿತವಾಗಿ ಹೊಂದಾಣಿಕೆಯಿಂದ ನಡೆಸಿಕೊಂಡು ಹೋಗುತ್ತಿದ್ದಳು. ನಾನೊಬ್ಬಳು ಬಡವರ ಮನೆಯನ್ನು ಸೇರಿಬಿಟ್ಟಿದ್ದೇನೆಂಬ ಕಲ್ಪನೆಯನ್ನೇ ಅವಳು ಇಟ್ಟುಕೊಳ್ಳಲಿಲ್ಲ. ನನ್ನ ಬದುಕಿನ ಗೆಲುವು ಎಂದರೆ ಅದೇ"

ತುಂಬಾ ಶ್ರೀಮಂತಿಕೆಯ ಮನೆಯಿಂದ ಬಂದು ಬಡವರ ಮನೆಸೇರಿದ ಬಗ್ಗೆ ಅವಳಿಗೆ ಅಸಮಾಧಾನವಾದರೂ ಇಲ್ಲಿ ಹೆಣ್ಣಿಗೆ ಅವಳ ಹಣೆಬರಹ ಎಂದು ಒಪ್ಪಸಲಾಗಿದೆ. ಕೂಡು ಕುಟುಂಬದಲ್ಲಿ ಬೆಳೆದ ಈ ಹೆಣ್ಣಿಗೆ ಪರಿಸ್ಥಿತಿಗೆ ಹೊಂದಿಕೊಳ್ಳುವ ರೂಢಿ ಮಾಡಲಾಗಿದೆ. ಮನೆಗೆ ಅತಿಥಿಗಳು ಬಂದಾಗ ಬಡತನವಿದ್ದರೂ ಅದನ್ನು ತೋರಿಸಿಕೊಳ್ಳದೇ ಕುಟುಂಬದ ಮರ್ಯಾದೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೆಣ್ಣಿಗೇ ವಹಿಸಲಾಗಿದೆ. ಬಡವರ ಮನೆಗೆ ಸೇರಿದ್ದೇನೆಂಬ ಬೇಸರವನ್ನೂ ಯಾರಿಗೂ ತೋರಿಸಿಕೊಳ್ಳದ ಹಾಗೆ ಬದುಕಿದ್ದಾಳೆಂದರೆ ತನಗಿಷ್ಟವಿಲ್ಲದ ಬದುಕನ್ನು ಜೀವಿಸಿದ್ದಳು ಎಂಬುದನ್ನು ಹೇಳುತ್ತದೆ.

ಮಾತೃ ಮೂಲೀಯ ಕುಟುಂಬದ ಪುರುಷನ ಅನುಭವಗಳನ್ನು ಕಯ್ಯಾರ ಕಿಞ್ಞಣ್ಣ ರೈ ಹೀಗೆ ಹೇಳುತ್ತಾರೆ, "ಬಂಟರ ಮಾತೃಮೂಲ ಪದ್ಧತಿಯ ಸಮಾಜದಲ್ಲಿ ಮನೆಯೊಡತಿಯೇ

ಅಲ್ಲಿ ಯಜಮಾನತಿ. ಆಸ್ತಿ ಬದುಕಿಗೆ ಆಕೆಯೇ ಅಧಿಕಾರಿಣಿ. ತನ್ನ ಆಸ್ತಿ ಬದುಕುಗಳಲ್ಲಿ ಗಂಡನಿಗೂ ಅಧಿಕಾರವಿಲ್ಲ; ತನ್ನ ಗಂಡುಮಕ್ಕಳು ಆಸ್ತಿಯ ಆಡಳಿತ ಮಾಡಬಹುದು; ಆದರೆ ಮನೆ ಆಸ್ತಿ ಬದುಕು ಎಲ್ಲವೂ ತನ್ನ ನಂತರ ಹೆಣ್ಣು ಮಕ್ಕಳಿಗೆ. ತನ್ನ ಗಂಡು ಹುಡುಗರ ಮಕ್ಕಳಿಗೆ ಅವರ ತಾಯಿಮನೆಯಲ್ಲಿ ಆ ಆಸ್ತಿಯಲ್ಲಿ ಹಕ್ಕು. ಹೀಗೆ ತಾಯಿಯಿಂದ ಮಗಳಿಗೆ ಸೊತ್ತಿನ ಅಧಿಕಾರ; ಆಡಳಿತವನ್ನು ಗಂಡುಮಗನೂ ಮಾಡುತ್ತಿದ್ದುದರಿಂದ ಮಾವನ ನಂತರ ಅಳಿಯನಿಗೂ ಆಡಳಿತದ ಅಧಿಕಾರ ಬರುವ ಕಾರಣ ಈ ಮಾತೃ ಮೂಲ ಪದ್ಧತಿಗೆ ಅಳಿಯಕಟ್ಟು ಎಂಬ ಹೆಸರು ರೂಢಿಯಲ್ಲಿದೆ. ಈ ಸಾಮಾಜಿಕ ಪದ್ಧತಿ ಪ್ರಕಾರ ಆ ಸಮಾಜದಲ್ಲಿ ಸ್ತ್ರೀಗೆ ಸ್ವಾತಂತ್ರ್ಯ ಸ್ಥಾಪಿತವಾಗಿತ್ತು. ಯೋಧರು ಯುದ್ಧದ ಸಲುವಾಗಿ ಊರಿಂದ ಊರಿಗೆ ಆಗಾಗ ಹೋಗಲೇಬೇಕು; ಯುದ್ಧಕ್ಕೆ ಹೋದವರು ಮರಳಿ ಬರುವುದೂ ನಿಶ್ಚಯವಿಲ್ಲ. ಮನೆಯೊಡತಿ ಸ್ತ್ರೀಯೇ ಆದಳು; ಅವಳ ಗಂಡುಮಕ್ಕಳೂ ಮುಂದೆ ಯೋಧರಾಗಿ ಹೋಗುವರು; ಹಾಗಾಗಿ ಆಸ್ತಿ ಬದುಕಿನ ಒಡೆತನ ತಾಯಿಯಿಂದ ಮಗಳಿಗೇ ಸ್ಥಿರವಾಗಿ ಉಳಿಯಿತು."[೨]

ಇಲ್ಲಿ ಅಧಿಕಾರ ಮತ್ತು ಆಸ್ತಿ ಹೆಣ್ಣನ್ನು ಸದೃಢಳನ್ನಾಗಿ ಮಾಡಿದೆ. ಪುರುಷಪ್ರಧಾನ ಕುಟುಂಬಕ್ಕಿಂತ ಭಿನ್ನ ವ್ಯವಸ್ಥೆ ಕಂಡುಬರುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಹೇಗೆ ಪುರುಷನಿಗೆ ಅಧಿಕಾರ ಸ್ವಾತಂತ್ರ್ಯವಿದೆಯೋ ಹಾಗೆ ಮಾತೃಮೂಲೀಯ ಕುಟುಂಬದಲ್ಲಿ ಮಹಿಳೆಯರಿಗೆ ಅಧಿಕಾರ ಸ್ವಾತಂತ್ರ್ಯ ಇರುವುದು ಕಂಡುಬರುತ್ತದೆ.

ಪುರುಷನಾಗಿ ಮಹಿಳೆಯ ಬಗ್ಗೆ ಪ್ರತಿಕ್ರಿಯಿಸುವ ಬೀಚಿ, "ಮೊದಲೆಲ್ಲ ಗಂಡಸರೇ ಹೆಣ್ಣು ಪಾರ್ಟುಗಳನ್ನು ಧರಿಸುವುದು ಪದ್ಧತಿ. ಕ್ರಮೇಣ ಒಬ್ಬೊಬ್ಬರಾಗಿ ಸ್ತ್ರೀಯರು ಬಯಲಾಟಗಳಲ್ಲಿ ಕಾಣಿಸಿಕೊಂಡರು. ಅಂಥವರ ಬಗ್ಗೆ ಸಮಾಜ ಗೌರವ ಭಾವನೆ ತಾಳುತ್ತಿರಲಿಲ್ಲ. ಅವರನ್ನೆಲ್ಲ 'ಸೂಳೆಯರು' ಎಂದೆನ್ನುತ್ತಿದ್ದರು. ಆದರೆ ನಾಟಕಗಳಲ್ಲಿ ಪಾರ್ಟು ಮಾಡದೇ ಕೇವಲ ವ್ಯಭಿಚಾರವನ್ನೇ ವೃತ್ತಿ ಮಾಡಿಕೊಂಡು ಬಾಳುತ್ತಿದ್ದ ರಾತ್ರಿ ಜೀವಿಗಳನ್ನು ಗೌರವವಾಗಿ 'ಸಾನಿಯರು ಅಥವಾ ಪಾತರದವರು' ಎಂದು ಕರೆಯುತ್ತಿದ್ದರು. ಈ ಎಲ್ಲ ಹೆಸರು ಕೇವಲ ಸ್ತ್ರೀವರ್ಗಕ್ಕಷ್ಟೆ ಮೀಸಲು. ಇವರಲ್ಲಿ ಸಹವಾಸದ ದಾಹದಿಂದ ಚಡಪಡಿಸುತ್ತಿದ್ದ ಗಂಡಸರೆಲ್ಲರೂ 'ರಸಿಕರು ಮಹಾರಸಿಕರು'.

ಬಯಲಾಟದಲ್ಲಿ ಸಂಜೀವಿ ಎಂಬೊಬ್ಬ ಹೆಣ್ಣುಮಗಳು ವಿರಾಟರಾಯನ ಪಾತ್ರವನ್ನು ವಹಿಸಿದ್ದಳು. ಅದೊಂದೇ ಕಾರಣಕ್ಕಾಗಿಯೇ ಆ ಬಯಲಾಟವನ್ನು ನೋಡಲು ಊರಿಗೆ ಊರೇ ನೂಕು ನುಗ್ಗಲಾಗಿ ಬಂದಿತ್ತು. ಅದೇ ರಾತ್ರಿ ಅನೇಕ ಮನೆಗಳಲ್ಲಿ ಕನ್ನ ಚೋರಿಗಳು ಸಾಕಷ್ಟು ಜರುಗಿದವು. ಹೆಣ್ಣೊಂದು ತನ್ನ ವಿಪುಲವಾಗಿದ್ದ ಎದೆಯನ್ನು ಅತೀ ಪರಿಶ್ರಮದಿಂದ ಬಿಗಿ ಕಟ್ಟಿ ಉದ್ದುದ್ದನ ಮೀಸೆಯನ್ನು ಧರಿಸಿ, ಆ ಕೀರಲ ದನಿಯಿಂದ ಆಡಿದ ಆ ವಿರಾಟರಾಯನ

ಮಾತನ್ನು ಕೇಳಿ ಸಂತೋಷಿಸಿದ ಬ್ರಾಹ್ಮಣ ಪುಂಗವರೇ ಮರುದಿನ ಹರಟೆ ಕಟ್ಟೆಯ ಮೇಲೆ ಕುಳಿತಾಗ 'ಹೆಣ್ಣು ಮಕ್ಕಳೆಲ್ಲ ಗಂಡು ಪಾರ್ಟು ಮಾಡಿದರೆ ಆಗಬಾರದ ಅನ್ಯಾಯ ಆಗಲೇಬೇಕು. ಇದರಿಂದ ದೇವರು ಸಿಟ್ಟಾಗಿದ್ದಾನೆ. ಅದಕ್ಕಾಗಿಯೇ ಊರಲ್ಲಿ ಕಳವು ಕಾಕು ಆದವು' ಎಂದು ಧಾರಾಳವಾಗಿ ಟೀಕಿಸಿದರು. ಈಗ ಒಂದೆರಡು ಸ್ತ್ರೀ ನಾಟಕ ಕಂಪನಿಗಳಿವೆ. ಎಲ್ಲ ಪಾತ್ರಗಳನ್ನು ಸ್ತ್ರೀಯರೇ ಮಾಡುತ್ತಾರೆ ಆದರೆ ಒಂದು ಕಳವೂ ಆಗಿಲ್ಲ ಯಾಕೆ? ಪ್ರಾಯಶ ಬದಲಾದ ಕಾಲಕ್ಕೆ ಅವರ ದೇವರೂ ಹೊಂದಿಕೊಂಡು ಬಿಟ್ಟನೇ? ನಡು ರಾತ್ರಿಯಲ್ಲಿ ಪಾತರದವರ ಮನೆಗಳಿಗೆ ಓಡಾಡುವುದನ್ನು ಮೆಚ್ಚಿ ಬೆನ್ನು ಚಪ್ಪರಿಸುತ್ತಿದ್ದ ಮಡಿ ಬ್ರಾಹ್ಮಣಿಕೆ ಅದೇಕೋ ನಾಟಕವನ್ನು ಮೂರನೇ ದರ್ಜೆಯಲ್ಲಿಟ್ಟಿದಿತು. ಇದಕ್ಕೆ ಸಮಜಾಯಿಷಿ ನನಗಿನ್ನೂ ದೊರೆಯಬೇಕಾಗಿದೆ."[೬]

ಪುರುಷರಿಗೆ ಮಹಿಳೆಯರು ತಮ್ಮಿಷ್ಟದಂತೆ ಇದ್ದರೆ ಅದನ್ನು ಒಪ್ಪುತ್ತಿದ್ದರು. ಅದೇ ಮಹಿಳೆ ತಾನೇ ಏನಾದರೂ ಮಾಡಿದರೆ ಅದು ತಪ್ಪಾಗುತ್ತಿತ್ತು. ಹೇಗೆಂದರೆ ಪ್ರಾರಂಭದಲ್ಲಿ ಮಹಿಳೆಯರು ನಾಟಕದ ಪಾತ್ರಗಳನ್ನು ಮಾಡುವುದು ಇಷ್ಟವಿದ್ದಂತೆ ತೋರುತ್ತಿರಲಿಲ್ಲ. ಅವರನ್ನು ಸೂಳೆಯರೆಂದು ಕರೆದು, ರಾತ್ರಿ ಜೀವಿಗಳು ತಮಗೆ ಅನುಕೂಲ ಮಾಡುತ್ತಿದ್ದುದರಿಂದ ಗೌರವವಾಗಿ ಅವರನ್ನು ಸಾನಿಯರೆಂದು ಕರೆಯುವಲ್ಲಿ ನಿರ್ದಿಷ್ಟ ಮನೋಭಾವ ಎದ್ದು ಕಾಣುತ್ತದೆ. ಮಹಿಳೆ ನಾಟಕದ ಪಾತ್ರ ಮಾಡಿದಳೆಂಬ ಕಾರಣಕ್ಕೆ ಇಡೀ ಊರಿಗೆ ಊರೇ ನಾಟಕ ನೋಡಲು ಆಸಕ್ತವಾಗಿದೆ. ಆದರೆ ಆಸೆಯನ್ನು ಈಡೇರಿಸಿದ್ದರ ಬಗ್ಗೆ ತೃಪ್ತಿ ಇದ್ದರೂ ಅಸಹನೆ ವ್ಯಕ್ತಪಡಿಸುವಲ್ಲಿ ಅವರ ಮನೋಭಾವ ಹೇಳುತ್ತದೆ. ಅದಕ್ಕೆ ಲೇಖಕರು 'ಈಗ ಒಂದೆರಡು ಸ್ತ್ರೀ ನಾಟಕ ಕಂಪನಿಗಳಿವೆ. ಎಲ್ಲ ಪಾತ್ರಗಳನ್ನು ಸ್ತ್ರೀಯರೇ ಮಾಡುತ್ತಾರೆ ಆದರೆ ಒಂದು ಕಳವೂ ಆಗಿಲ್ಲ ಯಾಕೆ? ಪ್ರಾಯಶಃ ಬದಲಾದ ಕಾಲಕ್ಕೆ ಅವರ ದೇವರೂ ಹೊಂದಿಕೊಂಡು ಬಿಟ್ಟನೇ?' ಎನ್ನುವಲ್ಲಿ ಪುರುಷ ಪ್ರಧಾನತೆಯನ್ನೇ ಪ್ರಶ್ನಿಸುತ್ತಾರೆ.

ಹೆಣ್ಣಿನ ಆತ್ಮಕಥೆ ಯಾಕೆ ಕಡಿಮೆ? ಪುರುಷರಿಗೆ ಹೋಲಿಸಿದರೆ ಮಹಿಳೆಯರ ಆತ್ಮಕಥೆ ಕಡಿಮೆಯೆಂದೇ ಹೇಳಬೇಕು. ತಲೆತಲಾಂತರದಿಂದ ಹೆಣ್ಣಿಗೆ ನೋವನ್ನು ನುಂಗಿಕೊಳ್ಳುವುದೇ(ತಾಳ್ಮೆ) ಸಹಜಗುಣವೆಂಬಂತೆ ಹೇರಲಾಗಿದೆ. ಇದು ಹೆಣ್ಣಿಗೇ ಗೊತ್ತಿಲ್ಲದಿರುವ ಸತ್ಯವಾಗಿತ್ತು. ಹೆಣ್ಣು ಕಷ್ಟ ಸುಖವನ್ನು ಯಾರಲ್ಲೂ ಹೇಳಿಕೊಳ್ಳಬಾರದು ಎಂದೇ ಕಲಿಸಿಕೊಡಲಾಗಿದೆ. ಹೇಳಿಕೊಳ್ಳಲಾಗದ ಈ ಗುಣದಿಂದ ಅವಳು ಕಥೆ ಕಾದಂಬರಿಯಲ್ಲಿ ತನ್ನ ನೋವನ್ನು ಪಾತ್ರದ ಮೂಲಕ ಹೊರಹಾಕುತ್ತಿದ್ದಳು. ಕಥೆ ಕಾದಂಬರಿ ಪ್ರಕಾರದಲ್ಲಿ ಮೇಲುಗೈ ಸಾಧಿಸಿದ ಮಹಿಳೆ ಆತ್ಮಕಥೆ ಬರೆಯಲಾರಳೆ? ಕಥೆ ಕಾದಂಬರಿಯಲ್ಲಿ ತಾನೇ ಒಂದು ಪಾತ್ರವಾಗಿ ನಿಭಾಯಿಸುವ ತಂತ್ರ

ಇದ್ದರೆ ಆತ್ಮಕಥೆಯಲ್ಲಿ ಅವಳು ತಾನೇ ನೇರವಾಗಿ ಹೇಳಿಕೊಳ್ಳಬೇಕಾಗುತ್ತದೆ. ಹಿಂಸೆಯನ್ನು ಕಥೆ ಕಾದಂಬರಿಯಲ್ಲಿ ತರಬಹುದು. ಆತ್ಮಕಥೆಯಲ್ಲಿ ಅದು ನೇರವಾಗಿ ಬಂದರೆ ಮತ್ತೆ ಅವರ ಜೊತೆಯಲ್ಲೇ ಬದುಕುವುದು ಕಷ್ಟವಾಗುತ್ತದೆ. ಆತ್ಮಕಥೆಯಲ್ಲಿ ಅಕಸ್ಮಾತ್ ಧೈರ್ಯವಾಗಿ ತಂದರೂ ಅದರ ಸಾಮಾಜಿಕ ಆಯಾಮಗಳನ್ನು ಎದುರಿಸುವುದು ಕಷ್ಟವಾಗುತ್ತದೆ. ಇವೆಲ್ಲಾ ಮಿತಿಗಳು ಹೆಣ್ಣಿಗೆ ಮಾತ್ರ ಇರುವುದಾಗಿದೆ.

ಇನ್ನೊಂದು ಆಯಾಮದಲ್ಲಿ ನೋಡುವುದಾದರೆ ಸಾಮಾಜಿಕ ಗೌರವ ಅವರನ್ನು ಕಾಡಿದೆಯೇ ಅಥವಾ ಹೇಳಬೇಕಾದದ್ದು ಕಥೆ ಕಾದಂಬರಿಯ ಮೂಲಕ ಹೇಳಿದ ಮೇಲೆ ಹೇಳುವುದಕ್ಕೆ ಏನು ಉಳಿದಿಲ್ಲವೇ. ಹೆಣ್ಣು ಮಕ್ಕಳ ಬದುಕು ಅತಂತ್ರವಾಗಿರುವುದಕ್ಕೆ ಸಾಮಾಜಿಕ ಆಯಾಮ ಕೂಡ ಇದೆ. ಅದನ್ನೇ ಹೀಗೂ ಹೇಳಬಹುದು. ಒಂದು ಗಿಡವನ್ನು ಒಂದೇ ಕಡೆ ನೆಟ್ಟು ಬೇರು ಬಿಟ್ಟರೆ ಬಹಳ ಗಟ್ಟಿಯಾಗಿ ಬೆಳೆಯುತ್ತದೆ. ಆದರೆ ಸಸಿ ಅಲ್ಲ. ಸಸಿಯನ್ನು ತೆಗೆದು ಬೇರೆ ಕಡೆ ನೆಟ್ಟರೆ ಅದು ಸದೃಢವಾಗಿ ಬೆಳೆಯುತ್ತದೆ. ಅದೇ ಗಿಡವನ್ನು ತೆಗೆದು ಮತ್ತೆ ಬೇರೆ ಕಡೆ ನೆಟ್ಟರೆ ಅದು ಅಷ್ಟು ಸಧೃಢವಾಗಿ ಬೆಳೆಯುವುದು ಕಡಿಮೆ. ಹೆಣ್ಣು ಮಗುವನ್ನು ಸಾಮಾಜಿಕ ಪ್ರಕ್ರಿಯೆಯಲ್ಲಿ ಹಾಗೆಯೇ ಮಾಡಲಾಗುತ್ತದೆ. ಈ ಪ್ರಕ್ರಿಯೆ ಅವರ ಬದುಕಲ್ಲೂ ಪ್ರತಿಫಲಿಸುತ್ತದೆ.

ಮಹಿಳಾ ಆತ್ಮಕಥೆಗಳನ್ನು ಗಮನಿಸಿದರೆ ತಾಯಂದಿರು ಪುರುಷರಿಗೆ ಸಮಾನವಾಗಿ ಸ್ಪರ್ಧಿಸಲು ಹೋಗಿದ್ದರೆ ಎಷ್ಟೋ ಮಕ್ಕಳು ಬೀದಿಯಲ್ಲಿರಬೇಕಿತ್ತು. ಪುರುಷರ ಸಾಧನೆ ಹೋರಾಟಗಳೇ ಬೇರೆ. ಮಹಿಳೆಯ ಸಾಧನೆ ಹೋರಾಟಗಳೇ ಬೇರೆ. ಒಂದಕ್ಕೊಂದು ಹೋಲಿಸಲು ಸಾಧ್ಯವಾಗುವುದಿಲ್ಲ. ಪುರುಷ ಏನಾದರೂ ಸಾಧಿಸಲೇಬೇಕೆಂಬ ಹಠವಿದ್ದರೆ ವೈಯಕ್ತಿಕ ಜವಾಬ್ದಾರಿ ಬಿಟ್ಟು ಹೋಗುವುದನ್ನು ಸಮಾಜ ಒಪ್ಪುತ್ತದೆ. ಆದರೆ ಅದೇ ಮಹಿಳೆ ಜವಾಬ್ದಾರಿಯನ್ನು ಬಿಟ್ಟರೂ ಸರಿಯಾಗಿ ನಿರ್ವಹಿಸಿದರೂ ಅದು ಮುಖ್ಯವಾಗುವುದೇ ಇಲ್ಲ. ಪುರುಷರಿಗೆ ೬೦ ನಿವೃತ್ತಿ ವಯಸ್ಸಾದರೆ. ಅದೇ ಮಹಿಳೆಗೆ ಜವಾಬ್ದಾರಿಗಳು ಜಾಸ್ತಿ. ಅವಳ ಆರೋಗ್ಯ, ಮೊಮ್ಮಕ್ಕಳು, ಸೊಸೆ, ಅಳಿಯ ಇವೆಲ್ಲದರಿಂದ ಅವಳು ತಲೆ ಸುತ್ತಿ ಬೀಳುವಂತಾಗುತ್ತದೆ. ಬೇರೆ ಸ್ವಾತಂತ್ರ್ಯ ಇಲ್ಲದಿದ್ದರೂ ಕನಸು ಕಾಣಲೂ ಸ್ವಾತಂತ್ರ್ಯ ಇರುವುದಿಲ್ಲ. ಹೆಣ್ಣಿಗೆ ಬಾಲ್ಯದ ಬಂಧನ/ಸ್ವಾತಂತ್ರ್ಯ ಒಂದು ತರಹವಾದರೆ. ಯೌವನದ ಬಂಧನ ಇನ್ನೊಂದು ತರವಾದದ್ದು. ಮುಪ್ಪಿನಲ್ಲಿ ಬಂಧನ ಇಲ್ಲವೆಂದರೂ ತಾನೇ ಬಂಧನಕ್ಕೊಳಗಾಗಿರುತ್ತಾಳೆ. ಬದುಕು ಅವಳಿಗೆ ಅದನ್ನೇ ಕಲಿಸಿರುತ್ತದೆ. ಪ್ರತಿಯೊಬ್ಬ ಮಹಿಳೆಯರ ಬದುಕೇ ಕಾದಂಬರಿ ಕಥೆ ನಾಟಕ. ಆ ನೋವುಗಳನ್ನು ಅನುಭವಿಸಲೇ ಸಮಯ ಇಲ್ಲದಿರುವಾಗ ಬರೆಯಲು ಎಲ್ಲಿಂದ ಸಮಯ ಸಿಗುತ್ತದೆ. ಕೊರತೆ ನೀಗುವುದಕ್ಕಾಗಿ

ಬರೆಯಲೇಬೇಕಾಗುತ್ತದೆ. ತಾಯಿ ಮತ್ತು ಒಳ್ಳೆಯ ಗೃಹಿಣಿ ಎನ್ನುವ ಪದಗಳು ಅವಳು ತನಗಾಗಿ ಬದುಕಿಲ್ಲ. ಗಂಧದಂತೆ ತನ್ನನ್ನು ತೇಯ್ದು ಬೇರೆಯವರಿಗೆ ಪರಿಮಳ ಕೊಟ್ಟಳು ಎನ್ನುವ ಇನ್ನೊಂದು ಅರ್ಥವನ್ನು ಹೇಳುತ್ತದೆ.

೫.೩. ಮಹಿಳೆಯರ ಆತ್ಮಕಥೆಗಳಲ್ಲಿ ಪುರುಷ

ಪ್ರತಿಯೊಬ್ಬ ಭಾರತೀಯನೂ ಕೂಡ ಭೇದ ಅಥವಾ ತಾರತಮ್ಯವನ್ನು ತಪ್ಪು ಎನ್ನುವಂತೆ ಮಾತಾಡುತ್ತಾನೆ. ಆದರೆ ವೈಯಕ್ತಿಕ ನೆಲೆಯಲ್ಲಿ ಅದನ್ನು ಯಾವ ದ್ವಂದ್ವವೂ ಇಲ್ಲದೆ 'ಸರಿ' ಎಂಬಂತೆ ಆಚರಿಸುತ್ತಾನೆ. ಈ ಮಾತು ಮತ್ತು ನಡವಳಿಕೆಯನ್ನು ಪುರುಷಪ್ರಧಾನ ವ್ಯವಸ್ಥೆಗೆ ಮತ್ತು ಮಹಿಳೆಗೂ ಹೋಲಿಸಬಹುದು. ಬಾಲ್ಯ ಮತ್ತು ವ್ಯಕ್ತಿತ್ವಕ್ಕು ನೇರ ಸಂಬಂಧವಿರುವುದನ್ನು ಮಹಿಳೆ ಮತ್ತು ಪುರುಷರಲ್ಲಿ ಕೂಡ ಗುರುತಿಸಬಹುದಾಗಿದೆ. ಅದನ್ನು ಹೀಗೆ ಸ್ಪಷ್ಟಪಡಿಸಬಹುದು ಕೃಷ್ಣಾಹತೀಸಿಂಗ್(ನೆಹರೂ ಸಹೋದರಿ). ಅವರು, "ನನ್ನ ಅಣ್ಣ ಜವಾಹರನು ೧೮ ವರ್ಷ ಹಿರಿಯವನು; ನನ್ನ ಅಕ್ಕ ಏಳು ವರ್ಷ ಹಿರಿಯವಳು. ನಾನು ಸಂಗಡಿಗರಿಲ್ಲದೆ ಒಬ್ಬೊಂಟಿಗಳಾಗಿ, ನನ್ನ ಅಣ್ಣ ಅಥವಾ ಅಕ್ಕನೊಡನೆ ಯಾವ ಸಂಬಂಧವೂ ಇಲ್ಲದಂತೆಯೇ ಬೆಳೆದೆನು. ನಾನು ಹುಟ್ಟಿದಾಗ ನನ್ನ ಅಣ್ಣ ದೂರದ ಇಂಗ್ಲೆಂಡಿನಲ್ಲಿದ್ದುದರಿಂದ, ಆತನನ್ನು ನೋಡಿಯೂ ಕೂಡ ಇರಲಿಲ್ಲ. ನಾನು ಐದು ವರ್ಷದವಳಾಗಿದ್ದಾಗ ಮೊಟ್ಟಮೊದಲನೆಯ ಸಾರಿ ಆತನ ಪರಿಚಯವನ್ನು ಮಾಡಿಕೊಂಡೆನು."[೭]

ಒಡನಾಟ ಬಾಂಧವ್ಯ ಮನುಷ್ಯನ ಒಂಟಿತನವನ್ನು ನೀಗಿಸುತ್ತದೆ. ಅಲ್ಲದಿದ್ದರೆ ಒಂಟಿತನ ಕಾಡುತ್ತದೆ. "ನಾನು ಜನಿಸುವುದಕ್ಕೆ ಕೆಲವು ಸಂವತ್ಸರಗಳ ಮುಂಚೆ ಮಗನೊಬ್ಬ ಹುಟ್ಟಿ ಸಾವಿಗೆ ತುತ್ತಾಗಿದ್ದನು. ತಾಯಿಗಂತೂ ಆ ದುರಂತವನ್ನು ಸಹಿಸಲಾಗಿರಲಿಲ್ಲ. ನಾನು ಹುಟ್ಟಿದಾಗ ತಾಯಿಯವರು ನಿರಾಶೆಯ ಬೇನೆಗೆ ಗುರಿಯಾದರು; ಆದರೆ ತಂದೆಯ ಮನಸ್ಸಿನಲ್ಲಿ ಯಾವ ಮಾರ್ಪಡುಗಳೂ ಉಂಟಾಗಲಿಲ್ಲ. ಒಬ್ಬಿಬ್ಬರು ಸಂಗಾತಿಗಳನ್ನು ಬಿಟ್ಟರೆ ನನ್ನ ಬಾಲ್ಯ ಜೀವನ ಒಂಟಿಯಾಗಿಯೇ ಸಾಗಿತು. ಮುಂಜಾನೆಯಿಂದ ಮುಚ್ಚಂಜೆಯ ತನಕ ಪ್ರತಿಯೊಂದು ಕ್ಷಣದಲ್ಲಿಯೂ ನನ್ನ ಬಾಳು ಕಟ್ಟುನಿಟ್ಟುಗಳ ಸರಹದ್ದಿನಲ್ಲಿಯೇ ಸಾಗುತ್ತಿತ್ತು. ಇದರಿಂದ ನನಗೆ ಅಸಹನೆ ಮಿತಿಮೀರಿತು."[೮] ಇಲ್ಲಿ ವ್ಯಕ್ತಿತ್ವದ ಬಗ್ಗೆ ವಿಮರ್ಶೆ ಇದೆ.

"ತಾಯಿಯು ಆರೋಗ್ಯದಿಂದಿದ್ದಾಗ ಸುಮ್ಮನೆ ಕುಳಿತಿರುತ್ತಿರಲಿಲ್ಲ. ಅಪ್ಪಣೆಗಾಗಿ ಕಾದುಕೊಂಡಿದ್ದು ಅದನ್ನು ಶಿರಸಾವಹಿಸಿ ನಡೆಸಲು ಸಿದ್ಧರಾಗಿದ್ದ ಸೇವಕರ ತಂಡವಿದ್ದರೂ, ಏನಾದರೂ ಮನೆಗೆಲಸವನ್ನು ಅಂಟಿಸಿಕೊಳ್ಳದೆ ಇರುತ್ತಿರಲಿಲ್ಲ. ನನಗೆ ಅವರ ಮೇಲೆ ಬಹಳ

ಅಕ್ಕರೆ, ಅವರ ಲಾವಣ್ಯದಲ್ಲಿ ವಿಶೇಷ ಗೌರವ; ಆದರೂ ನಾನು ಅಪೇಕ್ಷಿಸಿದಷ್ಟು ಎಚ್ಚರಿಕೆಯಿಂದ ನನ್ನನ್ನು ಅವರು ನೋಡಿಕೊಳ್ಳುತ್ತಿರಲಿಲ್ಲವಾದುದರಿಂದ ನನ್ನ ಎಳೆಎದೆಯು ಅನೇಕ ವೇಳೆ ಪರಿತಪಿಸುತ್ತಿತ್ತು(ಪು೨೨,೨೩). ಆಗಾಗ್ಗೆ ಜವಾಹರನ ಹೊಗಳಿಕೆಯ ನುಡಿ ಕೇಳಿ ಕೇಳಿ ನನ್ನಲ್ಲಿ ಮತ್ಸರ ಅಂಕುರಿಸಿತು. ಆತ ಮನೆಯಿಂದ ದೂರವಾಗಿದ್ದುದರಿಂದ ನನಗೆ ವ್ಯಥೆ ಅಷ್ಟಾಗಿರಲಿಲ್ಲ."

"ನನ್ನ ಸಹೋದರಿ ಸ್ವರೂಪಳು ತುಂಬಾ ಲಾವಣ್ಯವತಿಯಾಗಿದ್ದುದರಿಂದ ಎಲ್ಲರೂ ಆಕೆಯನ್ನು ಮುದ್ದಿಸುವವರೇ! ಆದರೆ ನಾನೆಂದೂ ಆಕೆಯನ್ನು ಕಂಡು ಹೊಟ್ಟೆಕಿಚ್ಚು ಪಡಲಿಲ್ಲ. ಅಂತಹ ಸೌಂದರ್ಯವತಿಯನ್ನು ಯಾರಾದರೂ ಪ್ರೀತಿಸುವುದು ಸಹಜವೆಂದು ನಿಶ್ಚಯಿಸಿಕೊಂಡೆನು; ಅಲ್ಲದೆ ಆಕೆಯಲ್ಲಿ ನನಗೆ ವಿಶೇಷವಾದ ಮಮತೆ ಮೂಡಿತು."[೯]

ಇಲ್ಲಿ ಜವಾಹರನನ್ನು ಇಷ್ಟಪಡುತ್ತಿದ್ದ ರೀತಿಗೂ ಸ್ವರೂಪಳನ್ನು ಇಷ್ಟ ಪಡುತ್ತಿದ್ದ ರೀತಿಗೂ ವ್ಯತ್ಯಾಸವಿದೆ. ಅದಕ್ಕೆ ಜವಾಹರನಲ್ಲಿ ಮತ್ಸರವೂ ಸ್ವರೂಪಳಲ್ಲಿ ಮಮತೆಯೂ ಉಂಟಾದುದನ್ನು ಲೇಖಕಿ ಹೇಳುತ್ತಾರೆ.

ಒಬ್ಬ ವ್ಯಕ್ತಿಯ ವಿಕಸನದಲ್ಲಿ ಪರಿಸರ ಬಾಲ್ಯದ ಸಂಬಂಧ ಇವೆಲ್ಲವೂ ಹೇಗೆ ವ್ಯಕ್ತಿತ್ವದಲ್ಲಿ ಹಾಸುಹೊಕ್ಕಾಗಿರುತ್ತದೆ. ಎಂದು ಲೇಖಕಿಯು ಹೇಳಿಕೊಳ್ಳುತ್ತಾರೆ. "ಹಠಮಾರಿತನವನ್ನು ಹೊಂದಿದ್ದ ನಾನು ಅವರಿಗೊಂದು ಸಮಸ್ಯೆಯಾದೆನು. ಎಂತಹ ಕಠಿಣ ಶಿಕ್ಷೆಗೂ ನಾನು ಜಗ್ಗಿದವಳಲ್ಲ. ನನ್ನನ್ನು ನಾಚಿಕೆಗೆ ಗುರಿಪಡಿಸಲು ಮತ್ತು ಹೇಳಿದ ಕೆಲಸವನ್ನು ಮಾಡುವ ಕುತೂಹಲವನ್ನು ಹುಟ್ಟಿಸಲು ನಯವಾದ ಬಯ್ಗಳೇ ಸಾಕಾಗಿದ್ದವು. ಆದರೆ ದುರಾದೃಷ್ಟವಶಾತ್ ಬಯ್ಗಳು ಕಡಿಮೆ, ಶಿಕ್ಷೆ ಅಧಿಕ. ಹೀಗೆ ಒಂಟಿತನದ ಬಾಲ್ಯವನ್ನು ಕಳೆದ ನಾನು ಕೊನೆಗೆ ನಯವಿಲ್ಲದೆ ನಾಣ್ವೆಣ್ಣಾದೆನು. ಇತರರಿಂದ ಹೊಗಳಿಸಿಕೊಳ್ಳಬೇಕೆಂಬ ಕುತೂಹಲವೇನೋ ಇತ್ತು"(ಪು೨೫). ಮಗ ಇಂಗ್ಲೆಂಡಿನಿಂದ ಬರುವ ಒಂದು ವಾರದಿಂದಲೇ ತಂದೆ ತಾಯಿಯ ಸಂಭ್ರಮ ಸಡಗರದ ಸಿದ್ಧತೆ ನೋಡಿ, "ನನ್ನ ಅಕ್ಕ ಸಹ ಕುತೂಹಲದ ನಿರೀಕ್ಷಣೆಯಿಂದ ಮನೆಯಲೆಲ್ಲ ಹಾರಾಡಿದರೆ ನನ್ನಲ್ಲಿ ಕ್ರೋಧ ಬುಸುಗುಡುತ್ತಿತ್ತು. ಜವಾಹರನನ್ನು ದ್ವೇಷಿಸಲೇಬೇಕೆಂದು ನಿರ್ಧರಿಸಿಕೊಂಡೆನು."[೧೦]

ಕುಟುಂಬದಲ್ಲಿ ಒಬ್ಬ ವ್ಯಕ್ತಿ ಅಣ್ಣತಮ್ಮಂದಿರ ಜೊತೆ ಹುಟ್ಟಿದರೂ ಅವರ ಜೊತೆ ಒಡನಾಟ ಬಾಂಧವ್ಯವಿಲ್ಲದೇ ಹೋದರೆ ಅವರು ಒಂಟಿಯಾಗಿದ್ದಂತೆಯೇ ಸರಿ. ಅಂತಹ ಸಂದರ್ಭದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಹೇಗೆ ವರ್ತಿಸಬೇಕೆಂಬ ತರಬೇತಿ ಇರುವುದಿಲ್ಲ. ಇದು ಅತ್ಯಂತ ಸಹಜವಾಗಿ ಬರುವ ಸಾಮಾಜೀಕರಣದ ಪ್ರಕ್ರಿಯೆಯಾಗಿದೆ. ತುಂಬ ಕಟ್ಟುನಿಟ್ಟಿನ ಜೀವನ ಅಸಹನೆಯನ್ನು ಉಂಟುಮಾಡಿದ್ದರಲ್ಲಿ ಆಶ್ಚರ್ಯವಿಲ್ಲ. ಎಲ್ಲರೂ ಅವರನ್ನು ತುಚ್ಛೀಕರಿಸಿ

ನೋಡಿದಾಗ ಹೋಗಳಿಸಿಕೊಳ್ಳಬೇಕೆಂಬ ಆಸೆ ಹುಟ್ಟುವುದು ಅತ್ಯಂತ ಸಹಜ ಗುಣವಾಗಿದೆ. ಗಂಡುಮಕ್ಕಳನ್ನು ಬೆಳೆಸುವ ರೀತಿ ಹಾಗೂ ಹೆಣ್ಣು ಮಕ್ಕಳನ್ನು ಬೆಳೆಸುವ ರೀತಿಯ ವ್ಯತ್ಯಾಸವೂ ಗುಣಸ್ವಭಾವಗಳಲ್ಲಿ ವ್ಯತ್ಯಾಸವನ್ನುಂಟು ಮಾಡಿದೆ.

ಕೆ. ಎಸ್. ನಿರ್ಮಲಾದೇವಿಯವರು ತನ್ನ ತಂದೆಯ ಬಗ್ಗೆ ಈರೀತಿ ಬರೆಯುತ್ತಾರೆ. "ಶಿಸ್ತಿನ ಅತ್ಯಂತ ಬುದ್ಧಿವಂತ ತಂದೆ ತಾಯಿ ಇದ್ದರೂ ಯಾವುದೋ ಶಾಪದಂತೆ ತಂದೆಯನ್ನ ತಾಯಿಯ ಬಗ್ಗೆ ಸಂಶಯ ಪಿಶಾಚಿ ಕಾಡಿ ದಿನಾ ಹೊಡೆಯುವುದು, ಬೈಯುವುದು, ಮನೆಯಿಂದ ದೂರ ಒಗೆಯುವುದು ನಡೆದಿರುತ್ತಿತ್ತು. ಬಾಕಿಯಂತೆ ಸಮಾಜದ ಜೊತೆ ಅತ್ಯಂತ ಮೇಧಾವಿಯಾಗಿದ್ದ ತಂದೆ ರೂಪವಂತೆಯಾಗಿದ್ದ ತಾಯಿಯ ಬಗ್ಗೆ ಅದೇಕೆ ಹಾಗಾಡುತ್ತಿದ್ದರೋ? ಜೊಂಪೆ ಜೊಂಪೆ ತಾಯಿತ ಮಡಿಕೆ ಕುಡಿಕೆಗಳು ನಮ್ಮ ಎಳೆ ಮನಗಳಲ್ಲಿ ಸದಾ ಭಯ ತುಂಬಿರುವಂತೆ ಮಾಡಿತು. ನಗು ನಮ್ಮ ಮನೆಯಲ್ಲಿ ಇರಲಿಲ್ಲ. ನಾಲ್ಕು ಜನ ತಮ್ಮಂದಿರು. ಒಬ್ಬ ತಂಗಿ ನನಗೆ-ತಂದೆ ಮೂವತ್ತೆರಡನೆಯ ವಯಸ್ಸಲ್ಲಿ ಖಾಯಿಲೆಯು ಉಲ್ಬಣಾವಸ್ಥೆ ತಲುಪಿ ಆರು ಮಕ್ಕಳೊಂದಿಗೆ ನನ್ನ ಇಪ್ಪತ್ತೇಳು ವರ್ಷದ ತಾಯಿಯನ್ನು ವಿಧವೆಯನ್ನಾಗಿ ಮಾಡಿಸತ್ತಾಗ ನೋವಿನ ಬೆಟ್ಟದ ಬುಡದಲ್ಲಿನ ತಾಯಿಯನ್ನು ಸಮಾಜ ನಾನಾ ಸಂಶಯದಿಂದ ಟೀಕಿಸಿದಾಗ ಜೀವನದ ಬಗ್ಗೆ ಸಮಾಜದ ಬಗ್ಗೆ ಬದುಕಿದ್ದ ಆ ಊರಿನ ಬಗ್ಗೆ ಎಳೆ ಮನಸ್ಸಿಗೆ ಏನು ಅನ್ನಿಸಿರಬಹುದು ಎಂದು ಊಹಿಸಲು ಸಾಧ್ಯವೇ."[೧೧]

ತನ್ನ ಹೆಂಡತಿ ರೂಪವಂತೆಯಾಗಿರಬೇಕು ಆದರೆ ಯಾರೂ ನೋಡಕೂಡದು ಎನ್ನುವ ಮನೋಭಾವ ಇಲ್ಲಿ ತಂದೆಯದು. ಇಲ್ಲದ್ದನ್ನು ಆರೋಪಿಸಿ ಹಿಂಸಿಸುವುದೇ ಈ ಅನುಮಾನ. ಈ ಅನುಮಾನ ಹೇಳಿಕೊಳ್ಳದೇ ನಡವಳಿಕೆಯಲ್ಲಿ ವ್ಯಕ್ತವಾಗಿದೆ. ತನ್ನ ಈ ದೌರ್ಬಲ್ಯ ಯಾರಿಗೂ ಗೊತ್ತಾಗದಂತೆ ಸಮಾಜದಲ್ಲಿ ಮೇಧಾವಿಯ ಪಾತ್ರವಹಿಸಿದ್ದು. ಹುಟ್ಟಿನಿಂದಲೇ ಬರುವ ಮನುಷ್ಯರ ಸಂಶಯ ಪ್ರವೃತ್ತಿಗೆ ಯಾವ ಕಾರಣ ಬೇಕಿಲ್ಲ. ಯಾರೂ ಸಿಗದೇ ಹೋದಾಗ ಅವರ ಈ ಸ್ಯಾಡಿಸ್ಟ್ ಗುಣಕ್ಕೆ ಹತ್ತಿರದವರೇ ಬಲಿಯಾಗುತಾರೆ. ಚಿಕ್ಕ ವಯಸ್ಸಿನಲ್ಲಿ ಗಂಡ ಸತ್ತಿರುವುದಕ್ಕೆ ಅವಳು ಮಾಡುವುದಾದರೂ ಏನು. ಒಂಟಿ ಹೆಣ್ಣಿನ ಕುರಿತು ಸಮಾಜ ಪಡುವ ಸಂಶಯದ ಬಗ್ಗೆ ಏನೆಂದು ಉತ್ತರ ಕೊಡಲು ಸಾಧ್ಯ. ಇದರಲ್ಲಿ ಅವಳ ತಪ್ಪಿಲ್ಲದೇ ಹೋದರೂ ಇಲ್ಲಿ ಕೇವಲ ಹೆಣ್ಣಾಗಿದ್ದಕ್ಕೆ ಈ ಎಲ್ಲ ಶಿಕ್ಷೆಗಳಾಗಿದೆ.

ನಿರ್ಮಲಾದೇವಿ, "ಹೆಣ್ಣು ಸಮಾಜದಲ್ಲಿ ಬಹಳವೇ ಹೋರಾಡಬೇಕಾಗುತ್ತದೆ. ಹೆಣ್ಣಿಗೆ ಹೆಣ್ಣು ಶತ್ರು ಎಂದು ಗಾದೆಯಾಗಿರುವುದಕ್ಕಿಂತ ಗಂಡಸು ತುಂಬಾ ಹೊಟ್ಟೆ ಕಿಚ್ಚು ಪಡುತ್ತಾನೆ. ಅವನಿಗೆ ಸಹಜವಾಗಿರುವ ಅಸುರೀ ಶಕ್ತಿಗೆ ಬೇರೆ ಬೇರೆ ಅಸುರರ ವಿವಿಧಾಸ್ತ್ರಗಳ ಸಹಾಯ

ದೊರಕುತ್ತದೆ. ಹೆಣ್ಣಿಗೆ ಪ್ರತಿಭೆಯಿದೆ ಯೋಗ್ಯತೆಯಿದೆ ಆದರೆ ಕೆಟ್ಟ ಗಡಸು ಬೀರಿತನವಿಲ್ಲ ಎಂದು ತಿಳಿದರೆ ದಪ್ಪ ಅವರೇಹುಳುವನ್ನು ಗುಬ್ಬಿ ಕ್ಷಣಮಾತ್ರದಲ್ಲಿ ನುಂಗುವಂತೆ ನುಂಗಿಬಿಡುತ್ತಾನೆ. ಚಾಡಿ ಹೇಳುವುದರಲ್ಲಿ, ಬೇಡದ ದರ್ಪದಲ್ಲಿ, ಮೋಸ ಮಾಡುವುದರಲ್ಲಿ ಮುಂಚೂಣಿಯಲ್ಲಿರುವ ಪುರುಷ ಸಹೋದ್ಯೋಗಿಗಳನ್ನು ಅಧಿಕಾರಿಗಳನ್ನು ನೋಡಿದ್ದೇನೆ. ಪಡಬಾರದ ಯಾತನೆ ಪಟ್ಟಿದ್ದೇನೆ. ಎಷ್ಟೋ ಕವನಗಳು ಆಗ ರಚಿತವಾಗಿ ಆ ನೋವನ್ನು ಹೊರಕಾರುವಲ್ಲಿ ನನಗೆ ಸಮಾಧಾನ ತಂದಿದೆ.”[೧೧] ಎಂದು ಹೇಳುತ್ತಾರೆ.

ನಿರ್ಮಲಾದೇವಿ ಪ್ರಕಾರ ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದು ಪುರುಷ ತನ್ನ ಮಾತ್ಸರ್ಯವನ್ನು ಮುಚ್ಚಿಕೊಳ್ಳಲು ಆರೋಪಿಸಿದ ಗಾದೆಯೇ ಆಗಿದೆ. ಅಲ್ಲದೇ ಪುರುಷನ ರಾಕ್ಷಸ ಗುಣಗಳ ಜೊತೆ ಬೇರೆಯವರ ಸಹಾಯವೂ ಸೇರಿ ಮಹಿಳೆಯನ್ನು ಹಣ್ಣಾಗಿಸಿದ್ದರ ಬಗ್ಗೆ ಬೇಸರ ವ್ಯಕ್ತಪಡಿಸುತ್ತಾರೆ. ತನಗಿಂತ ಪ್ರತಿಭಾವಂತ ಹೆಂಡತಿಯನ್ನು ಪುರುಷ ಒಪ್ಪಿಕೊಳ್ಳುವುದಿಲ್ಲ ಎಂದಿದ್ದಾರೆ. ಪುರುಷರ ದರ್ಪ, ಮೋಸ ಅಧಿಕಾರಶಾಹಿತ್ವಗಳಿಂದ ನೊಂದು ನೋವನ್ನು ಹೊರಹಾಕಲು ದಾರಿ ಕಾಣದೆ ಕವನದ ಮೂಲಕ ಹೊರಹಾಕಿ ನೆಮ್ಮದಿಯನ್ನು ಕಂಡುಕೊಂಡಿದ್ದೇನೆಂದು ಹೇಳಿದ್ದಾರೆ.

ನಿರ್ಮಲಾ ಅವರೇ ಹೇಳುವ ಹಾಗೆ ಸಂಸಾರವೆಂದರೆ ಐವತ್ತು ಐವತ್ತು ಹೊಂದಾಣಿಕೆ ಕಾಣಸಿಗದು. ಹೆಚ್ಚಿನ ಸಂದರ್ಭಗಳು ೭೦% ೩೦ ಅದೇ ತರಹ ೮೦% ೨೦ ಹೀಗಿರುತ್ತದೆ. ತುಂಬಾ ಖಿನ್ನತೆಯ ಅನೇಕ ಸಂದರ್ಭಗಳು ಸಂಸಾರ ಜೀವನವನ್ನೇ ತುಚ್ಛೀಕರಿಸುವಂತೆ ಮಾಡಿರುವುದುಂಟು. ಆದರೂ ಈ ಪ್ರಪಂಚ ಹುಲಿ ತೋಳಗಳ ಆಗರ. ಈ ಹುಲಿಯಲ್ಲದಿದ್ದರೆ ಮತ್ತೊಂದು ಕಬಳಿಸುವುದೇ ಅದರ ಉದ್ಯೋಗ. ಕಷ್ಟ ಹೋರಾಟಗಳಿಲ್ಲದ ಬದುಕೆಂಬುದೇ ಇಲ್ಲ ಎಂಬ ಸತ್ಯ ಕಂಡುಕೊಂಡಿದ್ದೇನೆ.”[೧೨]

ಸಂಸಾರವೆಂದರೆ ಒಂದೇ ರಥದ ಗಾಲಿಗಳು ಎಂಬುದಕ್ಕಿಂತ ಪುರುಷರು ಹೆಚ್ಚು ಮಹಿಳೆ ಕಡಿಮೆ ಎಂಬುದೇ ವಾಸ್ತವವಾಗಿದೆ. ಅನೇಕ ರೀತಿಯ ಒತ್ತಡಗಳ ಹೇರಿಕೆಯಿಂದ ಜೀವನವೇ ತುಚ್ಛ ಎನ್ನುವಂತೆ ಮಾಡಿದೆ. ಹುಲಿ ತೋಳಗಳಿಂದ ಸುತ್ತುವರೆದು ಸಮಾಧಾನದ ಸಂದರ್ಭಗಳೇ ಕಡಿಮೆ ಎಂಬುದನ್ನು ಹೇಳಿದ್ದಾರೆ. ಎಲ್ಲೂ ಪುರುಷಾಧಿಕಾರ ಎಂದು ಹೇಳದಿದ್ದರೂ ಹೇಳದ ಸತ್ಯವನ್ನು ಅವರ ಆತ್ಮಕಥೆ ಹೇಳುತ್ತದೆ.

ಸಾರಾ ಅಬೂಬಕರ್ ತಮ್ಮ ಆತ್ಮಕಥೆಯಾದ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು'ಯಲ್ಲಿ ತನ್ನ ತಂದೆ ಮತ್ತು ದೊಡ್ಡಣ್ಣ ಇವರ ಬಗ್ಗೆ ತುಂಬಾ ಗೌರವ ಆದರಗಳನ್ನು ತೋರಿಸುತ್ತಾರೆ.

ಅವರ ಆತ್ಮಕಥೆ ಬಾಲ್ಯದ ಬಗ್ಗೆ ಒತ್ತು ಕೊಟ್ಟರೂ ಬಾಲ್ಯದ ನಂತರ ಮಧ್ಯ ವಯಸ್ಸು ತಮ್ಮ ಸ್ವಂತ ಕುಟುಂಬ ಇಲ್ಲವೇನೋ ಅನ್ನುವಷ್ಟು ಅನುಮಾನ ಹುಟ್ಟಿಸುತ್ತದೆ. ಈ ಅನುಮಾನಕ್ಕೆ ಅವರು ಒಂದೇ ಸಾಲಿನಲ್ಲಿ ಉತ್ತರಿಸುತ್ತಾರೆ. 'ನನ್ನ ಅಜ್ಜ ಅಜ್ಜಿಯರ ಮುದ್ದಿನ ಮೊಮ್ಮಗಳಾಗಿ ಐದು ಜನ ಚಿಕ್ಕಪ್ಪಂದಿರ ಕಣ್ಮಣಿಯಾಗಿ ಮೂರು ಜನರ ಅಣ್ಣಂದಿರ ಪುಟ್ಟ ತಂಗಿಯಾಗಿ ಇಬ್ಬರು ತಮ್ಮಂದಿರ ಮಮತೆಯ ಅಕ್ಕನಾಗಿ ಬೆಳೆದೆ. ಈಗ ನಾಲ್ಕು ಜನ ಗಂಡುಮಕ್ಕಳ ವಾತ್ಸಲ್ಯಮಯಿಯಾದ ತಾಯಿಯೂ ಆಗಿದ್ದೇನೆ. ಒಂದೇ ಒಂದು ಹೆಣ್ಣು ಕುಡಿಯಿಲ್ಲದೆ ಬಾಳು ಪೂರ್ತಿ ಈ ಗಂಡುಗಳ ಜೊತೆಯಲ್ಲೇ ಕಳೆಯಬೇಕಾಯಿತಲ್ಲ ಎಂದು ಕೆಲವೊಮ್ಮೆ ಮನವು ದುಗುಡದಿಂದ ಮುದುಡುತ್ತದೆ. ತಂದೆಯ ಕೋರ್ಟು ಕೆಲಸಕ್ಕಾಗಿ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನನ್ನ ತಂದೆ ಕಾಸರಗೋಡಿನಲ್ಲಿ ಮನೆ ಮಾಡಿಕೊಂಡಿದ್ದರು.[೧೩]

ಹೆಣ್ಣು ಮಕ್ಕಳಿಗಾಗಿ ಪ್ರಾರ್ಥಿಸಿ ಸುಸ್ತಾಗಿದ್ದ ಕುಟುಂಬ ಒಂದರಲ್ಲಿ ಹುಟ್ಟಿದ್ದರ ಬಗ್ಗೆ ಸಂತೋಷವಿದೆ. ಆದರೂ ನಮ್ಮ ಸಮಾಜದ ಪುರುಷರು ತಮ್ಮ ಸ್ತ್ರೀಯರಿಗೆ ಮಾಡುತ್ತಿರುವ ಮೋಸ ಅನ್ಯಾಯಗಳನ್ನು ಕಂಡು ಕನಲಿ ಕೆಂಡವಾಗುತ್ತಾರೆ. ಸಂಜಯ ಗಾಂಧಿ ಸತ್ತಾಗ ತಾನೂ ಕಣ್ಣೀರು ಸುರಿಸಿದ್ದರ ಬಗ್ಗೆ ಹೀಗೆ ಹೇಳುತ್ತಾರೆ. ದೇಶದ ಉತ್ತರಾಧಿಕಾರಿ ರಾಜಕುಮಾರ ಸತ್ತನೆಂದೇನೂ ಅಲ್ಲ. ಬಾಳ ಹೊಸ್ತಿಲಲ್ಲೇ ಜೀವನ ಸಂಗಾತಿಯನ್ನು ಕಳೆದುಕೊಂಡ ಹೆಣ್ಣುಮಗಳು ಮುಂದೆ ಬಾಳಿನಲ್ಲಿ ಏನೇನೋ ಬವಣೆ ಪಡಬೇಕಾಗುತ್ತದೆ ಎಂದು ನೆನೆದು. ಹೀಗೆ ಒಬ್ಬ ಮಹಿಳಾವಾದಿಯಾಗಿ, ಮಾನವತಾವಾದಿಯಾಗಿ ಕಾಣುತ್ತಾರೆ. ಹೆಣ್ಣಿನ ಸ್ಥಾನಮಾನವನ್ನು ಹೀಗೆ ಬಿಚ್ಚಿಡುತ್ತಾರೆ.

ಉಮಾಶ್ರೀ "ನಾವು ಯಾರಿಂದಲಾದರೂ ಚಿಕ್ಕಪುಟ್ಟ ಒಂದು ಸಹಾಯ, ಸಹಕಾರ ಪಡಕೊಂಡದ್ದಕ್ಕೂ ಕೃತಜ್ಞತೆ ವ್ಯಕ್ತಪಡಿಸುತ್ತೇವೆ. ಸಹಾನುಭೂತಿ, ಪ್ರೀತಿ ತೋರಿಸುತ್ತೇವೆ. ಜೀವನ ಸಂಗಾತಿ ಎಂದು ಸಪ್ತಪದಿ ತುಳಿದು, ತನ್ನ ಸುಖಕ್ಕೆ ದೇಹವನ್ನು (ಮನಸ್ಸು ಗೊತ್ತಿಲ್ಲ)ಹಂಚಿಕೊಳ್ಳುವ ಗಂಡ ಅನ್ನುವ ಗಂಡಿಗೆ ಹೆಂಡತಿ ಅನ್ನುವುದು ಆ ಕ್ಷಣದ ಹೊರತಾಗಿ ಕಾಲ ಕಸಕ್ಕಿಂತ ಕೀಳಾಗುವುದು, ಪ್ರೀತಿ ವಿಶ್ವಾಸ ಹಾಳಾಗಿ ಹೋಗಲಿ, ಕಿಂಚಿತ್ತು ಕರುಣೆಗೂ ಅವಳು ಪಾತ್ರಳಾಗದೇ ಹೋಗುವುದು ಏಕೆ? ಅಂತಹ ನಿಷ್ಕರುಣೆ ಏಕೆ? ಹೆಣ್ಣಿಗೆ ಗಂಡನೆನ್ನುವ ಗಂಡು ಇನ್ನಿಲ್ಲದ ದೈಹಿಕ ಮಾನಸಿಕ ಕಿರಿಕಿರಿ ನೀಡಿದಾಗ್ಯೂ ಮತ್ತೆ ಮತ್ತೆ ಅವನ ಕುರಿತು ಹಂಬಲಿಸುವ, ಮತ್ತೆ ಒಂದಾಗಿ ಬಾಳಲು ಮುಂದಾಗುವ ದೌರ್ಬಲ್ಯ ಏಕೆ? ನನಗಿಂದಿಗೂ ಕಾಡುವ ಪ್ರಶ್ನೆಗಳಿವು"[೧೪] ಎನ್ನುತ್ತಾರೆ.

ಉಮಾಶ್ರೀ ಕೇಳುವ ಪ್ರಶ್ನೆಗಳೆಲ್ಲ, ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷನಿಗಿರುವ ಮಹತ್ವವನ್ನು ಹೇಳುತ್ತದೆ. ಇವಕ್ಕೆಲ್ಲ ಮೂಲಕಾರಣ ಗಂಡಿನ ಮನಸ್ಥಿತಿ, 'ನಮ್ಮವರು' ಎನ್ನುವ ಮನೋಭಾವ ಇಲ್ಲದೇ ಹೋದಾಗ ಅವರಿಂದ ದೂರ ಹೋಗಲು ಹಿಂಸೆಯೇ ಮುಖ್ಯವಾಗುತ್ತದೆ. ತುಂಬಾ ಹಿಂಸೆಕೊಟ್ಟಾದರೂ ತಮ್ಮಿಂದ ದೂರ ಹೋದರೆ ಬೇರೆ ಕಡೆ ಸುಖ ಹುಡುಕಬಹುದು ಎನ್ನುವುದಾಗಿದೆ. ಭಾವನಾತ್ಮಕ ಸಂಬಂಧಗಳಿಗಿಂತ ವ್ಯಾವಹಾರಿಕ ಸಂಬಂಧ ಇಲ್ಲಿ ಮುಖ್ಯವಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಒಂದು ಹೆಣ್ಣನ್ನು ಬಿಟ್ಟರೆ ಇನ್ನೊಬ್ಬಳು ಸಿಗುತ್ತಾಳೆ ಎನ್ನುವ ಮನೋಭಾವ ಮುಖ್ಯವಾಗಿದೆ. ಗಂಡನಿಲ್ಲದೇ ಇರುವ ಮಹಿಳೆಗೆ ಸಮಾಜದಲ್ಲಿ ಸ್ಥಾನ ಇಲ್ಲ ಎನ್ನುವ ನಂಬಿಕೆಯೇ ಮತ್ತೆ ಅವನ ಜೊತೆ ಬಾಳಲು ತವಕಿಸುವುದಾಗಿದೆ. ಈ ನಂಬಿಕೆಯನ್ನು ಮೀರಿದವರು ಈ ರೀತಿ ಯೋಚನೆ ಮಾಡುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಹೆಣ್ಣಿನ ಆರ್ಥಿಕ ಅಭದ್ರತೆ, ಸಾಮಾಜಿಕ ಅಭದ್ರತೆ ಮತ್ತು ಮಾನಸಿಕ ಅಭದ್ರತೆ ಹಿಂಸೆ ಕೊಡುವ ಗಂಡನನ್ನು ಆಶ್ರಯಿಸುವಂತೆ ಮಾಡಿದೆ.

ಪ್ರತಿಭಾ ನಂದಕುಮಾರ್ ಬರೆಯುವ ಈ ಮಾತು ಹೆಣ್ಣಿನ ಬಗ್ಗೆ ಮಹತ್ವದ ವಿಷಯವನ್ನು ಹೇಳುತ್ತದೆ. "ನನಗೆ ಪರಿಚಯವಿದ್ದ ಖ್ಯಾತ ಲೇಖಕಿಯೊಬ್ಬಳು ಬೆಂಗಳೂರಿನಲ್ಲಿದ್ದಳು. ಅವಳ ಗಂಡನೂ ಸಾಹಿತಿ. ಅವರಿಬ್ಬರ ನಡುವೆ ಇಗೋ–ಕ್ಲಾಷ್ ನಡೆಯುತ್ತಲೇ ಇತ್ತು. ಕೊನೆಗೊಂದು ದಿನ ಅವರ ವಿಚ್ಛೇದನ ಆಯಿತು. ಆಮೇಲೆ ಅವಳು ಗಾಂಧಿಬಜಾರಿನಲ್ಲಿ ಒಂದು ಮನೆ ಮಾಡಿದಳು ಮೊದ ಮೊದಲು ಒಂಟಿತನ ಹೋಗಲಾಡಿಸಿಕೊಳ್ಳಲು ಗೆಳೆಯರು, ಗೆಳತಿಯರನ್ನೆಲ್ಲ ಮನೆಗೆ ಕರೆಯುತ್ತಿದ್ದಳು. ಬರ ಬರುತ್ತಾ ಅದೇ ಒಂದು ಅಭ್ಯಾಸವಾಗಿ ಹೋಯಿತು. ಎಲ್ಲರೂ ಸಂಜೆಯಾದರೆ ಸಾಕು, ಅವಳ ಮನೆಗೆ ಬಂದು ಬಿಡುತ್ತಿದ್ದರು. ಕ್ರಮೇಣ ಅದು ಗುಂಡು ಪಾರ್ಟಿಯಾಯಿತು. ಹತ್ತರಿಂದ ಹನ್ನೊಂದು ಹನ್ನೆರಡು ಒಂದು ಗಂಟೆಯಾದರೂ ಪಾರ್ಟಿ ನಡೆಯುತ್ತಲೇ ಇತ್ತು. ಕ್ರಮೇಣ ಕೆಲವರು ಅವಳ ಬಗ್ಗೆ ಕೇವಲವಾಗಿ ನಡೆದುಕೊಳ್ಳತೊಡಗಿದರು. ಒಂದು ದಿನ ಅವಳು ಬಂದು ನನ್ನ ಹತ್ತಿರ ಅತ್ತುಕೊಂಡಳು. "ಮೈಮೇಲೆ ಬೀಳ್ತಾರೆ ಕಣೆ. ಅವರನ್ನು ಹೇಗೆ ತಡೀಬೇಕೋ ಗೊತ್ತಾಗ್ತಿಲ್ಲ. ಯಾರೋ ಅಪರಿಚಿತರಾದ್ರೆ ಬೈದು ತಳ್ಳಬಹುದು ಹತ್ತಿರದ ಗೆಳೆಯರು, ಆತ್ಮೀಯರು ಆಗಿರ್ತಾರೆ, ತುಂಬಾ ಸಲಿಗೆ ತಗೊಂಡುಬಿಡ್ತಾರೆ. ಏನು ಮಾಡಬೇಕೋ ಗೊತ್ತಾಗ್ತಿಲ್ಲ.

ಒಂದು ದಿನ ಅವಳ ಗೆಳೆಯರೊಬ್ಬರ ಮನೆಗೆ ಹೋಗಿದ್ದೆ. ಗಂಡ ಹೆಂಡತಿ ಇಬ್ಬರಿಗೂ ಅವಳ ಸ್ನೇಹವಿತ್ತು. ಮಾತನಾಡುತ್ತಾ ಅವಳ ವಿಷಯ ಬಂತು. ಇಬ್ಬರೂ ಅವಳ ಬಗ್ಗೆ ಗೇಲಿ ಮಾಡಿಕೊಂಡು ಹೇಗೆ ಸಿಕ್ಕಾಪಟ್ಟೆ ನಕ್ಕರೆಂದರೆ ನಾನು ದಿಗ್ಭ್ರಾಂತಿಯಿಂದ ಕಕ್ಕಾಬಿಕ್ಕಿಯಾದೆ.

'ಅವಳು ಬಿಡಿ ಸಿಕ್ಕಾಪಟ್ಟೆ ಸಿಗರೇಟು ಸೇದೋದು, ಸಿಕ್ಕಾಪಟ್ಟೆ ಕುಡಿಯೋದು, ಕೆಟ್ಟದಾಗಿ ಆಡೋದು, ಅವಳನ್ನ ಮನೆಗೆ ಕರಿಯೋದಕ್ಕೇ ಭಯವಾಗುತ್ತೆ.'

ಪಾಪ ಅವಳು ಇವರ ಬಗ್ಗೆ ಎಷ್ಟು ಪ್ರೀತಿ ವಿಶ್ವಾಸದಿಂದ ಮಾತನಾಡುತ್ತಿದ್ದಳು. 'ಅವಳ ಮನೆಗೆ ನೀವೇ ಹೋಗಿದ್ರಲ್ಲಾ' ಅಂತ ಕೇಳಿದೆ. ಅದಕ್ಕವರು 'ಅವಳ ಮನೆಲೀ ಹೇಳೋರು, ಕೇಳೋರು ಯಾರಿದ್ದಾರೆ?'ಎಂದರು. ಮುಂದಿನ ಸಲ ಸಿಕ್ಕಾಗ ಅವಳೇ ಹೇಳಿದಳು 'ಬೆಂಗಳೂರು ಬಿಟ್ಟು ನಮ್ಮಮ್ಮನ ಜೊತೆ ಇರ್ತೀನಿ ಇಲ್ಲಿ ಒಬ್ಬಳೇ ಇರಕ್ಕೆ ಆಗಲ್ಲ.' ಆಗ ಹೋದವಳು ಮತ್ತೆ ನನಗೆ ಸಿಕ್ಕಿಲ್ಲ. ಅದು ನೆನಪಿದ್ದ ನಾನು ಬೇರೆ ಮನೆ ಮಾಡಿದಾಗ ಯಾರನ್ನಾದರೂ ಮನೆಗೆ ಕರೆಯುವುದಿರಲಿ' ನಮ್ಮ ಮನೆ ಇರುವ ರಸ್ತೇನ ಕೂಡ ಯಾರಿಗೂ ಹೇಳಲಿಲ್ಲ. ಇದರಂದ ನಮಗೆ ಸಿಕ್ಕ ಪ್ರೈವೇಸಿ ಮಾತ್ರ ತೀರಾ ಅಮೂಲ್ಯವಾದದ್ದು. ನಾನು ಮತ್ತು ಮಕ್ಕಳು ಎಷ್ಟು ಆರಾಮವಾಗಿ, ಎಷ್ಟು ಆತ್ಮೀಯವಾಗಿ ಇದ್ದೆವು ಅಂದರೆ ನಮಗೆ ಟೀವಿ, ರೇಡಿಯೋ ಯಾವುದೂ ಇಲ್ಲದಿದ್ದರೂ ಅದರ ಕೊರತೆ ಸ್ವಲ್ಪ ಕೂಡಾ ಅನ್ನಿಸಲಿಲ್ಲ. ಅದು ನಮ್ಮದೇ ಪ್ರಪಂಚವಾಗಿತ್ತು. ಅಲ್ಲಿ ಬೇರೆ ಯಾರಿಗೂ ಪ್ರವೇಶ ಇರಲಿಲ್ಲ. ಯಾರ ನೆರಳೂ ಅಲ್ಲಿ ಬೀಳುವಂತಿರಲಿಲ್ಲ."[೧೫]

ಇಲ್ಲಿ ಇಬ್ಬರು ಮಹಿಳೆಯರ ವಿಚಾರ ಬರುತ್ತದೆ. ನಿರೂಪಕಿಯ ಗೆಳತಿ ಬೇರೆ ಮನೆ ಮಾಡಿದಾಗ ಒಂಟಿತನ ನೀಗಿಕೊಳ್ಳಲು 'ಸ್ವಾರ್ಥಿ ಸ್ನೇಹಿತರನ್ನು ತನ್ನವರೆಂದು ತಿಳಿದುಕೊಂಡಿದ್ದು. ಮೊದಲೆಲ್ಲ ಚೆನ್ನಾಗಿದ್ದು ಅವಳ ಗಂಡ ಎನ್ನುವ ಪ್ರಾಣಿ ದೂರವಾದದ್ದೇ ಅವಳನ್ನು ದುರುಪಯೋಗ ಮಾಡಿಕೊಂಡಿದ್ದು, ಅವಳನ್ನು ಉಪಯೋಗಿಸಿಕೊಂಡೂ ಅವಳನ್ನು ಗೇಲಿ ಮಾಡುವುದು, ಅವಳಿಗೆ ಒಬ್ಬಳೇ ಬದುಕಲು ಸಾಧ್ಯವಾಗದ ಹಾಗೆ ಕಾಟ ಕೊಟ್ಟಿದ್ದು. ಅವಳಿಗೆ ಹೇಳುವವರು ಕೇಳುವವರು ಇಲ್ಲದೇ ಹೋದರೆ ಅವಳೇನು ಮಾಡಲು ಸಾಧ್ಯ? ಇಲ್ಲಿ ಪರಿಸ್ಥಿತಿ ಹೇಗಿದೆಯೆಂದರೆ ಕೇಳುವವರು ಇದ್ದರೂ ಆಡಿಕೊಳ್ಳುತ್ತಾರೆ. ಇಲ್ಲದೆ ಇದ್ದರು ಆಡಿಕೊಳ್ಳುತ್ತಾರೆ ಹಾಗಾದರೆ ಯಾರಿಗೆ ತೃಪ್ತಿ ಇರುವ ಹಾಗೆ ಬದುಕಬೇಕಾಗಿದೆ? ಇವೆಲ್ಲ ಹೆಣ್ಣನ್ನು ಹದ್ದುಬಸ್ತಿನಲ್ಲಿಡಲು ಮಾಡಿದ ತಂತ್ರವಾಗಿದೆ. ಗೆಳತಿಯ ಬದುಕಿನಿಂದ ಪಾಠ ಕಲಿತ ಲೇಖಕಿ ಯಾರನ್ನು ಹತ್ತಿರ ಸೇರಿಸದೇ ಅವಳ ಬದುಕನ್ನು ಹಸನು ಮಾಡಿಕೊಂಡ ವಿವರ ಇಲ್ಲಿ ಸಿಗುತ್ತದೆ. ಒಬ್ಬರೇ ಇರುವುದು ಬೇರೆ. ಒಂಟಿತನ ಕಾಡುವುದು ಬೇರೆ . ಒಬ್ಬರೇ ಇದ್ದವರಿಗೆ ಒಂಟಿತನ ಕಾಡಬೇಕೆಂದಿಲ್ಲ. ತುಂಬಾ ಜನರ ಮಧ್ಯೆ ಇದ್ದೂ ಒಂಟಿತನ ಕಾಡುವವರಿದ್ದಾರೆ. ಸಂತೆಯಲ್ಲಿ ಶಾಂತಿಯನ್ನು ಕಾಣುವವರೂ ಇದ್ದಾರೆ. ಹಾಗಾಗಿ ಲೇಖಕಿಗೆ ಪರಿಸ್ಥಿತಿಯನ್ನು ನಿಭಾಯಿಸುವುದು ಗೊತ್ತಿದೆ. ಗೆಳತಿಯ ಪರಿಸ್ಥಿತಿಯನ್ನು ಬೇರೆಯವರು ತಮಗೆ ಬೇಕಾದಂತೆ ಉಪಯೋಗಿಸಿ ಕೊಂಡಿದ್ದಾರೆ.

ವರ್ಣಾಶ್ರಮ ಮೌಲ್ಯಗಳೆಲ್ಲವೂ ಜಾತಿಯ ಹಾಗೂ ಪುರುಷಾಧಿಕಾರದಿಂದ ಮಹಿಳೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುವುದಕ್ಕೆ ಉದಾಹರಣೆಯಾಗಿ ಮೇಲ್ ಜಾತಿಯ ಮಹಿಳೆಯಾಗಿ ಅನುಪಮ ನಿರಂಜನ್‌ರವರು ಹೀಗೆ ಗುರುತಿಸುತ್ತಾರೆ. "ಕಾದಂಬರಿಯ ಕಥಾ ವಸ್ತುವಿಗೆ ಸಂಬಂಧಿಸಿದಂತೆ ಅವರಲ್ಲಿ ಚರ್ಚಿಸಿದಾಗ ಸೆಂಟಿಮೆಂಟಲ್ ಎಂದಿದ್ದರು. ನನಗೆ ನೋವಾಗಿತ್ತು. ಅದು ಸೆಂಟಿಮೆಂಟಲ್ ಅಲ್ಲ ಎಂದು ಸಾಬೀತುಪಡಿಸುವ ಶಕ್ತಿ ನನಗಿರಲಿಲ್ಲ. ಹೆಂಗಸರು ಬರೆಯುವುದರಲ್ಲಿ, ಆಲೋಚನೆ ಮಾಡುವುದರಲ್ಲಿ ಭಿನ್ನತೆಯಿದೆ, ಅದರಲ್ಲಿ ತಪ್ಪೇನು ಎಂದು ವಾದಿಸುವ ಧೈರ್ಯವೂ ಇರಲಿಲ್ಲ. ಅವರ ಬುದ್ಧಿಯ ಬಲದ ಹಿಂದೆ ಅಪಾರ ಅಧ್ಯಯನವಿದೆ ಎಂಬುದು ನನಗೆ ಗೊತ್ತಿದ್ದ ಅಂಶ, ಅವರಂತೆ ಆಗಬೇಕಾದರೆ ಇಂಥ ಒಂದು ಓದು ಅಗತ್ಯ ಎಂಬುದೂ ತಿಳಿದಿತ್ತು. ಆದರೆ ಅದು ಆಗ ಸಾಧ್ಯವಾಗಲೇ ಇಲ್ಲ. ಹೀಗಾಗಿ ಅವರ ಮುಂದೆ ನನಗೆ ಒಂದು ರೀತಿಯ ಕೀಳರಿಮೆ ಬೆಳೆದದ್ದು ನಿಜ. ನನಗೊಬ್ಬಳಿಗೆ ಮಾತ್ರವಲ್ಲ, ಅನೇಕ ಲೇಖಕಿಯರಿಗೆ ಹೀಗಾಗಿರಬಹುದು. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಗಂಡಸೇ ಶ್ರೇಷ್ಠ ಎಂಬಂತಹ ಕಲ್ಪನೆಗಳಿರುವಾಗ, ಹೆಣ್ಣು ತಾನೂ ಕೂಡ ಶ್ರೇಷ್ಠ ಎಂದು ಹೇಳಿಕೊಳ್ಳಲು ಅಪಾರ ಸಿದ್ಧತೆ ಮತ್ತು ಮನಃಸ್ಥೈರ್ಯ ಬೇಕು. ಇದನ್ನು ಪಡೆಯಲು ಅವಳು ಸೃಜನಾತ್ಮಕ ಕಲೆಗಳ ಮುಖಾಂತರವೇ ಹೋರಾಡಬೇಕಾಗುತ್ತದೆ."[೧೬]

ಆಯ್ಕೆ ಮಾಡಿಕೊಂಡ ವಿಷಯದ ನಿರೂಪಣೆ ಇವೆಲ್ಲವೂ ಪುರುಪ್ರಧಾನತೆ ಎದ್ದು ಕಾಣವುದರೊಂದಿಗೆ ಅದರಿಂದ ಉಂಟಾಗುವ ಸಮಸ್ಯೆ ಪರಿಣಾಮ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಸರೇ ಹೇಳುವ ಹಾಗೆ ಪುರುಷ ಮೇಲು, ಮಹಿಳೆ ಕೀಳು ಎನ್ನುವ ಹಾಗೆ ಇದೆ. ಬರವಣಿಗೆಯ ವಿಚಾರದಲ್ಲಿ ವಸ್ತುವಿನ ಆಯ್ಕೆಯಲ್ಲಿ ತಾರತಮ್ಯವನ್ನು ಅನುಪಮಾ ಹೇಳುತ್ತಾರೆ. ಹೆಣ್ಣಿನ ಸಾಮರ್ಥ್ಯವನ್ನು ಮಾತಿಗಿಂತ ಕೃತಿಯ ಮೂಲಕವೇ ಮಾಡಿ ತೋರಿಸಬೇಕಾಗುತ್ತದೆ ಎಂಬ ಅಭಿಪ್ರಾಯ ತಳೆಯುತ್ತಾರೆ. ಇದಕ್ಕೆ ಪೂರಕವಾಗಿ ವರ್ಜಿನಿಯಾ ವುಲ್ಫ್ ಅನುಭವವನ್ನು ನೋಡಬಹುದು ತನಗೆ ಇಷ್ಟ ಬಂದ ಹಾಗೆ ಆಕೆ ಬರೆಯಲಾರಳು. ಅವಳಿಗೆ ಹೊರಗಿನ ಮತ್ತು ಒಳಗಿನ ಅನೇಕ ಅಡೆತಡೆಗಳಿವೆ. ತನ್ನ ದೇಹ ಮತ್ತು ಅನುಭವಗಳ ಬಗ್ಗೆ ಸತ್ಯ ಹೇಳುವುದು ಅವಳಿಗೆ ಕಷ್ಟ. ತನಗನ್ನಿಸಿದ್ದನ್ನು ಮುಖ್ಯವಾಗಿ ಹೇಳುವ ಮಹಿಳೆಯ ಬಗ್ಗೆ ಗಂಡಸು ಏನು ಹೇಳಬಹುದು ಅಂತ ಸ್ವಾತಂತ್ರ್ಯ ಹೆಣ್ಣಿಗೆ ಇರಬಾರದೆಂದು ಗಂಡಸರು ಅಪೇಕ್ಷಿಸಿರುತ್ತಾರೆ.

ಆತ್ಮಕಥೆ ಬರೆಯುವುದಿರಲಿ ಹೆಣ್ಣು ಕಥೆ ಕಾದಂಬರಿಯ ಬರವಣಿಗೆಯ ವಿಷಯಗಳ ಆಯ್ಕೆಯಲ್ಲಿ ಮಿತಿಗಳಿವೆ ಎಂಬುದನ್ನು ಅನುಪಮಾ ಅವರ ಬರಹಗಳಲ್ಲಿ ನೋಡಬಹುದು. "ಲೈಂಗಿಕ ವಿಷಯಗಳ ಬಗ್ಗೆ ನಾನು ಮಡಿವಂತಿಕೆ ತೋರುತ್ತಿದ್ದೆ ಎಂದು ಕಾಣುತ್ತದೆ. ವೈದ್ಯಕೀಯ

ಪ್ರಾಕ್ಟೀಸ್‌ನಲ್ಲಿ ಗಂಡುಹೆಣ್ಣುಗಳ ಅನೇಕ ಘಟನೆಗಳು ಗೊತ್ತಿದ್ದರೂ ಅವುಗಳ ಬಗ್ಗೆ ಬರೆಯುವ ಧೈರ್ಯ ಇರಲಿಲ್ಲ. ಹಾಗೇನಾದರೂ ಬರೆದರೆ ಅದು ನನ್ನ ಸ್ವಂತ ಅನುಭವವೇ ಎಂದು ಗಂಡು ಮಕ್ಕಳು, ನೆಂಟರು, ಸ್ನೇಹಿತರು ತಪ್ಪರ್ಥಮಾಡಿಕೊಳ್ಳುವರೋ ಎಂಬ ಭಯವಿತ್ತು. ಲೈಂಗಿಕ ಆಸಕ್ತಿ ಬದುಕಿನ ಮೂಲ ಪ್ರೇರಣೆಗಳಲ್ಲಿ ಒಂದೆಂದು ಗೊತ್ತಿದ್ದರೂ ಅದರ ಬಗ್ಗೆ ಬರೆಯದೆ, ಆ ವಿಷಯಕ್ಕಿಂತ ಬೇರೆ ಎಷ್ಟೋ ವಿಷಯಗಳಿವೆ ಎಂದು ಸಮಾಧಾನಪಟ್ಟಿ ಕೊಳ್ಳುತ್ತಿದ್ದೆ."[೧೭]

ಲಿಂಗಪ್ರತಿನಿಧೀಕರಣಗೊಳ್ಳುವಾಗ ಜಾತಿವ್ಯವಸ್ಥೆಯು ಪ್ರಮುಖ ಪಾತ್ರವಹಿಸುತ್ತದೆ. ಮೇಲ್ಜಾತಿಯ ಪುರುಷರು ಕೆಳಜಾತಿಯ ಮಹಿಳೆಯನ್ನು ನೋಡುವ ರೀತಿಯನ್ನು ಸೋಬಾನೆ ಹೊನ್ನಮ್ಮ, "ಗೌಡರ ಮನೆಯಲ್ಲಿ ಸತ್ತ ದನಕರು, ಎಮ್ಮೆಗಳನ್ನು ಸಾಗಿಸಬೇಕಾಗಿತ್ತು. ಅವರ ಮನೆಯ ಸೌದೆಗಳನ್ನು ಒಡೆದು ಮನೆಗೆ ಸಾಗಿಸುವುದು ಇತ್ಯಾದಿ ಕೆಲಸಗಳನ್ನು ಗಂಡಸರು ಮಾಡುತ್ತಿದ್ದರು. ಹೆಂಗಸರು ಬಳಿಯುವುದು, ತಿಪ್ಪೆಗೆ ಹಾಕುವುದು, ಅವರ ಗದ್ದೆಯಲ್ಲಿ ತಳ್ಳು ಬಿಡಿಸುವುದು. ತೆಂಗಿನಕಾಯಿ ಹೊರುವುದು ಇತ್ಯಾದಿ ಕೆಲಸಗಳನ್ನು ಮಾಡಬೇಕಾಗಿತ್ತು. ಇದನ್ನು ಮಾಡುವುದಿಲ್ಲ ಅಂತ ವಿರೋಧಿಸಿದಾಗ ಗೌಡರ ಮನೆಯ ಹೊಲದ ಮೇಲೆ ಹಾದು ನೀರನ್ನು ತರುವುದನ್ನು ತಡೆದರು. ನಮ್ಮ ಮಡಿಕೆ, ಗಡಿಗೆಗಳನ್ನು ಒಡೆದು ಚೂರು ಮಾಡಿದರು. ಅಂದಿನಿಂದ ನಾವು ಗೌಡರ ಬಾವಿಯಲ್ಲಿ ನೀರು ತರುವುದನ್ನು ನಿಲ್ಲಿಸಿದೆವು. ಕಾಲುವೆಯಿಂದ ನೀರು ತರಲಾರಂಭಿಸಿದೆವು."[೧೮] ಮೇಲು ಜಾತಿಯ ಪುರುಷರು ಅಧಿಕಾರ ಚಲಾಯಿಸುವುದನ್ನು ಹೀಗೆ ಹೇಳುತ್ತಾರೆ.

ಕೆಲವು ಆತ್ಮಕಥೆಗಳಲ್ಲಿ ಮೇಲು ಜಾತಿಯ ಮಹಿಳೆಯರು ಸಾಂಪ್ರದಾಯಿಕ ಪಿತೃ ಪ್ರಧಾನ ಮೌಲ್ಯಗಳನ್ನು ಮೀರಿ ಲೈಂಗಿಕಥೆ ಮತ್ತು ವೈಯಕ್ತಿಕ ಅನುಭವಗಳನ್ನು ಹೀಗೆ ಪ್ರಕಟಪಡಿಸುತ್ತಾರೆ. ಅದರಲ್ಲಿ ವೀಣಾ ಬನ್ನಂಜೆಯವರು ಬರೆಯುವ "ನಮ್ಮ ಋಷಿ ಮುನಿಗಳು ಶಿಶ್ನವನ್ನು ಬ್ರಹ್ಮವೆಂದೇ ತಿಳಿದಿದ್ದಾರೆ. ಸಂಭೋಗ ಅವರಿಗೆ ಬ್ರಹ್ಮಯಜ್ಞ, ಯೋನಿ ಅವರು ತಿಳಿದಿರುವ ಅಗ್ನಿಕುಂಡ. ಯಜ್ಞದಲ್ಲಿ ಅಗ್ನಿಕುಂಡಕ್ಕೆ ಬ್ರಹ್ಮನನ್ನು (ಆತ್ಮ) ಸಮರ್ಪಿಸಿಕೊಳ್ಳುವುದೇ ಋಷಿಗಳು ಕಂಡ ಸಂಭೋಗ. ಆದರೆ ನಾವು ಪಶುಗಳಂತೆ ಬಾಳುತ್ತಿದ್ದೇವೆ. ಸಮರ್ಪಣೆ ನಮಗೆ ಗೊತ್ತಿಲ್ಲ. ನಮಗೆ ಕಾಮ ಎನ್ನುವುದು ರಾತ್ರಿ ಮಲಗುವ ಕೋಣೆಗೆ ಬಂದು ಮುಗಿಸುವ ಒಂದು ದೈಹಿಕ ಸರ್ಕಸ್. ಅಲ್ಲಿ ದೇಹ ಒಂದನ್ನು ಬಿಟ್ಟರೆ ಉಳಿದ ಯಾವುದೂ ಪಾಲ್ಗೊಂಡಿಲ್ಲ. ಅದಕ್ಕೆ ನಾವು ಮಾಂಸದ ಮುದ್ದೆಗಳನ್ನು ಸೃಷ್ಟಿಸಿದ್ದೇವೆ. ನಮಗಿನ್ನೂ ಕಷ್ಟ, ಬುದ್ಧರನ್ನು ಹುಟ್ಟಿಸುವುದು ಸಾಧ್ಯವಾಗಿಲ್ಲ. ಈ ಜಗತ್ತಿನಲ್ಲಿ ವಿಕಲ ಬುದ್ಧಿಯ(ಮೆಂಟಲೀ ರಿಟಾರ್ಡೆಡ್) ಮಕ್ಕಳನ್ನು ಸೃಷ್ಟಿಸಿದ ಕೀರ್ತಿ ಮನುಷ್ಯನಿಗೆ ಮಾತ್ರ ಸಲ್ಲುತ್ತದೆ."[೧೯]

ಅನುಪಮಾ ಅವರು ಲೈಂಗಿಕಥೆ ಬಗ್ಗೆ ಬರೆಯಲು ಕಷ್ಟ ಎನ್ನುವ ಹಾಗೆ ಅವನ್ನು ಮೀರಿ ವೀಣಾ ಬರೆದ ಈ ಉದಾರಹಣೆ ಗಮನಿಸಿದರೆ ಹೆಣ್ಣನ್ನು ಹತ್ತಿಕ್ಕುವ ಅಸುರೀ ಶಕ್ತಿಗಳು ಇರುತ್ತವೆ. ಅದನ್ನು ಮೀರಿ ಬರೆಯಲು ಸಾಧ್ಯ ಎನ್ನುವುದಕ್ಕೆ ವೀಣಾ ಉತ್ತಮ ಉದಾಹರಣೆ. ಸಂಭೋಗ ವೈಯಕ್ತಿಕವಾದರೂ ಅದರಲ್ಲಿ ಗಂಡು ಹೆಣ್ಣಿನ ಇಬ್ಬರ ದೇಹ ಮನಸ್ಸು ಆತ್ಮ ಒಂದಾದಾಗಲೇ ಬುದ್ಧ ವಿವೇಕಾನಂದರ ವ್ಯಕ್ತಿತ್ವದ ಮಕ್ಕಳ ಸೃಷ್ಟಿ ಸಾಧ್ಯವಾಗುತ್ತದೆ. ಅದಲ್ಲದಿದ್ದರೆ, ವಿಕಲ ಬುದ್ಧಿಯ ಮನುಷ್ಯ ಸೃಷ್ಟಿಯಾಗುತ್ತಾನೆ ಎನ್ನುವಲ್ಲಿ ಆಗಿನ ಮನಸ್ಥಿತಿಯ ಬಗ್ಗೆ ಬೆಳಕು ಚೆಲ್ಲುತ್ತಾರೆ.

ವರ್ಗ ಜಾತಿಯನ್ನು ಮೀರಿಯೂ ನವಲ್. ಎಲ್. ಸಾದವಿಯವರು ಗಂಡಿನ ಅಭದ್ರತೆಯನ್ನು ಹೀಗೆ ಬಿಚ್ಚಿಡುತ್ತಾರೆ. “ಇದನ್ನು ಕೇವಲ ರಾಜಕಾರಣಿಯ ಅಭದ್ರತೆಯೆಂದು ಗುರುತಿಸಬೇಕಾಗಿಲ್ಲ. ಪುರುಷನ ಅಭದ್ರತೆಯೆಂದು ಗುರುತಿಸಬಹುದು. ಯಶಸ್ವೀ ರಾಜಕಾರಣಿಗಳು ಇನ್ನೊಬ್ಬರ ಮುಂದೆ ತಮ್ಮ ಸೋಲನ್ನೊಪ್ಪಿಕೊಳ್ಳಲಾರರು. ಏಕೆಂದರೆ ಸೋಲು ಅವರಲ್ಲೇ ಇರುತ್ತದೆ. ಒಬ್ಬ ವ್ಯಕ್ತಿಗೆ ಇಬ್ಬಗೆಯ ಸೋಲನ್ನೊಪ್ಪಿಕೊಳ್ಳುವುದು ಕಷ್ಟ/ ರಾಜಕಾರಣಿಗಳು ಅಧಿಕಾರಕ್ಕಾಗಿ ಮಾಡುವ ಸತತ ಪ್ರಯತ್ನದ ಗುಟ್ಟೇ ಇದು. ತಮಗೆ ಇತರರ ಮೇಲಿರುವ ಅಧಿಕಾರದಿಂದಾಗಿ ತಾವು ಶ್ರೇಷ್ಠರೆಂದು ಭಾವಿಸುತ್ತಾರೆ. ತಮ್ಮ ಸೋಲನ್ನು ಗೆಲುವೆಂದು ಭಾವಿಸುವಂತೆ ಅದು ಮಾಡುತ್ತದೆ. ತಾವು ಶ್ರೇಷ್ಠರೆಂಬ ಭಾವನೆಯನ್ನು ತಮ್ಮ ಸುತ್ತಲಿನವರಲ್ಲುಂಟು ಮಾಡುವ ಪ್ರಯತ್ನವನ್ನು ನಿಜವಾಗಿಯೂ ಮುಖ್ಯವೆಂದು ಭಾವಿಸುತ್ತಾರೆ. ಇದು ಆಂತರಿಕವಾಗಿ ಅವರೆಷ್ಟು ಟೊಳ್ಳೆನ್ನುವುದನ್ನು ಮೂಲದಲ್ಲಿ ಬಿಚ್ಚಿಡುತ್ತದೆ.”[೨೦]

ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದು ಪುರುಷ ಪ್ರಧಾನ ಮನಸ್ಸಿನ ದೃಷ್ಟಿಕೋನವಾದರೆ ಅದೇ ವಿಷಯ ಮಹಿಳೆಗೆ ಹೇಗೆ ಕಂಡಿದೆಯೆಂದರೆ ಗಂಡಸು ತುಂಬ ಹೊಟ್ಟೆ ಕಿಚ್ಚು ಪಡುತ್ತಾನೆ. ಅವನಿಗೆ ಸಹಜವಾಗಿರುವ ಅಸುರೀ ಶಕ್ತಿಗೆ ಬೇರೆ ಬೇರೆ ಅಸುರರ ವಿವಿಧಾಸ್ತ್ರಗಳ ಸಹಾಯ ದೊರಕುತ್ತದೆ. ಅಷ್ಟೇ ಅಲ್ಲದೆ ಪುರುಷ ಪ್ರಧಾನ ವ್ಯವಸ್ಥೆಯ ದಿವ್ಯಾಸ್ತ್ರದ ಬಗ್ಗೆ ‘ಈ ಪ್ರಪಂಚ ಹುಲಿ ತೋಳಗಳ ಆಗರ ಈ ಹುಲಿ ಅಲ್ಲದಿದ್ದರೆ ಮತ್ತೊಂದು ಕಬಳಿಸುವುದೇ ಅದರ ಉದ್ಯೋಗ. ಕಷ್ಟ ಹೋರಾಟಗಳಿಲ್ಲದೇ ಬದುಕೇ ಇಲ್ಲ ಎಂಬ ಸತ್ಯವನ್ನು ಕಂಡುಕೊಂಡಿದ್ದೇನೆ.’ ಎಂದು ಕೆ.ಆರ್.ಸಂಧ್ಯಾ ರೆಡ್ಡಿ ಹೇಳುತ್ತಾರೆ. ಮತ್ತು ಅವರು ಹೇಳುವ ಈ ಮಾತು, “ಸ್ವಾತಂತ್ರ್ಯ ಪೂರ್ವ ಕಾಲದ ಹೆಣ್ಣು ಮಕ್ಕಳ ಕೌಟುಂಬಿಕ ಸಾಮಾಜಿಕ ಸ್ಥಿತಿಗತಿಗಳು ಅವರ ಬಾಲ್ಯದ ನೋವು ನಲಿವುಗಳು, ಹೆಣ್ಣುಮಕ್ಕಳ ಓದಿಗೆ ಒದಗುವ ವಿಘ್ನಗಳು, ವೃತ್ತಿಜೀವನ ಪ್ರಭಾವಿಸಿದ ವ್ಯಕ್ತಿಗಳು, ಅಂತರಂಗದಲ್ಲೇ ಹುದುಗಿಸಿಟ್ಟ ಭಾವನಾ ಪ್ರಪಂಚ, ಬರವಣಿಗೆ ಹಂಬಲ, ಹೀಗೆ ಈ ಆತ್ಮಕಥಾನಕಗಳು ಸ್ತ್ರೀಯರ ಅಂತರಾಳಕ್ಕೆ ಹಿಡಿದ ಕನ್ನಡಿಗಳು. ಇಲ್ಲಿನ ಎಷ್ಟೋ ಬರಹಗಳನ್ನು

ಓದುವಾಗ ಇವರೆಲ್ಲಾ ಏಕೆ ಬರೆಯಲಿಲ್ಲ. ಬರೆದದ್ದನ್ನು ಪ್ರಕಟಿಸಲಿಲ್ಲ ಎಂದು ಕಳವಳವಾಗುತ್ತದೆ. ಸಾಂಸಾರಿಕ ಜಂಜಾಟದಲ್ಲಿ ಇವರಿಗೆ ಲೇಖನಿ ಹಿಡಿಯಲು ಪುರುಸೊತ್ತೇ ಸಿಗಲಿಲ್ಲವಲ್ಲ ಎಂದು ಖೇದವಾಗುತ್ತದೆ. ಆದರೆ ಈ ಎಲ್ಲ ಕಷ್ಟ ಕೋಟಲೆಗಳ ನಡುವೆ ನಲುಗಿಹೋಗದೆ ಜೀವಂತಿಕೆಯನ್ನು ಆರೋಗ್ಯಕರ ಮನಸ್ಸನ್ನು ಕಾಪಾಡಿಕೊಂಡ ಇವರ ಗಟ್ಟಿತನ ಭೇಷ್ ಎನ್ನಿಸುತ್ತದೆ."[೨೧] ಹೆಣ್ಣು ಮಕ್ಕಳ ಆತ್ಮಕಥೆಯಲ್ಲಿ ಕೇವಲ ಕಾಣುವ ಪ್ರಪಂಚವಷ್ಟೇ ಅಲ್ಲ. ಕಾಣದ ಪ್ರಪಂಚವೂ ಅಲ್ಲಿ ಇಣುಕುತ್ತಿರುತ್ತದೆ. ಪುರುಷ ತನ್ನ ಆಭದ್ರತೆಯನ್ನು ಮುಚ್ಚಿಕೊಳ್ಳಲು ಹಾಕುವ ಸೋಗು, ತಾವು ಒಳ್ಳೆಯವರೆಂದು ಬಿಂಬಿಸಲು ಜೊತೆಯಲ್ಲಿದ್ದವರನ್ನು ಕೆಟ್ಟವರನ್ನಾಗಿ ಸೃಷ್ಟಿಸುವುದು, ಪುರುಷರ ಅಭದ್ರತೆಯನ್ನು ಹೇಳುತ್ತದೆ.

ಇಂದು ರಮೇಶ್, "ದೊಡ್ಡವರ ಸಣ್ಣತನ ರಾಜಕೀಯದ ಹಲವು ಮುಖಗಳು, ಮಹಿಳೆಯ ಮೇಲಿನ ದೌರ್ಜನ್ಯ ಇಂಥ ವಿಷಯಗಳನ್ನು ಪ್ರಕಟಿಸಲು ಪತ್ರಿಕೆಗಳವರು ಯಾಕೋ ಹಿಂಜರಿಯುತ್ತಾರೆ. ಮಹಿಳೆಯರ ಬಗ್ಗೆ ಅಂದರೆ ಮಹಿಳೆ ಎಲ್ಲಿ ಹೇಗೆ ಇರಬೇಕು. ಮಹಿಳೆ ಮನೆಯಿಂದ ಹೊರಕ್ಕೆ ಕೆಲಸಕ್ಕೆ ಹೋಗಬಹುದೇ. ಮಹಿಳೆ ನಮ್ಮ ಸಮಾಜದ ರೀತಿ ನೀತಿಯನ್ನು ಕಾಯಬೇಕು ಎನ್ನುವಂಥ ಲೇಖನಗಳಿಗೆ ಈಗಲೂ ಪ್ರಕಟಣೆಗೆ ದಾರಿಯಿದೆ. ಆದರೆ ಇಂದು ಸಮಾಜದಲ್ಲಿ ನಡೆಯುತ್ತಿರುವ ಹೆಣ್ಣು ಮಕ್ಕಳದೇ ಆದ ಭಿನ್ನ ರೀತಿಯ ಜೀವನದ ಬಗ್ಗೆ ಯಾರೂ ಮಾತಾಡಲು ತಯಾರಾಗುವುದಿಲ್ಲ. ನನಗನ್ನಿಸುವುದೇನೆಂದರೆ ನಾವು ನಮ್ಮ ಭಾಷೆ ನಮ್ಮ ಜನ ನಮ್ಮ ಹಿಂದಿನ ಆಚಾರ ವಿಚಾರ ಮಾತ್ರ ನೋಡದೇ ನಮ್ಮ ಸಮಾಜದ ಈಗಿನ ಆಗುಹೋಗುಗಳ ಬಗೆಗೂ ಬರೆದು ಅದು ಜನರ ಮನಸ್ಸನ್ನು ತಲುಪಿ ವಿಚಾರಕ್ಕೆ, ಇರುವ ಸ್ಥಿತಿಯನ್ನು ಗುರುತಿಸುವುದಕ್ಕೆ ದಾರಿ ಮಾಡಬೇಕು. ಆಗಲೆ ನಮ್ಮ ವಿಚಾರ, ವಿದ್ಯಾಭ್ಯಾಸ, ನಾವು ಸಮಾಜದಿಂದ ಕಲಿತದ್ದು ಎಲ್ಲಾ ಕೆಲಸಕ್ಕೆ ಬರಬಹುದು."[೨೨]

ಇಡೀ ಪುರುಷಪ್ರಧಾನ ವ್ಯವಸ್ಥೆಯ ಹುಳುಕುಗಳನ್ನೆಲ್ಲಾ ಬರೆದು ಅವರ ಆಷಾಢಭೂತಿ ತನವನ್ನೆಲ್ಲಾ ಬಯಲಿಗೆಳೆಯಬೇಕೆನ್ನುತ್ತಾರೆ. ಆದರೆ ಅದನ್ನು ಪ್ರಕಟಮಾಡುವವರು ಒಪ್ಪದೇ ಇರುವುದು, ಮತ್ತು ಪ್ರಕಟಮಾಡುವವರು ಪುರುಷರೇ ಆಗಿರುವುದು, ಮಾತು ವೈಚಾರಿಕವಾದರೂ ನಡೆನುಡಿ ಸಾಂಪ್ರದಾಯಿಕವಾಗಿಯೇ ಇರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸಮಾಜದ ನಡೆ–ನುಡಿಗೂ ಹೊಂದಾಣಿಕೆಯೇ ಕಾಣುವುದಿಲ್ಲವೆಂದು ವಿಷಾದದಿಂದ ಹೇಳುತ್ತಾರೆ.

ಕೆ.ಪಿ.ಉಷಾ ರೈ– "ಮಾತೃ ಮೂಲೀಯ ಕುಟುಂಬದವರಾದ ಉಷಾ ನಮ್ಮ ಮನೆಯಲ್ಲಿ ವಿದ್ಯೆ ಕಲಿಯುವ ವಿಚಾರದಲ್ಲಿ ಹೆಣ್ಣು ಗಂಡು ಎನ್ನುವ ಭೇದ ಇರಲಿಲ್ಲ. ಇಬ್ಬರಿಗೂ ಸರಿಯಾದ ವಿದ್ಯಾಭ್ಯಾಸ ಬೇಕು ಎಂದು ಅಮ್ಮ ಅಪ್ಪ ಇಬ್ಬರೂ ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು."[೨೩]

ಮಾತೃ ಮೂಲೀಯ ಕುಟುಂಬದಲ್ಲಿ ಕಯ್ಯಾರ ಕಿಞ್ಞಣ್ಣ ರೈ ಅವರು ಮಹಿಳೆಯೇ ಯಜಮಾನತಿ, ಆಸ್ತಿಬದುಕುಗಳಲ್ಲಿ ಗಂಡನಿಗಿಂತಲೂ ಅವಳಿಗೇ ಅಧಿಕಾರ ತನ್ನ ಗಂಡುಮಕ್ಕಳು ಆಸ್ತಿಯ ಆಡಳಿತ ಮಾಡಿದರೂ ಮನೆ ಆಸ್ತಿ ಬದುಕು ಎಲ್ಲವೂ ಹೆಣ್ಣು ಮಕ್ಕಳಿಗೆ ಮಾತ್ರ ಈ ಸಾಮಾಜಿಕ ಪದ್ಧತಿ ಪ್ರಕಾರ ಆ ಸಮಾಜದಲ್ಲಿ ಸ್ತ್ರೀಗೆ ಸ್ವಾತಂತ್ರ್ಯ ಸ್ಥಾಪಿತವಾಗಿತ್ತು. ಯುದ್ಧದ ಸಲುವಾಗಿ ಊರಿಂದ ಊರಿಗೆ ಹೋಗಬೇಕಾದ ಸಂದರ್ಭದಲ್ಲಿ ಮನೆಯೊಡತಿ ಸ್ತ್ರೀಯೇ ಆದಳು; ಅವಳ ಗಂಡುಮಕ್ಕಳೂ ಮುಂದೆ ಯೋಧರಾಗಿ ಹೋಗುವರು; ಹಾಗಾಗಿ ಆಸ್ತಿ ಬದುಕಿನ ಒಡೆತನ ತಾಯಿಯಿಂದ ಮಗಳಿಗೇ ಸ್ಥಿರವಾಗಿ ಉಳಿಯಿತು ಎನ್ನುವಲ್ಲಿ ಮಹಿಳೆಯರದೇ ಆರ್ಥಿಕ ಬದ್ರತೆ ಇತ್ತು. ಆದರೆ ಉಷಾ ಪುರುಷ ಮತ್ತು ಮಹಿಳೆಯಲ್ಲಿ ಭೇದವಿರಲಿಲ್ಲ. ಎನ್ನುತ್ತಾರೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ತನಗಿಂತ ಕಡಿಮೆ ಎಂಬ ಮನೋಭಾವ ಪುರುಷನದಾಗಿದ್ದರೆ, ಅಂಥ ಸಂದರ್ಭದಲ್ಲಿ ಮಹಿಳೆಯನ್ನು ಸೇವಕಿಯಾಗಿ ನಡೆಸಿಕೊಂಡಿರುವುದು ಕಂಡುಬರುತ್ತದೆ. ತನ್ನ ಹೆಂಡತಿ ತನಗೆ ಸೇರಿದ ವಸ್ತು ಅವಳನ್ನು ಬಳಸಿ ಹೇಗೆಬೇಕಾದರೂ ತಾನು ಮುಂದುವರೆಯಬಹುದೆಂಬ ಆಲೋಚನೆ ಪ್ರತಿಮಾ ಬೇಡಿಯಲ್ಲಿ ಕಂಡುಬರುತ್ತದೆ. ತನ್ನಿಷ್ಟದಂತೆ ನಡೆಸಿಕೊಂಡೂ ಇನ್ನಿಲ್ಲದಂತೆ ಹಿಂಸೆ ಕೊಡುವ ಗಂಡನನ್ನೇ ಆಶ್ರಯಿಸುತ್ತಾಳಲ್ಲ ಹೆಣ್ಣು ಎನ್ನುವುದು ಉಮಾಶ್ರೀ ಪ್ರಶ್ನೆ. ಗಂಡ ಹೆಂಡತಿ ಸಂಬಂಧದಿಂದ ಬಿಡುಗಡೆಯಾದಾಗ ಹೆಣ್ಣನ್ನು ನಡೆಸಿಕೊಳ್ಳುವ ರೀತಿಯನ್ನು ಪ್ರತಿಭಾ ನಂದಕುಮಾರರಲ್ಲಿ ಕಾಣಬಹುದು. ಹೇಗೆಲ್ಲಾ ಪುರುಷರು ಏಕೆ ನಡೆದುಕೊಳ್ಳುತ್ತಾರೆನ್ನುವುದಕ್ಕೆ ನವಲ್ ಎಲ್ ಸಾದವಿ ಗಂಡಿನ ಅಭದ್ರತೆಯೇ ಇದಕ್ಕೆಲ್ಲ ಕಾರಣ ಎಂಬ ಉತ್ತರ ಕೊಡುತ್ತಾರೆ. ಪುರುಷ ಮಾಡುವ ಅನ್ಯಾಯಗಳನ್ನೆಲ್ಲ ಬರೆದು ಜಗಜ್ಜಾಹೀರು ಮಾಡಬೇಕೆನ್ನುವ ಮನಸ್ಥಿತಿ ಇಂದು ರಮೇಶದಾದರೆ ಈ ಪರಿಸ್ಥಿತಿಗೆ ಅದ್ನು ಪ್ರಕಟ ಮಾಡಲು ಮುಂದೆ ಬರದ ಪ್ರಕಾಶಕರು ಪುರುಷರೇ ಆಗಿದ್ದಾರೆ ಎನ್ನುವುದು ವಾಸ್ತವವಾಗಿದೆ. ಮಾತೃಮೂಲೀಯ ಕುಟುಂಬದಲ್ಲಿ ಅಧಿಕಾರ ಮತ್ತು ಆಸ್ತಿ ಅವಳ ಕೈಯಲ್ಲಿರುವುದರಿಂದ ಅವರ ಪರಿಸ್ಥಿತಿ ತುಸು ಭಿನ್ನವಾಗಿದೆ. ಮಹಿಳೆ ಸಬಲಳಾಗಲು ಅಧಿಕಾರ ಮತ್ತು ಭದ್ರತೆ ಎರಡೂ ಬೇಕಾಗುತ್ತದೆ.

೫.೪. ಪುರುಷರ ಆತ್ಮಕಥೆಗಳಲ್ಲಿ ಪುರುಷ ನಿರೂಪಣೆ

ಆತ್ಮಕಥೆಯ ಬರವಣಿಗೆಯಲ್ಲಿ ಪುರುಷರ ಬಗ್ಗೆ ಪುರುಷರು ಯಾವ ಧೋರಣೆಯುಳ್ಳ ವರಾಗಿದ್ದಾರೆ. ಪುರುಷ ಪ್ರಧಾನ ಮನಸ್ಥಿತಿ ಇದೆಯೇ? ಅಥವಾ ಮಹಿಳೆಯರ ಪರವಾಗಿದೆಯೇ?

ಅಥವಾ ಮಾನವೀಯ ನೆಲೆಯಲ್ಲಿದೆಯೇ? ಎಂಬುದನ್ನು ಪುರುಷರಲ್ಲಿ ಪುರುಷ ನಿರೂಪಣೆಯಲ್ಲಿ ಚರ್ಚಿಸಲಾಗಿದೆ. ಇದನ್ನೇ ಪುರುಷ ನಿರೂಪಣೆ ಎಂದು ಬಳಸಲಾಗಿದೆ.

ಕುಟುಂಬದ ವಾತಾವರಣ ಮತ್ತು ಬಾಲ್ಯದ ಬಗ್ಗೆ ಅಬ್ದುಲ್ ಕಲಾಮ್, "ನನ್ನ ತಂದೆ ಜೈನುಲಾಬ್ದೀನ್ ಹೆಚ್ಚೇನೂ ಓದಿಲ್ಲದ ಬಡ ಹಳ್ಳಿಗರಾದರೂ ಅವರಲ್ಲಿ ಅಸದೃಶವಾದ ಪ್ರಪಂಚ ಜ್ಞಾನ ಮತ್ತು ಮಾನವೀಯತೆ ತುಂಬಿ ತುಳುಕುತ್ತಿತ್ತು. ಎಷ್ಟು ಜನರು ಮನೆಯವರಿದ್ದರೂ ಅವರಿಗಿಂತ ಜಾಸ್ತಿ ಸಂಖ್ಯೆಯಲ್ಲಿ ಹೊರಗಿನ ಜನರು ನಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದರು. ನನ್ನ ತಾಯಿಯ ವಂಶಜರು ಒಳ್ಳೆಯ ಸಂಪ್ರದಾಯ ಹಾಗೂ ಸುಸಂಸ್ಕೃತ ಪರಂಪರೆ ಹೊಂದಿದ್ದರು ಎಂದು ಎಲ್ಲರೂ ಭಾವಿಸಿದ್ದರು. ಈ ತಲೆಮಾರಿನ ಪೂರ್ವಜರೊಬ್ಬರಿಗೆ ಅಂದಿನ ಬ್ರಿಟಿಷ್ ದೊರೆಗಳು ಬಹದ್ದೂರ್ ಎಂದು ಬಿರುದು ನೀಡಿದ್ದರು. ರಾಮೇಶ್ವರಂನ ಮಸೀದಿ ರಸ್ತೆಯಲ್ಲಿ ಈ ದೊಡ್ಡ ಮನೆಯನ್ನು ಕಲ್ಲು ಹಾಗೂ ಇಟ್ಟಿಗೆಗಳಿಂದ ಕಟ್ಟಿದ್ದರು. ಈ ಮನೆತನದಲ್ಲಿ ನಮ್ಮ ತಂದೆ ಯಾವುದೇ ಅನಗತ್ಯ ವೈಭವಯುತ ವಸ್ತುಗಳನ್ನಾಗಲೀ, ಸಲಕರಣೆಗಳನ್ನಾಗಲೀ ಹೊಂದಿರಲಿಲ್ಲ. ಇಲ್ಲಿ ಆಹಾರ ಬಟ್ಟೆ-ಬರೆ, ಔಷಧಿ ಮುಖ್ಯವಾದ ಅವಶ್ಯಕಥೆಗಳಾಗಿದ್ದವು. ಭಾವನಾತ್ಮಕವಾಗಿಯಾಗಲೀ, ವಸ್ತುನಿಷ್ಠವಾಗಿಯಾಗಲೀ ಹೇಳುವುದಿದ್ದಲ್ಲಿ ನನ್ನದು ಅತ್ಯಂತ ಸೊಗಸಿನ ಬಾಲ್ಯವಾಗಿತ್ತು. ಪ್ರಾರ್ಥನೆ ಬಗ್ಗೆ ತಂದೆ 'ಮನಸ್ಸಿಟ್ಟು ಪ್ರಾರ್ಥಿಸಿದರೆ ನಿನ್ನೊಳಗಿನ ಆತ್ಮಶಕ್ತಿ ದೇಹದೊಳಗಿಂದ ಹೊರಬಂದು ಜಗತ್ತಿನ ಶಕ್ತಿಯೊಂದಿಗೆ ಸೇರುತ್ತದೆ. ಇಲ್ಲಿ ಯಾವುದೇ ಜಾತಿ, ಪಂಥ, ಧರ್ಮ, ಸಿರಿ, ವಯಸ್ಸು ಮುಂತಾದ ಅಡ್ಡಗೋಡೆಗಳಿಲ್ಲ' ಎಂದು ಹೇಳುತ್ತಿದ್ದರು.

ನನ್ನ ಜೀವನದಲ್ಲಿ ಪ್ರಭಾವ ಬೀರಿದ ವ್ಯಕ್ತಿಗಳೆಂದರೆ ಜಲಾಲುದ್ದೀನ್(ಸ್ನೇಹಿತ). ಬಡತನದಿಂದಾಗಿ ಹೆಚ್ಚು ಓದದೇ ಇದ್ದರೂ ನನ್ನ ಶಿಕ್ಷಣ ಮತ್ತು ಯಶಸ್ಸಿಗಾಗಿ ಹುರಿದುಂಬಿಸುತ್ತಿದ್ದುದು ತಿಳಿಯಿತು. ಬದುಕಿನಲ್ಲಿ ತನಗೆ ಒದಗದೇ ಇದ್ದ ಸೌಭಾಗ್ಯದ ಬಗ್ಗೆ ಪರಿತಪಿಸದೆ ಏನು ಸಿಕ್ಕಿದೆಯೋ ಅದರ ಬಗ್ಗೆ ದೇವರಿಗೆ ಸದಾ ಕೃತಜ್ಞನಾಗಿದ್ದ. ಆಗಿನ ಕಾಲದಲ್ಲಿ ಆ ದ್ವೀಪದಲ್ಲಿ ಇಂಗ್ಲಿಷ್ ಓದಬಲ್ಲ ವ್ಯಕ್ತಿ ಮಾತ್ರ ಅವನೊಬ್ಬನೇ ಆಗಿದ್ದ. ಅವನಿಗಿರುವ ಜ್ಞಾನ ಉಲ್ಲೇಖನೀಯ. ಅವನು ಯಾವಾಗಲೂ ವಿಜ್ಞಾನಿಗಳು ವಿದ್ಯಾವಂತರು ಸಮಕಾಲೀನ ವಿಜ್ಞಾನ ಮತ್ತು ವೈದ್ಯಕೀಯ ಅನ್ವೇಷಣೆಗಳ ಬಗ್ಗೆ ಮಾತನಾಡುತ್ತಿದ್ದ. ನನಗೆ ಹೊರಗಿನ ಹೊಸಜಗತ್ತನ್ನು ತೋರಿಸಿಕೊಟ್ಟವನು ಅವನೇ ಎಂದು ಹೇಳಬಯಸುತ್ತೇನೆ. (ಪು೯-೩೦). ರಾತ್ರಿ ಮಲಗುವ ವೇಳೆ ತಾಯಿ ಮತ್ತು ಅಜ್ಜಿ ಹೇಳುವ ರಾಮಾಯಣದ ಘಟನೆ ಹಾಗೂ ಪ್ರವಾದಿಯ ಜೀವನ ಚರಿತ್ರೆಗಳನ್ನು ಕುಟುಂಬದ ಮಕ್ಕಳಿಗೆ ಹೇಳುತ್ತಿದ್ದ ಆ ಕ್ಷಣಗಳನ್ನು ಎಂದಿಗೂ ಮರೆಯಲಾರೆ."[೨೪]

ಅಬ್ದುಲ್ ಕಲಾಮ್ ತಂದೆ ವಿದ್ಯಾವಂತರಲ್ಲದಿದ್ದರೂ ಮಾನವೀಯ ವ್ಯಕ್ತಿಯಾಗಿದ್ದರು. ಒಳ್ಳೆ ಜ್ಞಾನ ಮತ್ತು ಸಂಸ್ಕಾರ ಪಡೆದಂಥಹ ಕಲಾಮರು ಬದುಕಿ ತೋರಿಸಿದರು. ಅವರು ತಮಗೆ ಪ್ರಭಾವಿಸಿದ ಅಂಶವನ್ನು ಹೇಳುತ್ತಾರೆ. ಅವರ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯಕವಾದ ಅಂಶವನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾರೆ. ಮನುಷ್ಯ ಎಲ್ಲಿದ್ದರೂ ಈ ಅನಂತ ವಿಶ್ವದ ಒಂದು ಅವಿಭಾಜ್ಯ ಅಂಗ. ಹೀಗಾಗಿ ಕಷ್ಟ ಸಂಕಷ್ಟ ಬಂದರೆ ಅದರ ಹಿನ್ನಲೆಯಲ್ಲಿ ಅರಿತುಕೊಳ್ಳಬೇಕು ಎಂಬುದನ್ನು ತಂದೆಯಿಂದ ಕಲಿತಿದ್ದರು. ಇಂತಹ ವಾತಾವರಣ ಯಾವಾಗಲೂ ವ್ಯಕ್ತಿಗೆ ತನ್ನ ಆತ್ಮವಿಶ್ಲೇಷಣೆಯನ್ನು ಮಾಡುವ ಮಹದವಕಾಶ ನೀಡುತ್ತದೆ ಎಂಬುದು ಅವರ ಚಿಂತನೆಯಾಗಿತ್ತು. ತಂದೆಯ ಜೀವನ ತತ್ವಗಳನ್ನು ನಂಬಿದ್ದಲ್ಲದೆ ಖಂಡಿತವಾಗಿಯೂ ಅದ್ಭುತ ದೈವೀಶಕ್ತಿಯೊಂದಿದ್ದು ಕಷ್ಟ ಕಾರ್ಪಣ್ಯ ಸೋಲುಗಳ ರಾಜ್ಯದಿಂದ ಹೊಡೆದೆತ್ತಿ ವ್ಯಕ್ತಿಯನ್ನು ಸತ್ಯದ ಸ್ಥಾನಕ್ಕೆ ಕೊಂಡೊಯ್ಯಬಲ್ಲುದು. ಹಾಗೆ ವ್ಯಕ್ತಿ ಭಾವನಾತ್ಮಕ ಹಾಗೂ ಮನಶ್ಯಾಂತಿಗಳ ಪಡೆಯುತ್ತಾನೆ ಎಂಬುವುದನ್ನು ಅಬ್ದುಲ್ ಕಲಾಮ್ ಕಂಡುಕೊಂಡರು.

ಕುಂ.ವೀ ಯವರಲ್ಲಿ ಬರುವ ಈ ಮಾತು "ನಾನಿದನ್ನು ಬರೆಯುವುದಕ್ಕೆ ಅನೇಕ ಪ್ರತಿಭಾವಂತ ಗೆಳೆಯರ ವೈಯಕ್ತಿಕ ಅನುಭವಗಳನ್ನು ಆಲಿಸಿ ದಿಗ್ಭ್ರಮೆಗೊಂಡಿರುವುದುಂಟು. ಆ ಗೆಳೆಯರ ಬದುಕು ಅಕ್ಕರಮಾಸಿ, ಉಚಲ್ಯಾಗಳನ್ನು ಮೀರಿಸಿದ್ದು. 'ನೀವು ನಿಮ್ಮ ಅನುಭವಗಳ ಅಸಲೀಯತ್ತಿಗೆ ಸೃಜನಶೀಲ ಕಲ್ಪಿಸಿ' ಎಂದು ಅಂಗಲಾಚಿದೆ ಅನೇಕ ಸಲ. ನಗರಗಳ ಬಡಾವಣೆಗಳಲ್ಲಿ, ಕಾರ್ಪೊರೇಟ್ ಮುಸುಕಿನಲ್ಲಿ ತಮ್ಮನ್ನು ತಾವು ಮರೆಮಾಚಿಕೊಂಡಿರುವ ಅವರಿಗೆ ತಮ್ಮ ಬಗ್ಗೆ ತಮಗೇ ಭಯ. ಸಾರ್ವಜನಿಕ ಪ್ರಭಾವಳಿಯೊಳಗಿರುವ ತಮ್ಮನ್ನು ತಮ್ಮ ಅನುಭವಗಳು ವಂಚಿಸಿದರೆ ಎಂಬ ಭಯ. ಮುಖವಾಡಗಳನ್ನು ಕಳಚಿದರೆಲ್ಲಿ ತಮ್ಮ ಬದುಕಿನ ಗರಿಗರಿ ಮೇಲ್ಪದರ ಮಲಿನಗೊಳ್ಳುವುದೋ ಎಂಬ ಆತಂಕ. ಈ ಆತಂಕಗಳು, ಕೀಳರಿಮೆ, ಮೇಲರಿಮೆ ಸೋಗಲಾಡಿತನ, ಮೃದ್ವಂಗಿತನ ಅವರವಷ್ಟೇ ಅಲ್ಲ, ನನ್ನ ಮತ್ತು ನಮ್ಮವೂ ಕೂಡ. ಆದ್ದರಿಂದ ಮುಖವಾಡ ಕಳಚುವ ಪ್ರಯತ್ನದ ಫಲವೇ ನನ್ನೀ ಗಾಂಧೀ ಕ್ಲಾಸ್."[೨೫]

ನಗರೀಕರಣ, ಜಾಗತೀಕರಣದ ಪ್ರಭಾವದಿಂದ ಮನುಷ್ಯನ ಅಂತರಂಗ ಬಹಿರಂಗ ಬೇರೆಯಾದದ್ದು. ತಾವು ಮಾಡುವ ಮೋಸಕ್ಕೆ ತಾವೇ ಬಲಿಯಾಗಿ ಬದುಕಿದರೂ ಸತ್ತಂತಿರುವುದು. ಯಾರು ಶಿಕ್ಷಿಸದಿದ್ದರೂ ಆತ್ಮಸಾಕ್ಷಯೇ ಚುಚ್ಚಿ ಸಾಯಿಸುವುದನ್ನು ಕುಂ.ವೀ ತುಂಬಾ ಚೆನ್ನಾಗಿ ಬರೆಯುತ್ತಾರೆ, ಯಾರಿಂದ ತಪ್ಪಿಸಿಕೊಂಡರೂ ತಮ್ಮಿಂದ ತಾವೇ ಬಚಾವಾಗದೇ ಹಿಡಿದು ಹಾಕುವ ಪೋಲೀಸನೇ ಆತ್ಮಸಾಕ್ಷಿ. ಬರೆಯದೇ ಇರುವವರ ಆತ್ಮಕಥೆಯನ್ನು ಕೂಡ ಕುಂ. ವೀ. ಹೇಳುತ್ತಾರೆ. ಬದುಕುವ ರೀತೀಗೂ ತಾವು ಬರೆದ ಬರವಣಿಗೆಗೂ ವಿರುದ್ಧವಾಗಿರುವ

ನೆಲೆಯನ್ನು ಕೂಡ ಹೇಳುತ್ತಾರೆ. ಕೇವಲ ಬೇರೆಯವರಲ್ಲಿರುವ ಸೋಗಲಾಡಿತನವನ್ನಷ್ಟೇ ಹೇಳದೇ ತನ್ನ ಮುಖವಾಡವನ್ನು ಕಳಚುವ ಪ್ರಯತ್ನವೇ ಈ ಬರಹ ಎನ್ನುವಲ್ಲಿ ಅಂತರಂಗ ಬಗೆದು ನೋಡುವ ಪ್ರಯತ್ನವಿದೆ. ಈ ಸೋಗಲಾಡಿತನ ಲಿಂಗ ಜಾತಿಗಳನ್ನು ಮೀರಿದ್ದು.

ಸಿ. ಎನ್. ರಾಮಚಂದ್ರರಲ್ಲಿ ಬರುವ ತಂದೆ ಜೊತೆಗಿನ ಸಂವಾದ "ರಜಾ ದಿನಗಳಲ್ಲಿ ಊರಿಗೆ ಹೋದಾಗ ತಂದೆಯವರ ಪ್ರತಿಯೊಂದು ಮಾತನ್ನು ಖಂಡಿಸುತ್ತಿದ್ದೆ. ಗೇಲಿ ಮಾಡುತ್ತಿದ್ದೆ. ಒಂದು ಸಲ ಅವರು ಮನೆಗೆ ಬಂದಿದ್ದ ಇತರರೊಡನೆ 'ತ್ರಿವೇಣಿ ಸಂಗಮ' ದ ಬಗ್ಗೆ ಮಾತನಾಡುತ್ತಿದ್ದರು. ನಾನು ಮಧ್ಯೆ ತಲೆ ಹಾಕಿ, ಯಾವ ಮೂರು ನದಿಗಳು ಹೇಳಿ' ಎಂದೆ. ಅವರು ಗಂಗಾ- ಯಮುನಾ ನದಿಗಳ ಬಗ್ಗೆ ಹೇಳಿ, ಈಗ ಸರಸ್ವತಿ ನದಿಯು ಗುಪ್ತಗಾಮಿನಿಯಾಗಿದ್ದಾಳೆ. ಎಂದರು. ಹಾಗಾದರೆ ನಮ್ಮೂರಿನ ಎರಡು ಕೆರೆಗಳು ಮಳೆಗಾಲದಲ್ಲಿ ನೀರಿನಿಂದ ಒಂದೆ ಆದಾಗ ಗುಪ್ತಗಾಮಿನಿಯನ್ನು ಕಲ್ಪಿಸಿಕೊಂಡು, ಅದನ್ನೂ ತ್ರಿವೇಣಿ ಸಂಗಮೆಂದು ಕರೆಯಬಹುದಲ್ಲವೇ? ಎಂದು ಗೇಲಿ ಮಾಡಿದೆ. ಈ ಬಗೆಯ ಪ್ರವೃತ್ತಿ ಮೊದಲಿಗೆ ತಂದೆಯವರ ಬಗ್ಗೆ ಶುರುವಾಗಿ, ಅನಂತರ ವೈದಿಕ ವಿದ್ಯೆ, ಸಾಂಪ್ರದಾಯಿಕ ಆಚಾರ–ವಿಚಾರಗಳು. ಸಂಸ್ಕಾರಗಳು ಇವೆಲ್ಲವುಗಳನ್ನು ಒಳಗೊಂಡು ನಮ್ಮ ಆರ್ಷೇಯ ಪರಂಪರೆಯ ಬಗ್ಗೆಯೇ ಅತೀವ ತಿರಸ್ಕಾರ ಬೆಳೆಯಲು ಕಾರಣವಾಯಿತು. ಈ ನಿಲುವಿಗೆ ಅನಂತಮೂರ್ತಿಯವರ ಕಥೆಗಳ ಪ್ರಭಾವವೆಷ್ಟು ಇಂಗ್ಲಿಷ್ ಸಾಹಿತ್ಯದ ಪ್ರಭಾವವೆಷ್ಟು ಮತ್ತು ನನ್ನ ಕೀಳರಿಮೆಯ ಪಾಲೇನು ಎಂಬ ಪ್ರಶ್ನೆಗಳಿಗೆ ಉತ್ತರವಿಲ್ಲ. ಇಂದೂ ಕೂಡ ಯಾರಾದರೂ ನಮ್ಮ ಭವ್ಯ ಸಂಸ್ಕೃತಿ ಎಂದು ಪ್ರಾರಂಭಿಸಿದ ಕೂಡಲೆ ಅವರನ್ನು ವಿರೋಧಿಸಲು ಶುರು ಮಾಡುತ್ತೇನೆ."[೨೬]

ಇದು ಇಲ್ಲಿ ಆಧುನಿಕ ಮನುಷ್ಯನ ಮನಸ್ಥಿತಿಯನ್ನು ಹೇಳುತ್ತದೆ. ಇವರೇ ಹೇಳುವ ಹಾಗೆ ಬೇರೆಯವರ ಪ್ರಭಾವದ ಜೊತೆಗೆ ಅವರಲ್ಲಿ ಅಹಂಕಾರವಿದೆ. ಇದರ ಜೊತೆ ಕೀಳರಿಮೆ ಸೇರಿದಾಗ ಮನುಷ್ಯನನ್ನು ಯಾವ ಹಂತಕ್ಕೆ ತಲುಪಿಸುತ್ತದೆಂದರೆ ತನ್ನೊಂದಿಗಿರು ವವರನ್ನು ತುಳಿಯುವ, ಹಿಂಸೆ ಮಾಡಿ ತಾನೇ ಗೆಲ್ಲಬೇಕೆಂಬ ಹುಂಬ ಹಂಬಲವನ್ನುಂಟು ಮಾಡುತ್ತದೆ. ಇಂಗ್ಲಿಷ್ ಪ್ರಭಾವ, ಕೀಳರಿಮೆ ವಾತಾವರಣ ಪ್ರಭಾವ ಇವೆಲ್ಲವೂ ಕೆಲಸ ಮಾಡಿದ್ದನ್ನು ಸ್ಮರಿಸುತ್ತದೆ.

ಪೊಲೀಸ್ ಅಧಿಕಾರಿಯಾಗಿ ಕೆಲಸ ಮಾಡುತ್ತಿರುವ ಎಮ್.ಜಿ.ಗೋವಿಂದರಾಜು ಹೇಳುವ ಈ ಮಾತು ಸೌಮ್ಯ ವ್ಯಕ್ತಿತ್ವದ ಕವಿಯ ಮೇಲೆ ಕೆಲವರು ಹಿಂದುಳಿದ ವರ್ಗದ ವಿದ್ಯಾರ್ಥಿಗಳು ನಮ್ಮ ಜಾತಿಗಳನ್ನು ಹೀಯಾಳಿಸಿ ಮಾತನಾಡುತ್ತಿದ್ದಾರೆ ಎಂಬ ಒಂದು ಆಪಾದನೆ ಮಾಡಿದ್ದರು. ಅವರ ಆರೋಪ ಬರಹ ರೂಪದಲ್ಲಿ ವೈಸ್ ಛಾನ್ಸಲರ್ ಅವರ ಮೂಲಕ ನನ್ನ ಟೇಬಲ್ಲಿಗೆ

ಬಂತು. ಭಟ್ಟರ ವಿರುದ್ಧ ಎಫ್.ಐ.ಆರ್ ಹಾಕಬೇಕಾಗಿತ್ತು. ಧೈರ್ಯಮಾಡಿ ಅದನ್ನು ಒಂದು ನಗಣ್ಯ ದೂರೆಂಬಂತೆ "ಅವಿಚಾರಣೀಯ" ದೂರನ್ನಾಗಿ ನಮೂದಿಸಿದೆ. ಎರಡನೆಯ ದಿನ ಬೆಳಿಗ್ಗೆ ಹನ್ನೊಂದು ಗಂಟೆಯ ವೇಳೆಗೆ ಮಾನ್ಯ ಭಟ್ಟರು ಬಿಸಿಲಿನಲ್ಲಿ ಠಾಣೆಯೆಡೆಗೆ ನಡೆದು ಬರುತ್ತಿದ್ದುದನ್ನು ಕಿಟಕಿಯ ಮೂಲಕ ನೋಡಿದ ನಾನು ಕರೆದು ತಂದು ಉಚಿತಾಸನದಲ್ಲಿ ಕೂರಿಸಿದೆ. ಅವರು ತಮ್ಮ ಮೇಲೆ ಬಂದಿದ್ದ ಆರೋಪದಿಂದ ಅಕ್ಷರಶಃ ಚಿಂತಾಕ್ರಾಂತರಾಗಿದ್ದರು. 'ಸರ್ಕಾರ ಇಷ್ಟೆಲ್ಲ ಸವಲತ್ತುಗಳನ್ನು ನಿಮಗೆ ನೀಡುತ್ತಿದ್ದರೂ ನೀವು ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ' ಎಂಬುದು ಅವರಾಡಿದ್ದ ಮಾತುಗಳು."[೨೭]

ಇದಕ್ಕೆ ಪ್ರತಿಕ್ರಿಯಿಸುವುದಾದರೆ ಮೊದಲು ಮೇಲ್ಜಾತಿಯಿಂದ ಕೆಳಜಾತಿಯವರಿಗೆ ಶೋಷಣೆ ನಡೆಯುತ್ತಿತ್ತು. ಆದರೆ ಇಲ್ಲಿ ಜಾತಿ ಎನ್ನುವುದನ್ನು ರಾಜಕೀಯವಾಗಿ ಬಳಸಲಾಗಿದೆ. ಹೇಗೂ ತಮಗೆ ಕೆಲವು ಅನುಕೂಲಗಳು ಸರ್ಕಾರದಿಂದ ಸಿಗುತ್ತಿವೆ. ಮೇಲ್ಜಾತಿಯವರಾದ ಭಟ್ಟರ ಮೇಲೆ ಕಂಪ್ಲೇಂಟ್ ಕೊಟ್ಟರೆ ಅವರಿಗೆ ತಕ್ಕ ಶಿಕ್ಷೆಯಾಗುತ್ತದೆ. ಅವರಿಗೆ ಶಿಕ್ಷೆಯಾದರೆ ಇನ್ನು ತಮ್ಮ ಸುದ್ದಿಗೆ ಬರುವುದಿಲ್ಲ. ಹಾಗಾಗಿ ತಾವಾಡಿದ್ದೇ ಆಟ. ಹೇಗೂ ಕೆಳಜಾತಿಯವರಾದ ತಮ್ಮ ಮೇಲೆ ಮೇಲ್ಜಾತಿಯವರಿಂದ ಕೆಳಜಾತಿಯವರಿಗೆ ಶೋಷಣೆಯಾಗುತ್ತಿದ್ದುದು ಒಂದು ರೀತಿಯಾದರೆ ಇಲ್ಲಿ ಕೆಳಜಾತಿಯವರಿಂದ ಮೇಲ್ಜಾತಿಯ ಪುರುಷರಿಗೆ ಶೋಷಣೆಯಾಗುವ ಹೊಸ ಮುಖ ಗುರುತಿಸಬಹುದು. ಕ್ರಮ ತೆಗೆದುಕೊಳ್ಳುವುದಿಲ್ಲ ಎಂಬ ದುರಾಲೋಚನೆಯೇ ಇಲ್ಲಿ ಕೆಲಸ ಮಾಡಿದೆ. ಸಾಮಾಜಿಕ ಸಂದರ್ಭದಲ್ಲಿ ಬದಲಾದ ಸ್ಥಿತಿಯನ್ನು ಹೇಳುತ್ತದೆ.

ಎಮ್.ಬಿ.ಮರಕಿಣಿಯವರು ಬರೆಯುವ ಈ ಮಾತು "ನಮ್ಮ ತಂದೆ ಮರಕಿಣಿ ಗುರಿಕ್ಕಾರ ನಾರಾಯಣ ಭಟ್ಟರು ಪ್ರಗತಿಪರ ಗೃಹಸ್ಥರಾಗಿದ್ದರು. ಗ್ರಾಮದ ಸಮಗ್ರ ವಿಕಾಸಕ್ಕೂ ಸಮಾಜದ ಉನ್ನತಿಗೂ ಸಹಾಯಕವಾದ ಹತ್ತಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಗ್ರಾಮಪಂಚಾಯಿತಿ, ಸಹಕಾರಸಂಘ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಯಲ್ಲಿ ಹೆಚ್ಚಿನ ಉತ್ಸಾಹದಿಂದ ಸಹಯೋಗ ನೀಡುತ್ತಿದ್ದರು. ಮೊದಲನೇ ಮಹಾಯುದ್ಧದ ತರುವಾಯ ಉಂಟಾದ ಆರ್ಥಿಕ ಕುಸಿತ, ಅಡಿಕೆ ತೋಟಕ್ಕೆ ಹಬ್ಬಿದ 'ಕೊಳೆರೋಗ' ಅದರ ನಿವಾರಣೆಗಾಗಿ ಪ್ರಚಾರಕ್ಕೆ ಬಂದ ಔಷಧಿ-ಬೋರ್ಡೋ ಮಿಶ್ರಣ ಸಿಂಪರಣೆ, ಸಿಂಪಡಿಸುವುದಕ್ಕಾಗಿ ಕೊಯಂಬತ್ತೂರಿನಲ್ಲಿ ತಯಾರಾಗುತ್ತಿದ್ದ ಪೀಪೆ ಪಂಪ್‌ನ್ನು ಸ್ವತಃ ಅಲ್ಲಿಗೆ ಹೋಗಿ ನೋಡಿ ಬಳಕೆಗೆ ತಂದಿದ್ದರು. ಕಾಂಗ್ರೆಸ್ಸಿಗರಲ್ಲದಿದ್ದರೂ ಗಾಂಧೀ ತತ್ವಗಳಲ್ಲಿ ವಿಶ್ವಾಸವುಳ್ಳವರಾಗಿದ್ದರು. ಅಡ್ಯನಡ್ಕ ಶಾಲೆಯಲ್ಲಿ ಹರಿಜನ ಮಕ್ಕಳಿಗೆ ಪ್ರತ್ಯೇಕ ಸ್ಥಳದಲ್ಲಿ ಪಾಠ ನಡೆಯುತ್ತಿದ್ದುದನ್ನು ನಿಲ್ಲಿಸಿ ಕ್ಲಾಸಿನಲ್ಲಿ ಎಲ್ಲರಂತೆ ಕುಳಿತು ಓದುಬರಹ ಕಲಿಯುವ ಅವಕಾಶ ಪ್ರಾರಂಭಿಸಲು ಒತ್ತಾಯಿಸಿದ್ದಲ್ಲದೇ ಅದು

ಸಾಧ್ಯವಾಗುವಂತೆ ಮಾಡಿದ ಆಗಿನ ಶಾಲಾಶಿಕ್ಷಕ-ವ್ಯವಸ್ಥಾಪಕರಾಗಿದ್ದ ತಿಮ್ಮಣ್ಣ ಭಟ್ಟರನ್ನು ಬೆಂಬಲಿಸಿದ್ದರು."[೨೮]

ಮೇಲ್ಜಾತಿಯ ಪರುಷರಾದ ನಾರಾಯಣಭಟ್ಟ ಸಮಾಜದ ಉನ್ನತಿಗೆ ಶ್ರಮಿಸುವವರಲ್ಲಿ ಒಬ್ಬರಾಗಿದ್ದರು. ಕಾಂಗ್ರೆಸ್ ಎಂದರೆ ಗಾಂಧೀ ತತ್ವ ಎಂಬ ನಂಬಿಕೆಯವರಿರುವ ಸಂದರ್ಭದಲ್ಲಿ ಕಾಂಗ್ರೆಸ್‌ಗೆ ಸೇರದೆಯೂ ಗಾಂಧೀತತ್ವ ಪಾಲಿಸುತ್ತಿದ್ದರು. ಹರಿಜನರಿಗೆ ಪ್ರತ್ಯೇಕ ಆಸನದ ವ್ಯವಸ್ಥೆಗಳಿದ್ದ ಕಾಲದಲ್ಲಿ ಬೇಧಭಾವ ಮಾಡದೇ ಎಲ್ಲರಿಗೂ ಸಮಾನ ಅವಕಾಶ ಕೊಟ್ಟಿದ್ದನ್ನು ಹೇಳುತ್ತದೆ. ಕೆಳಜಾತಿಯವರಿಗೆ ಪ್ರಾರಂಭದಲ್ಲಿ ಮೇಲ್ಜಾತಿಯವರು ಸಹಕರಿಸಿದ್ದರ ಐತಿಹಾಸಿಕ ಸತ್ಯವನ್ನು ಇದು ಹೇಳುತ್ತದೆ.

ಗಿರೀಶ್ ಕಾರ್ನಾಡರು ಬರೆಯುವ ಈ ಮಾತು ಅವರ ಮಲಅಣ್ಣನ ಕುರಿತಾಗಿದೆ. "ನನ್ನ ತಾಯಿಯ ಪುನರ್ವಿವಾಹದ ಮಹಾಕಥೆಯಲ್ಲಿ ಅಲ್ಲಿಂದಿಲ್ಲಿ ತೂರಲ್ಪಟ್ಟು ಹೇಗೋ ನುಚ್ಚುನೂರಾಗದೇ ಉಳಿದು ಬಂದ ವ್ಯಕ್ತಿ ನನ್ನ ಹಿರಿಯಣ್ಣ ಭಾಲಚಂದ್ರ. ಕಾಣಲಿಕ್ಕೆ ತುಂಬಾ ಸ್ಪುರದ್ರೂಪಿ. ನನ್ನ ಮದುವೆಯ ಮೊದಲು ಅವನು ನ್ಯೂಯಾರ್ಕಿಗೆ ಹೋದಾಗ ಅವನ್ನು ಕಾಣಬಯಸಿದ ನನ್ ವಾಗ್ದತ್ತ ವಧು, ಸರಸ್ವತಿ, ಫೋನ್ ಮಾಡಿ, 'ನಿಮ್ಮನ್ನು ಹೇಗೆ ಗುರುತಿಸುವುದು?' ಎಂದು ಕೇಳಿದಾಗ, 'ನಾನು ಗಿರೀಶನ ಹಾಗೇ ಕಾಣಿಸುತ್ತೇನೆ. ಆದರೆ ಅವನಿಗಿಂತ handsome' ಎಂದು ಹೇಳಿದ್ದನ್ನು ನನ್ನ ಹೆಂಡತಿ ಇಂದಿಗೂ ನೆನಪಿಸಿಕೊಳ್ಳುತ್ತಾಳೆ. ಮಮತೆಗಾಗಿ ಹಾತೊರೆದವ. ಅಷ್ಟೇ ಸಡಿಲುಗೈಯಿಂದ ಮಮತೆ ಮರಳಿಸಿದವ. ಬುದ್ದಿವಂತ. ರೇಖಾಚಿತ್ರ-ಜಲವರ್ಣಗಳನ್ನು ಚೆನ್ನಾಗಿ ಚಿತ್ರಿಸುತ್ತಿದ್ದ. ಅದ್ಭುತ ಚೈತನ್ಯದ ವ್ಯಕ್ತಿ. ಏನಾದರೂ ಕೆಲಸವಿದೆ ಎಂದರೆ ಕೂಡಲೆ, 'ನಡಿ ಮಾಡೇ ಬಿಡೋಣ' ಎಂದು ಎದ್ದು ಹೊರಟೇಬಿಡುತ್ತಿದ್ದ. ನಾವು ಶಿರಸಿಯ ಆಸ್ಪತ್ರೆಯ ಮನೆಯಲ್ಲಿದ್ದಾಗ ನಾಲ್ಕು ದಿನ ರಜದಲ್ಲಿ ಬಂದಾಗ ಈ ಐ,ಆರ್.ಎಸ್.ಆಫೀಸರನೇ ದಿನ ಬೆಳಗಾದೊಡನೆ ಹಿತ್ತಲ ಬಾವಿಯಿಂದ ನೀರು ಸೇದಿಕೊಡುತ್ತಿದ್ದ. ಅವನು ಬರುತ್ತಾನೆ ಎಂದು ಗೊತ್ತಾದೊಡನೆ ಹಲವು ದಿನ ಮೊದಲೇ ನಾವು 'ಭಾಲಚಂದ್ರ ದಾದಾ ಬರುತ್ತಾನೆ.' ಎಂದು ಉತ್ಸಾಹದಿಂದ ಬೀಗುತ್ತಾ ಓಡಾಡುತ್ತಿದ್ದೆವು. 'ಗಂಡನಿದ್ದರೆ ಭಾಲಚಂದ್ರ ದಾದಾನ ತರಹ ಇರಬೇಕು' ಎಂದು ಲೀನಾ ಸತತ ಘೋಷಿಸಿರುತ್ತಿದ್ದಳು."[೨೯]

ಗಿರೀಶ್ ಕಾರ್ನಾಡರ ತಾಯಿ ವಿಧವೆಯಾಗಿದ್ದು, ಪುನರ್ವಿವಾಹವಾದಾಗ ಮಲಅಣ್ಣನಾದ ಭಾಲಚಂದ್ರವನ ಬದುಕು ಹಸನಾಗಬೇಕೆಂಬ ಉದ್ದೇಶಕ್ಕೆ ಅವರ ತಂದೆ ಭಾಲಚಂದ್ರ ಆತ್ಮಾರಾಮ ಗೋಕರ್ಣ ಎಂಬ ಹೆಸರನ್ನು ಭಾಲಚಂದ್ರ ರಘುನಾಥ ಕಾರ್ನಾಡ ಎಂದು ಬದಲಿಸಿದ್ದರು. ಇಲ್ಲಿ ಒಂದೇ ತಾಯಿಯ ಬೇರೆ ತಂದೆಯ ಮಕ್ಕಳು ಚೆನ್ನಾಗಿ ಹೊಂದಿಕೊಂಡಿದ್ದರು ಎನ್ನುವುದು

ವಿಶೇಷವಾಗಿದೆ. ಭಾಲಚಂದ್ರ ದಾದಾ ಬರ್ತಾನೆ ಎಂದು ಅವನ ಬರುವಿಕೆಗೆ ಕಾಯುವುದು ಅವರೆಲ್ಲರ ಸಂಬಂಧ ಎಷ್ಟು ಗಟ್ಟಿಯಾಗಿತ್ತೆಂದು ಹೇಳುತ್ತದೆ. ಗಂಡನಿದ್ದರೆ ಭಾಲಚಂದ್ರದಾದಾನ ಹಾಗೆ ಇರಬೇಕೆಂಬ ಲೀನಾಳ ಮಾತು ಎಲ್ಲರ ಜೊತೆ ಚೆನ್ನಾಗಿ ಬೆರೆಯುತ್ತಿದ್ದ. ಅಲ್ಲದೇ ಎಲ್ಲರೂ ಅವನನ್ನು ಇಷ್ಟಪಡುತ್ತಿದ್ದರು ಎಂಬ ಸಂಗತಿಯನ್ನು ಹೇಳುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷರು ಪುರಷರ ಪರವಾಗಿರುವುದಲ್ಲದೆ ಅವರ ಬೆಳವಣಿಗೆಗೆ ಒತ್ತಾಸೆಯಾಗಿರುವುದು ಕಂಡುಬರುತ್ತದೆ. ಅಬ್ದುಲ್ ಕಲಾಮ್ ಇದಕ್ಕೆ ಉತ್ತಮ ಉದಾಹರಣೆ. ಮನುಷ್ಯನ ಸೋಗಲಾಡಿತನ, ಮುಖವಾಡ, ಲಿಂಗಜಾತಿಗಳನ್ನು ಮೀರಿದ್ದಾಗಿದೆ. ಅದೇ ರೀತಿ ಸಿ.ಎಸ್.ರಾಮಚಂದ್ರನ್ ಅವರು ಆಧುನಿಕ ಮನುಷ್ಯನ ಮನಸ್ಥಿತಿ ಅಹಂಕಾರ, ಕೀಳರಿಮೆ ಸೇರಿದಾಗ ಎಂಥ ವ್ಯಕ್ತಿತ್ವ ಉಂಟಾಗುತ್ತದೆ ಎನ್ನುವುದನ್ನು ಹೇಳುತ್ತಾರೆ. ಅಂದರೆ ಈ ಅಹಂಕಾರ ಆ ಕೀಳರಿಮೆ ಕೂಡ ಲಿಂಗ ಜಾತಿಗಳನ್ನು ಮೀರಿದ್ದಾಗಿದೆ.

ಎಂ.ಜಿ.ಗೋವಿಂದರಾಜು ಅವರು ಕೆಳಜಾತಿಯ ಪುರುಷರು ಮೇಲ್ಜಾತಿಯ ಪುರುಷರಮೇಲೆ ಮಾಡಿದ ಆರೋಪ ತಮಗೆ ಸಿಕ್ಕ ಅವಕಾಶ, ಅನುಕೂಲಗಳನ್ನು ದುರಪಯೋಗಪಡಿಸಿಕೊಂಡಿರುವುದು ಪ್ರಾರಂಭದಲ್ಲಿ ಮೇಲ್ಜಾತಿಯವರು ಕೆಳಜಾತಿಯವರನ್ನು ಶೋಷಣೆ ಮಾಡಿದ್ದು ಕಂಡುಬಂದರೆ ಕ್ರಮೇಣ ಕೆಳಜಾತಿಯ ಪುರುಷರು ಮೇಲ್ಜಾತಿಯ ಪುರುಷರ ಶೋಷಣೆ ಮಾಡಿದ್ದು ಕಂಡುಬರುತ್ತದೆ. ಎಂ.ಬಿ.ಮರಕಿಣಿಯವರು ಕೆಲವು ಅವಕಾಶಗಳಿಂದ ವಂಚಿತರಾದ ಕೆಳಜಾತಿಯವರನ್ನು ಮೇಲೆತ್ತುವ ಕೆಲಸವನ್ನು ಮೇಲ್ಜಾತಿಯ ಪುರುಷರು ಮಾಡಿದ್ದನ್ನು ಹೇಳುತ್ತಾರೆ.

ಮೇಲ್ಜಾತಿಯ ಪುರುಷರು ಕೆಳಜಾತಿಯವರನ್ನು ಮೇಲೆತ್ತುವ ಪ್ರಯತ್ನ ಮಾಡಿಯೂ ಕೆಳಜಾತಿಯವರು ಮೇಲ್ಜಾತಿಯವರ ಮೇಲೆ ಮಾಡುವ ಆರೋಪವನ್ನು ನಕಾರಾತ್ಮಕ ಧೋರಣೆ ಎಂದು ಗುರುತಿಸಬಹುದು.

೫.೫. ಮಹಿಳಾ ಆತ್ಮಕಥೆಗಳಲ್ಲಿ ಮಹಿಳಾ ನಿರೂಪಣೆ

ಮಹಿಳೆಯರ ಆತ್ಮಕಥೆಯಲ್ಲಿ ಮಹಿಳೆಯರು ಯಾವ ರೀತಿ ಚಿತ್ರಿತವಾಗಿದ್ದಾರೆ. ಪುರುಷರು ಚಿತ್ರಿಸಿರುವ ಮಹಿಳೆಯ ನಿರೂಪಣೆಗಿಂತ ಯಾವ ರೀತಿ ಭಿನ್ನವಾಗಿದೆ. ಪುರುಷರು ಬಳಸುವ ಭಾಷೆಯನ್ನೇ ಬಳಸಲಾಗಿದೆಯೇ? ಪುರುಷರು ಚಿತ್ರಿಸಿರುವ ಮಹಿಳೆಗಿಂತ ಯಾವ ರೀತಿಯಲ್ಲಿ ವ್ಯತ್ಯಾಸಗಳಿವೆ? ಎಂಬುದನ್ನೇ ಮಹಿಳಾ ಆತ್ಮಕಥೆಗಳಲ್ಲಿ ಮಹಿಳಾ ನಿರೂಪಣೆ ಎಂದು ಬಳಸಲಾಗಿದೆ.

ಮೇಲ್ವರ್ಗದ ಹೆಣ್ಣಾಗಿ ಪ್ರೊತಿಮಾ ಬೇಡಿಯ 'ಟೈಮ್‌ಪಾಸ್' ಅಲ್ಲಿ ಹೆಣ್ಣನ್ನು ಕುಟುಂಬದಲ್ಲಿ ಯಾವ ರೀತಿ ಬಳಕೆ ಮಾಡಿಕೊಳ್ಳಲಾಗುತ್ತಿತ್ತು ಎನ್ನುವುದನ್ನು ಹೀಗೆ ಹೇಳುತ್ತಾರೆ, "ಸ್ವಲ್ಪ ಕುಡಿ,

ಸ್ವಲ್ಪ ನಗು, ಪರವಾಗಿಲ್ಲ.... ಅಪ್ಪ ಅನುಮತಿ ಕೊಟ್ಟಿದ್ದ. ಅಮ್ಮನ ಕಣ್ಣುಗಳಲ್ಲಿ ತುಂಟ ವಾಂಛೆಗಳು ಜಾಗೃತವಾಗಿ ಬಿಡುತ್ತಿದ್ದವು. ಆಕೆಯ ಹೆಸರು ರೇಬಾಗುಪ್ತ. ಅಪ್ಪನ ಗೆಳೆಯರಿಗೆ ಆಕೆ ತುಂಬಾ ಇಷ್ಟವಾಗುತ್ತಿದ್ದಳು. ಅವರೊಂದಿಗೆ ಅಮ್ಮ ಕಣ್ಣಲ್ಲೇ ಫ್ಲರ್ಟ್ ಮಾಡುತ್ತಿದ್ದುದು ನನಗೆ ಅರ್ಥವಾಗುತ್ತಿತ್ತು. ಆದರೆ ಚಿಕ್ಕವಳು ನಾನು. ನಂಗೆ ಅದೆಲ್ಲ ಅಸಹ್ಯವೆನಿಸುತ್ತಿತ್ತು. ಆ ದಿನಗಳಲ್ಲಿ ಕೊಂಚ ನಕ್ಕರೆ, ಕೊಂಚ ಕುಡಿದರೆ ತನ್ನ ಗೆಳೆಯರೊಂದಿಗೆ ತನ್ನ ಸಹೋದ್ಯೋಗಿಗಳೊಂದಿಗೆ ಮನಬಿಚ್ಚಿ ಮಾತನಾಡಿದರೆ, ವ್ಯಾಪಾರ ವ್ಯವಹಾರಗಳಲ್ಲಿ ತನಗೂ ಸಹಾಯವಾಗುತ್ತೆ ಅಂತ ಅಪ್ಪನಿಗೆ ಗೊತ್ತಿತ್ತು. ಆಕೆಯ ನಗೆಯೇನಿದ್ದರೂ ತನ್ನ ಉಕ್ಕು ಮತ್ತು ಕಬ್ಬಿಣದ ಕಂಪನಿಯಲ್ಲಿ ತಾನು ಸಾಧಿಸಬಹುದಾದ ಔನ್ನತ್ಯಕ್ಕೆ ಮಾತ್ರ ಸಹಾಯಕವಾಗಿರಬೇಕು ಅಂದುಕೊಳ್ಳುತ್ತಿದ್ದ. ಅಮ್ಮನ ನಸುಗಪ್ಪು ಬಂಗಾಲಿ ಸೌಂದರ್ಯ ತನ್ನ ಗೆಳೆಯರಲ್ಲಿ ಅದೆಂಥ ಕೋಲಾಹಲ ಉಂಟು ಮಾಡುತ್ತಿದೆಯೆಂಬುದು ಅಪ್ಪನಿಗೆ ಚೆನ್ನಾಗಿ ಗೊತ್ತಿತ್ತು. ಗೊತ್ತಿದ್ದುದರಿಂದಲೇ ಅಪ್ಪ ಲಕ್ಷ್ಮಣ ರೇಖೆ ಹಾಕಿದ್ದ. ಈ ರೇಖೆ ಏಕೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಆಗಾಗ ಸೋಲುತ್ತಿದ್ದಳು. ಕೆಲವೊಮ್ಮೆ ಪಾಪ ಅವಳಿಗೆ ಮರೆತುಹೋಗುತ್ತಿತ್ತು."[೩೦]

ಹೆಣ್ಣಿನ ಹುಟ್ಟಿನ ಬಗ್ಗೆ ಪ್ರೊತಿಮಾ ಹೀಗೆ ಹೇಳುತ್ತಾರೆ–"ಅಮ್ಮ ಎರಡನೇ ಮಗುವನ್ನು ಹೆತ್ತಿದ್ದಳು. ಸುದ್ದಿ ತಿಳಿಯುತ್ತಿದ್ದಂತೆಯೇ ಗುಪ್ತಾಗಳು ಸಿಡಿಲು ಸುರಿದವರಂತೆ ನಿಂತುಬಿಟ್ಟರು. ಎರಡನೆಯದೂ ಹೆಣ್ಣುಮಗು! ಅವತ್ತು ಆಕಾಶ ಕಳಚಿಬಿದ್ದಿತ್ತು. ಅಪ್ಪನ ಬಾಯಿಂದ ಕೈಯಿಟ್ಟು ತೆಗೆದಂತೆ ನಾನು ಹುಟ್ಟಿಬಿಟ್ಟಿದ್ದೆ. ಇಡೀ ಮನೆತನಕ್ಕೇ ಅದೊಂದು ದೊಡ್ಡ ಆಘಾತ. ಮೊದಲ ಮಗುವಾಗಿ ಹೆಣ್ಣು ಹುಟ್ಟಿದರೆ ತೀರ ಕಷ್ಟವಿಲ್ಲ. ಮೊದಲ ಮಗುವೆಂಬ ಸಡಗರಕ್ಕೆ ಬಿದ್ದು ಎಲ್ಲರೂ ಎತ್ತಿಕೊಳ್ಳುತ್ತಾರೆ. ಆದರೆ ಎರಡನೇ ಹೆಣ್ಣುಮಗುವಾಗಿ ಹುಟ್ಟುವುದು ಭಯಂಕರ. ಅವರೆಲ್ಲರ ಮುಖಗಳಲ್ಲೂ ನನ್ನೆಡೆಗೆ ಅಮ್ಮ ರೇಬಾಳೆಡೆಗೆ ಒಂದು ತಿರಸ್ಕಾರವಿತ್ತು. ಬರೀ ಹೆಣ್ಣು ಹಡೆಯುತ್ತದೆ ಶನಿ ಎಂದು ಮೂದಲಿಸುತ್ತಿದ್ದರು. ಅದಕ್ಕೆ ಒಂದೇ ವರ್ಷದಲ್ಲಿ ಉತ್ತರ ಕೊಟ್ಟುಬಿಟ್ಟಿದ್ದಳು. ನನ್ನ ಬೆನ್ನಲ್ಲೇ ಬಿಪಿನ್ ಹುಟ್ಟಿಬಿಟ್ಟಿದ್ದ. ಅದಾದ ಎರಡು ವರ್ಷಕ್ಕೆ ಕೊನೆಯವಳಾಗಿ ಅಷಿತಾ ಹುಟ್ಟಿಬಿಟ್ಟಿದ್ದಳು. ನಾಲ್ಕು ಮಕ್ಕಳ ತುಂಬು ಸಂಸಾರವಾಗಿಹೋಯ್ತು. ಹೆಣ್ಣಾಗಿ ಹೆಣ್ಣಿಂದ ಹೆಣ್ಣಿಗೋಸ್ಕರ ಹೆಣ್ಣೇ ಪಡುವ ಯಾತನೆಯನ್ನು ಹೇಳುತ್ತಾರೆ. ಈ ಯಾತನೆ ಅವಳ ಸ್ವಂತದ್ದೇನೊ ಎನ್ನುವ ಭ್ರಮೆ ಹುಟ್ಟುವಷ್ಟರ ಮಟ್ಟಿಗೆ ಪುರುಷಪ್ರಧಾನ ಮನಸ್ಸು ಕೆಲಸ ಮಾಡಿದೆ.

ಇಬ್ಬರೂ ಹೆಣ್ಣುಗಳ ಮಧ್ಯದ ಪರಿಸ್ಥಿತಿಯನ್ನ ಈ ರೀತಿಯಾಗಿ ಹೇಳುತ್ತಾರೆ, "ಮೂವರು ಹೆಣ್ಣುಮಕ್ಕಳ ಮಧ್ಯೆ ಒಂದು ಗಂಡು ಹೆತ್ತು ಅಮ್ಮನೇನೊ ಬಚಾವಾಗಿಬಿಟ್ಟಿದ್ದಳು. ಆದರೆ ನಾನು ಬಾಲ್ಯದುದ್ದಕ್ಕೂ ಒಬ್ಬೊಂಟಿ ಮಗುವಾಗಿ ಹೋದೆ. ಒಂದು ತಿರಸ್ಕಾರವನ್ನು ಹಣೆಯಮೇಲಿನ

ತಿಲಕದಂತೆ ಹೊತ್ತುಕೊಂಡೇ ಬೆಳೆದೆ. ಮೊದಲ ಮಗುವಾದ್ದರಿಂದ ಮೌನಿಕಾಳನ್ನು ಎಲ್ಲರೂ ಪ್ರೀತಿಸುತ್ತಿದ್ದರು. ಗಂಡು ಮಗುವಾದ್ದರಿಂದ ಬಿಪಿನ್‌ಗೆ ಇನ್ನಿಲ್ಲದ ಮುದ್ದು. ಕೊನೆಯವಳಾದ್ದರಿಂದ ಅಪಿತಾಳಿಗೆ ಸದಾ ಪ್ರೀತಿ. ಎರಡನೇ ಹೆಣ್ಣು ಮಗುವಾದ ತಪ್ಪಿಗೆ ಈ ಪ್ರೊತಿಮಾ ಯಾರಿಗೂ ಬೇಡ. ನನ್ನೊಂದಿಗೆ ಸದಾ ನನ್ನ ಒಬ್ಬೊಂಟಿತನ ಇರುತ್ತಿತ್ತು. ಇದು ಹೆಣ್ಣಾದ ಮಾತ್ರಕ್ಕೆ ಅನುಭವಿಸಬಹುದಾದ ಯಾತನೆಯನ್ನು ಹೇಳುತ್ತದೆ. ಈ ತಿರಸ್ಕಾರ ಮತ್ತು ಜೀವನದ ಕೆಲವು ಅವಮಾನಗಳು ಜೀವನದುದ್ದಕ್ಕೂ ನಾನು ಯಾರನ್ನೂ ವೈಯಕ್ತಿಕವಾಗಿ ದ್ವೇಷಿಸುವಂಥ ತಾಕತ್ತನ್ನೇ ಕಳೆದುಕೊಂಡುಬಿಟ್ಟೆ. ಅವಮಾನಗಳು ದ್ವೇಷವನ್ನು, ದ್ವೇಷಿಸುವ ತಾಕತ್ತನ್ನು ತೊಡೆದುಹಾಕಿಬಿಡುತ್ತವಲ್ಲ ಎನ್ನುವ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸುತ್ತಾರೆ.

ಇನ್ನೊಬ್ಬ ಹೆಣ್ಣಿನ ಅನುಭವವನ್ನ ಈ ರೀತಿ ದಾಖಲಿಸುತ್ತಾರೆ, "ನನ್ನ ಪಕ್ಕದ ಮನೆಯಲ್ಲಿ ಇದ್ದ ಸುಪ್ರಸಿದ್ಧ ಸಂಗೀತ ನಿರ್ದೇಶಕನೊಬ್ಬ ಪ್ರತಿ ರಾತ್ರಿ ತನ್ನ ಹೆಂಡತಿಯನ್ನು ಬಡಿಯುತ್ತಿದ್ದ. ಆಕೆ ಮೆಟ್ಟಿಲುಗಳ ಮೇಲೆ ಕುಳಿತುಕೊಂಡು ದುಃಖಿಸಿ ಅಳುವುದನ್ನು ತುಂಬ ಸಲ ನೋಡಿದ್ದೆ ಹಾಗೆ ಗಂಡಂದಿರ ಕೈಲಿ ಒದೆ ತಿಂದು ಬಂದ ಎಷ್ಟೋ ಜನ ಅಮ್ಮನ ಗೆಳತಿಯರು ಅಳುವುದನ್ನು ನೋಡಿದ್ದೆ. ಹೆಚ್ಚಿನ ದಾಂಪತ್ಯಗಳಲ್ಲಿ ಮೂರನೇ ಹೆಂಗಸಿರುತ್ತಿದ್ದಳು. ಅಲ್ಲಿ ಮತ್ತ್ಯಾವಳೊಂದಿಗೋ ಆತ ಖುಷಿಯಾಗಿಯೇ ಇದ್ದು ಬರುತ್ತಿದ್ದನಲ್ಲ. ಮತ್ತೆ ಮನೆಗೆ ಬಂದು ಹೆಂಡತಿಯನ್ನು ಹಿಡಿದುಕೊಂಡು ಹೊಡೆಯುವುದೇಕೆ. ಅವಳೊಂದಿಗೂ ಅಷ್ಟೇ ಚಂದಾಗಿ ಸಂತೋಷವಾಗಿ ಇರಲು ಗಂಡಸಿಗೆ ಸಾಧ್ಯವಾಗುವುದಿಲ್ಲವೇ ಅಂದುಕೊಳ್ಳುತ್ತಿದ್ದೆ. ಅದ್ಸರಿ, ಈ ಹೆಂಗಸರಾದರು ಒದೆ ತಿಂದು ಬಿದ್ದಿರುವ ಬದಲು ಬೇರೊಬ್ಬ ಗಂಡಸನ್ನು ಹುಡುಕಿಕೊಳ್ಳಬಾರದೇ? ಯಾವಾಗಲೂ ಒಂದೇ ಕಾರಣ ಹೇಳುತ್ತಾರೆ 'ಮಕ್ಕಳಿಗೋಸ್ಕರ ಸಹಿಸಿಕೊಂಡಿದ್ದೀನಿ ಕಣ್ರೀ!' ನಾನ್ಸೆನ್ಸ್ ಅವರನ್ನು ನಾನು ಪ್ರತಿ ಮಧಾಹ್ನ ನೋಡಿದ್ದೇನೆ. ಇಸ್ಪೀಟಾಡುತ್ತಾರೆ. ಸೂರು ಹಾರಿಹೋಗುವಂತೆ ಗಹಗಹಿಸಿ ನಗುತ್ತಾರೆ. ಗಾಸಿಪ್ ಮಾಡುತ್ತಾರೆ. ಯಾವನೋ ಸಿನಿಮಾ ನಟ ಯಾರೂ ಇಲ್ಲದಿರುವಾಗ ಒಬ್ಬನೇ ಕೈಗೆ ಸಿಕ್ಕಿದರೆ ಅವನೊಂದಿಗೆ ಹೇಗೆಲ್ಲಾ ಸುಖಿಸಬಹುದು ಗೊತ್ತಾ ಎಂಬ ಧಾಟಿಯಲ್ಲಿ ಮಾತನಾಡುತ್ತಾರೆ. ಅದೆಲ್ಲ ಮಾತು, ತಮ್ಮ ಗಂಡನ ಬದುಕಿಗೆ ಮೂರನೆಯವಳು ಕಾಲಿಟ್ಟಿದ್ದಾಳೆ ಎಂದು ಗೊತ್ತಾಗುವ ತನಕ ಮಾತ್ರ. ಇನ್ನೊಂದು ಹೆಂಗಸಿನ ನೆರಳು ಬಿತ್ತೋ ಇವರ ಆಕಾಶ ಹರಕೊಂಡು ಬೀಳುತ್ತದೆ, ನೆಲ ನಡುಗಿಹೋಗುತ್ತದೆ, ಇಷ್ಟು ದೊಡ್ಡ ಪ್ರಪಂಚದಲ್ಲಿ ಮೂರು ಹೊತ್ತಿನ ಅನ್ನ ತಿಂದು ಬದುಕುವುದೇ ಸಾಧ್ಯವಿಲ್ಲ ಎನ್ನುವಂಥಹ ನರ್ವಸ್‌ನೆಸ್ ಅವರನ್ನು ಆವರಿಸಿಕೊಂಡುಬಿಡುತ್ತದೆ. ಇದೇ ಹೆಂಗಸರಲ್ಲವೇ ಜಗಳಕ್ಕೆ ಬಿದ್ದಾಗ ಪರಸ್ಪರರನ್ನು ಹೀನಾಯವಾಗಿ ಬೈದುಕೊಳ್ಳೋದು. ಇವರೇ ಅಲ್ಲವಾ ಮನೆಗೆಲಸದವರನ್ನು

ರಾಕ್ಷಸಿಯರಂತೆ ಬೈದು ಕಾಡುವುದು. ಇವರೇ ಅಲ್ವ ಪಕ್ಕದ ಮನೆಯವರೊಂದಿಗೆ ಶರಂಪರ ಜಗಳಕ್ಕಿಳಿಯುವುದು. ತರಕಾರಿಯವನೊಂದಿಗೆ ಚೌಕಾಸಿಗಿಳಿದು ಜಗಳ ಕಾಯೋದು? ಇವರೇ ಅಲ್ಲವಾ ಸಾವಿರಾರು ಜನರ ಜಂಗುಳಿಯಲ್ಲಿ ಹೇಗೋ ದಾರಿಮಾಡಿಕೊಂಡು ಮಾರ್ಕೆಟ್ಟಿನೊಳಕ್ಕೆ ಹೋಗಿ ತರಕಾರಿ ತರುವುದು, ದೇವರ ಗುಡಿಯ ಮೊದಲನೇ ಸಾಲು ತಲುಪಿ ದೇವರ ಮುಂದೆ ನಿಂತು ಅರ್ಧ ನಿಮಿಷದ ಮಟ್ಟಿಗೆ ಕಪಕಪಾಳಕ್ಕೆ ಬಡಿದುಕೊಂಡು ತನ್ಮಯರಾಗೋದು? ಇಷ್ಟೊಂದು ಛಾತಿಯಿರುವ ಹೆಂಗಸರು ಗಂಡಸರನ್ನು ಧಿಕ್ಕರಿಸಿ ತಮ್ಮ ಬಾಳು ತಾವು ಬಾಳಲಾಗದಷ್ಟು ಬಲಹೀನರಾಗಿಬಿಡುತ್ತಾರೇಕೆ."[೩೧]

ಶ್ರೀಮಂತ ಕುಟುಂಬಗಳಲಿ ವ್ಯವಹಾರಕ್ಕಾಗಿ ಮನೆಯ ಹೆಣ್ಣುಮಕ್ಕಳನ್ನು ಬಳಸಿಕೊಳ್ಳುವುದು, ಅಲ್ಲದೇ ಇಲ್ಲಿ ಅವಳ ಸ್ವಂತಿಕೆ ಏನೂ ಬಳಕೆಯಾಗಬಾರದು ಎಂಬಂತಹ ಭಾವ ವ್ಯಕ್ತವಾಗಿದೆ. ಕುಟುಂಬದಲ್ಲಿ ಮೊದಲನೆಯ ಹೆಣ್ಣು ಮಗುವಾದಾಗ ಮನೆಯ ವಾತಾವರಣಕ್ಕೂ ಎರಡನೆಯ ಹೆಣ್ಣು ಮಗುವಾದಾಗ ಮನೆಯ ವಾತಾವರಣದ ಬಿಗು, ಬರೀ ಹುಟ್ಟಿರುವ ಮಗುವಿಗಲ್ಲದೇ ಹಡೆದ ತಾಯಿಗೂ ತಿರಸ್ಕಾರವೇ. ಆದರೆ ಆಶ್ಚರ್ಯದ ಸಂಗತಿಯೆಂದರೆ ಹುಟ್ಟಿಗೆ ಕಾರಣನಾದ ಗಂಡಸಿನ ಬಗ್ಗೆ ಯಾರೂ ಚಕಾರ ಎತ್ತುವುದಿಲ್ಲ. ಮಹಿಳೆಯ ಅನುಭವ ಪುರುಷರ ಅನುಭವಕ್ಕಿಂತ ಭಿನ್ನ ಮತ್ತು ವಿಶಿಷ್ಟವಾದದ್ದು ಹಲವು ಪುರುಷರ ಅನುಭವಗಳು ಮಹಿಳೆಯರದ್ದಾಗುವ ಸಾಧ್ಯತೆಯಿದ್ದರೂ ಮಹಿಳೆಯ ಕೆಲವು ಅನುಭವಗಳು ಪುರಷರದ್ದಾಗಲು ಸಾಧ್ಯವೇ ಇಲ್ಲ. ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಆತ್ಮವಿಶ್ವಾಸವೊಂದೇ ಅವಳಿಗಿರುವ ಮಾರ್ಗ ಅದರಿಂದಾಗಿ ಎಂಥಹ ವೈರುದ್ಯಗಳ ಮಧ್ಯೆಯೂ ವಿಶಿಷ್ಟವಾದ ನೆಲೆಯನ್ನು ಕಂಡುಕೊಳ್ಳುವುದು ಆಕೆಗೆ ಸಾಧ್ಯವಾಗಿದೆ.

ಸುಶೀಲ ರಾಯ್ ರವರು, "ನನ್ನ ಬಣ್ಣ ಕಪ್ಪಾಗಿತ್ತು ಹಳ್ಳಿಯಲ್ಲಾಗಲಿ ನಗರದಲ್ಲಾಗಲಿ ಸೌಂದರ್ಯವನ್ನು ಬಣ್ಣದಿಂದಲೇ ಅಳೆಯಲಾಗುತ್ತದೆ ತಾನೆ? ನಾನು ಹುಟ್ಟುತ್ತಿರುವಂತೆಯೇ ನನ್ನ ವಿವಾಹ ಹೇಗೆ ಆಗುತ್ತದೋ ಎನ್ನುವ ಚಿಂತೆ ನನ್ನ ಅಪ್ಪ ಅವ್ವರನ್ನು ಕಾಡುತ್ತಿತ್ತು" ಎನ್ನುವಲ್ಲಿ ಕಪ್ಪು ಬಣ್ಣ ಮತ್ತು ಬಂಜೆ ಎನ್ನುವ ಹೀಯಾಳಿಕೆ ಜಾತಿ ವರ್ಗಗಳನ್ನು ಮೀರಿಯೂ ಕೇವಲ ಹೆಣ್ಣು ಮಾತ್ರ ಅನುಭವಿಸುವ ನೋವನ್ನು ಹೇಳುತ್ತದೆ.

ನವಲ್ ಎಲ್ ಸಾಧವಿಯವರು ಅಮಾಯಕ ಹೆಣ್ಣುಮಗಳು ಗಂಡಸರ ಕಾಮದಾಹಕ್ಕೆ ಬಲಿಯಾಗಿ ವೇಶ್ಯೆಯಾದಳು. ಕಷ್ಟನಷ್ಟಗಳ ಮಧ್ಯೆ ಒಬ್ಬ ಕ್ರಾಂತಿಕಾರಿ ಅವಳನ್ನು ಪ್ರೀತಿಸುವಂತೆ ನಾಟಕವಾಡಿ ಇನ್ನೊಬ್ಬಳನ್ನು ಮದುವೆಯಾಗಿದ್ದಕ್ಕೆ ದುಃಖದಿಂದ ಎಲ್ಲವನ್ನೂ ತ್ಯಜಿಸಿ ಮತ್ತೊಮ್ಮೆ ವೇಶ್ಯಾಜೀವನಕ್ಕೆ ಹಿಂದಿರುಗುತ್ತಾಳೆ. ಈ ಬಗ್ಗೆ ಲೇಖಕಿಯ ಪ್ರತಿಕ್ರಿಯೆ ಹೀಗಿದೆ, " ವಾಸ್ತವದಲ್ಲಿ

ಕ್ರಾಂತಿಕಾರಿ ಪುರುಷರು ಇತರರಿಗಿಂತ ಬೇರೆಯಲ್ಲ. ಉಳಿದವರು ಹಣದಿಂದ ಕೊಂಡುಕೊಳ್ಳುವುದನ್ನು ಇವರು ತತ್ವಸಿದ್ಧಾಂತಗಳಿಗೆ ಪ್ರತಿಫಲವಾಗಿ ತಮ್ಮ ಚಾಣಾಕ್ಷತೆಯಿಂದ ಪಡೆದುಕೊಳ್ಳುತ್ತಾರೆ. ಕ್ರಾಂತಿಯೆಂಬುದು ನಮಗೆ ಲೈಂಗಿಕ ಕ್ರಿಯೆ ಇದ್ದಂತೆ ದುರ್ಬಳಕೆಗೊಂದಾದರೆ ಮಾರಾಟ ಮಾಡಲು ಇನ್ನೊಂದು."[೨೧]

ಇಲ್ಲಿ ಅನಾಥ ಮಹಿಳೆಯೊಬ್ಬಳು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ವಿವಿಧ ಕ್ರೌರ್ಯಗಳಿಗೆ ತುತ್ತಾಗಿ ಎಂಥೆಂತಹ ಯಾತನೆಯನ್ನು ಅನುಭವಿಸಿದಳು ಎಂಬುದು ಕೇವಲ ಮಹಿಳೆಯ ಅನುಭವ ಮಾತ್ರವೇ ಹೊರತು ಪುರುಷರ ಅನುಭವವಾಗುವ ಸಾಧ್ಯತೆಯಿಲ್ಲ. ಅವರೇ ಹೇಳುವ ಈ ಮಾತು 'ನಾನು ನನ್ನದಲ್ಲದ ಬದುಕನ್ನು ನನ್ನದಲ್ಲದ ದೇಹದಲ್ಲಿ ಬದುಕಿದ್ದೆ' ಅದನ್ನು ಇನ್ನಷ್ಟು ಸ್ಪಷ್ಟ ಪಡಿಸುತ್ತದೆ.

ಎಸ್.ವಿ.ಪ್ರಭಾವತಿಯವರು ಮಹಿಳೆ ಅನುಭವಿಸಿದ ನೋವಿಗೆ ಒಂದು ಪರಂಪರೆಯನ್ನು ಹೇಳುತ್ತಾ "ಅಂದಿನ ದ್ರೌಪದಿ ಅನುಭವಿಸಿದ್ದನ್ನು ಈ ಹಿಂದೆಯೂ ಇನ್ನು ಮುಂದೆಯೂ ಪ್ರತಿಯೊಬ್ಬ ಮಹಿಳೆಯು ಅನುಭವಿಸುತ್ತಾಳೆ. ಆದರೆ ಅವಳಿಗೆ ಬಾಯಿಲ್ಲ. ಹುಟ್ಟುತ್ತ ಹುಟ್ಟುತ್ತಲೇ ಬೆಳೆಯುತ್ತ ಬೆಳೆಯುತ್ತಲೇ ಒಂದು ಹೆಣ್ಣು ಮಗುವನ್ನು ಸಮಾಜ ಮತ್ತು ಕುಟುಂಬ ವ್ಯವಸ್ಥೆ ಹೀಗೆಯೇ ಯೋಚಿಸು, ಹೀಗೆಯೇ ವರ್ತಿಸು, ಎಂದು ನಿರ್ಬಂಧಿಸಿರುತ್ತದೆ. ಆ ಮೂಲಕ ಅವಳಿಗೆ ಸ್ವಾತಂತ್ರ್ಯ ಅಭಿವ್ಯಕ್ತಿಯೇ ಇಲ್ಲವಾಗಿ ಅವಳು ಲಕ್ವ ಹೊಡೆದವಳಾಗಿರುತ್ತಾರೆ. ಆ ಲಕ್ವ ಹೊಡೆದ ಸ್ಥಿತಿಯೇ ಅವಳ ಸಹಜ ಸ್ಥಿತಿಯಾಗುತ್ತದೆ. ಒಂದು ಗಂಡಿಗೆ ಈ ನಿರ್ಬಂಧವಿಲ್ಲ. ಅವನು ಎಲ್ಲದಕ್ಕೂ ಸ್ವತಂತ್ರ"[೨೨] ಇದನ್ನೇ ಮಾಧವಿ ದೇಸಾಯಿ 'ಕುಣಿಯೇ ಘುಮಾ' ಎನ್ನುತ್ತಾಳೆ. 'ಕುಣಿಯೇ ಘುಮಾ' "ಇದೊಂದು ಮಹಾರಾಷ್ಟ್ರದ ಪಾರಂಪರಿಕ ನೃತ್ಯ. ಈ ಆಟದಲ್ಲಿ ಸುಮಂಗಲೆಯರೆಲ್ಲ ಹೊಸ ಬಟ್ಟೆ ಆಭರಣ ಧರಿಸಿ ಗೋಲಾಕಾರವಾಗಿ ನಿಲ್ಲುತ್ತಾರೆ. ಓರ್ವ ಸುಮಂಗಲೆಯನ್ನು ನಡುವೆ ನಿಲ್ಲಿಸಲಾಗುತ್ತದೆ ಅವಳ ಹೆಸರೇ ಘುಮಾ. ವೃತ್ತಾಕಾರವಾಗಿ ನಿಂತ ಹೆಂಗಸರು ತಾಳ ಹಾಕುತ್ತ ಘುಮಾಳನ್ನು ಕುಣಿಯುವಂತೆ ಪ್ರೇರೇಪಿಸುತ್ತಾರೆ. ಆದರೆ ಘುಮಾ ಹಲವು ಕಾರಣ ನೀಡಿ ಕುಣಿಯುವುದನ್ನು ತಪ್ಪಿಸುತ್ತಾಳೆ. ಆ ಗೋಲಾಕಾರವಾಗಿ ನಿಂತ ಸುಮಂಗಲೆಯರು ರೂಢಿ, ಪರಂಪರೆ, ಸಂಸ್ಕೃತಿ, ರೀತಿ-ನೀತಿ, ಶೀಲ, ಮನೆಯ ಹೊಸ್ತಿಲು, ಮರ್ಯಾದೆಯ ಸಂಕೇತ. ನಡುವೆ ಸಿಲುಕಿದ ಘುಮಾ ಈ ಸಂಕೋಲೆ ಮುರಿದು ಹೊರಬರುವುದು ಸಾಧ್ಯವಿಲ್ಲ. ಇವತ್ತಿಗೂ ಇದು ಹೆಣ್ಣನ್ನು ಎಷ್ಟು ಬಿಗಿಯಾಗಿ ಬಂಧಿಸಿದೆಯೆಂದರೆ ಆಕೆ ನಿರಾತಂಕವಾಗಿ ಉಸಿರಾಡುವುದೂ ಕಷ್ಟ. ಆದರೆ ಮೂಲತಃ ಭಾರತೀಯ ನಾರಿ ಹಾಗಿಲ್ಲ. ಆಕೆ ಮುಕ್ತವಾಗಿದ್ದಾಳೆ. ಆಕೆ ಪ್ರಕೃತಿ ಅಂಗಳದಲ್ಲಿ ಮುಕ್ತವಾಗಿ ವಿಹರಿಸ ಬಯಸುತ್ತಾಳೆ. ಆದರೆ

ಅವಳಿಗೆ ಸಹಕಾರ ಸಿಗುತ್ತಿಲ್ಲ. ಈ ವೃತ್ತದಿಂದ ಹೊರಬರುವುದೇ ಮುಕ್ತಿ. ಆದರೆ ಈ ವೃತ್ತದ ಹೊರಗೆ ಮತ್ತೊಂದು ವೃತ್ತವಿದೆ. ಅದೇ ಸಮಾಜ! ವೃತ್ತದಿಂದ ಹೊರಬಂದ ಹೆಣ್ಣಿಗೆ ಅದನ್ನು ತಡೆದುಕೊಳ್ಳುವುದು, ಹೊರುವುದು ಸಾಧ್ಯವಿಲ್ಲ. ಆಗ ಆಕೆಗೆ ಹಳೇ ವೃತ್ತವೇ ಇದಕ್ಕಿಂತ ಸಾವಿರ ಪಟ್ಟು ಶ್ರೇಷ್ಠ ಎನಿಸುತ್ತದೆ. ಇಲ್ಲೇ ಸ್ತ್ರೀ ಸ್ವಾತಂತ್ರ್ಯದ ಪ್ರಶ್ನೆ ಎದುರಾಗುತ್ತದೆ. ವೃತ್ತದಿಂದ ಹೊರಬರುವುದು ಪರೀಕ್ಷೆಯ ಉತ್ಕಟ ಕ್ಷಣವಾಗುತ್ತದೆ. ಆಕೆಗೆ ಔಟ್ ಆಗುವ ಇಚ್ಛೆಯೂ ಇಲ್ಲ. ಬೇರೆಯವರ ತಾಳಕ್ಕೆ ತಕ್ಕಂತೆ ಕುಣಿಯುವ ಮನಸ್ಸೂ ಇಲ್ಲ."[೩೪] ವೃತ್ತವನ್ನು ಮುರಿದು ಹೊರಬಂದು ಸಮಾಜ ಹಾಗೂ ಸಂಘರ್ಷವನ್ನು ಎದುರಿಸಿದ ಹೆಣ್ಣಿನ ಪ್ರತೀಕವಾಗಿ ಲೇಖಕಿ ನಿಲ್ಲುತ್ತಾಳೆ. ಇದಕ್ಕೆ ಪ್ರತಿಕ್ರಿಯೆಯಾಗಿ ಎನ್ ಗಾಯಿತ್ರಿಯವರು ಹೀಗೆ ಹೇಳುತ್ತಾರೆ. "ಮಗುವಾಗಿ ನರ್ತಿಸು, ಗೃಹಿಣಿಯಾಗಿ ನರ್ತಿಸು, ವಿಧವೆಯಗಿ ನರ್ತಿಸು, ಪುನರ್ವಿವಾಹವಾಗಿ ನರ್ತಿಸು, ಘಟಸ್ಫೋಟಕವಾದ ಮೇಲೂ ನರ್ತಿಸು. ಆನಂದ ಘಳಿಗೆಗಳಲ್ಲಿಯೂ ನರ್ತಿಸು, ದುಃಖದ ಸಂದರ್ಭಗಳಲ್ಲೂ ನರ್ತಿಸು, ಒಟ್ಟಾಗಿ ತಿರುತಿರುಗಿ ನರ್ತಿಸು"[೩೫] ಎಂಬಂತೆ ಪುರುಷಪ್ರಧಾನ ಸಮಾಜದಲ್ಲಿ ನರ್ತಿಸುವ ಹೆಣ್ಣಿನ ಭಾವನಾತ್ಮಕ ಸಂಬಂಧಗಳು ಲೂಟಿಯಾಗುವ ಚಿತ್ರಣ ಇಲ್ಲಿದೆ.

ತನ್ನ ಮನಸ್ಸಿನ ಭಾವನೆಯನ್ನು ಪುರುಷನು ಸ್ವತಂತ್ರ್ಯವಾಗಿ ಪ್ರಕಟಿಸಿದಂತೆ ಹೆಣ್ಣು ಅದರಲ್ಲೂ ಮಧ್ಯಮ ವರ್ಗದ ಹೆಣ್ಣು, ಹದಿ ಹರೆಯದ ಹೆಣ್ಣು ಪ್ರಕಟಿಸಲಾರಳು. ಕೆಲವರಿಗೆ ಈ ಬರವಣಿಗೆ ಒಂದು ಮಾಧ್ಯಮವಾಗಿ ದೊರೆತಿದೆ. ಆದರೆ ಈ ಹೊರದಾರಿಯೂ ಇಲ್ಲದ ಎಷ್ಟೊಂದು ಜನ ಹೆಂಗಸರು ಬದುಕಿಲ್ಲ. ಅವರ ಪರಿಸ್ಥಿತಿಗೆ ಯಾರನ್ನು ಹೊಣೆ ಮಾಡುವುದು? ಮಹಿಳೆಗೆ ಸಮಾಜ ಹೇರಿರುವ ಒತ್ತಡ ಹೇಗೆಂದರೆ ನಲ್ಲಿ ನೀರಿಗೆ ಹೆಣ್ಣು ಜಗಳ ಆಡುತ್ತಾಳೆಂದು ಅಣಕವಾಡುತ್ತದೆ. ಅದೇ ಸಮಾಜ ಹಾಗೆ ಮಾಡದೇ ಇದ್ದರೂ ತಪ್ಪೆಂದು ಹೇಳುತ್ತದೆ.

ಮೇಲ್ವರ್ಗದ ಕುಟುಂಬದಲ್ಲಿ ಹೆಣ್ಣು ಗಂಡಿನ ಔನ್ನತ್ಯಕ್ಕಾಗಿ ಹೇಗೆ ಬಳಕೆಯಾಗುತ್ತಿದ್ದಳು ಎನ್ನುವುದುನ್ನು ಪ್ರತಿಮಾಬೇಡಿ ಹೇಳುತ್ತಾರೆ. ಈ ರೀತಿ ಬಳಕೆಯಾಗುತ್ತಿದ್ದರೂ ಅದು ಗಂಡಿನ ನಿರ್ದೇಶನದಂತೆ ನಡೆಯಬೇಕಾಗಿತ್ತು. ಇಂಥ ಸನ್ನಿವೇಶದಲ್ಲಿ ಹೆಣ್ಣು ಮಗು ಹುಟ್ಟಿದರೂ ತಾತ್ಸಾರ ಮನೋಭಾವನೆ ಇತ್ತು. ಮೊದಲನೆ ಹೆಣ್ಣುಮಗುವಾದಾಗ ಅದೇ ಕುಟುಂಬದಲ್ಲಿ ಎರಡನೇ ಹೆಣ್ಣು ಮಗು ಜನಿಸಿದಾಗ ಮಗುವಿಗಲ್ಲದೇ ತಾಯಿಯ ತಾತ್ಸಾರ ಮನೋಭಾವನೆ ವ್ಯಕ್ತವಾಗಿದ್ದದ್ದು ತಿಳಿಯುತ್ತದೆ. ಕಪ್ಪು ಬಣ್ಣ ಮತ್ತು ಬಂಜೆ ಎನ್ನುವ ಹೀಯಾಳಿಕೆ ಕೇವಲ ಮಹಿಳೆ ಯಾವ ಜಾತಿ ವರ್ಗದಲ್ಲಿರಲಿ ಅವಳು ಮಾತ್ರ ಅನುಭವಿಸುವ ಸಂಕಟವಾಗಿದೆ. ಹೆಣ್ಣು ಗಂಡಿನ ನಿರ್ದೇಶನದಂತೆ ಇದ್ದರೆ ಸರಿ ಇಲ್ಲವಾದರೆ ಅವಳನ್ನು ಮುಖ್ಯವಾಹಿನಿಯಿಂದ ದೂರ

ಇಡಲಾಗುತ್ತದೆ. ಪ್ರತಿಮಾ ಬೇಡಿ ತಂದೆಯ ನಿರ್ದೇಶನದಂತೆ ಬೇರೆ ಗಂಡಸರ ಜೊತೆ ಸಲುಗೆಯಿಂದ ಇರಬೇಕಾಗಿತ್ತು. ಅದೇ ಅವರ ನಿರ್ದೇಶನವಿಲ್ಲದೇ ಅವಳು ಇಷ್ಟಪಟ್ಟವರ ಜೊತೆ ಸಲುಗೆಯಿಂದ ಇದ್ದರೆ ತಂದೆ ಒಪ್ಪುತ್ತಿರಲಿಲ್ಲ ಎನ್ನುವಲ್ಲಿ ಈ ಮಾತು ಸ್ಪಷ್ಟವಾಗುತ್ತದೆ. ಭಾರತದಲ್ಲಿ ಹೆಣ್ಣಿಗೆ ಗೌರವಯುತ ಸ್ಥಾನವಿತ್ತು. ಮನುಷ್ಯರ ದುರಾಸೆ ಅಹಂಕಾರ ಸ್ವಾರ್ಥದಿಂದ ಸಮಾಜದಲ್ಲಾದ ಬದಲಾವಣೆಯಿಂದ ಈ ಪರಿಸ್ಥಿತಿ ಏರ್ಪಟ್ಟಿದೆ ಅನ್ನಬಹುದು. ತನ್ನ ಅಧೀನದಲ್ಲಿರುವವರನ್ನು ಹೇಗೆಬೇಕಾದರೂ ನಡೆಸಿಕೊಳ್ಳಬಹುದೆಂಬ ಧೋರಣೆ ಕಷ್ಟಕರವಾಗಿ ಕಂಡಿದೆ.

ಈ ಎಲ್ಲ ಉದಾಹರಣೆಗಳು ಪುರುಷ ಪ್ರಧಾನ ಸಮಾಜದ ಮುಷ್ಟಿಯೊಳಗೆ ಹೆಣ್ಣು ಇರಬೇಕೆಂದು ಬಯಸುವುದು ಹೆಣ್ಣು ಇದರಿಂದ ಹೊರಬರಲು ಪ್ರಯತ್ನಿಸುವುದು. ಈ ವ್ಯವಸ್ಥೆಯಿಂದ ಹೊರಬಂದರೆ ಇಡೀ ವ್ಯವಸ್ಥೆ ಒಂದಾಗಿ ತುಳಿಯುವುದು. ಅಂತೂ ಹೆಣ್ಣು ಗಂಡಿನ ಅಡಿಯಾಳಾಗಿ ಬದುಕಬೇಕೆನ್ನುವ ತಂತ್ರವನ್ನು ವ್ಯವಸ್ಥೆ ರೂಪಿಸಿರುವುದು ತಿಳಿಯುತ್ತದೆ.

೫.೫. ಮಂಗಳಮುಖಿಯರ(ತೃತೀಯ ಲಿಂಗ)ವಿಭಿನ್ನ ನೆಲೆಗಳು

'ತೃತೀಯ ಲಿಂಗ ಎಂದರೇನು? ಅತ್ತ ಗಂಡೂ ಅಲ್ಲದ ಇತ್ತ ಹೆಣ್ಣೂ ಅಲ್ಲದ ಉಭಯ ಲಿಂಗಿಗಳೇ ತೃತೀಯ ಲಿಂಗಿಗಳು. ಒಂದು ಬಗೆಯ ಅಘೋಷಿತ, ಅನೌಪಚಾರಿಕ ನಿಷೇಧಿತ ವರ್ಗವಾಗಿ ಬಾಳುವ ಅನಿವಾರ್ಯತೆಗೆ ಒಳಗಾದ ಇವರಿಗೆ ಸಮಾಜದ ಮುಖ್ಯ ಧಾರೆಯಲ್ಲಿ ಪರಿಶಿಷ್ಟ ಸ್ಥಾನವಿದೆ. ಧಾರ್ಮಿಕ ಆಚರಣೆಯ ಸಂದರ್ಭದಲ್ಲಿ ಇವರನ್ನು ಮಂಗಲಕಾರಿಗಳೆಂದರೂ ಅದು ನಿತ್ಯದ ಬದುಕಿನಲ್ಲಿ ಅವರ ಕುರಿತಾಗಿ ಯಾವ ಅನುಕಂಪವನ್ನೂ ಸೃಷ್ಟಿಸುವುದಿಲ್ಲ. ಒಂದು ರೀತಿಯ ಡೋಲಾಯಮಾನ ಸ್ಥಿತಿಯಲ್ಲಿರುವ ಇವರನ್ನು ಲಿಂಗ ಜಾತ್ಯತೀತರು ಎನ್ನಬಹುದು.

ಹೆಣ್ಣು ಗಂಡೆಂಬ ಲಿಂಗಾಧಾರದ ಸಮಾಜದಲ್ಲಿ ಹೆಣ್ಣೂ ಅಲ್ಲದ ಗಂಡೂ ಅಲ್ಲದ ಪ್ರತ್ಯೇಕ ಲಿಂಗಿಗಳನ್ನು 'ಲಿಂಗಾಂತರಿ'(ಟ್ರಾನ್ಸ ಜೆಂಡರ್) ಎಂದು ಗುರುತಿಸಬಹುದು. ಹಾರ್ಮೋನ್ಸ ವೈಪರೀತ್ಯದಿಂದ ಮಹಿಳೆಯರಂತಿರುವ ಇವರನ್ನು ಮಂಗಳಮುಖಿಯರು ಎನ್ನುತ್ತಾರೆ. ಸಮಾಜದಲ್ಲಿ ಇವರನ್ನು ಖೋಜ, ಹಿಜಡ, ಸಂಗ, ಹೆಣ್ಣಿಗ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ.

ಲಿಂಗ ಪರಿವರ್ತನೆಯ ತುಡಿತ: ಉಭಯ ಲಿಂಗಿಗಳ ಕುರುಹುಗಳನ್ನು ಹೊಂದಿರುವ ತೃತೀಯ ಲಿಂಗಿಗಳು ತಮ್ಮನ್ನು ತಾವು ಹೆಣ್ಣು ಎಂದೇ ಗುರುತಿಸಿಕೊಳ್ಳಬಯಸುವುದು ಅಥವಾ ಹೆಣ್ಣಿನಂತೆಯೇ ಕಾಣಿಸಿಕೊಳ್ಳುವುದರ ಹಿಂದೆ 'ಹೊಟ್ಟೆ ಪಾಡಿನ' ಅನಿವಾರ್ಯತೆ ಇದೆ. ಇಲ್ಲಿ

ಪ್ರಮುಖವಾಗಿ ಇವರ ವೃತ್ತಿ ಭಿಕ್ಷೆ ಎತ್ತುವುದು, ದೀನವಾಗಿ ಬೇಡುವುದು, ಕೊಡದೇ ಹೋದಾಗ ಆಗ್ರಹಿಸಿ ಪಡೆಯುವುದು. ಕೆಲವು ಸಂದರ್ಭಗಳಲ್ಲಿ ಲೂಟಿ ಮಾಡುವುದು ಭಿಕ್ಷಾಟನೆಯ ವಿಭಿನ್ನ ಮುಖಗಳಾಗಿವೆ. ಒಬ್ಬರ ವ್ಯಕ್ತಿತ್ವ ನಿರ್ಮಾಣಕ್ಕೆ ಬಾಲ್ಯ ಹೇಗೆ ಕಾರಣವಾಗುತ್ತದೆ? ಅವರ ಬಾಲ್ಯದ ಆಧಾರದ ಮೇಲೆ ವ್ಯಕ್ತಿತ್ವ ಹೇಗೆ ಅರಳುತ್ತದೆ, ಕಮರುತ್ತದೆ, ಅಡ್ಡಾದಿಡ್ಡಿ ಬೆಳೆಯುತ್ತದೆ ಅವರು ಹೇಳುವ ಸತ್ಯವಲ್ಲವೇ ಹೇಳದಿರುವ ಸತ್ಯ ಕೂಡ ಆತ್ಮಕಥೆಯ ಇನ್ನೊಂದು ಮುಖ ಹೇಳುತ್ತದೆ.

ಈಗ ಸಮಾಜ ಬದಲಾವಣೆಯಾಗ್ತಾ ಇದೆ. ಅತ್ಯಂತ ವೇಗದಲ್ಲಿ ಮಹಿಳೆಗೆ ತನ್ನ ಮೇಲಾಗುತ್ತಿರುವ ಶೋಷಣೆಯ ಅರಿವಾಗುತ್ತಾ ಇದೆ. ಹಾಗೂ ಉದ್ಯೋಗದ ಸ್ವರೂಪದಲ್ಲೂ ಹಲವು ಬದಲಾವಣೆಗಳಾಗುತ್ತಾ ಇದೆ. ಇಷ್ಟು ಬದಲಾವಣೆ ಮಧ್ಯೆ ಎಷ್ಟೊಂದು ಸಮಸ್ಯೆಗಳಿವೆಯಲ್ಲ ಯಾಕೆಂದರೆ ಪುರುಷ ಪ್ರಧಾನ ಮನಸ್ಸು ಬದಲಾಗಿಲ್ಲ.. ಈ ಬದಲಾವಣೆಗೆ ಸ್ಪಂದಿಸುತ್ತಿಲ್ಲ. ಪ್ರಾರಂಭದಿಂದ ಬಂದ ಈ ಜಡವ್ಯವಸ್ಥೆಗೆ ಪುರುಷಪ್ರಧಾನ ಮನಸ್ಸು ಒಗ್ಗಿಕೊಂಡಿದೆ. ಇದರಿಂದ ಹೊರಬಂದರೆ ಏನೂ ಸಮಸ್ಯೆ ಇಲ್ಲ. ಮೇಲ್ನೋಟಕ್ಕೆ ತೋರಿಕೆಗಾಗಿ ಮಹಿಳೆ ಅಭಿವೃದ್ಧಿ ಹೊಂದಬೇಕೆಂಬ ಭಾಷಣ ವೇದಿಕೆಗಳಲ್ಲಿ ನಡೆಯುತ್ತಿದೆ. ಪ್ರಾಯೋಗಿಕವಾಗಿ ಆಗುತ್ತಾ ಇಲ್ಲ. ಹೆಣ್ಣನ್ನು ಓದಿಸಿದ್ದು ಕೂಡ ಪುರುಷನಿಗೆ ವರವಾಗಲೆಂದೇ. ಓದಿದ ಹುಡುಗಿಗೆ ವರದಕ್ಷಿಣೆ ಕಡಿಮೆ. ಗಂಡಿಗಿಂತ ಹೆಚ್ಚು ಓದುವುದು ಬೇಡ. ಮದುವೆಯಾಗದ ಹುಡುಗಿ ಪಿಎಚ್.ಡಿ. ಮಾಡ್ತೇನೆಂದರೆ ಹೆಚ್ಚು ಓದುವುದು ಬೇಡ ಅನ್ನುತ್ತದೆ ಸಮಾಜ. ಎಲ್ಲೂ ಪುರುಷನನ್ನು ಮತ್ತು ಪುರುಷ ಪ್ರಧಾನತೆಯನ್ನು ಹೆಣ್ಣು ಪ್ರಶ್ನಿಸಬಾರದು ತಪ್ಪಿರಲಿ ಇಲ್ಲದಿರಲಿ ಸುಮ್ಮನೆ ಒಪ್ಪಿಕೊಳ್ಳಬೇಕು ಎನ್ನುತ್ತದೆ ಸಮಾಜ. ಗಂಡಿಗಿಂತ ಹೆಚ್ಚು ಸಾಮರ್ಥ್ಯ ಇರುವ ಹೆಣ್ಣನ್ನು ಸಮಾಜ ಬಹುತೇಕ ಒಪ್ಪುವುದಿಲ್ಲ. ಆದರೆ ಹೆಚ್ಚು ಆರ್ಥಿಕ ಆದಾಯ ತರುವ ವಿಧೇಯ ಕೂಲಿಯಾಗಿ ಹೆಣ್ಣು ಕಾರ್ಯ ನಿರ್ವಹಿಸಬಲ್ಲಳಾದರೆ ಹೆಣ್ಣು ದುಡಿಯುವುದನ್ನು ಪುರುಷ ಪ್ರಧಾನ ವ್ಯವಸ್ಥೆ ಪುರಸ್ಕರಿಸುತ್ತದೆ.

ಸಮಾಜದಲ್ಲಿ ಗಂಡಾಗಿರಬೇಕು ಅಥವಾ ಹೆಣ್ಣಾಗಿರಬೇಕು. ಗಂಡು ಹೆಣ್ಣು ಎರಡೂ ಅಲ್ಲದವುಗಳನ್ನು ಕೂಡ ಈ ಸಮಾಜ ಒಪ್ಪಿಕೊಳ್ಳುವುದಿಲ್ಲ. ಹೇಗೆಂದರೆ ಗಂಡಾಗಿದ್ದವರು ಹೆಣ್ಣಾಗಿ ಪರಿವರ್ತನೆಯಾಗುವುದಾಗಲಿ, ಹೆಣ್ಣಾಗಿದ್ದವರು ಗಂಡಾಗಿ ಬದಲಾವಣೆಯಾಗುವುದಾಗಲಿ ಇವರನ್ನು ಮುಖ್ಯವಾಹಿನಿಗೆ ಸೇರಿಸಿಕೊಳ್ಳುವುದೇ ಇಲ್ಲ. ಸುವರ್ಣ ವಾಹಿನಿಯಲ್ಲಿ ಪ್ರಸಾರವಾದ 'ಕಥೆಯಲ್ಲ ಜೀವನ' ಕಾರ್ಯಕ್ರಮದಲ್ಲಿ ಮಂಜಮ್ಮನು ಮಂಜಪ್ಪನಾಗಿ ಬದಲಾದಾಗ ಅನುಭವಿಸಿದ್ದ ಯಾತನೆಯನ್ನು ಹಂಚಿಕೊಳ್ಳುತ್ತಾನೆ. ಅದೇ ರೀತಿ ಇನ್ನೊಂದು ಉದಾಹರಣೆಯಾಗಿ ೨೦

ನವೆಂಬರ್ ೨೦೧೩ರ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ವರದಿಯ ಶೀರ್ಷಿಕೆ ಈ ರೀತಿ ಇದೆ. "ಗಂಡಾಗಿಯೂ ಹೆಣ್ಣೆಂದು ಗುರುತಿಸಿಕೊಂಡ" "ಆತ ಗಂಡಾಗಿಯೇ ಹುಟ್ಟಿದ ಗಂಡಾಗಿಯೇ ಬೆಳೆದ. ಆದರೆ ದೈಹಿಕ ಸಮಸ್ಯೆಯೊಂದನ್ನು ಬೆನ್ನಿಗಂಟಿಸಿಕೊಂಡು ಜನಿಸಿದ ಕಾರಣ ಆತನ ಜನನಾಂಗ ಸಂಪೂರ್ಣವಾಗಿ ಬೆಳೆದಿರಲಿಲ್ಲ. ಹೀಗಾಗಿ ಜನನವಾದಾಗ ತಂದೆ ತಾಯಿ ಆತನನ್ನು 'ಹೆಣ್ಣು ಮಗು'ವೆಂದು ಭಾವಿಸಿದರು. 'ಹೆಣ್ಣು ಮಗು'ನಂತಯೇ ಬೆಳೆಸಿದರು. ತಾನು ಹೆಣ್ಣಲ್ಲ ಎಂಬುದು ೧೨-೧೩ನೇ ವಯಸ್ಸಿನಲ್ಲಿ ಆತನಿಗೆ ಖಚಿತವಾಯಿತು. ಆದರೆ ಈ ವೇಳೆಗಾಗಲೇ ಜನ್ಮ ದಾಖಲೆ ಸೇರಿದಂತೆ ವಿವಿಧ ದಾಖಲೆಗಳಲ್ಲಿ ಆತನ ಲಿಂಗ 'ಹೆಣ್ಣು' ಎಂದು ನಮೂದಾಗಿತ್ತು. ಅದನ್ನು 'ಗಂಡು' ಎಂದು ಬದಲಾಯಿಸಲು ಸರ್ಕಾರಿ ಅಧಿಕಾರಿಗಳು ಒಪ್ಪಲಿಲ್ಲ. ತಾನು ಹೆಣ್ಣಲ್ಲ ಗಂಡು ಎಂಬುದು ಖಾತ್ರಿಯಾದಾಗ ಸಣ್ಣ ಶಸ್ತ್ರ ಚಿಕಿತ್ಸೆಗೆ ಒಳಗಾಗಿ, ಜನನೇಂದ್ರಿಯದ ಸಮಸ್ಯೆ ಬಗೆಹರಿಸಿಕೊಂಡ. ಆತ ಗಂಡು ಎಂಬುದನ್ನು ವೈದ್ಯರೂ ದೃಢೀಕರಿಸಿದರು. ಆತನ ವಂಶವಾಹಿಗಳ ಪರೀಕ್ಷೆ ಕೂಡ ಆತನು ಗಂಡು ಎಂಬುದನ್ನು ಖಚಿತಪಡಿಸಿತು. ನಂತರ ಆತನ ತಂದೆ ತಾಯಿಗಳು ನಿಮ್ಹಾನ್ಸ ಸಂಸ್ಥೆಯಲ್ಲಿ ಹಲವಾರು ಬಾರಿ ಆಪ್ತ ಸಲಹೆಗೆ ಒಳಪಡಿಸಲಾಯಿತು. ಅಗತ್ಯ ಪ್ರಮಾಣ ಪತ್ರ ಪಡೆದುಕೊಂಡರೂ ಅವನ ಲಿಂಗ 'ಗಂಡು' ಎಂದು ದಾಖಲೆಗಳಲ್ಲಿ ಬದಲಾಯಿಸಲು ಒಪ್ಪಲಿಲ್ಲ. ಸರ್ಕಾರಿ ದಾಖಲೆಗಳಲ್ಲಿ ತನ್ನ ಲಿಂಗ 'ಹೆಣ್ಣು' ಎಂದಿರುವುದನ್ನು 'ಗಂಡು' ಎಂದು ಬದಲಾಯಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕು ಎಂದು ಕೋರಿ ಆತ ಹೈಕೋರ್ಟ ಮೆಟ್ಟಿಲೇರಿದ. ನ್ಯಾಯಮೂರ್ತಿ ಬೋಪಣ್ಣನವರು ಆತನ ಪರವಾಗಿ ಆದೇಶಿಸಿದ್ದಾರೆ. ದಾಖಲೆಗಳಲ್ಲಿ ಆತನ ಲಿಂಗವನ್ನು 'ಗಂಡು' ಎಂದು ಬದಲಾಯಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಸರ್ಕಾರಿ ದಾಖಲೆಗಳಲ್ಲಿ ತರಬೇಕಿರುವ ಅಗತ್ಯ ಬದಲಾವಣೆ ಕುರಿತು ಅರ್ಜಿದಾರರು, ಅಧಿಕಾರಿಗಳಿಗೆ ಹೊಸದಾಗಿ ಮನವಿ ಸಲ್ಲಿಸಲಿ. ಅದರ ಜೊತೆಯಲ್ಲೇ ನ್ಯಾಯಾಲಯ ನೀಡಿರುವ ಆದೇಶವನ್ನೂ ಲಗತ್ತಿಸಲಿ. ಅವರು ಮನವಿ ಸಲ್ಲಿಸಿದ ಮೂರು ತಿಂಗಳಲ್ಲಿ ಅಧಿಕಾರಿಗಳು ಅಗತ್ಯ ಕ್ರಮ ಜರುಗಿಸಬೇಕು. ಎಂದು ನ್ಯಾ. ಬೋಪಣ್ಣ ಅವರು ಇತ್ತೀಚೆಗೆ ಆದೇಶದಲ್ಲಿ ಹೇಳಿದ್ದಾರೆ." ಹುಟ್ಟುವ ಸಂದರ್ಭದಲ್ಲಿ ಸರಿಯಾಗಿ ಬೆಳವಣಿಗೆಯಾಗದ ಜೈವಿಕ ಕಾರಣಕ್ಕಾಗಿ, ಸಾಮಾಜಿಕವಾಗಿ ಎಷ್ಟೊಂದು ಹೋರಾಡಬೇಕಾಯಿತು ಅಲ್ಲದೇ ತನ್ನದಲ್ಲದ ತಪ್ಪಿಗಾಗಿ ಶಿಕ್ಷೆ ಅನುಭವಿಸಬೇಕಾಯಿತು.

ಅದೇ ರೀತಿ ಲಿವಿಂಗ್ ಸ್ಮೈಲ್ ವಿದ್ಯಾ, ಶರವಣನ್ ಆಗಿದ್ದು ವಿದ್ಯಾ ಆಗಿ ಬದಲಾದ ಕಥೆಯನ್ನು 'ನಾನು ಅವನಲ್ಲ ಅವಳು' ಆತ್ಮಕಥೆಯಲ್ಲಿ ಹೀಗೆ ಹೇಳುತ್ತಾರೆ. 'ನನ್ನ ಹೆಣ್ತನದ ಭಾವಗಳನ್ನು ಯಾರಾದರೂ ಅರ್ಥ ಮಾಡಿಕೊಂಡರೆ ಅದರ ಬಗ್ಗೆ ನನಗೆ ಯಾವ ಬೇಸರವೂ

ಇಲ್ಲ. ಆದರೆ ಈ ವಿಷಯ ತಿಳಿದ ಮರುಕ್ಷಣವೇ ಅವರು ನನ್ನನ್ನು ಲೇವಡಿ ಮಾಡುತ್ತಿದ್ದುದನ್ನು ಮಾತ್ರ ಸಹಿಸಿಕೊಳ್ಳಲು ಆಗುತ್ತಿರಲಿಲ್ಲ. ನನ್ನ ಮೈ ಉರಿಯುತ್ತಿತ್ತು. ಹೀಗಿರುವಾಗ ನನ್ನನ್ನು ಒಬ್ಬ ಗಂಡೆಂದು ಭಾವಿಸಿ ನಾನು ಇನ್ನೊಬ್ಬ ಹೆಣ್ಣನ್ನು ಪ್ರೇಮಿಸುತ್ತಿದ್ದೇನೆಂದು ಕಲ್ಪಿಸಿಕೊಂಡು ಮಾತನಾಡುತ್ತಿದ್ದುದು ನನಗೆ ನರಕವೆನಿಸುತ್ತಿತ್ತು. ನನ್ನಿಂದ ಸಹಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ. ನನ್ನ ಬಾಹ್ಯ ರೂಪ ಬೇಕಾದರೆ ನಿಮಗೆ ಗಂಡಸಿನಂತೆ ಕಾಣಬಹುದು. ಆದರೆ ನಾನು ಮಾನಸಿಕವಾಗಿ ಒಬ್ಬ ಹೆಣ್ಣು. ಹೀಗಿರುವಾಗ ನಾನು ಇನ್ನೊಬ್ಬ ಹೆಣ್ಣನ್ನು ಪ್ರೇಮಿಸುತ್ತಿದ್ದೇನೆಂದು ಮಾತನಾಡುವುದನ್ನು, ಭಾವಿಸುವುದನ್ನು ನಾನು ಅದು ಹೇಗೆ ತಾನೆ ಸಹಿಸಿಕೊಳ್ಳುವುದು ಸಾಧ್ಯ'.[೩೬]

ಮಂಗಳಮುಖಿಯಾದ ಲಿವಿಂಗ್ ಸ್ಮೈಲ್ ವಿದ್ಯಾ ಗಂಡು, ಹೆಣ್ಣು, ಮಂಗಳಮುಖಿ ಈ ಮೂರೂ ಸ್ಥಾನಗಳಲ್ಲಿದ್ದು ಪ್ರಾರಂಭದಲ್ಲಿ ಗಂಡಾಗಿರುವ ಅನುಭವವನ್ನು ಹೀಗೆ ಹೇಳುತ್ತಾರೆ. 'ನಾನು ಚೆನ್ನಾಗಿ ಓದುವ ಹುಡುಗನಾಗಿ ಬೆಳೆಯುತ್ತಿದ್ದಂತೆ ನನ್ನ ಸೋದರಿಯರ ಶ್ರಮ ಇನ್ನೂ ಹೆಚ್ಚಾಯಿತು. ಅಮ್ಮ ಬೆಳಿಗ್ಗೆ ಐದು ಘಂಟೆಗೆಲ್ಲ ಎದ್ದು ಕೆಲಸಕ್ಕೆ ಹೋಗಿಬಿಡುತ್ತಿದ್ದಳು. ಆ ಸಮಯಕ್ಕೆ ಸರಿಯಾಗಿ ನನ್ನನ್ನು ಎಬ್ಬಿಸಿ ಓದಿಸಬೇಕಾದದ್ದು ರಾಧಾಳ ಕರ್ತವ್ಯ. ಬೇರೆ ದಾರಿಯಿಲ್ಲ. ನಾನು ಎದ್ದು ಓದದಿದ್ದರೆ ನನಗಿಂತ ರಾಧಾ ಹಾಗೂ ಮಂಜುವಿಗೇ ಹೆಚ್ಚು ಏಟು ಬೀಳುತ್ತಿದ್ದುದು. ಶಾಲೆಗೆ ಹೋಗುವಾಗ ದಿನವೂ ಅಪ್ಪ, ರಾಧಾಳ ಕೈಗೆ ಒಂದು ರೂಪಾಯಿ ಕೊಡುತ್ತಿದ್ದರು. ಅವಳಿಗೂ ಮಂಜೂಗೂ ತಲಾ ಮೂವತ್ತು ಪೈಸೆ. ನನಗೆ ಮಾತ್ರ ನಲವತ್ತು ಪೈಸೆ. ನನ್ನನ್ನು ನನ್ನ ತರಗತಿಯ ಕೋಣೆಯೊಳಗೆ ಬಿಟ್ಟ ಮೇಲಷ್ಟೆ ಅವರು ಅವರ ತರಗತಿಯಲ್ಲಿ ಹೋಗಿ ಕುಳಿತುಕೊಳ್ಳಬೇಕು. ಶಾಲೆಯಿಂದ ಮನೆಗೆ ಹಿಂದಿರುಗಿದ ಕೂಡಲೇ ನಾನು ಹೋಮ್ ವರ್ಕ್ ಮಾಡಿ ಮುಗಿಸಬೇಕು. ಆಮೇಲೆ ಅಪ್ಪ ಪ್ರತ್ಯೇಕವಾಗಿ ಹೇಳಿಕೊಡುತ್ತಿದ್ದ ಪಾಠ ಆರಂಭವಾಗುತ್ತಿತ್ತು"[೩೭]

ಒಂದು ಕುಟುಂಬದಲ್ಲಿ ಗಂಡು ಮಗು ಜನಿಸಿದಾಗ ಹೆಣ್ಣು ಮಕ್ಕಳಿಗೆ ಕೆಲಸ ಹೆಚ್ಚಾಗುತ್ತದೆ. ಅವರ ಜವಾಬ್ದಾರಿಯನ್ನೆಲ್ಲ ಹೆಣ್ಣು ಮಕ್ಕಳಿಗೇ ವಹಿಸಲಾಗುತ್ತದೆ. ಹೆಣ್ಣು ಮಗು ಚಿಕ್ಕವಳಿರಲಿ ಅಥವಾ ದೊಡ್ಡವರಿರಲಿ ಅದರಲ್ಲಿ ಜವಾಬ್ದಾರಿಯ ಬಗ್ಗೆ ಹೆಚ್ಚು ವ್ಯತ್ಯಾಸವಾಗುವುದಿಲ್ಲ. ಜವಾಬ್ದಾರಿಯ ಪ್ರಮಾಣದಲ್ಲಿ ವ್ಯತ್ಯಾಸವಾಗುತ್ತದೆ.

ಹಿಜಡಾಗಳ ಮನಸ್ಥಿತಿಯ ಬಗ್ಗೆ ಲಿವಿಂಗ್ ಸ್ಮೈಲ್ ವಿದ್ಯಾ ಹೇಳುವ ಈ ಮಾತು ಇಲ್ಲಿ ಮುಖ್ಯವಾಗುತ್ತದೆ. 'ಸಾಮಾನ್ಯವಾಗಿ ನನ್ನಂಥವರಿಗೆ ಕನ್ನಡಿ ಒಂದು ವರಪ್ರಸಾದ. ಕನ್ನಡಿ ಎಲ್ಲರಿಗೂ ಅವರವರ ಸ್ಥೂಲ ಆಕಾರವನ್ನು ಪ್ರತಿಫಲಿಸಿದರೆ ಹಿಜಡಾಗಳಿಗೆ ಮಾತ್ರ ಅವರ

ಮನಸ್ಸನ್ನು ಒಳಗಿನ ಭಾವಗಳನ್ನು ಆಂತರಿಕವಾದ ಅವರ ಸ್ತ್ರೀತನವನ್ನು ಒಂದು ಚಿತ್ರವಾಗಿ ಪರಿವರ್ತಿಸಿ ತೋರಿಸುತ್ತದೆ. ಇದನ್ನು ಇತರರು ಅರ್ಥ ಮಾಡಿಕೊಳ್ಳಲು ಸಾಧ್ಯವೇ ಇಲ್ಲ. ನಿಮಗೆ ಮುಖವನ್ನು ನನಗೆ ಮುಖದ ಹಿಂದಿರುವ ಮನಸ್ಸನ್ನು ತೋರಿಸುವ ಸಾಧನ ಅದು! ನನಗೆ ಎಂದರೆ ನಮಗೆ! ನಮಗೆಲ್ಲರಿಗೂ!"[೩೮]

ಇಲ್ಲಿ ಕೇವಲ ಒಬ್ಬ ಹಿಜಡಾ ಮಾತ್ರವಲ್ಲದೇ ಇತರ ಹಿಜಡಾಗಳ ಮನಸ್ಥಿತಿಯನ್ನು ತೆರೆದಿಟ್ಟಿದ್ದಾರೆ. ಸಾಮಾಜಿಕ ವರ್ತನೆಗಳಲ್ಲಿ ಹಲವರ ಕಣ್ಣಿಗೆ ಅಸಹ್ಯವಾಗಿ ಕಾಣಿಸುವ ಹಿಜಡಾಗಳಲ್ಲೂ ಆತ್ಮನಿರೀಕ್ಷಣೆ ಇದೆ. ಹಿಜಡಗಳಲ್ಲಿ ಪ್ರವಹಿಸುವ ಭಾವಧಾರೆ ಅಪ್ಪಟ ಸ್ತ್ರೀತ್ವದ್ದು ಎಂಬುದಕ್ಕೆ ಇಲ್ಲಿ ಆಧಾರವಿದೆ. ಕನ್ನಡಿ ಹಿಜಡಾಗಳ ಪಾಲಿಗೆ ಒಂದು ಬಗೆಯ ಸಮಾಲೋಚಕನಾಗಿ ಇರುವುದೂ ಸತ್ಯ. ಲೈಂಗಿಕವಾಗಿ ಗೊಂದಲದ ಸ್ಥಿತಿಯಲ್ಲಿರುವ ಹಿಜಡಾಗಳು ಸ್ತ್ರೀತ್ವದ ಮೂರ್ತತೆಯನ್ನು ಕನ್ನಡಿಯ ಮುಂದೆ ಸಾಕಾರ ಮಾಡಿಕೊಳ್ಳುತ್ತಾರೆ. ಆದ್ದರಿಂದ ಕನ್ನಡಿ ಅವರಿಗೆ ಪರಿವರ್ತಕವಾಗಿದೆ. ಹಾಗೂ ಜೀವನ ಸ್ಫೂರ್ತಿಯೂ ಆಗಿದೆ.

ಶರವಣನ್ ಆಗಿ ಬದುಕಿ ಹೆಣ್ಣಾಗಿ ಪರಿವರ್ತನೆಯಾದಾಗ ಬರೆಯುವ ಈ ಸಾಲುಗಳು ಅವರ ದ್ವಂದ್ವ ಬದುಕಿನ ಹಿಂಸೆಯನ್ನು ಕಟ್ಟಿಕೊಡುತ್ತದೆ. 'ಬಾಹ್ಯ ಜೀವನದಲ್ಲಿ ಗಂಡಸಿನಂತೆಯೂ ಅಂತರಂಗದಲ್ಲಿ ಹೆಣ್ಣಿನಂತೆಯೂ ದ್ವಂದ್ವ ಬದುಕು ನಡೆಸುವುದು ನನಗೆ ಸ್ವಲ್ಪವೂ ಇಷ್ಟವಾಗುತ್ತಿಲ್ಲ. ಇನ್ನು ಮುಂದೂ ಗಂಡು ವೇಷ ಹಾಕಬೇಕೆಂಬುದನ್ನು ನೆನಪಿಸಿಕೊಂಡರೇನೇ ಮೈ ಉರಿಯುತ್ತಿತ್ತು. ಆದುದರಿಂದಲೇ ಯಾರ ಹಿತವಚನಗಳು ನನ್ನ ನಿರ್ಧಾರವನ್ನು ಬದಲಿಸಲಿಲ್ಲ. ಸಡಿಲಿಸಲೂ ಸಾಧ್ಯವಾಗಲಿಲ್ಲ. ನಾನು ಹೆಣ್ಣು. ಹೆಣ್ಣಾಗಿ ಬದಲಾಗಬೇಕು, ಹೆಣ್ಣಾಗಿಯೇ ಬದುಕಬೇಕು ಎಂಬ ತೀವ್ರತೆಯ ಹೊರತು ನನ್ನಲ್ಲಿ ಇನ್ನಾವುದೂ ಇಲ್ಲ. ಇದನ್ನು ತೀವ್ರತೆ ಎನ್ನುವುದಕ್ಕಿಂತಲೂ ರೌದ್ರ ಸ್ವರೂಪ ತಾಳಿದ್ದ ಭಾವ ಎಂದೇ ಹೇಳಬೇಕು. ಈ ಪುರುಷ ವೇಷವನ್ನು ಧರಿಸುವ ಆವೇಶದಲ್ಲಿ ರುದ್ರ ತಾಂಡವವಾಡುತ್ತಿತ್ತು ನನ್ನ ಹೆಣ್ತನ. ಅದರ ಆವೇಶದ ಮುಂದೆ ಯಾವ ಹಿತನುಡಿಗಳೂ ನಿಲ್ಲದೇ ಹೋಗುತ್ತಿದ್ದವು."[೩೯]

ಸಮಾಜದಿಂದ ತಿರಸ್ಕರಿಸಲ್ಪಟ್ಟು ಅಪಮಾನಕ್ಕೊಳಪಟ್ಟು ಬದುಕನ್ನೇ ಶಾಪದಂತೆ ಅನುಭವಿಸುತ್ತಿರುವ ಇವರು ತಾವು ಯಾರ ಮೇಲಾದರೂ ಆಗಾಗ ಅಧಿಕಾರ ಚಲಾಯಿಸಿ ಅದರಿಂದ ಕೊಂಚವಾದರೂ ಸಂತೋಷ ಕಂಡುಕೊಳ್ಳುತ್ತಾರೇನೋ. ಅದಕ್ಕೆ ಉದಾಹರಣೆಯಾಗಿ 'ನನ್ನೊಳಗೆ ಹೊತ್ತಿ ಉರಿಯುತ್ತಿದ್ದ ಭಾವನೆಗಳನ್ನು ಶಬ್ದಗಳಲ್ಲಿ ಸೆರೆ ಹಿಡಿಯುವುದು ಸಾಧ್ಯವಿಲ್ಲ. ಗೇಲಿ ಮಾಡಿ ನನ್ನನ್ನು ಹಿಂಸಿಸುತ್ತಿದ್ದ ಜನರ ನಡುವೆ ನಾನು ಒಬ್ಬ ಹಿಜಡಾ ಎಂದು ಯಾವ ಹಿಂಜರಿಕೆಯೂ ಇಲ್ಲದೆ ತೋರಿಸಿಕೊಳ್ಳಲು ಆಶಿಸಿದೆ. ನಾನು ಗಂಡು ಅಲ್ಲ ಎಂಬುದನ್ನು

ಬಹಿರಂಗವಾಗಿ ತೋರಿಸಿಕೊಳ್ಳುವಂತೆ ಬಸ್ ನಿಲ್ದಾಣಗಳಲ್ಲಿ ಸೊಂಟವನ್ನು ಬಾಗಿ ಬಳುಕಿಸಿ ವಯ್ಯಾರವಾಗಿ ಅತ್ತಿತ್ತ ಸಂಚರಿಸುತ್ತಿದ್ದೆ. ಕೆಲವು ಗಂಡಸರು ನನ್ನ ಹಿಂದೆ ಹಿಂದೆಯೇ ಬರುತ್ತಿದ್ದರು. ಓಹ್! ಅದೆಲ್ಲ ಎಂತಹ ಮಧುರ ಅನುಭವಗಳು! ಅವರನ್ನು ನನ್ನ ಹಿಂದೆಯೇ ಸುತ್ತಿಸಿ ಅಲೆದಾಡುವಂತೆ ಮಾಡಿ ಕಡೆಗೆ ಕಾಣದಂತೆ ಮಾಯವಾಗಿಬಿಡುತ್ತಿದ್ದೆ."[೪೦] ಎನ್ನುತ್ತಾರೆ.

ಹಿಂಸೆಯನ್ನು ಅನುಭವಿಸಿದ ಎಲ್ಲರೂ ಹಿಂಸೆಯನ್ನು ಇತರರಿಗೆ ಕೊಡಬೇಕಾಗಿಲ್ಲ. ಸಕಾರಾತ್ಮವಾಗಿರುವವರು ಇತರರಿಗೆ ಸಂತೋಷವನ್ನು ಕೊಟ್ಟು ತಾವೂ ಸಂತೋಷಪಡಬಲ್ಲರು. ನಕಾರಾತ್ಮಕವಾಗಿರುವವರು ಇತರರಿಗೆ ಹಿಂಸೆ ಕೊಟ್ಟು ಸಂತೋಷಪಡಬಲ್ಲರು. ಆದರೆ ಇಲ್ಲಿ ಹಿಂಸೆಯನ್ನು ಅನುಭವಿಸಿದ ಮನಸ್ಸು ಯಾರಿಗಾದರೂ ಹಿಂಸೆ ಕೊಟ್ಟು ಆನಂದವನ್ನು ಪಡೆಯಲು ಮತ್ತು ಮಾನಸಿಕ ಸಮತೋಲನವನ್ನು ಪಡೆಯಲು ಪ್ರಯತ್ನಿಸುತ್ತಿದೆ. ಇಲ್ಲಿಯೂ ಅವಳಿಗರಿವಿಲ್ಲದಂತೆ ಮನಸ್ಸು ಕೆಲಸ ಮಾಡಿದೆ.

ಹೊಟ್ಟೆಪಾಡಿಗೆ ಭಿಕ್ಷೆ ಬೇಡದೆ ಏನಾದರೂ ಬೇರೆ ದಾರಿ ಇದೆಯೇ? ಎನ್ನುವ ಪ್ರಶ್ನೆಗೆ ಉತ್ತರವಿದಾಗಿದೆ. 'ಸ್ವಯಂ ಉದ್ಯೋಗ ಮಾಡೋಣವೆಂದರೆ ಹಣದ ಸಮಸ್ಯೆ ಒಂದು. ಹಣವನ್ನು ಹೊಂದಿಸಿಕೊಂಡು ವ್ಯಾಪಾರ ಮಾಡಿದರೂ ಯಾರು ಕೊಳ್ಳುತ್ತಾರೆ. ಚುನಾವಣಾ ಗುರುತಿನ ಚೀಟಿ ನಮಗೆ ಕೊಡುವುದಿಲ್ಲ. ರೇಷನ್ ಕಾರ್ಡ್ ಸಹ ಇಲ್ಲ. ಯಾವ ಬಗೆಯ ಮೂಲಭೂತ ಅಂಗೀಕಾರ ಮತ್ತು ಸಹಾಯ ಇಲ್ಲದಿರುವಾಗ ಭಿಕ್ಷೆ ಬೇಡದೆ ಏನು ತಾನೆ ಮಾಡಲಾದೀತು. ಬ್ರಷ್ಟಾಚಾರ, ಮೋಸ, ನಯವಂಚಕತನ, ದುರಾಸೆ ಎಲ್ಲ ಇದ್ದೂ ಯಾವುದೂ ಇಲ್ಲವೆಂಬಂತೆ ಬಂಗಾರದ ಬದುಕು ಬದುಕುತ್ತಿದ್ದೇವೆಂಬ ಭ್ರಮೆಯಲ್ಲಿ ಈ ಲೋಕದ ಜನರು ಬದುಕುತ್ತಿದ್ದಾರೆ. ಈ ಹುಚ್ಚರ ಲೋಕ ನನ್ನ ಮೇಲೆ ಮಾತ್ರ ಎಷ್ಟೊಂದು ಕಲ್ಲುಗಳನ್ನು ಬೀಸಿದೆ. ಆ ಕಲ್ಲಿನ ಏಟುಗಳೇ ನನ್ನ ಮನಸ್ಸನ್ನು ಮರಗಟ್ಟುವಂತೆ ಮಾಡಿದ್ದವು. ಒಂದು ರೀತಿಯಲ್ಲಿ ಈ ಸಮಾಜದ ಪ್ರತಿಯೊಬ್ಬರ ಬಳಿಯೂ ಅದು ನನಗೆ ನೀಡಿದ ಏಟುಗಳಿಗೆ ಪ್ರತಿಯಾಗಿ ನಷ್ಟವನ್ನು ವಸೂಲು ಮಾಡುತ್ತಿರುವಂತೆಯೇ ಭಿಕ್ಷೆ ಬೇಡುವುದನ್ನು ನಾನು ಪರಿಗಣಿಸಿದೆ."[೪೧]

ಇಲ್ಲಿ ಅವಳು ಅನಿವಾರ್ಯವಾಗಿ ಭಿಕ್ಷೆ ಬೇಡುತ್ತಿರುವುದಲ್ಲ. ಇಡೀ ವ್ಯವಸ್ಥೆಯ ವಿರುದ್ಧ ಸೇಡು ತೀರಿಸಿಕೊಳ್ಳುವುದೇ ಆಗಿದೆ. ಈ ಸಮಾಜಕ್ಕೆ ಅವಳಿಂದ ನೀಡಲು ಸಾಧ್ಯವಾದ ಈ ಅಲ್ಪ ವಂಚನೆ ತುಂಬ ದೊಡ್ಡ ಕ್ರೂರ ತೃಪ್ತಿಯನ್ನು ನೀಡುತ್ತಿತ್ತು. ಇದುವರೆಗೂ ಲೇವಡಿಗೆ ಗುರಿಯಾಗುತ್ತಿದ್ದ ಅವಳ ಸ್ತ್ರೀತ್ವವನ್ನು ಮುಂದಿಟ್ಟುಕೊಂಡೇ ಅವಳು ಈ ಸಮಾಜದ ಮೇಲೆ ಸೇಡು ತೀರಿಸಿಕೊಳ್ಳಲು ದೊರೆತ ಅವಕಾಶ ಎಂದೇ ಇದನ್ನು ಭಾವಿಸುತ್ತಾಳೆ. ಪ್ರತಿ ದಿನವೂ ಒಬ್ಬ ಗಂಡಸನ್ನಾದರೂ ಹೀಗೆ ಅಲೆದಾಡಿಸಿ ಯೇಮಾರಿಸುವುದು ಅವಳು ಕಂಡುಕೊಂಡ

ಮಾರ್ಗವಾಗಿದೆ. ಆದರೆ ಇತ್ತೀಚೆಗೆ ಸರ್ಕಾರ ತಿಂಗಳಿಗೆ ೫೦೦ ರೂಪಾಯಿಯಂತೆ ಲೈಂಗಿಕ ಅಲ್ಪ ಸಂಖ್ಯಾತರಿಗೆ ಮಾಶಾಸನ ನೀಡುತ್ತಿರುವುದು ಸ್ವಾವಲಂಬಿಗಳಾಗಿ ಬದುಕುವುದಕ್ಕೆ ಪ್ರೇರೇಪಿಸಿದೆ.

'ಆದರೆ ಸ್ತ್ರೀಯರಿಗಿಂತಲೂ ಹೆಚ್ಚು ನಿರ್ಲಕ್ಷ್ಯಕ್ಕೊಳಗಾದ, ದಲಿತರಿಗಿಂತ ಹೆಚ್ಚು ಶೋಷಣೆಗೆ ಗುರಿಯಾದ, ಅಲ್ಪ ಸಂಖ್ಯಾತರಿಗಿಂತಲೂ ಅತಿ ಅಲ್ಪ ಸಂಖ್ಯಾತರಾದ ಹಿಜಡಾಗಳು ಮಾತ್ರ ಯಾವ ಬಗೆಯ ಸಾಮಾಜಿಕ ಅಂಗೀಕಾರವೂ ಇಲ್ಲದೇ ಬದುಕನ್ನು ಸಾಗಿಸಬೇಕಾಗಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ...? ಉಹ್ನುಂ ಯಾವುದೂ ಇಲ್ಲ. ನಿರಂತರವಾಗಿ ಮಾನಗೆಟ್ಟ ಬದುಕಷ್ಟೇ ಹಿಜಡಾಗಳ ಪಾಲಿಗೆ ಉಳಿದಿರುವುದು. ಆದರೂ ಅನಿವಾರ್ಯವಾಗಿ ಬದುಕಲೇಬೇಕಾಗಿದೆ. ಬದುಕಲು ಅಗತ್ಯವಾದ ಎಲ್ಲ ಕಿಟಕಿ ಬಾಗಿಲುಗಳು ಮುಚ್ಚಿರುವುದರಿಂದಲೇ ಅಸಹಾಯಕ ಪರಿಸ್ಥಿತಿಯಲ್ಲಿ ತಮ್ಮ ಸ್ವಾಭಿಮಾನವನ್ನು ಕಳೆದುಕೊಂಡು ಕೈ ಚಾಚಿ ಭಿಕ್ಷೆ ಬೇಡಿಯೋ ದೇಹ ಮಾರಿಯೋ ಬದುಕು ನಿರ್ವಹಿಸಬೇಕಾಗಿದೆ. ಇದನ್ನು ಯಾರೂ ಅರ್ಥ ಮಾಡಿಕೊಳ್ಳದಿರುವುದೇ ತುಂಬಾ ಬೇಸರದ ಸಂಗತಿ. ಯೋಚಿಸಿ ನೋಡಿದರೆ ಹೆಂಗಸರನ್ನೇ ಕನಿಷ್ಠವಾಗಿ ಭಾವಿಸುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡಾಗಿ ಹುಟ್ಟಿದ ಒಬ್ಬ ವ್ಯಕ್ತಿ ಹೆಣ್ಣಾಗಿ ಬದಲಾದರೆ ಗಂಡು ಜಾತಿಗೂ ಒಟ್ಟು ಗಂಡಸುತನಕ್ಕೂ ನಡೆಯುವ ಅವಮಾನವೆಂದು ಭಾವಿಸುವ ಪುರುಷಪ್ರಧಾನ ಯೋಚನೆಯೇ ಹಿಜಡಾಗಳನ್ನು ಹೆಣ್ಣೆಂದು ಒಪ್ಪಿಕೊಳ್ಳಲು ಸಾಧ್ಯವಾಗದುದರ ಮೂಲವಿರಬಹುದೇ ಎಂದು ಅನ್ನಿಸುತ್ತದೆ.

"ಹಿಜಡಾಗಳ ಪ್ರಶ್ನೆ, ಆತಂಕ, ಸಮಸ್ಯೆಯೇನೆಂದರೆ ಹಿಜಡಾಗಳ ಹುಟ್ಟನ್ನು ಇರುವಿಕೆಯನ್ನು ತಪ್ಪಿಸಲು ಸಾಧ್ಯವಿಲ್ಲದಿರುವಾಗ ಅವರ ಲಿಂಗ ಬದಲಾವಣೆಯ ಶಸ್ತ್ರ ಚಿಕಿತ್ಸೆಯನ್ನೇಕೆ ಕಾನೂನುಬದ್ಧವಾಗಿಸಬಾರದು? ಇದು ಎಷ್ಟೋ ದೇಶಗಳಲ್ಲಿ ಈಗಾಗಲೇ ಚಾಲ್ತಿಯಲ್ಲಿದೆ. ಈ ದೇಶದಲ್ಲಿ ಮಾತ್ರ ಏಕಿಲ್ಲ? ಈ ಬಗ್ಗೆ ಯಾರೂ ಯೋಚಿಸಲು ಕೂಡ ಏಕೆ ಸಿದ್ಧವಾಗಿಲ್ಲ? ಸರ್ಕಾರ ಒಂದು ಹೆಜ್ಜೆ ಮುಂದಿಟ್ಟರೆ ನಂತರ ಸಮಾಜ ಕೂಡ ಇನ್ನೊಂದು ಹೆಜ್ಜೆ ಮುಂದೆ ಇಡುತ್ತದೆ. ಸಾಮಾಜಿಕ ಅಂಗೀಕಾರ ಸಿಕ್ಕ ಮೇಲೆ ನಮ್ಮ ನಮ್ಮ ಕುಟುಂಬಗಳು ನಮ್ಮನ್ನು ಒಪ್ಪಿಕೊಳ್ಳಲು ಹೆಚ್ಚಾಗಿ ಯಾವ ಸಮಸ್ಯೆಗಳು ಇರಲಾರವೆಂದೇ ಭಾವಿಸುತ್ತೇನೆ"[೨]

ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಉದಾಹರಣೆ ಕೊಡುವುದಾದರೆ ೧೪ ಡಿಸೆಂಬರ್ ೨೦೧೦ರ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ವರದಿ 'ಹಿಜಡಾಗಳಿಂದ ಯುವಕರ ದರೋಡೆ' ಎಂಬ ಶೀರ್ಷಿಕೆಯಡಿಯಲ್ಲಿನ ವಿವರಗಳು ಈ ಮುಂದಿನಂತಿವೆ. 'ಯುವಕನನ್ನು ಅಡ್ಡಗಟ್ಟಿ ಬೆದರಿಸಿದ ಹಿಜಡಾಗಳು ಚಿನ್ನದ ಸರ ದೋಚಿದ ಘಟನೆ ನಡೆದಿದೆ. ಪಶ್ಚಿಮ ವಿಭಾಗದ ಪೋಲಿಸರು ವಿವಿಧ ಪ್ರಕರಣಗಳನ್ನು ಬೇಧಿಸಿ ವಶಪಡಿಸಿಕೊಂಡ ವಸ್ತುಗಳನ್ನು ವಿತರಿಸಿದ

ನಂತರ ಮಾತನಾಡಿದ ಅವರು 'ನಗರದಲ್ಲಿ ಹಿಜಡಾಗಳ ಕಾಟ ಹೆಚ್ಚಾಗುತ್ತಿದೆ ಎಂದು ದೂರುಗಳು ಬರುತ್ತಿವೆ. ಆದ್ದರಿಂದ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ. ಬಲವಂತವಾಗಿ ಹಣ ವಸೂಲಿ ಮಾಡುವವರ ಮೇಲೆ ದರೋಡೆ ಪ್ರಕರಣ ದಾಖಲಿಸಲು ಹೇಳಿದ್ದೇನೆ. ಸಂಚಾರಕ್ಕೆ ಅಡ್ಡಿ ಪಡಿಸುವವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು. ಪ್ರಜಾವಾಣಿಪತ್ರಿಕೆಯಲ್ಲಿ ಪ್ರಕಟವಾದ ವರದಿ ಹೀಗಿದೆ. 'ರಾಜ್ಯ ಪೋಲಿಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ಕಾನ್ಸ್ಟೇಬಲ್ ಆಗಿರುವ ಮೂರ್ತಿ ಎಂಬುವರನ್ನು ಹಿಜಡಾಗಳು ಇತ್ತೀಚೆಗೆ ವಿಜಯನಗರದ ಸಮೀಪ ಅಡ್ಡಗಟ್ಟಿ ಚಿನ್ನದ ಸರ ದರೋಡೆ ಮಾಡಿದ್ದರು. ಪ್ರಮುಖವಾಗಿ ಇವರು ವಾಹನ ಸವಾರರನ್ನು ಟಾರ್ಗೆಟ್ ಮಾಡುತ್ತಾರೆ. ಹಣ ಕೊಡಲು ನಿರಾಕರಿಸಿದರೆ ನಿಂದಿಸುವ ಅವರು ಕೆನ್ನೆ ಚಿವುಟಿ ಮುಜುಗರ ಉಂಟುಮಾಡುತ್ತಾರೆ. ಇದನ್ನು ಪ್ರತಿಭಟಿಸಿದರೆ ಜಗಳಕ್ಕೆ ನಿಲ್ಲುವ ಅವರು ಹಲ್ಲೆ ನಡೆಸಲು ಹಿಂಜರಿಯುವುದಿಲ್ಲ. ಅಂಗಡಿ ಮುಂಗಟ್ಟುಗಳಲ್ಲೂ ಹಿಜಡಾಗಳು ಹಣ ವಸೂಲು ಮಾಡುತ್ತಾರೆ. ಗುಂಪಾಗಿ ದಾಂಗುಡಿ ಇಡುವ ಹಿಜಡಾಗಳು ಹಣಕ್ಕೆ ಬೇಡಿಕೆ ಇಡುತ್ತಾರೆ. ಐದು ಹತ್ತು ರೂಪಾಯಿ ನೀಡಿದರೆ ಮುಖಕ್ಕೆ ಎಸೆಯುತ್ತಾರೆ.

ನಗರದ ಪ್ರಮುಖ ರಸ್ತೆಗಳಲ್ಲಿ ರಾತ್ರಿ ವೇಳೆ ಹಿಜಡಾಗಳು ದರೋಡೆ ಕೃತ್ಯಗಳಲ್ಲಿ ತೊಡಗುತ್ತಾರೆ. ರಸ್ತೆ ಬದಿ ನಿಂತು ವಾಹನ ಸವಾರರಿಗೆ ಅವರು ಕೈ ತೋರಿಸುತ್ತಾರೆ. ಚೆನ್ನಾಗಿ ಮೇಕಪ್ ಮಾಡಿಕೊಳ್ಳುವ ಅವರನ್ನು ಹಿಜಡಾಗಳೆಂದು ಒಂದೇ ನೋಟಕ್ಕೆ ಗುರುತಿಸಲಾಗದು. ಒಳ್ಳೆ ಹುಡುಗಿ ಸಿಕ್ಕಳೆಂದು ಪಿಕ್‌ಅಪ್ ಮಾಡಲು ಹೋದರೆ ಹಣ, ಒಡವೆ ಕಳೆದುಕೊಳ್ಳುವುದು ಖಚಿತ. ಲಾಡ್ಜ್, ಮನೆ ಅಥವಾ ಪಾರ್ಕುಗಳಿಗೆ ಕರೆದೊಯ್ಯುವ ಅವರು ಬೆತ್ತಲೆಗೊಳಿಸಿ ದೋಚುತ್ತಾರೆ. ಇದರಿಂದ ಮುಜುಗರ ಅನುಭವಿಸುವ ಜನರು ದೂರನ್ನೇ ನೀಡುವುದಿಲ್ಲ. ಕೆಲವರು ಮಾತ್ರ ಪ್ರಕರಣ ದಾಖಲಿಸುತ್ತಾರೆಂದು ಪೋಲಿಸರು ಹೇಳುತ್ತಾರೆ.'[೪೩]

ಈ ಘಟನೆ ೨೦೧೧ರಲ್ಲಿ ನಡೆದರೂ ೨೦೦೮ರಲ್ಲೇ ಲಿವಿಂಗ್ ಸ್ಮೈಲ್ ವಿದ್ಯಾ ಬರೆದ ಈ ಸಾಲು ಉತ್ತರ ಕೊಡುತ್ತದೆ. ಹೊಟ್ಟೆ ಎಂಬುದೊಂದು ಇಲ್ಲದಿದ್ದರೆ ಯಾವ ಹಿಜಡಾವೂ ಇಲ್ಲಿ ಯಾವ ದಂಧೆಯನ್ನು ಮಾಡಲಾರಳು, ವ್ಯಭಿಚಾರಕ್ಕೆ ಇಳಿಯಲಾರಳು, ಭಿಕ್ಷೆ ಬೇಡಲಾರಳು. ಇದರಲ್ಲಿ ಯಾವ ಸಂಶಯವೂ ಬೇಡ" ಎನ್ನುವುದು ಮಂಗಳಮುಖಿಯರ ಬದುಕಿಗೆ ಹಿಡಿದ ಕನ್ನಡಿಯಾಗಿದೆ

ದರೋಡೆ ಮಾಡುವುದಾಗಲಿ, ವೇಶ್ಯಾವೃತ್ತಿ ಮಾಡಿ ಬದುಕುವುದಾಗಲಿ, ಕಳ್ಳತನ ಮಾಡುವ ಸಂದರ್ಭವಾಗಲಿ ಇದಕ್ಕೆ ಪ್ರೇರಣೆ ಸಮಾಜವೇ ಕಾರಣವೆಂದಾದರೂ ಅದರ ಪರಿಣಾಮ ಮತ್ತೆ ಸಮಾಜದ ಮೇಲೆಯೇ ಆಗುವುದರಿಂದ ಅದನ್ನು ತಡೆಯುವ ಅಗತ್ಯವಿದೆ. ನಕಾರಾತ್ಮಕ

ವ್ಯಕ್ತಿತ್ವದ ಮನುಷ್ಯ ಪರಿವರ್ತನೆಯಾಗುವ ಮನಸ್ಸು ಮಾಡಿದರೆ ಸಕಾರಾತ್ಮಕವಾಗಿ ಬೆಳೆಯಬಹುದಾಗಿದೆ. ವಾಲ್ಮೀಕಿ, ಅಂಗುಲೀಮಾಲ ಬದಲಾದುದರ ಬಗ್ಗೆ ಚರಿತ್ರೆಯಲ್ಲಿ ಓದಿದ್ದೇವೆ.

ವ್ಯಕ್ತಿಯ ಬಾಲ್ಯಕ್ಕೂ ವ್ಯಕ್ತಿತ್ವಕ್ಕೂ ಪರಸ್ಪರ ಸಂಬಂಧವಿದೆ. ಒಬ್ಬ ವ್ಯಕ್ತಿಯ ಬಾಲ್ಯದ ಸಿಹಿಕಹಿ ಅನುಭವಗಳು ವ್ಯಕ್ತಿಯ ಜೀವನದ ಮೇಲೆ ಸಕಾರಾತ್ಮಕ ಅಥವಾ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತವೆ. ಒಬ್ಬ ವ್ಯಕ್ತಿ ಬಾಲ್ಯದಿಂದಲೇ ತಿರಸ್ಕಾರ, ಅಪಮಾನ, ತಾತ್ಸಾರಗಳಂತಹ ಕೇವಲ ಕಹಿಯನ್ನೇ ಉಂಡ ಮನಸ್ಸು ನಕಾರಾತ್ಮಕವಾಗಿ ರೂಪುಗೊಂಡು ಇಡೀ ಜೀವನ ನೇತ್ಯಾತ್ಮಕವಾಗಿ ರೂಪುಗೊಳ್ಳುತ್ತದೆ. ಇಂತಹ ವ್ಯಕ್ತಿಗಳು ಜೀವನದಲ್ಲಿ ಸುಲಭವಾಗಿ ಏರಬಹುದಾದ ಯಶಸ್ಸಿನ ಮೆಟ್ಟಿಲುಗಳನ್ನು ಏರುವುದೇ ಇಲ್ಲ. ಅರ್ಥವಿಲ್ಲದ ಯಾವುದೋ ಮಾನಸಿಕ ವೈಫಲ್ಯ ಇವರನ್ನು ಹಿಂದಕ್ಕೆಳೆದು ಸೋಲುಗಳ ಸರಮಾಲೆಯನ್ನು ತಂದಿಡುತ್ತದೆ. ಕೇವಲ ಕಹಿಯನ್ನೇ ಅನುಭವಿಸಿದ ಬಾಲ್ಯ ವ್ಯಕ್ತಿಯ ಬದುಕನ್ನು ಪ್ರೀತಿಸುವ ಶಕ್ತಿಯನ್ನು ಕಸಿದುಕೊಂಡುಬಿಡುತ್ತದೆ. ಒಂದು ವೇಳೆ ನಿಷ್ಕಲ್ಮಷ ಪ್ರೀತಿ ದೊರೆತರೂ ಇವರು ಈ ಪ್ರೀತಿಗೆ ಸ್ಪಂದಿಸಲಾರರು. ಏಕೆಂದರೆ ಹಿಂದೆಂದೂ ಅನುಭವಿಸದ ಈ ಪ್ರೀತಿಗೆ ಪ್ರತಿಸ್ಪಂದಿಸಲು ಅದಕ್ಕೆ ತತ್ಸಮಾನವಾದ ಮನಸ್ಸಿನ ರಚನೆಯೇ ಇರುವುದಿಲ್ಲ.

ತೃತೀಯ ಲಿಂಗವಾದ ರೇವತಿಯ ಆತ್ಮಕಥೆ ಬದುಕು ಬಯಲು. ಅಪ್ಪ ಅಮ್ಮನನಿಗೆ ಕೊನೆಯ ಮಗನಾಗಿ ಹುಟ್ಟಿ ಬಾಲ್ಯವನ್ನು ಆನಂದದಿಂದಲೇ ಕಳೆದ ದೊರೈಸ್ವಾಮಿ ಬೆಳೆಯುತ್ತಾ ಹೆಣ್ಣಾಗಿ ಪರಿವರ್ತನೆಯಾದ ಕಥೆ. ಜಮೀನು ದುಡಿಮೆಯ ಮಧ್ಯೆ ಊಟ ಬಟ್ಟೆಗೆ ತೊಂದರೆ ಇಲ್ಲದೇ ಕಳೆದ ವ್ಯಕ್ತಿತ್ವವು ನಡವಳಿಕೆ ಮತ್ತು ಬರಹಗಳಲ್ಲಿ ವ್ಯಕ್ತವಾಗುತ್ತದೆ. ರೇವತಿಯ ಬದುಕಿನಲ್ಲಿ ಜೀವನವೇ ಒಂದು ಹೋರಾಟ. ಎಷ್ಟೇ ಕಷ್ಟ ಬಂದರೂ ಬದುಕಿನ ಪಯಣ ಮುಂದುವರಿಯಲೇಬೇಕು ಎಂಬುದನ್ನು ಅನುಭವದಿಂದ ಕಲಿತೆ ಎನ್ನುವಲ್ಲಿ ಬೇರೆ ಬೇರೆ ಪಾತ್ರಗಳಿಂದ ನಾವು ಜೀವನದಲ್ಲಿ ಕಲಿಯುತ್ತಾ ಬೆಳೆಯುತ್ತಾ ಹೋಗುತ್ತೇವೆ ಎನ್ನುತ್ತಾರೆ. ಒಂದೊಂದು ಸಣ್ಣ ಕ್ರಿಯೆಯ ಹಿಂದೆಯೂ ಗಾಢ ಅನುಭವವಿದೆ ಎನ್ನುವ ರೇವತಿ ಅವಮಾನ, ನೋವು ಕೊಟ್ಟವರ ಮೇಲೆ ಸೇಡು ತೀರಿಸಿಕೊಳ್ಳುವ, ಶಿಕ್ಷೆ ನೀಡುವ ಕೆಲಸ ತನ್ನದಲ್ಲ ಎಂಬ ಮನೋಭಾವ ರೇವತಿಯದ್ದು. ಅದರ ಬದಲಾಗಿ ಅವರ ಸಮುದಾಯದವರಿಗೆ ಅವರದೇ ಆದ ನೋವುಗಳಿವೆ. ಅದನ್ನು ಬೇರೆಯವರು ಅರ್ಥಮಾಡಿಕೊಳ್ಳಬೇಕು ಎಂಬ ಆಶಾವಾದ ಇಲ್ಲಿದೆ.

ಗಂಡಾಗಲೀ ಹೆಣ್ಣಾಗಲೀ ಗಂಡಿನಲ್ಲಿ ಹೆಣ್ಣಿನ ಗುಣಗಳು ಹಾಗೂ ಹೆಣ್ಣಿನಲ್ಲಿ ಗಂಡಿನ ಗುಣಗಳು ಇರುತ್ತವೆ. ಇದು ಹಾರ್ಮೋನಿನ ಬದಲಾವಣೆಯಿಂದ ಆದ ದೈಹಿಕ ಸಮಸ್ಯೆಯಾದರೂ

ದೇಹ ಮತ್ತು ಮನಸ್ಸು ಒಂದಕ್ಕೊಂದು ಸಂಬಂಧ ಹೊಂದಿರುತ್ತದೆ. ಆಯಾ ದೇಹಕ್ಕೆ ತಕ್ಕ ಹಾಗೆ ಭಾವನೆಗಳು ವರ್ತನೆಗಳು ಇರುತ್ತವೆ. ಮೊದಲು ಗಂಡಾಗಿದ್ದು ಈಗ ಹೆಣ್ಣಾಗಿ ಬದಲಾಗುವುದರಿಂದ ಭಾವನೆಗಳು ಬದಲಾಗುತ್ತವೆ. ಆ ಬದಲಾದ ಭಾವನೆಗಳನ್ನು ಸಮಾಜ ಒಪ್ಪದೇ ಹತ್ತಿಕ್ಕುವುದು ಮತ್ತು ಹೀಗೆಯೇ ಇರಬೇಕೆಂದು ಒತ್ತಡ ಹೇರುವುದನ್ನು ವಿದ್ಯಾ ಮತ್ತು ರೇವತಿ ಇಬ್ಬರೂ ಪ್ರತಿರೋಧ ವ್ಯಕ್ತಪಡಿಸುತ್ತಾರೆ. ರೇವತಿಗೆ ಅವಳದೇ ಆದ ಭಾವನೆಗಳಿದ್ದವು. ಆದರೆ ಅವಳ ಪ್ರಕಾರ ಸಹಜವಾಗಿರುವುದು ಸಮಾಜಕ್ಕೆ ಅಸಹಜವಾಗಿ ಕಾಣುತ್ತಿತ್ತು. ಗಂಡಸರನ್ನು ನೋಡಿದರೆ ವಿಪರೀತ ನಾಚಿಕೆಯಾಗಿ ಅವರಿಂದ ಆಕರ್ಷಿವಾಗುತ್ತಿದ್ದುದನ್ನು ರೇವತಿ ಹೇಳುತ್ತಾರೆ. ಆದರೆ ಅವಳು ಗಂಡಿನ ದೇಹದೊಳಗೆ ಸಿಲುಕಿಕೊಂಡಿರುವ ಹೆಣ್ಣಾಗಿದ್ದಳು.

ತೃತೀಯ ಲಿಂಗದಲ್ಲಿ ಮೇಲು ಕೀಳಿನ ವ್ಯವಸ್ಥೆಯಾಗಲಿ, ಧಾರ್ಮಿಕ ಭಿನ್ನತೆಗಳಾಗಲೀ, ಬಡವರು ಶ್ರೀಮಂತರೆಂಬ ಬೇಧವಾಗಲಿ, ಹೆಣ್ಣಾಗಿದ್ದು ಗಂಡಾದವರಾಗಲೀ, ಗಂಡಾಗಿದ್ದು ಹೆಣ್ಣಾಗಿ ಬದಲಾದವರಾಗಲಿ ಇವುಗಳು ಯಾವವೂ ಮುಖ್ಯವಾಗಿರಲಿಲ್ಲ ಎಂಬ ಮಾತನ್ನು ರೇವತಿ ಹೇಳುತ್ತಾರೆ. ವಿದ್ಯಾ ಮತ್ತು ರೇವತಿ ಹೇಳುವುದೇನೆಂದರೆ ದೈಹಿಕವಾಗಿ ನೋವು ಅನುಭವಿಸುವ ಯಾವ ಜೀವಿಗಾದರೂ ಪರಿಚಿತರಾಗಲೀ ಅಪರಿಚಿತರಾಗಲೀ ಸಹಾಯ ಮಾಡುತ್ತಾರೆ. ನಮ್ಮನ್ನು ಮನುಷ್ಯರಿರಲಿ ಒಂದು ಜೀವ ಎಂದು ಪರಿಗಣಿಸುತ್ತಿಲ್ಲ ಎಂಬ ನೋವು ಅವರನ್ನು ಕಾಡಿದೆ. ವಿದ್ಯಾ ಶಿಕ್ಷಣ ಪಡೆದೂ ಭಿಕ್ಷಾವೃತ್ತಿ ಅನಿವಾರ್ಯವಾಗಿ ಸ್ವೀಕರಿಸಿದರೆ ರೇವತಿಗೆ ವೇಶ್ಯಾವೃತ್ತಿ ಅನಿವಾರ್ಯವಾಗುತ್ತದೆ. ಈ ವೇಶ್ಯಾವೃತ್ತಿಯಲ್ಲಿ ಅಧಿಕಾರಶಾಹಿಗಳು ಅವರನ್ನು ಬಳಸಿಕೊಂಡು, ಕಿರುಕುಳ ಕೊಡುವುದನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತಾರೆ. ಎಲ್ಲರ ಬದುಕಲ್ಲೂ ಹೋರಾಟ ಇರುತ್ತದೆ ಆದರೆ ಅವರ ಬದುಕೇ ಹೋರಾಟವಾಗಿದೆ.

ರೇವತಿ ಹೇಳುವುದೇನೆಂದರೆ "ಲೋಕ ನನ್ನನ್ನು ಓರೆಯಾಗೇ ನೋಡುತ್ತೆ. ಗಂಡಸಾಗಿ ಹುಟ್ಟಿ ಹೆಂಗಸಾಗಿದ್ದು ತಪ್ಪು ಅನ್ನುತ್ತೆ. ದೇವರೇ ನನಗೆ ಈ ಭಾವನೆಗಳನ್ನು ಕೊಟ್ಟಿರೋದು. ಆದರೆ ಈ ಭಾವನೆಗಳನ್ನು ಗೌರವಿಸದಿರೋ ಜಗತ್ತಲ್ಲಿ ನಾನು ಬದುಕಬೇಕು. ಭಿಕ್ಷೆ ಬೇಡೋದನ್ನ, ಮದುವೆ ಮಾಡ್ಕೊಳೋದನ್ನ ತಪ್ಪು ಎಂದು ಜಗತ್ತು ಪರಿಗಣಿಸುತ್ತೆ. ನಾನು ಕೊಲೆ ಮಾಡಿಲ್ಲ. ಅಥವಾ ಮೋಸ ಮಾಡಿಲ್ಲ ಆದರೂ ಅಪರಾಧಿ ತರಹ ಜಗತ್ತು ನನ್ನನ್ನು ಕಾಣುತ್ತೆ ಎನ್ನುತ್ತಾರೆ. ಮತ್ತೂ ಮುಂದುವರೆದು "ಯಾವುದನ್ನು ಅಸಹಜ, ಕಾನೂನು ವಿರೋಧಿ ಎಂದು ಪರಿಗಣಿಸುತ್ತ ಬಂದಿದ್ದೀರೋ ಅದು ಗೌರವಕ್ಕೆ ಅರ್ಹ ಎಂದು ಒಪ್ಪಿಕೊಳ್ಳಿ. ನಿಮ್ಮ ಬೆರಳೊಂದು ಅಸಹಜವಾಗಿ ಉದ್ದವಾಗಿದ್ದರೆ ನೀವದನ್ನು ಕತ್ತರಿಸಿ ಹಾಕುತ್ತೀರಾ? ಮಹಿಳೆಯ ಗರ್ಭಕೋಶದಲ್ಲಿ ತೊಂದರೆ ಇದ್ದರೆ ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದು ಹಾಕಲು ಯಾರೂ ಹಿಂದೆ ಮುಂದೆ

ನೋಡುವುದಿಲ್ಲ. ಗರ್ಭದಲ್ಲಿನ ಮಗು ಹೆಣ್ಣೆಂದರೆ ಭ್ರೂಣಹತ್ಯೆ ಮಾಡುವುದಕ್ಕೆ ನೀವು ಹಿಂಜರಿಯುವುದಿಲ್ಲ. ಇವೆಲ್ಲವೂ ಕಾನೂನು/ಪ್ರಕೃತಿ ವಿರೋಧಿಯೇ. ಆದರೆ ವಿಷಯಗಳನ್ನು ಮಾತ್ರ ಪ್ರಕೃತಿ ಮತ್ತು ಕಾನೂನಿನ ಅಡಿ ತರುತ್ತೀರಿ" ಎನ್ನುತ್ತಾರೆ.

ಅವರಿಗೆ ಅಗತ್ಯವಾದ ರೇಶನ್ ಕಾರ್ಡ, ವಸತಿ ಹಕ್ಕು, ಉದ್ಯೋಗ, ವೈದ್ಯಕೀಯ ಸೌಲಭ್ಯ ಇವೆಲ್ಲವೂ ಅವರಿಗೆ ಬೇಕಾಗಿದೆ. ಅದನ್ನೆಲ್ಲ ಪೂರೈಸುವವರು ಯಾರು? ಯಾರಲ್ಲಿ ಕೇಳಬೇಕಾಗಿದೆ. ಶಸ್ತ್ರಚಿಕಿತ್ಸೆಗೆ ಸೂಕ್ತ ಸೌಲಭ್ಯಗಳು, ನಂತರ ಆರೈಕೆಯ ವ್ಯವಸ್ಥೆ ಇವುಗಳಿಗೆಲ್ಲ ಸೂಕ್ತ ಉತ್ತರ ನೀಡುವವರು ಯಾರು? ಎಲ್ಲ ಜೀವಿಗಳಿಗೂ ಸಹಜವಾದ ಪ್ರೀತಿ ಅಗತ್ಯ ಸೌಲಭ್ಯಗಳು ಬೇಕಾಗುತ್ತದೆ. ಘನತೆ ಗೌರವದಿಂದ ಬದುಕಬೇಕು ಎಂಬುದು ನಮ್ಮ ಜೀವನದಲ್ಲಿ ತಪ್ಪು ಯಾಕೆ ಎನ್ನುವುದು ರೇವತಿ ಪ್ರಶ್ನೆ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವ ಜವಾಬ್ದಾರಿ ತೆಗೆದು ಕೊಳ್ಳುವವರು ಯಾರು? ಎಂದು ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳಬೇಕಾಗಿದೆ. ಅವರ ಈ ಪರಿಸ್ಥಿತಿಗೆ ನಮ್ಮ ಜವಾಬ್ದಾರಿ ಎಷ್ಟು? ಅವರ ಪಾಲು ಎಷ್ಟು? ಇದಕ್ಕೆ ಕಾರಣವೇನು? ಈ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಡುವ ಹೊಣೆ ಹೊರಬೇಕಾಗಿದೆ.

ಯಾವ ವ್ಯಕ್ತಿ ಜೀವನ ಪ್ರೀತಿ (ಕೊಡುವುದು/ತೆಗೆದುಕೊಳ್ಳುವುದು)ಯನ್ನು ಪಡೆದು ಕೊಂಡಿದ್ದಾನೋ ಅದಕ್ಕೆ ಕಾರಣ ಅವರಿಗೆ ದೊರೆತ ನೆಮ್ಮದಿಯ ಬಾಲ್ಯ ಮತ್ತು ಪ್ರೀತಿ ವಾತ್ಸಲ್ಯಗಳು. ಅಬ್ದುಲ್ ಕಲಾಮ್‌ರವರ ಬಾಲ್ಯಕ್ಕೂ ವ್ಯಕ್ತಿತ್ವಕ್ಕೂ ನಿಕಟ ಸಂಬಂಧವಿದೆ. ಇದು ಸಕಾರಾತ್ಮಕವಾಗಿದೆ. ಮಂಗಳಮುಖಿಯಾದ ವಿದ್ಯಾ ಬಾಲ್ಯ, ವ್ಯಕ್ತಿತ್ವ ನಕಾರಾತ್ಮಕವಾಗಿದೆ. ಅಂಚಿನ ಸಮುದಾಯದವರನ್ನು, ಮಹಿಳೆಯರನ್ನು, ಆರ್ಥಿಕ ದುರ್ಬಲರನ್ನು ನಕಾರಾತ್ಮಕವಾಗಿ ಮೌಲ್ಯಮಾಪನ ಮಾಡುವುದು ಬಹಳ ಜನಪ್ರಿಯ ವಿಧಾನವಾಗಿದೆ. ಆದರೆ ಆರ್ಥಿಕವಾಗಿ ಶ್ರೀಮಂತರಾಗಿರುವವರು, ಲಕ್ಷಗಟ್ಟಲೆ ಲಂಚ ಹೊಡೆದು ಐಷಾರಾಮಿ ಜೀವನ ನಡೆಸುವವರು, ಕಳ್ಳ ಸಂತೆಕೋರರು, ಆಳುವವರು ಇವರನ್ನು ನಕಾರಾತ್ಮಕವಾಗಿ ಮೌಲ್ಯಮಾಪನ ಮಾಡುವ ಗೋಜಿಗೇ ಹೋಗುತ್ತಿಲ್ಲ. ಅಂದರೆ ಅಡಿಕೆ ಕದ್ದವನು ಮಾತ್ರ ಕಳ್ಳನಾಗಿ ಕಾಣಿಸುತ್ತಾನೆ. ಆನೆ ಕದ್ದವನು ಮಾತ್ರ ಸಂಪನ್ನ ವ್ಯಕ್ತಿಯಾಗಿ ಮೆರೆಯುತ್ತಾನೆ

ಮಕ್ಕಳಿಗೆ ಸಮಯ ಕೊಡಲಾಗದ ಶ್ರೀಮಂತ ಕುಟುಂಬಗಳು/ಬ್ಯುಸಿಯಾಗಿರುವ ಪೋಷಕರ ಮಕ್ಕಳು. ನೇತ್ಯಾತ್ಮಕ ವ್ಯಕ್ತಿಗಳಾಗಿ ರೂಪುಗೊಳ್ಳುವ ಅನೇಕ ಉದಾಹರಣೆಗಳು ಈ ಅಂಶವನ್ನು ಧೃಡಪಡಿಸುತ್ತವೆ. ನೇತ್ಯಾತ್ಮಕವಾಗಿ ರೂಪುಗೊಂಡ ವ್ಯಕ್ತಿತ್ವದವರಿಗೆ ಸೇಡು ತೀರಿಸಿಕೊಳ್ಳಲು ತೊಂದರೆ ಮಾಡಿದವರೇ ಆಗಬೇಕಿಲ್ಲ. ಯಾರು ಅವರ ಹತ್ತಿರದಲ್ಲಿರುತ್ತಾರೋ ಅವರ ಮೇಲೆಲ್ಲ ಈ ಪರಿಣಾಮವಾಗುತ್ತದೆ.

ನಮ್ಮ ಸಮಾಜದಲ್ಲಿ ನಡೆದಿರುವ ಸಾಮಾಜಿಕ ಸುಧಾರಣೆಯ ಹೋರಾಟಗಳು– ಸಾಮಾಜಿಕ ಪರಿವರ್ತನೆಯ ವಿಚಾರದಲ್ಲಿ, ಆಡಳಿತಶಾಹಿ– ಪುನರ್ವಸತಿ ವಿಚಾರದಲ್ಲಿ, ನ್ಯಾಯಾಲಯಗಳು– ನ್ಯಾಯ ಪ್ರಧಾನ ಸಂದರ್ಭದಲ್ಲಿ, ಮಾಧ್ಯಮಗಳು– ಸಮಸ್ಯೆಗಳನ್ನು ಬಿಂಬಿಸಬೇಕಾದ ಸಂದರ್ಭದಲ್ಲಿ, ಎನ್.ಜಿ.ಓಗಳು ಸೇವಾ ಸಂದರ್ಭಗಳಲ್ಲಿ ತೃತೀಯ ಲಿಂಗಿಗಳ ವಿಚಾರವನ್ನು ಪ್ರಾಶಸ್ತ್ಯದ ಪ್ರಶ್ನೆಯಾಗಿ ಎತ್ತಿಕೊಳ್ಳಲು ವಿಫಲವಾಗಿರುವುದನ್ನು ನಾವು ಕಾಣುತ್ತೇವೆ.

ಸಲಿಂಗ ಸಂಬಂಧವನ್ನು ಮಾನ್ಯ ಮಾಡಿದ ಭಾರತೀಯ ನ್ಯಾಯ ಪಾಲಿಕೆ ಗಂಡು ಅಥವಾ ಹೆಣ್ಣಿನ ಲಿಂಗ ಪರಿವರ್ತನೆ ಐಚ್ಛಿಕವಾಗಿರುವ ಹಂತದಲ್ಲಿ ತೃತೀಯ ಲಿಂಗಿಗಳಿಗೆ ಮಾನವೀಯ ದೃಷ್ಟಿಯಿಂದ ಲಿಂಗ ಪರಿವರ್ತನೆಯ ಅವಕಾಶವನ್ನು ಕೊಡದಿರುವುದನ್ನು ಗಮನಿಸಲೇಬೇಕಾಗುತ್ತದೆ. ಲಿವಿಂಗ್ ಸ್ಮೈಲ್ ವಿದ್ಯಾ ಹೇಳುವ ಪ್ರಕಾರ 'ಹಿಜಡಾಗಳ ಪ್ರಶ್ನೆ, ಆತಂಕ, ಸಮಸ್ಯೆಯೇನೆಂದರೆ ಹಿಜಡಾಗಳ ಹುಟ್ಟನ್ನು ಇರುವಿಕೆಯನ್ನು ತಪ್ಪಿಸಲು ಸಾಧ್ಯವಿಲ್ಲದಿರುವಾಗ ಅವರ ಲಿಂಗ ಬದಲಾವಣೆಯ ಶಸ್ತ್ರ ಚಿಕಿತ್ಸೆಯನ್ನೇಕೆ ಕಾನೂನುಬದ್ಧವಾಗಿಸಬಾರದು? ಇದು ಎಷ್ಟೋ ದೇಶಗಳಲ್ಲಿ ಈಗಾಗಲೇ ಚಾಲ್ತಿಯಲ್ಲಿದೆ. ಈ ದೇಶದಲ್ಲಿ ಮಾತ್ರ ಏಕಿಲ್ಲ? ಈ ಬಗ್ಗೆ ಯಾರೂ ಯೋಚಿಸಲು ಕೂಡ ಏಕೆ ಸಿದ್ಧವಾಗಿಲ್ಲ? ಸರ್ಕಾರ ಒಂದು ಹೆಜ್ಜೆ ಮುಂದಿಟ್ಟರೆ ನಂತರ ಸಮಾಜ ಕೂಡ ಇನ್ನೊಂದು ಹೆಜ್ಜೆ ಮುಂದೆ ಇಡುತ್ತದೆ. ಸಾಮಾಜಿಕ ಅಂಗೀಕಾರ ಸಿಕ್ಕ ಮೇಲೆ ನಮ್ಮ ನಮ್ಮ ಕುಟುಂಬಗಳು ನಮ್ಮನ್ನು ಒಪ್ಪಿಕೊಳ್ಳಲು ಹೆಚ್ಚಾಗಿ ಯಾವ ಸಮಸ್ಯೆಗಳು ಇರಲಾರವೆಂದೇ ಭಾವಿಸುತ್ತೇನೆ"[೪೪]

ತೃತೀಯ ಲಿಂಗಿಗಳು ಸ್ತ್ರೀಯರಾಗಿ ಕಾಣಿಸಿಕೊಳ್ಳುವುದರ ಹಿಂದೆ ಸಮಾಜದಲ್ಲಿ ಗುಪ್ತಗಾಮಿನಿಯಾಗಿರುವ 'ಹೆಣ್ಣು ಭೋಗದ ಸರಕು" ಎಂಬ ಧೋರಣೆ ಕಾರಣವಾಗಿದೆ. ವೇಶ್ಯಾವೃತ್ತಿ ಸಂಪಾದನೆಯ ದೃಷ್ಟಿಯಿಂದ ಅನುಕೂಲಕರವಾಗಿರುವುದರಿಂದ ಅದು ತೃತೀಯ ಲಿಂಗಿಗಳಿಗೆ ಸುಲಭದ ಆಯ್ಕೆಯೂ ಆಗುತ್ತದೆ. ಪರಿತ್ಯಕ್ತ/ಪರಿಶಿಷ್ಟ ಬದುಕನ್ನು ನಡೆಸುವ ಇವರಿಗೆ ಅನಿವಾರ್ಯವಾಗಿದೆ.

ಸರ್ಕಾರವೂ ಲಿಂಗ ಪರಿವರ್ತನೆಯ ಹಕ್ಕನ್ನು ಹಿಜಡಾಗಳಿಗೆ ಕೊಡಲು ನಿಧಾನಿಸುವುದರಿಂದ ಸಾಮಾಜಿಕ ಸ್ವಾಸ್ಥ್ಯಕ್ಕೆ ಹಾನಿಯೇ ಹೊರತು ಲಾಭವಿಲ್ಲ. ಲಿಂಗ ಪರಿವರ್ತನೆಯ ಹಕ್ಕು ತೃತೀಯ ಲಿಂಗಿಗಳಿಗೆ ಶಾಸನಾತ್ಮಕವಾಗಿ ದೊರೆತರೆ ಸಾಮಾಜಿಕ ವಿರೋಧ ಇರದು. ಇದ್ದರೂ ಸಮಾಜ ಅದನ್ನು ನಿಧಾನವಾಗಿ ಒಪ್ಪಿಕೊಳ್ಳುತ್ತದೆ. 'ಮೀಸಲಾತಿ' ಸೌಲಭ್ಯವನ್ನು ಜಾರಿಗೆ ತಂದಾಗ ಇದ್ದ ವಿರೋಧ ನಿಧಾನವಾಗಿ ಕರಗಿ ಸಹಜತೆ ನೆಲೆಸಿದ ವಿಚಾರ ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

ಕೆ. ವಿ. ನಾರಾಯಣ ಅವರು, 'ನೆನಪುಗಳ ಬಗೆಗೆ ಅಕ್ಷರ ಜಗತ್ತಿನಲ್ಲಿ ಒಂದು ರೀತಿಯ ಕುತೂಹಲವಿದೆ. ಈಚಿನ ದಿನಗಳಲ್ಲಿ ದಲಿತರ, ಅಲ್ಪಸಂಖ್ಯಾತರ, ನಿರ್ಗತಿಕರ, ದನಿ ಕಳೆದು ಹೋದವರ ನೆನಪಿನ ಜಗತ್ತು ಅಕ್ಷರಗಳಲ್ಲಿ ಮೈತಳೆಯತೊಡಗಿದಂತೆ ಓದುಗರು ಉತ್ಸಾಹಿತರಾಗುತ್ತಾರೆ. ಅಂತ ಬರೆಹಗಳನ್ನು ವಿಶ್ಲೇಷಿಸುವವರು ಉಮೇದಿನಿಂದ ಆ ಬರೆಹಗಳ ಪರವಾಗಿ ಅವುಗಳಿಗೊಂದು ಚೌಕಟ್ಟು ಕಟ್ಟುತ್ತಾರೆ. ಯಾಕೆ ಹೀಗೆಂದು ಪ್ರಶ್ನಿಸುತ್ತಾರೆ. ಹೀಗೆ ಈವರೆಗೆ ಅನಾವರಣಗೊಳ್ಳದಿದ್ದ ಜಗತ್ತನ್ನು ಹೊರಗಿಡುವ ಉಮೇದುಳ್ಳವರು ಒಂದು ಕಡೆಯಾದರೆ ಅಂಥವರ ಬರವಣಿಗೆಯನ್ನು ಓದಲು ಕುತೂಹಲಿಗಳಾದವರು ಮತ್ತೊಂದು ಕಡೆ. ಈ ಎರಡೂ ನೆಲೆಗಳನ್ನು ಅರಿಯುವುದು ಅವಶ್ಯವಾಗಿದೆ ಎನ್ನುತ್ತಾರೆ"[೪೫]

ಮಹಿಳಾ ಆತ್ಮಕಥೆಯ ವಿಶೇಷತೆ ಜಾತಿ ವರ್ಗ ಲಿಂಗಗಳನ್ನು ಮೀರಿದ್ದು. ಪ್ರತಿಯೊಬ್ಬ ಹೆಣ್ಣಿನ ಅನುಭವವೂ ವಿಶಿಷ್ಟವಾಗುತ್ತದೆ. ಹೆಣ್ಣಿನ ಹೆರಿಗೆ ನೋವು ಒಂದು ರೀತಿಯಾದರೆ, ಬಂಜೆಯ ನೋವು ಇನ್ನೊಂದು ರೀತಿ. ಇವುಗಳಲ್ಲಿ ಒಂದಕ್ಕೊಂದು ಹೋಲಿಸಲಾಗುವುದಿಲ್ಲ. ಹೆರಿಗೆ ನೋವು ಹೆಣ್ಣಿಗೆ ಧನ್ಯತೆಯಲ್ಲಿ ಪರ್ಯಾವಸಾನವಾದರೆ ಬಂಜೆತನ ಶಾಶ್ವತ ನೋವಾಗಿ ಉಳಿದುಕೊಳ್ಳುತ್ತದೆ. ಮೊದಲನೆಯದನ್ನು ಸಮಾಜ ಸಂಭ್ರಮದಿಂದ ಸ್ವಾಗತಿಸಿದರೆ ಇನ್ನೊಂದು ಹೆಣ್ಣಿನ ಜೀವಿತದುದ್ದಕ್ಕೂ ತೀಕ್ಷ್ಣ ಭತ್ಸನೆಯ ದೃಷ್ಟಿಯಿಂದ ನೋಡುತ್ತದೆ. ಮಹಿಳಾ ಅನುಭವ ಅಂದರೆ ಅದನ್ನು ಸಮಾಜದ ಮುಖ್ಯವಾಹಿನಿಯಿಂದ ಹೊರಗಿಟ್ಟು ನೋಡಬೇಕಾಗಿಲ್ಲ. ಈ ಅನುಭವಗಳು ವಿಶಿಷ್ಟ ಸಂವೇದನೆಗಳನ್ನು ಒಳಗೊಂಡವು. ತಂದೆ ಮಗಳ ಅನೈತಿಕ ಸಂಬಂಧ, ಮಹಿಳೆ ಯಾವ ಭಾಷೆ ಮಾತಾಡಲಿ, ಯಾವ ಪ್ರಾಂತ್ಯದಲ್ಲಿ ಇರಲಿ, ಅವಳ ನೋವಿನ ನಿಟ್ಟುಸಿರಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ.

ಜಾತಿಯ ಹೆಸರಿನಲ್ಲಿ ನಡೆಯುವ ಶೋಷಣೆಯ ಜೊತೆಗೆ ಲಿಂಗ ತಾರತಮ್ಯವೂ ಸೇರಿಕೊಂಡಾಗ ಉಂಟಾಗುವ ಅಸಹಾಯಕಥೆ ಮಹಿಳೆಗೆ ಮಾತ್ರ ಸೀಮಿತವಾಗಿದೆ. ಮಹಿಳಾ ಆತ್ಮಕಥೆಯಲ್ಲಿ ಬರೆಯುವ ವಿಷಯವಲ್ಲದೇ, ಎರಡು ಗೆರೆಗಳ ಮಧ್ಯದ ಮೌನವನ್ನು ಆತ್ಮಕಥೆ ಹೇಳುತ್ತದೆ. ಪುರುಷ ಮಹಿಳೆಯ ಸಂಬಂಧಗಳಲ್ಲಿ, ಮಹಿಳೆ ಪುರುಷನ ಜೊತೆ ಸಂಬಂಧ ಹೊಂದಿರಲಿ, ಅಥವಾ ಪುರುಷ ಮಹಿಳೆಯ ಜೊತೆ ಸಂಬಂಧ ಹೊಂದಿರಲಿ ಮೇಲ್ನೋಟಕ್ಕೆ ಒಂದೇ ಆದರೂ ಸಾಮಾಜಿಕವಾಗಿ ಅದನ್ನು ಗ್ರಹಿಸುವಲ್ಲಿ ತುಂಬಾ ವ್ಯತ್ಯಾಸವಿದೆ.

ಪುರುಷ ಏನೇ ತಪ್ಪು ಮಾಡಿದರೂ ಅದಕ್ಕೆಲ್ಲ ಮಹಿಳೆಯೇ ಕಾರಣ ಎಂದು ಅವಳ ತಲೆಗೇ ಬಂದು ಹೆಂಗಸು ತಪ್ಪಿತಸ್ಥಳು ಎನ್ನುವುದು. ಮತ್ತು ಅವಳದ್ದೇ ತಪ್ಪು ಎಂದು ಒಪ್ಪಿಕೊಳ್ಳುವ ಹಾಗೆ ಒತ್ತಡ ಹೇರುತ್ತದೆ. ಅದೇ ರೀತಿ ಸಮಾಜ ಮಹಿಳೆಯನ್ನು ವೇಶ್ಯಾವೃತ್ತಿ

ಮಾಡುತ್ತಾಳೆಂದು ಆರೋಪ ಹೊರಿಸುತ್ತದೆ. ಆದಷ್ಟೂ ಅದೇ ಸ್ಥಿತಿಯಲ್ಲಿರುವಂತೆಯೂ ನೋಡಿಕೊಳ್ಳುತ್ತದೆ. ಅವಳನ್ನು ಉಪಯೋಗಿಸಿಕೊಂಡು ಆರೋಪಿಸಿ ಮೂಲೆಗೆ ತಳ್ಳುತ್ತದೆ. ಮಹಿಳೆ ನ್ಯಾಯ ಕೇಳಬಾರದು ಅಧೀನವಾಗಿಯೇ ಇರಬೇಕೆಂದು ನಿರೀಕ್ಷಿಸುತ್ತದೆ. ಮತ್ತು ನ್ಯಾಯ ಕೇಳಿದರೂ ಅದನ್ನು ಕೊಡುವವರು ಪುರುಷರೇ ಆಗಿರುವುದರಿಂದ ಮತ್ತೆ ಪುರುಷ ಪ್ರಧಾನತೆಯೇ ಮುಖ್ಯವಾಗುತ್ತದೆ. ಅವಳಿಗೆ ಎದುರಾಗುವ ಎಲ್ಲ ಬಗೆಯ ಅಪಾಯಗಳಿಗೆ ಆಕೆಯೇ ಕಾರಣ ಎಂದು ಹೇಳುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಅವಳ ತಪ್ಪಿಲ್ಲದೆಯೇ ಅಪರಾಧೀ ಪ್ರಜ್ಞೆಯನ್ನು ಹುಟ್ಟುಹಾಕಿದೆ.

ಮಹಿಳೆಯ ಕೆಲವು ಸಂದರ್ಭಗಳು ಪುರುಷ ಪ್ರಾಧಾನ್ಯದಿಂದ ಉತ್ಪತ್ತಿಯಾದುದು. ಗಂಡಿಗೆ ವಿಧೇಯವಾಗಬೇಕಾದ ಅನಿವಾರ್ಯತೆಯಲ್ಲಿ ಹೆಣ್ಣು ಹೆಣ್ಣಿನೊಂದಿಗೆ ಜಗಳವಾಡುವ ಶೋಷಿಸುವ, ದ್ವೇಷಿಸುವ, ಮತ್ಸರಿಸುವ ಸಂದರ್ಭಗಳು ಸೃಷ್ಟಿಯಾಗುತ್ತವೆ. ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದು ಪುರುಷ ಪ್ರಧಾನತೆಯ ಇನ್ನೊಂದು ಮುಖವನ್ನು ಹೇಳುತ್ತದೆ.

ವೇದಕಾಲದಿಂದ ಹಿಡಿದು ಈವರೆಗಿನ ಆಧುನಿಕ ಕಾಲಘಟ್ಟದವರೆಗೆ ಎಲ್ಲ ಸಮುದಾಯಗಳು, ಸಂಸ್ಕೃತಿಗಳು ಅವುಗಳ ಸಾಮಾಜಿಕ ಹಂದರ ಪುರುಷಕೇಂದ್ರಿತವಾಗಿಯೇ ರೂಪಿಸಲ್ಪಟ್ಟಿರುವುದು ಸಾಮಾಜಿಕ ಅಸಮಾನತೆಗೆ ಕಾರಣವಾಗಿದೆ. ಹೆಣ್ಣನ್ನು ವಸ್ತುವಾಗಿ ನೋಡಲಾಗಿದೆ. ಸ್ತ್ರೀವಾದ ಹೆಣ್ಣನ್ನು ಜೀವವಾಗಿ, ಜೀವಕೋಶವಾಗಿ ನೋಡಬೇಕು ಎಂದು ನಿರೀಕ್ಷಿಸುತ್ತದೆ. ಪುರುಷರಿಗೆ ಏನೇನು ಸೌಲಭ್ಯಗಳು ಅಗತ್ಯವಿರುತ್ತದೆಯೋ ಅವೆಲ್ಲವೂ ಮಹಿಳೆಗೆ ಅಗತ್ಯವಿರುತ್ತದೆ ಎಂದು ಹೇಳುತ್ತದೆ. ಇಲ್ಲಿ ಮಹಿಳೆ ಪುರುಷನ ವಸ್ತುವಾಗಿದ್ದಾಳೆ. ಅವಳ ಹಕ್ಕು ಮತ್ತು ಅಧಿಕಾರ ಪುರುಷನ ಕೈಯಲ್ಲಿದೆ. ಅವಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ನಾಯಕನಾಗಿದ್ದಾನೆ. ಸ್ವಂತ ಅಸ್ತಿತ್ವವಿಲ್ಲದೆ, ಅಧಿಕಾರವಿಲ್ಲದೇ ಕೇವಲ ಕರ್ತವ್ಯ ಮಾತ್ರ ಅವಳ ಮುಂದಿದೆ. ತತ್ವಶಾಸ್ತ್ರ, ಧರ್ಮಶಾಸ್ತ್ರ, ಸಮಾಜಶಾಸ್ತ್ರ, ರಾಜಕೀಯ ಶಾಸ್ತ್ರ, ಚರಿತ್ರೆ, ಅರ್ಥಶಾಸ್ತ್ರ, ಮನುಷ್ಯ ಕೇಂದ್ರಿತವಾದ ಎಲ್ಲ ಜ್ಞಾನ ಪರಂಪರೆಗಳೂ ಏಕಲಿಂಗೀಯ ಪ್ರತಿಪಾದನೆಯನ್ನು ಹೊಂದಿವೆ. ಹಾಗಾಗಿ ಅವುಗಳೊಳಗೆ ಲಿಂಗಪೂರ್ವಗ್ರಹ ಹಾಗೂ ಏಕಲಿಂಗವಾದ ಹಾಸುಹೊಕ್ಕಾಗಿದೆ. ಇದನ್ನು ಮೊದಲಿಗೆ ಗ್ರಹಿಸುವ ಸ್ತ್ರೀವಾದಿಗಳು ಜಾಗತಿಕವಾಗಿ ಪ್ರಶ್ನೆ ಮಾಡುತ್ತಾ, ರಾಜಕೀಯ ಹೋರಾಟಗಳನ್ನು ನಡೆಸಿ ಹಲವು ಬಗೆಯ ಸ್ತ್ರೀವಾದಗಳನ್ನು ಹುಟ್ಟುಹಾಕಿದ್ದಾರೆ. ಈ ಎಲ್ಲ ಸ್ತ್ರೀವಾದಿಗಳ ಆಶಯ ಏನೆಂದರೆ ಜ್ಞಾನ ಪರಂಪರೆಗಳೆಲ್ಲವೂ ಉಭಯಲಿಂಗಗಳ ಹಿತಾಸಕ್ತಿಯನ್ನು ಹೊಂದಬೇಕೆಂಬುದು ಒತ್ತಾಯ ಮತ್ತು ಹೋರಾಟ. ಮೂಲಭೂತ ಅಗತ್ಯಗಳಾದ ಶಿಕ್ಷಣ, ಅನ್ನ, ಅರಿವೆಗಳನ್ನು ಪಡೆಯುವುದಕ್ಕೆ ಹೋರಾಟ, ಚಳುವಳಿ, ಮಹಿಳಾ ಕಾನೂನುಗಳು

ಹುಟ್ಟಿಕೊಂಡವು. ಭಾಷೆ, ಸಂಸ್ಕೃತಿಗಳು ಕೂಡ ಇವುಗಳಲ್ಲಿ ಹೊರತಲ್ಲ. ಜೀವನ ವಿಧಾನದಲ್ಲೂ ಇದೇ ಪ್ರತಿಫಲಿಸಿದೆ. ಭಾಷೆ ಕೂಡ ಪುರುಷ ಪ್ರಧಾನವಾಗಿದೆ. ಪುರುಷ ಕೇಂದ್ರಿತ ಭಾಷೆಯನ್ನೇ ಮಹಿಳೆ ಬಳಸಬೇಕಾಗಿದೆ. ಮಹಿಳೆಯರ ಭಾಷೆ ಎನ್ನುವಂಥದ್ದು ಇಲ್ಲವಾಗಿದೆ. ಮಹಿಳೆಯರಿಗೆ ಸಂಪ್ರದಾಯ ರೂಢಿಗಳಿಂದ ಹಿಡಿದು ಭಾಷೆ, ಮೌಲ್ಯಗಳ ನಿರ್ಬಂಧ, ಸಂಸ್ಕೃತಿ ನಿರ್ಬಂಧಗಳಿವೆ. ಈ ಕವಚಗಳಿಂದ ಮಹಿಳೆ ಹೊರಬರಬೇಕಾಗಿದೆ. ಹೇರಿರುವ ಮೌಲ್ಯಗಳನ್ನು ಪಕ್ಕಕ್ಕೆ ಸರಿಸಿ ಹೊಸದನ್ನು ಕಟ್ಟಿಕೊಳ್ಳಬೇಕಾದ ಸವಾಲು ಎದುರಿಗಿದೆ. ಹೊಸದರ ನಿರ್ಮಾಣ ಈ ಜಿಡ್ಡುಗಟ್ಟಿದ ಸಮಾಜದಲ್ಲಿ ಒಪ್ಪಿಕೊಳ್ಳುವುದು ಸುಲಭದಲ್ಲಿ ನಡೆಯುಯುವ ಕಾರ್ಯವಲ್ಲ. ಪ್ರಯತ್ನವಂತೂ ನಡೆದೇ ಇದೆ. ಈ ಹೋರಾಟವನ್ನು ಆತ್ಮಕಥೆಗಳ ಮೂಲಕ ಗ್ರಹಿಸಲಾಗಿದೆ.

ಮಂಗಳಮುಖಿಯರ ಮತ್ತು ಮಹಿಳೆಯರ ಆತ್ಮಕಥೆಯ ಸಾಮ್ಯತೆ ಮತ್ತು ವ್ಯತ್ಯಾಸ

ಮಂಗಳಮುಖಿಯರಲ್ಲಿ ಸಮಾನ ಸಮಸ್ಯೆ ಅವರಲ್ಲಿ ಮುಖ್ಯವಾಗುವುದು ಲಿಂಗದ ಸಮಸ್ಯೆಯೇ ಹೊರತೂ ಜಾತಿ ಅವರಿಗೆ ಮುಖ್ಯವಾಗುವುದಿಲ್ಲ. ಮೇಲುಕೀಳಿನ, ಬಡವ ಶ್ರೀಮಂತ, ಜಾತಿವ್ಯವಸ್ಥೆ ಮತ್ತು ಧಾರ್ಮಿಕ ಭಿನ್ನತೆ ಇವರಿಗೆ ಮುಖ್ಯವಾಗುವುದಿಲ್ಲ. ಯಾವುದೇ ಜಾತಿಯವರೇ ಇರಲಿ ಒಂದಾಗಿ ಹೋರಾಟ ಮಾಡಿ ಕೆಲವು ಅನುಕೂಲಗಳನ್ನು ಪಡೆದಿದ್ದಾರೆ. ಆದರೆ ಮಹಿಳೆಯರಿಗೆ ಮಂಗಳಮುಖಿಯರ ರೀತಿ ಸಮಾನ ಸಮಸ್ಯೆಗಳಿಲ್ಲ. ಹೇಗೆಂದರೆ ಎಷ್ಟು ಮಹಿಳೆಯರಿದ್ದಾರೋ ಅಷ್ಟು ರೀತಿಯ ಸಮಸ್ಯೆಗಳಿವೆ. ಸಮಸ್ಯೆಯಲ್ಲಿ ಸಮಾನತೆಯಿಲ್ಲ. ಈ ರೀತಿ ಸಮಾನ ಸಮಸ್ಯೆ ಇಲ್ಲದೇ ಹೋದಾಗ ಒಗ್ಗೂಡುವುದು ಕಷ್ಟ ಮತ್ತು ಹೋರಾಟದ ಸ್ವರೂಪ ಪಡೆಯುವುದು ಇನ್ನು ಇನ್ನು ಕಷ್ಟ. ಮಂಗಳಮುಖಿಯರು ಜೀವನಕ್ಕೆ ಬೇಕಾದ ಮೂಲಭೂತ ಅಗತ್ಯಗಳಿಂದ ವಂಚಿತವಾಗಿರುವುದು. ಪ್ರಾಣಿ ಪಕ್ಷಿಗಳನ್ನು ಇರುವ ರೀತಿಯಲ್ಲಿ ಒಪ್ಪಿಕೊಳ್ಳುವ ಮನುಷ್ಯ ನಾವು ಇರುವ ರೀತಿಯಲ್ಲಿ ಯಾಕೆ ನಮ್ಮನ್ನು ಒಪ್ಪಿಕೊಳ್ಳಬಾರದು ಎನ್ನುವುದೇ ಮೂಲಭೂತ ಪ್ರಶ್ನೆ. ಮಂಗಳಮುಖಿಯರು ಹೋರಾಟ ಮಾಡುವ ಪರಿಸ್ಥಿತಿ ಕೂಡ ಸಮಾಜದಿಂದಲೇ ನಿರ್ಮಾಣವಾಗಿದೆ. ಎಲ್ಲರಿಗೂ ಬದುಕುವ ಹಕ್ಕಿದೆ. ಆದರೆ ಅವರಿಗೆ ಅಗತ್ಯ ವಸತಿ ಊಟಕ್ಕೆ ಕುತ್ತಾದಾಗ ಅವರಿಗೆ ಹೋರಾಟ ಅನಿವಾರ್ಯವಾಗಿದೆ. ಮಂಗಳಮುಖಿಯರು ದುಡಿಮೆಗೋಸ್ಕರ ಸ್ವಂತ ವ್ಯಾಪಾರ ಮಾಡಿದರೆ ಕೊಳ್ಳುವವರಿಲ್ಲ. ಕೆಲಸ ಮಾಡ್ತೀನೆಂದರೆ ತೆಗೆದುಕೊಳ್ಳುವವರಿರಲಿಲ್ಲ. ಇವನ್ನು ಬಿಟ್ಟರೆ ಅನಿವಾರ್ಯವಾದದ್ದು ಭಿಕ್ಷಾವೃತ್ತಿ ಇಲ್ಲವೇ ವೇಶ್ಯಾವೃತ್ತಿ ಅದರಲ್ಲೂ ಹಿಂಸೆ, ಅವಮಾನ ಮಾಡುವುದು ನಡೆದಿದೆ. ಸಮಾಜ ಹೆಣ್ಣನ್ನು ಗುರುತಿಸುವುದು ಸೌಂದರ್ಯದ ಮೂಲಕ. ಮಂಗಳ ಮುಖಿಯರಲ್ಲಿ ಈ ಸೌಂದರ್ಯ ಕೂಡ ಮುಖ್ಯವಾಗುವುದಿಲ್ಲ. ಮಹಿಳೆಯರಿಗೆ ಸಮಾಜ ನಿಂದಿಸಿದಾಗ ಅವರಿಗೆ ಕುಟುಂಬದ ಆಶ್ರಯ ಇದ್ದರೆ, ಮಂಗಳ ಮುಖಿಯರಿಗೆ ಕುಟುಂಬದ ಆಶ್ರಯದಿಂದಲೂ ಹೊರತಾಗಿ ಬದುಕಬೇಕಾದ ಪರಿಸ್ಥಿತಿ ಇದೆ.

ರೇವತಿ ಮತ್ತು ವಿದ್ಯಾ ಇಬ್ಬರೂ ಮಂಗಳಮುಖಿಯರಾದರೂ ಅವರ ಬದಲಾವಣೆಯಲ್ಲಿ ವ್ಯತ್ಯಾಸವನ್ನು ಹೇಗೆ ಗುರುತಿಸಬಹುದು. ವಿದ್ಯಾ ಅವರಲ್ಲಿ ಗಂಡಾಗಿ ಹುಟ್ಟಿ ಹೆಣ್ಣಾಗಿ ಪರಿವರ್ತನೆಯಾದಾಗ ಸಮಾಜ ಅವರನ್ನು ಹಿಂಸಿಸಿದ್ದರ ಬಗ್ಗೆ ಸೇಡಿನ ಭಾವನೆ ಇದೆ. ಇವರೆಲ್ಲರಿಗೂ ತಕ್ಕ ಶಾಸ್ತಿ ಮಾಡಬೇಕೆನ್ನುವ ಆಕ್ರೋಶ ಇದೆ. ಆದರೆ ರೇವತಿಯಲ್ಲಿ ತನ್ನನ್ನು ತೊಂದರೆ ಮಾಡುತ್ತಿದೆ ಈ ಸಮಾಜ. ಆದರೆ ನಮ್ಮನ್ನು ಮಾನವೀಯತೆಯಿಂದ ನಡೆಸಿಕೊಳ್ಳಿ ಎನ್ನುವ ಧಾಟಿ ಇದೆ. ಸಮಾಜ ಮತ್ತು ಕಾನೂನು ಎನ್ನುತ್ತಾರೆ. ಕೊಲೆ ಮಾಡಿಲ್ಲ, ಕಳ್ಳತನ ಮಾಡಿಲ್ಲ ಆದರೂ ಅಪರಾಧಿ ತರಹ ಜಗತ್ತು ನನ್ನನ್ನು ನೋಡುತ್ತಲ್ಲ. ನನ್ನ ಈ ಬದುಕಿನ ಆಯ್ಕೆ ನನ್ನದಲ್ಲ. ನನ್ನ ಬದುಕು ಹೇಗಾಗೋದಕ್ಕೆ ಯಾರು ಹೊಣೆ? ಎಂಬ ಪ್ರಶ್ನೆ ರೇವತಿಯದ್ದಾಗಿದೆ. ಕೆಲವೊಮ್ಮೆ ಮನುಷ್ಯ ಬದುಕುವುದಕ್ಕೆ ಹೋರಾಟ ಮಾಡಬೇಕಾಗುತ್ತದೆ. ಆದರೆ ಮಂಗಳಮುಖಿಯರಿಗೆ ಬದುಕೊಂದೇ ಒಂದು ಹೋರಾಟವಾಗಿದೆ. ಏನೂ ತಪ್ಪು ಮಾಡದೇ ಅಪರಾಧಿ ತರಹ ಜಗತ್ತು ನೋವುವುದು ಹಿಂಸೆಯೇ ಆಗಿದೆ. ಈಗವರು ಇರುವ ಪರಿಸ್ಥಿತಿಗೆ ಸಮಾಜ ಮತ್ತು ಕಾನೂನು ಎರಡೂ ಮುಖ್ಯವಾಗಿದೆ. ಸಮಾಜ ತಪ್ಪಿತಸ್ಥರು ಎಂದು ಪರಿಗಣಿಸಿರುವುದಷ್ಟೇ ಅಲ್ಲದೇ ಅತೀವ ಹಿಂಸೆಗೆ ಗುರಿಮಾಡಿ ತಮಾಷೆ ನೋಡುತ್ತಿದೆ. ಸೂಳೆ ಅಂತ ಅವರನ್ನು ಹೀಯಾಳಿಸಿ ಅವರನ್ನು ಬಳಸಿ ದುಡ್ಡು ಕೀಳೋ ಪೊಲೀಸ್ ವ್ಯವಸ್ಥೆಯನ್ನು ಏನೂ ಅನ್ನುವುದಿಲ್ಲ. ಪುರುಷ ಪ್ರಧಾನ ವ್ಯವಸ್ಥೆ ಮತ್ತು ಅಧಿಕಾರ ಎರಡೂ ಸೇರಿ ಮಂಗಳಮುಖಿಯರನ್ನು ಶೋಷಣೆ ಮಾಡಲಾಗುತ್ತಿದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಗಂಡು/ ಹೆಣ್ಣು ಎಂಬುದು ಮುಖ್ಯವಾಗುವುದಿಲ್ಲ. ಪುರುಷಪ್ರಧಾನ ವ್ಯವಸ್ಥೆಯ ಮುಖವಾಣಿ ಗಂಡಾಗಿರಬಹುದು ಹೆಣ್ಣಾಗಿರಬಹುದು. ಅಥವಾ ಮಕ್ಕಳ ರೂಪದಲ್ಲಿ ಕಾಡಬಹುದು. ಎಲ್ಲಾ ಸಮಸ್ಯೆಗಳಿಗೂ ಹೋರಾಟ ಒಂದರ್ಥದಲ್ಲಿ ಮುಕ್ತಿ ಕೊಡುತ್ತದೆ ಅನ್ನುವುದಾದರೆ ಇಲ್ಲಿ ಹೆಣ್ಣು ಯಾರನ್ನು ಸಂಘಟಿಸಿ ಯಾರ ವಿರುದ್ಧ ಹೋರಾಡಬೇಕು? ಎಲ್ಲಕ್ಕಿಂತ ಹೆಚ್ಚಾಗಿ ಹಿಜಡಾಗಳಲ್ಲಾದರೂ ಒಂದು ಸಮಾನ ಸಮಸ್ಯೆಯಿದೆ. ಸಮಾನ ಸಮಸ್ಯೆ ಇದ್ದಾಗ ಹೋರಾಟಕ್ಕೊಂದು ಅರ್ಥ ಬರುತ್ತದೆ. ಪ್ರತಿ ಒಂದು ಹೆಣ್ಣಿನ ಸಮಸ್ಯೆ ಬೇರೆಯದೇ ಆಗಿರುವಾಗ ಹೋರಾಟ ಎಲ್ಲಿ ಸಾಧ್ಯ? ಗುಟ್ಟು ಮರ್ಯಾದೆಯ ಕವಚಗಳನ್ನೆಲ್ಲ ಹೆಣ್ಣಿಗೇ ತೊಡಿಸಿರುವಾಗ ಈ ಕವಚಗಳನ್ನೆಲ್ಲ ತೆಗೆದೊಗೆಯಬೇಕೆ? ಎನ್ನುವ ಪ್ರಶ್ನೆ ಕಾಡುತ್ತದೆ. ಕವಚಗಳನ್ನೆಲ್ಲ ತೆಗೆದಾಗ ಇರುವ ಪರಿಸ್ಥಿತಿ ಯಾವುದು? ಇದಕ್ಕೆಲ್ಲ ಪರಿಹಾರವೇನು? ಎಂಬ ಪ್ರಶ್ನೆಯನ್ನು ಹುಟ್ಟು ಹಾಕುತ್ತದೆ

ಮಂಗಳಮುಖಿಯರು ಮುಖ್ಯವಾಹಿನಿಗೆ ಬರಬೇಕೆನ್ನುವ ತಹ ತಹ ಎದ್ದು ಕಾಣುತ್ತಿದ್ದರೆ ಮಹಿಳೆಯರಿಗೆ ಈ ಪುರುಷ ಪ್ರಧಾನ ಕಪಿಮುಷ್ಟಿಯಿಂದ ಬಿಡುಗಡೆಯಾಗಿ ಅವರ ಸ್ವತಂತ್ರ

ಅಸ್ತಿತ್ವವನ್ನು ಗುರುತಿಸಬೇಕೆನ್ನುವುದು ಕಾಲಾರಂತರದಿಂದಲೂ ಮಹಿಳೆಯನ್ನು ಭೋಗದ ವಸ್ತುವಾಗಿಯೇ ನೋಡಲಾಗಿದೆ. ಹೆಣ್ಣು ಭೋಗದ ವಸ್ತು ಮಾತ್ರವಲ್ಲ ಅವರಿಗೂ ಅಸ್ತಿತ್ವವಿದೆ, ಹೃದಯವಿದೆ, ಅವರ ಭಾವನೆಗಳನ್ನು ಪುರಸ್ಕರಿಸಬೇಕೆಂಬ ಬೇಡಿಕೆ ಮಹಿಳೆಯರದ್ದಾಗಿದೆ.

ಕೊನೆ ಟಿಪ್ಪಣಿಗಳು

೧. ಬಿ.ವಿ.ಕಾರಂತ, **ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ,** ಪು.೧೩೦

೨. ಬೀಚಿ, **ನನ್ನ ಭಯಾಗ್ರಫಿ,** ಪು.೯

೩. ಶರಣಕುಮಾರ ಲಿಂಬಾಳೆ, **ಅಕ್ರಮ ಸಂತಾನ,** ಪು.೯೧

೪. ನೆಬ್ಬೂರು ನಾರಾಯಣ ಭಾಗವತ, **ನೆಬ್ಬೂರಿನ ನಿನಾದ,** ಪು.೩೧

೫. ಕಯ್ಯಾರ ಕಿಞ್ಞಣ್ಣ ರೈ, **ದುಡಿತವೇ ದೇವರು,** ಪು.೧-೨

೬. ಬಿಚೇ, **ನನ್ನ ಭಯಾಗ್ರಫಿ,** ಪು.೭-೮

೭. ಕೃಷ್ಣ ಹತೀಸಿಂಗ್, **ನೆನಪು ಕಹಿಯಲ್ಲ,** ಪು.೧೯

೮. ಅದೇ, ಪು.೨೨-೨೩

೯. ಕೃಷ್ಣ ಹತೀಸಿಂಗ್, **ನೆನಪು ಕಹಿಯಲ್ಲ,** ಪು.೨೫

೧೦. ನಿರ್ಮಲಾದೇವಿ, **ನಮ್ಮ ಬದುಕಿನ ಪುಟಗಳು,** ಪು.೧೪೯

೧೧. ಅದೇ, ಪು.೧೫೩

೧೨. ಅದೇ, ಪು.೧೫೪-೧೫೫

೧೩. ಸಾ.ರಾ.ಅಬೂಬಕರ್, **ಬರವಣಿಗೆಯ ಸವಾಲುಗಳು,** ಪು.೧೮

೧೪. ಉಮಾಶ್ರೀ, **ಬೆಂಕಿ ಬೆಡಗು,** ಪು.೨೭

೧೫. ಪ್ರತಿಭಾ ನಂದಕುಮಾರ್, **ಅನುದಿನದ ಅಂತರಗಂಗೆ,** ಪು.೨೩೭-೨೩೮

೧೬. ಅನುಪಮಾ ನಿರಂಜನ, **ಬರಹಗಾರ್ತಿಯ ಬದುಕು,** ಪು.೨೫-೨೬

೧೭. ಅದೇ, ಪು.೧೮

೧೮. ಸೋಬಾನೆ ಹೊನ್ನಮ್ಮ, **ತಿರಿದು ತಿಂದರೂ ಕರೆದು ಉಣ್ಣಬೇಕು,** ಪು.

೧೯. ವೀಣಾ ಬನ್ನಂಜೆ, **ಆತ್ಮಕಥೆ,** ಪು.೯೨

೨೦. ನವಲ್ ಸಾದವಿ, **ಶೂನ್ಯವಾದವಳು,** ಪು.೭೫

೨೧. ಸಂಧ್ಯಾರೆಡ್ಡಿ ಕೆ.ಆರ್, **ನಮ್ಮ ಬದುಕಿನ ಪುಟಗಳು,** ಪ್ರಸ್ತಾವನೆ V

೨೨. ಇಂದು ರಮೇಶ, **ನಮ್ಮ ಬದುಕಿನ ಪುಟಗಳು**, ಪು.೧೮

೨೩. ಉಷಾ ಪಿ.ರೈ., **ನಮ್ಮ ಬದುಕಿನ ಪುಟಗಳು**, ಪು.೨೫

೨೪. ಅಬ್ದುಲ್ ಕಲಾಮ್, **ಅಗ್ನಿಯ ರೆಕ್ಕೆಗಳು**, ಪು.೨೯-೩೦

೨೫. ಕುಂ.ವೀ., **ಗಾಂಧಿಕ್ಲಾಸ್**, ಮುನ್ನುಡಿ

೨೬. ಸಿ.ಎನ್.ರಾಮಚಂದ್ರನ್, **ನೆರಳುಗಳ ಬೆನ್ನು ಹತ್ತಿ**, ಪು.೭೧

೨೭. ಎಮ್.ಜಿ. ಗೋವಿಮದರಾಜು, **ಪೋಲೀಸ್ ಅಧಿಕಾರಿಯೊಬ್ಬನ ವೃತ್ತಿ ಕಥಾನಕ**, ಪು.೨೫-೨೬

೨೮. ಎಮ್.ಬಿ.ಮರಕಿಣಿ, **ಅಲೆಮಾರಿ ವೈದ್ಯನ ಆತ್ಮಕಥೆ**, ಪು.೧೧-೧೨

೨೯. ಗಿರೀಶ್ ಕಾರ್ನಾಡ, **ಆಡಾಡತ ಆಯುಷ್ಯ**, ಪು.೧೧

೩೦. ಪ್ರೊತಿಮಾಬೇಡಿ, **ಟೈಮ್ ಪಾಸ್**, ಪು.೧

೩೧. ಅದೇ, ಪು.೧೬

೩೨. ಸಾರಾ ಅಬೂಬಕರ್, **ಶೂನ್ಯವಾದವಳು**, ಮುನ್ನುಡಿ

೩೩. ಎಸ್.ವಿ. ಪ್ರಭಾವತಿ, **ನಮ್ಮ ಬದುಕಿನ ಪುಟಗಳು**, ಪು.೨೬೮

೩೪. ಮಾಧವಿ ದೇಸಾಯಿ, **ಕುಣಿಯೇ ಘುಮಾ**, ಪು.೩

೩೫. ಎನ್ ಗಾಯಿತ್ರಿ, **ಕುಣಿಯೇ ಘುಮಾ**, ಬೆನ್ನುಡಿ

೩೬. ಲಿವಿಂಗ್ ಸ್ಮೈಲ್ ವಿದ್ಯಾ, **ನಾನು ಅವನಲ್ಲ ಅವಳು**, ಪು.೨೯

೩೭. ಅದೇ, ಪು.೨೯-೩೦

೩೮. ಅದೇ, ಪು.೭೭

೩೯. ಅದೇ, ಪು.೯೮-೯೯

೪೦. ಅದೇ, ಪು.೯೧

೪೧. ಅದೇ, ಪು.೭೯

೪೨. ಅದೇ, ಪು.೨೦೬-೨೦೭

೪೩. ೧೪ ಡಿಸೆಂಬರ್ ೨೦೧೦, ಪ್ರಜಾವಾಣಿ

೪೪. ಲಿವಿಂಗ್ ಸ್ಮೈಲ್ ವಿದ್ಯಾ, **ನಾನು ಅವನಲ್ಲ ಅವಳು**, ಪು.೨೦೬-೨೦೭

೪೫. ಕೆ.ವಿ.ನಾರಾಯಣ, **ಈಗೇನ್ ಮಾಡೀರಿ** ಮುನ್ನುಡಿ

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಈ ಸಂಶೋಧನೆ ನಿರಂತರ ಆಗುವ ಮತ್ತು ಮಾಗುವ ಕ್ರಿಯೆ. ಸಂಶೋಧನೆಯೆಂದರೆ ಬೆಟ್ಟ ಹತ್ತುವ ಕ್ರಿಯೆಯೇ. ಬೆಟ್ಟದಲ್ಲಿ ಕಲ್ಲು-ಮುಳ್ಳುಗಳಿರುವುದು ನಿಜ. ಈ ಸಾಗುವ ಕ್ರಿಯೆಯಲ್ಲಿ ನೀರು ಕೊಟ್ಟವರಿದ್ದಾರೆ, ನೆರಳು ಕೊಟ್ಟವರಿದ್ದಾರೆ. ಈ ದುರ್ಗಮ ದಾರಿಯ ಬಂಡೆ ಕಲ್ಲು ಮುಳ್ಳುಗಳನ್ನೆಲ್ಲಾ ದಾಟಿ ಬೆಟ್ಟದ ತುದಿಗೇರಿದಾಗ ಆಗುವ ಆನಂದ ಅನುಭವಿಸಿದವರಿಗೇ ಗೊತ್ತು. ಅದನ್ನು ಭಾಷೆಯಲ್ಲಿ ಹಿಡಿದಿಡುವುದು ಕಷ್ಟ.

ಮೇಲ್ಜಾತಿಯ ಆತ್ಮಕಥೆಗಳು ವ್ಯಷ್ಟಿಯಿಂದ ಸಮಷ್ಟಿಯ ಕಡೆಗೆ ಮುಖಮಾಡುತ್ತವೆ. ದಲಿತ ಆತ್ಮಕಥೆಗಳು ಸಮುದಾಯವನ್ನು ಕೇಂದ್ರ ಮಾಡಿಕೊಂಡಿವೆ. ಏಕೆಂದರೆ ಸಮುದಾಯಕ್ಕೆ ಸಮುದಾಯವೇ ಶೋಷಣೆಗೆ, ತುಳಿತಕ್ಕೆ ಒಳಗಾಗಿದೆ. ಒಟ್ಟೂ ಸಮಾಜ ಕೆಳಜಾತಿಯವರನ್ನು ಮುಖ್ಯವಾಹಿನಿಯಿಂದ ಹೊರಗಿಟ್ಟಿತ್ತು. ಹಕ್ಕುಗಳು, ಸೌಲಭ್ಯಗಳು ರಾಜಕೀಯ ಇಚ್ಛಾಶಕ್ತಿ ಹಾಗೂ ಶಾಸನಾತ್ಮಕ ತೀರ್ಮಾನಗಳ ಮೂಲಕ ಇಂತಹ ಸಮುದಾಯವನ್ನು ತಲುಪಲು ಬಹಳ ದೀರ್ಘ ಕಾಲ ಹಿಡಿಯಿತು. ಸಬಲ ಮೇಲ್ಜಾತಿಯವರಿಂದ ಏನನ್ನು ಪಡೆಯಬೇಕಾದರೂ ಒಂಟಿ ಧ್ವನಿಯ ಕ್ಷೀಣ ಯಾಚನೆ ಪರಿಣಾಮಕಾರಿ ಅಲ್ಲದಿರುವುದರಿಂದ ಸಹಜವಾಗಿಯೇ ಸಾಮುದಾಯಿಕ ಆಗ್ರಹ ಕೆಳಜಾತಿಯವರಿಗೆ ಅನಿವಾರ್ಯದ ದಾರಿಯಾಯಿತು.

ಮಹಿಳೆಯ ಆತ್ಮಕಥನದ ವಿಚಾರಕ್ಕೆ ಬಂದಾಗ ಮೇಲೆ ಹೇಳಿದ ಸಂಗತಿಯು ವಿಶಾಲ ಪರಿಪ್ರೇಕ್ಷ್ಯದಲ್ಲಿ ಬಹುತೇಕ ಅಂಶಗಳಲ್ಲಿ ಅನ್ವಯವಾಗುತ್ತದೆ. ಜಾತಿಯ ಮಿತಿಯನ್ನು ಮೀರಿ ಒಟ್ಟು ಮಹಿಳಾ ಸಮುದಾಯವೇ ಪುರುಷನಿಷ್ಠ ಬಿಗಿಯಿಂದ ನರಳಿದ್ದು ನಮ್ಮ ಮುಂದಿರುವ ಸತ್ಯವಾಗಿದೆ. ಮಹಿಳೆ ತನ್ನ ಜೀವನದಲ್ಲಿ ವಿಭಿನ್ನ ಹಂತಗಳಲ್ಲಿ ಬೇರೆ ಬೇರೆ ಜವಾಬ್ದಾರಿಗಳಲ್ಲಿ ದುಡಿದಾಗಲೂ ಅವೆಲ್ಲವೂ ಕೌಟುಂಬಿಕ ಪರಿಧಿಗೆ ತಳುಕು ಹಾಕಿಕೊಂಡಿರುವುದರಿಂದ ಮಹಿಳೆಯರ ಆತ್ಮಕಥೆಗಳು ಕುಟುಂಬವನ್ನು ಕೇಂದ್ರ ಮಾಡಿಕೊಂಡಿವೆ.

ಮೇಲ್ಜಾತಿಯ ಆತ್ಮಕಥೆಗಳಲ್ಲಿ ಕರಾರುವಾಕ್ಕಾಗಿರುತ್ತದೆ. ಅದೇ ದಲಿತ ಆತ್ಮಕಥೆಗಳಲ್ಲಿ ಸಮುದಾಯದಿಂದ ವ್ಯಕ್ತಿಯ ಕಡೆ ಮುಖಮಾಡುವ ಪರಿ ಕಂಡುಬರುತ್ತದೆ. ಮೇಲ್ಜಾತಿಯ ಆತ್ಮಕಥೆಗಳಲ್ಲಿ ಸಾಮಾನ್ಯವಾಗಿ ಹುಟ್ಟಿದ ದಿನಾಂಕ, ಸಮಯ, ಇಸವಿ ಕರಾರುವಾಕ್ಕಾಗಿ ಇದ್ದರೆ ಕೆಳಜಾತಿಗಳಲ್ಲಿ ಹಬ್ಬ ಹರಿದಿನ, ಜಾತ್ರೆ, ಸಾಮಾಜಿಕ ಪಿಡುಗು ಮುಂತಾದ ಕಾರಣಗಳನ್ನಿಟ್ಟುಕೊಂಡು ಬದುಕಿನ ಲಯ ಇರುತ್ತದೆ. ಮೇಲ್ಜಾತಿ ಅಕ್ಷರಸ್ಥ ಸಮಾಜವಾದರೆ ಕೆಳಜಾತಿ ಹೆಚ್ಚಾಗಿ ಅನಕ್ಷರಸ್ಥ ಸಮಾಜವಾಗಿದೆ.

ದಲಿತ ಪುರುಷ ಇತರ ಎಲ್ಲ ಜಾತಿಗಳಿಂದ ಶೋಷಿತನಾದರೂ ಕೂಡ ದಲಿತ ಮಹಿಳೆಯರಿಗೆ ಶೋಷಕನಾಗಿಯೇ ಇರುತ್ತಾನೆ. ಹಾಗೆಯೇ ಬ್ರಾಹ್ಮಣ ಮಹಿಳೆ ಶೋಷಕ ಜಾತಿಗೆ ಸೇರಿದ್ದರೂ ಬ್ರಾಹ್ಮಣ ಪುರುಷರಿಂದ ಶೋಷಿತಳೇ ಆಗಿದ್ದಾಳೆ. ಅವರವರ ಬಾಲ್ಯಕ್ಕನುಗುಣವಾಗಿ ಸಕಾರಾತ್ಮಕ ಮತ್ತು ನಕಾರಾತ್ಮಕ ಬರವಣಿಗೆ ಹಾಗೂ ವ್ಯಕ್ತಿತ್ವ ರೂಪುಗೊಂಡಿದೆ. ಇದು ಪುರುಷ ಮಹಿಳೆ ಮಂಗಳಮುಖಿ ಎಲ್ಲರಿಗೂ ಅನ್ವಯಿಸುತ್ತದೆ.

ಆತ್ಮಕಥೆಯ ವಿಶಿಷ್ಟತೆ ಎಂದರೆ ಅವು ಭೂತಕಾಲದ ಕಡೆ ಮುಖ ಮಾಡುತ್ತವೆ. ಕೌಟುಂಬಿಕ ಜೀವನ ಮತ್ತು ಸಾಮಾಜಿಕ ಜೀವನದಲ್ಲಿ ಮಹಿಳೆಯರು ಹೀಗೆ ಇದ್ದಾರೆ ಮತ್ತು ಹೀಗೆಯೇ ಇರಬೇಕೆಂಬ ಕೆಲವು ಪೂರ್ವನಿರ್ಧಾರಿತ ಮೌಲ್ಯಗಳಿವೆ. ಈ ಮೌಲ್ಯಗಳು ಪುರುಷ ಪ್ರಧಾನವಾದವು ಮತ್ತು ಪುರುಷ ನಿರ್ಮಿತವಾದುವು. ಹಾಗಾಗಿ ಎಷ್ಟೋ ಸಂದರ್ಭಗಳಲ್ಲಿ ಮಹಿಳೆಯರು ತಾವಿರುವ ವಸ್ತು ಸ್ಥಿತಿಯನ್ನು ಪ್ರಶ್ನಿಸಿಕೊಳ್ಳಲು ಮತ್ತು ಆ ಪರಿಸ್ಥಿತಿಯ ಬಗ್ಗೆ ಅಸಹನೆಗೊಳ್ಳಲು ಆಗುವುದಿಲ್ಲ. ಅಂಥದಕ್ಕೆಲ್ಲ ಮಹಿಳೆ ಒಗ್ಗಿಕೊಂಡು ಮತ್ತು ಹೊಂದಿಕೊಂಡು ಹೋಗಬೇಕೆಂದು ಪುರುಷ ಪ್ರಧಾನ ವ್ಯವಸ್ಥೆಯು ಇವರನ್ನು ನಿರ್ಬಂಧಿಸಿದೆ ಮತ್ತು ನಿರ್ದೇಶಿಸಿದೆ.

ಪುರುಷರು ಮತ್ತು ಮಹಿಳೆಯರು ಯಾವ ಬಗೆಯ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗುತ್ತಾರೆಂಬುದು ಮುಖ್ಯ. ಪುರುಷರಿರಲಿ ಮಹಿಳೆಯರಿರಲಿ ಬಹುತೇಕ ಮನೆಗಳಿಂದ ಹೊರಬರುವುದೇ ತಮ್ಮ ದುಡಿಮೆ ಮತ್ತು ಇತರ ಕೆಲಸಗಳಿಗಾಗಿ. ಈ ಅಂಶವನ್ನು ಪ್ರಧಾನವಾಗಿ ಪರಿಗಣಿಸಿದರೆ ಪುರುಷರು ಮಾಡುವ ಕೆಲಸಗಳು ಮನೆಯಿಂದ ಆಚೆ ಇರುತ್ತದೆ. ಆ ಕಾರಣದಿಂದ ಅವರ ಆಲೋಚನೆಗಳು ಕುಟುಂಬದಿಂದ ಹೊರಗಿರುತ್ತದೆ ಎಂದು ಹೇಳಬಹುದು. ಇದನ್ನೇ ಮಹಿಳೆಗೆ ಹೋಲಿಸಿದರೆ ಅವಳು ಮಾಡುವ ಕೆಲಸ ಬಹುತೇಕ ಮನೆಯ ಅಥವಾ ಕೌಟುಂಬಿಕ ವ್ಯಾಪ್ತಿಯದ್ದಾಗಿರುತ್ತದೆ. ಈ ಕಾರಣಕ್ಕೆ ಇವರ ಆಲೋಚನೆಗಳು ಒಂದು ನಿರ್ದಿಷ್ಟ ವಲಯದಲ್ಲಿ ಮಾತ್ರವೇ ರೂಪುಗೊಳ್ಳುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಅಧೀನವಾಗಿರಿಸಲು ಪುರುಷನ ಮೂಗಿನ ನೇರಕ್ಕೆ ರೀತಿ ನೀತಿಗಳು ನಿಯಮಗಳನ್ನು ಮಾಡಲಾಗಿದೆ. ತಮ್ಮ ಮೂಗಿನ ನೇರಕ್ಕೆ ಮಹಿಳೆಯರನ್ನು ಚಿತ್ರಿಸಲಾಗಿದೆ ಮತ್ತು ವ್ಯಾಖ್ಯಾನಿಸಲಾಗಿದೆ.

ಪ್ರಭುತ್ವ ಮತ್ತು ಅಧಿಕಾರ ಶಾಹಿಗಳು ಮುಖ್ಯವಾಹಿನಿಯಲ್ಲಿ ಇಲ್ಲದ್ದನ್ನು ತಿರಸ್ಕಾರ ಹಾಗೂ ಅಸಡ್ಡೆಯಿಂದ ನೋಡಿರುವುದು ಚರಿತ್ರೆಯುದ್ದಕ್ಕೂ ನಡೆದಿದೆ. ಇದು ಕೆಳಜಾತಿಯ ಮಹಿಳೆ ಮತ್ತು ಕೆಳಜಾತಿಯ ಪುರುಷ, ಮೇಲ್ಜಾತಿಯ ಮಹಿಳೆ ಮತ್ತು ತೃತೀಯ ಲಿಂಗಿಗಳಿಗೂ ಅನ್ವಯವಾಗುತ್ತದೆ.

ಆತ್ಮಕಥೆಗಳಲ್ಲಿ ಜಾತಿಯನ್ನು ಕುರಿತ ನಿರೂಪಣೆಯು ಜಾತಿಯಿಂದಾದ ಹಿಂಸೆಯನ್ನು ಹೇಳುತ್ತಿರುವುದರ ಜೊತೆಗೆ ಜಾತಿಯ ಮೇಲರಿಮೆಯನ್ನು ಬಿಚ್ಚಿಡುತ್ತದೆ.

ಕೆಳಜಾತಿಯ ಆತ್ಮಕಥನದಲ್ಲಿ ಜಾತಿಯ ಅವಹೇಳನ ಒಂದು ಕಡೆ ನಿರೂಪಣೆಯಾಗಿದ್ದರೆ ಮತ್ತೆ ಕೆಲವು ಕಡೆ ಸ್ವಾಭಿಮಾನವಾಗಿಯೂ ನಿರೂಪಣೆಗೊಂಡಿದೆ. ಜಾತಿಯ ಸವಲತ್ತುಗಳು ಅವರಿಗೆ ಅಭಿಮಾನ ಹುಟ್ಟಿಸಿದೆ.

ಕತೆ ಕಾದಂಬರಿಯ ನಿರೂಪಣೆಗಳಿಗಿಂತ ಆತ್ಮಕಥೆಯಲ್ಲಿ ಜಾತಿ ದಾಖಲಿಸಿರುವುದು ಅನಿವಾರ್ಯವೆಂಬಂತೆ ತೋರುತ್ತದೆ.

ತೃತೀಯ ಲಿಂಗದವರಿಗೆ ಜಾತಿ ಮುಖ್ಯವಾಗುವುದಿಲ್ಲ. ಅದಕ್ಕಿಂತಲೂ ತಮ್ಮ ಲಿಂಗದ ಬಗೆಗೆ ಸಾಮಾಜಿಕ ಅಭಿಪ್ರಾಯ ಮತ್ತು ತಮಗೆ ಸಿಗುವ ಅವಕಾಶ, ಸೌಲಭ್ಯದಿಂದ ವಂಚನೆಯಾಗುತ್ತಿರುವುದು ಮುಖ್ಯವಾಗುತ್ತದೆ.

ಮಹಿಳೆಯರ ಆತ್ಮಕಥನದಲ್ಲಿ ಪುರುಷ ಪ್ರಧಾನ ಮೌಲ್ಯಗಳ ಮತ್ತು ಅವುಗಳ ಹೇರಿಕೆಯ ಬಗ್ಗೆ ಒಂದು ಬಗೆಯ ಅಸಹನೆ ಮತ್ತು ಒಂದು ರೀತಿಯ 'ಸಾತ್ವಿಕ ಸಿಟ್ಟು' ನಿರೂಪಣೆಗೊಂಡಿದೆ.

ನಿರೂಪಣಾತ್ಮಕ ಆತ್ಮಕಥೆಗಳೆಂದರೆ ಒಬ್ಬರು ನಿರೂಪಣೆ ಮಾಡಿರುವುದನ್ನು ಇನ್ನೊಬ್ಬರು ಬರೆದುಕೊಳ್ಳುವುದನ್ನೇ ನಿರೂಪಣಾತ್ಮಕ ಆತ್ಮಕಥೆ ಎಂದು ಗುರುತಿಸಿಕೊಳ್ಳಲಾಗಿದೆ. ನಿರೂಪಣಾತ್ಮಕ ಆತ್ಮಕಥೆಗಳಿಗೂ ಸ್ವತಃ ತಾವೇ ಬರೆದ ಆತ್ಮಕಥೆಗಳಿಗೂ ಕೆಲವು ವ್ಯತ್ಯಾಸಗಳನ್ನು ಗುರುತಿಸಬಹುದು. ನಿರೂಪಣಾತ್ಮಕ ಆತ್ಮಕಥೆಯಲ್ಲಿ ಒಮ್ಮೆ ನೆನಪಿನಾಳಕ್ಕೆ ಇಳಿದು ಬೇಕಾದದ್ದನ್ನು ಹೆಕ್ಕಿ ಬೇಡವಾದದ್ದನ್ನು ಬಿಡಬಹುದು. ಆದರೆ ಆತ್ಮಕಥೆ ಬರೆಯುವುದಕ್ಕೆ ದಿನಚರಿ, ಬಂಧು ಮಿತ್ರರ ಬರಹ, ಇನ್ನೆಲ್ಲ ಮೂಲಗಳು ಅಗತ್ಯವಾಗಿರುತ್ತದೆ. ಆತ್ಮಕಥೆ ಬರೆಯುವ ವ್ಯಕ್ತಿ ಒಮ್ಮೆ ಕೂತರೆ ಪೂರ್ತಿ ಬರೆದು ಮುಗಿಸಲು ಸಾಧ್ಯವಿಲ್ಲ. ನೆನಪಾದಾಗ ನೆನಪಿದ್ದಷ್ಟು ಬರೆದಿಡಬೇಕಾಗುತ್ತದೆ. ಅಲ್ಲದೇ ಆತ್ಮಕಥೆ

ಬರೆದು ಮುಗಿದಾದಮೇಲೆ ಈ ಘಟನೆ ಬರೆಯಬಹುದಿತ್ತು ಎನ್ನುವ ಸಾಧ್ಯತೆಗಳು ಹೆಚ್ಚಿವೆ. ನಿರೂಪಣೆ ಮಾಡುವವರು ಮಹಿಳೆಯರೋ, ಪುರುಷರೋ ಮತ್ತು ಬರೆದುಕೊಳ್ಳುವವರು ಮಹಿಳೆಯರೋ, ಪುರುಷರೋ ಎನ್ನುವುದರ ಮೇಲೆಯೂ ಬರವಣಿಗೆಯಲ್ಲಿ ವ್ಯತ್ಯಾಸಗಳ ಸಾಧ್ಯತೆಗಳು ಇವೆ. ನಿರೂಪಣಾತ್ಮಕ ಆತ್ಮಕಥೆಗಳಲ್ಲಿ ಕೆಲವೊಮ್ಮೆ ಕೇಳುವವರ ಪ್ರಶ್ನೆಗಳನ್ನು ಅವಲಂಬಿಸಿ ವಿಷಯಾಂತರದ ಸಾಧ್ಯತೆಗಳು ಹೆಚ್ಚಿವೆ.

ಮಹಿಳೆಯರ ಕತೆ ಕಾದಂಬರಿಗಳೇ ಆತ್ಮಕಥೆಗಳಾಗಿವೆ. ಪುರುಷರಲ್ಲಿ ಕತೆ ಕಾದಂಬರಿಯಲ್ಲಿ ಆತ್ಮಕತೆಯ ಭಾಗ ಮಾತ್ರ ಬಂದಿದೆ.

ಆತ್ಮಕಥೆ, ಕಥೆ, ವ್ಯಥೆಯ ಜೊತೆ ಕೃತಜ್ಞತೆಯನ್ನು ಸಲ್ಲಿಸುವುದಕ್ಕಾಗಿಯೂ ಬಂದಿದೆ.

ವ್ಯಕ್ತಿಯ ವ್ಯಕ್ತಿತ್ವಕ್ಕೂ ಬಾಲ್ಯಕ್ಕೂ ಅತ್ಯಂತ ನಿಕಟ ಸಂಬಂಧವಿರುವುದನ್ನು ಗಮನಿಸಲಾಗಿದೆ.

ಮೇಲ್ಜಾತಿಯ ಆತ್ಮಕಥನಗಳು ವ್ಯಷ್ಟಿಯಿಂದ ಸಮಷ್ಟಿ ಕಡೆ ಸಾಗಿದರೆ ಕೆಳ ಜಾತಿಯ ಆತ್ಮಕಥನಗಳು ಸಮಷ್ಟಿಯಿಂದ ವ್ಯಷ್ಟಿಯ ಕಡೆ ಸಾಗುತ್ತವೆ.

ಆತ್ಮಕಥೆಯಲ್ಲಿ ಭೂತಕಾಲದ ನೆನಪುಗಳು ವರ್ತಮಾನದ ಕುಲುಮೆಯಲ್ಲಿ ಮರುಸೃಷ್ಟಿ ಪಡೆಯುತ್ತದೆ.

ಇತ್ತೀಚೆಗೆ ಕುಟುಂಬ ಮತ್ತು ಸಮುದಾಯವನ್ನು ರಕ್ಷಿಸಲು ಜಾತಿಪ್ರಮುಖ ಪಾತ್ರವಹಿಸುತ್ತಿದೆ

ಆತ್ಮಕತೆಯ ಸ್ವರೂಪವೇ ಅಸಮಗ್ರವಾಗಿದೆ.

ಆತ್ಮಕತೆ ಕಥೆಯೂ ಹೌದು. ಚರಿತ್ರೆಯೂ ಹೌದು.

ಆತ್ಮಕತೆ ವೈಯಕ್ತಿಕ ಬರಹದಂತೆ ಕಂಡರೂ ಸಾಮಾಜಿಕ ಫಲಶ್ರುತಿಯೇ ಆಗಿದೆ.

ಪುರುಷರು ತಮ್ಮ ಅಧೀನದಲ್ಲಿರುವ ಮಹಿಳೆಯರನ್ನು ನಿಯಂತ್ರಿಸುವ, ಹದ್ದುಬಸ್ತಿನಲ್ಲಿಡುವುದನ್ನು ನೋಡಬಹುದು. ಮಹಿಳೆಯರು ಪುರುಷಾಧಿಕಾರದ ಕಪಿಮುಷ್ಟಿಯಿಂದ ಬಿಡಿಸಿಕೊಂಡು ಸ್ವತಂತ್ರ ಅಸ್ತಿತ್ವ ಸ್ಥಾಪಿಸುವುದು ಕಂಡುಬರುತ್ತದೆ. ತೃತೀಯ ಲಿಂಗಿಗಳು ಮುಖ್ಯವಾಹಿನಿಗೆ ಸೇರುವ ತವಕ ಎದ್ದುಕಾ ಣುತ್ತದೆ.

ಗ್ರಂಥಋಣ

೧. ಅನುಪಮಾ ನಿರಂಜನ,೧೯೮೫, ೨೦೦೦, **ನೆನಪು: ಸಿಹಿ ಕಹಿ**, ಡಿ. ವಿ. ಕೆ. ಮೂರ್ತಿ, ಮೈಸೂರು

೨. ಅನುಪಮಾ ನಿರಂಜನ,೧೯೯೦, ೨೦೦೭, **ಬರಹಗಾರ್ತಿಯ ಬದುಕು**, ಡಿ. ವಿ. ಕೆ ಮೂರ್ತಿ, ಮೈಸೂರು

೩. ಅಗ್ನಿ ಶ್ರೀಧರ್, ೨೦೦೪,**ದಾದಾಗಿರಿಯ ದಿನಗಳು**, ಅಗ್ನಿ ಪ್ರಕಾಶನ, ಬೆಂಗಳೂರು

೪. ಅಗ್ನಿ ಶ್ರೀಧರ್, ೨೦೦೭, **ದಾದಾಗಿರಿಯ ದಿನಗಳು,೨**,ಅಗ್ನಿ ಪ್ರಕಾಶನ, ಬೆಂಗಳೂರು

೫. ಅಗ್ನಿ ಶ್ರೀಧರ್, ೨೦೦೭, **ದಾದಾಗಿರಿಯ ದಿನಗಳು,೩**,ಅಗ್ನಿ ಪ್ರಕಾಶನ, ಬೆಂಗಳೂರು

೬. ಅರ್ತಿಕಜೆ ವಿ ಬಿ., ೨೦೦೯, **ನೂರೆಂಟು ನೆನಪುಗಳು**, ಸ್ಮೃತಿ ಪ್ರಕಾಶನ ಅಡ್ಯನಡ್ಕ, ದ.ಕ

೭. ಸಾರಾ ಅಬುಬಕರ್, ೨೦೦೭, **ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ**, ಕನ್ನಡ ವಿಶ್ವವಿದ್ಯಾಲಯ ಹಂಪಿ

೮. ಅಬ್ದುಲ್ ಕಲಾಮ್, ಅನು:ಜಯಪ್ರಕಾಶ್ ಪುತ್ತೂರು,೨೦೦೨, **ಅಗ್ನಿಯ ರೆಕ್ಕೆಗಳು**, ವಾಸನ್ ಪಬ್ಲಿಕೇಶನ್ಸ್

೯. ಅಮರೇಶ್ ನುಗುಡೋಣಿ(ಸಂ), ೨೦೦೮, **ಕನ್ನಡ ಸಂಶೋಧನೆಯ ವೈಧಾನಿಕತೆಗಳು**, ಪ್ರಸಾರಾಂಗ ಕನ್ನಡ ವಿ. ವಿ., ಹಂಪಿ

೧೦. ಅಮೃತಾ ಪ್ರೀತಂ, ಅನು: ಹಸನ್ ನಯೀಂ ಸುರಕೋಡ, ೨೦೦೪, **ರಸೀದಿ ತಿಕೀಟು**, ಲೋಹಿಯ ಪ್ರಕಾಶನ ಬಳ್ಳಾರಿ

೧೧. ಅರವಿಂದ ಮಾಲಗತ್ತಿ, ೧೯೯೪, ೨೦೦೯, **ಗೌರ್ಮೆಂಟ್ ಬ್ರಾಹ್ಮಣ**, ಚೇತನ ಬುಕ್ ಹೌಸ್ ಮೈಸೂರು

೧೨. ಅರಬಿಂದೊ, ಅನು: ರಜನೀಕಾಂತ್ ಎಂ.ಎಸ್., ಸಂ: ಜಹಾಗೀರ್‌ದಾರ ರ.ವಿ, ೨೦೦೪, **ಅಪೂರ್ವ ಆಧ್ಯಾತ್ಮಿಕ ಅನುಭವ**, ಶ್ರೀ ಅರಬಿಂದೋ ಕಪಾಲಿಶಾಸ್ತ್ರಿ ಇನ್ಸ್ಟಿಟ್ಯೂಟ್ ಆಫ್ ವೇದಿಕ್ ಕಲ್ಚರ್

೧೩. ಉಷಾ ಪಿ. ರೈ., ವಿಜಯಲಕ್ಷ್ಮಿ ಕೆ ಎಂ(ಸಂ), ೨೦೦೩, **ಲೇಖಲೋಕ**, ೪, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೧೪. ಉಮೇಶ್ ಎಸ್(ಅನು), ೨೦೧೨ **ರಿಚರ್ಡ ಬ್ರಾನ್ ಸನ್**, ಧಾತ್ರೀ ಪ್ರಕಾಶನ ಮೈಸೂರು.

೧೫. ಉಮಾಶ್ರೀ ನಿರೂ ಬಿ. ಗಣಪತಿ ೨೦೧೩ **ಬೆಂಕಿ, ಬೆಡಗು**, ಅಹರ್ನಿಶಿ ಪ್ರಕಾಶನ ಶಿವಮೊಗ್ಗ.

೧೬. ಕಮಲಾದಾಸ್, ಅನು: ಡಾ॥ ಕೆ.ಪೂರ್ಣಿಮಾ ಭಟ್, ೧೯೯೫, **ನನ್ನ ಕಥೆ**, ಹೇಮಂತ ಸಾಹಿತ್ಯ, ಬೆಂಗಳೂರು.

೧೭. ಕಮಲಾ ಸುರಯ್ಯ, ಅನು: ನಾ ದಾಮೋದರ ಶೆಟ್ಟಿ, ೨೦೦೧, **ಬಾಲ್ಯದ ನೆನಪುಗಳು**, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ.

೧೮. ಕಯ್ಯಾರ ಕಿಞ್ಞಣ್ಣ ರೈ, ೧೯೯೫, ೯೭, **ದುಡಿತವೇ ನನ್ನ ದೇವರು**, ಕಿಞ್ಞಣ್ಣ ರೈ ಎಂಭತ್ತು ಅಭಿನಂದನಾ ಸಮಿತಿ, ಬೆಂಗಳೂರು.

೧೯. ಕಡಿದಾಳ್ ಮಂಜಪ್ಪ, ೨೦೦೮, **ನನಸಾಗದ ಕನಸು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨೦. ಕಡಿದಾಳು ಶಾಮಣ್ಣ, ೨೦೧೧, **ಬದುಕು ಹೋರಾಟಗಳ ಕಥನ**, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.

೨೧. ಕಡಿದಾಳು ಶಾಮಣ್ಣ,ಸಂಗ್ರಹ ಮತ್ತು ಕೃತಿ ರೂಪ ಅಕ್ಷತಾ ಕೆ., ೨೦೧೧, ೨೦೧೨. **ಕಾಡತೊರೆಯ ಜಾಡು**, ಅಭಿನವ ಪ್ರಕಾಶನ ಬೆಂಗಳೂರು.

೨೨. ಕಾರಂತ ಬಿ ವಿ., ಸಂಗ್ರಹ ಮತ್ತು ಕೃತಿ ರೂಪ: ವೈದೇಹಿ, ೨೦೦೩, **ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ**, ಪ್ರಿಸಮ್ ಬುಕ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು

೨೩. ಕಾಳೇಗೌಡ ನಾಗವಾರ್, ಮೀರಾಸಾಬಿಹಳ್ಳಿ ಶಿವಣ್ಣ(ಸಂ), ೨೦೦೧, **ಮನದಾಳದ ಕನಸುಗಳು**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೨೪. ಕುವೆಂಪು, ೧೯೮೦, ೯೩, ೯೭, ೯೮, ೨೦೦೫, ೦೭, **ನೆನಪಿನ ದೋಣಿಯಲ್ಲಿ**, ಉದಯರವಿ ಪ್ರಕಾಶನ, ಮೈಸೂರು

೨೫. ಕೃಷ್ಣಮೂರ್ತಿ ಎಂ.ಜಿ., **ಕನ್ನಡದಲ್ಲಿ ಜೀವನಚರಿತ್ರೆಗಳು, ಅಂಕಣ**, ಸಂಪುಟ ೧, ಸಂಚಿಕೆ ೨, ಜನವರಿ ೧೯೯೦.

೨೬. ಕೆಂಗಾಪೂರ್ ಎಸ್. ಕೆ., ಮಾರ್ಗದರ್ಶಕರು: ಎಚ್ ಎಂ ಮಹೇಶ್ವರಯ್ಯ ೧೯೯೭, **ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ** ಕರ್ನಾಟಕ ವಿ.ವಿ.ಗೆ ಸಾದರ ಪಡಿಸಿದ ಸಂಶೋಧನಾ ಪ್ರಬಂಧ(ಅಪ್ರಕಟಿತ).

೨೭. ಕೃಷ್ಣ ಹತೀಸಿಂಗ್, ಅನು: ದೇ ಜವರೇಗೌಡ, ೧೯೪೯, ೨೦೦೦, **ನೆನಪು ಕಹಿಯಲ್ಲ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೮. ಕೃಷ್ಣಾನಂದ ಕಾಮತ್, ೨೦೦೪, **ಪತ್ರ ಪರಾಚಿ**, ಮನೋಹರ ಗ್ರಂಥಮಾಲಾ, ಧಾರವಾಡ.

೨೯. ಕೋಟಿಗಾನಹಳ್ಳಿ ರಾಮಯ್ಯ(ಸಂ), ೨೦೦೫, **ತಲಪರಿಗೆ**, ಅಭಿಮಾನ ಪ್ರಕಾಶನ, ಬೆಂಗಳೂರು.

೩೦. ಗಣಪತಿ ಬಿ. ನಿರೂ, ೨೦೧೩ **ಬೆಂಕಿ, ಬೆಡಗು ಉಮಾಶ್ರೀ ಬದುಕಿನ ಕೆಲ ಪುಟಗಳು**, ಅಹರ್ನಿಶಿ ಪ್ರಕಾಶನ ಶಿವಮೊಗ್ಗ.

೩೧. ಗಂಗೂಬಾಯಿ ಹಾನಗಲ್, ನಿರೂ: ಎನ್ಕೆ, ೨೦೦೦, ೨೦೦೨, **ನನ್ನ ಬದುಕಿನ ಹಾಡು**, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೩೨. ಗಿರೀಶ್ ಕಾರ್ನಾಡ, ೨೦೧೧ **ಆಡಾಡತ ಆಯುಷ್ಯ**, ಮನೋಹರ ಗ್ರಂಥಮಾಲೆ ಧಾರವಾಡ.

೩೩. ಗುಬ್ಬಿ ವೀರಣ್ಣ, ೧೯೬೭, ೧೯೮೪, **ಕಲೆಯೇ ಕಾಯಕ**, ಸುರುಚಿ ಪ್ರಕಾಶನ, ಮೈಸೂರು.

೩೪. ಗುಂಡಣ್ಣ ವಿ, ಆತ್ಮಚರಿತ್ರೆ, ೧೯೯೩, **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ**, ಸಂ: ಎಲ್.ಎಸ್.ಶೇಷಗಿರಿರಾವ್, ಉದಯಭಾನು ಕಲಾ ಸಂಘ ಬೆಂಗಳೂರು.

೩೫. ಗುಂಜಾಳ್ ಎಸ್.ಆರ್., ೧೯೮೮, **ನಾನು**, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ.

೩೬. ಗೋದಾವರಿ ಪರುಳೇಕರ್(ಅನು), ಸರಸ್ವತಿ ರಿಸಬುಡ್, ೨೦೦೦, **ಮಾನವ ಎಚ್ಚೆತ್ತಾಗ**, ಅಧ್ಯಯನ ಪ್ರಕಾಶನ ಶಿರಸಿ, ಉತ್ತರ ಕನ್ನಡ.

೩೭. ಗೋರೂರು ರಾಮಸ್ವಾಮಿ ಅಯ್ಯಂಗಾರ್, ೨೦೦೬, **ಗೋರೂರು ಅವರ ಬಾಲ್ಯದ ಆತ್ಮಕತೆ**,, ಎಚ್.ಬಿ. ಪ್ರಕಾಶನ.

೩೮. ಖಾನ್ ಅಬ್ದುಲ್ ಗಫಾರ್ ಖಾನ್, ೧೯೭೧, **ನನ್ನ ಬಾಳುವೆಯ ಹೋರಾಟ**, ಕರ್ನಾಟಕ ಕೋಆಪರೇಟಿವ್ ಪಬ್ಲಿಷಿಂಗ್ ಹೌಸ್ ಲಿಮಿಟೆಡ್, ಬೆಂಗಳೂರು.

೩೯. ಗೋವಿಂದರಾಜು ಕೆ., ೨೦೦೦, **ಮನವಿಲ್ಲದವರ ಮಧ್ಯೆ**, ಅಭಿರುಚಿ ಪ್ರಕಾಶನ, ಮೈಸೂರು.

೪೦. ಗೋವಿಂದರಾಜು ಎಂ.ಜಿ., ೨೦೧೩ **ಪೊಲೀಸ್ ಅಧಿಕಾರಿಯೊಬ್ಬನ ವೃತ್ತಿ ಕಥಾನಕ**, ಐ.ಬಿ.ಎಚ್.ಪ್ರಕಾಶನ ಬೆಂಗಳೂರು.

೪೧. ಚದುರಂಗ, ೨೦೦೬, **ವೈಶಾಖ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೪೨. ಚಂದ್ರಶೇಖರ ಉಡುಪ ಎ., ೧೯೯೬, ೨೦೦೯, **ನನಗೊಲಿದ ಗುರೂಜಿ ನಿಮಗೊಲಿಯಲಿ**, ವಿವೇಕ ಪ್ರಕಾಶನ, ಉಡುಪಿ.

೪೩. ಚಂದ್ರಶೇಖರ್ ಉಡುಪ, ೨೦೧೧, **ನನಗೊಲಿದ ಶ್ರೀಗುರೂಜಿ ಕೃಪಾರಕ್ಷೆ**, ವಿವೇಕ ಪ್ರಕಾಶನ, ಸಾಲಿಗ್ರಾಮ.

೪೪. ಚಂದ್ರಪೂಜಾರಿ ಎಂ, ೨೦೦೮, **ಸಂಶೋಧನ ಜವಾಬ್ದಾರಿ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೫. ಚಂದ್ರಶೇಖರ್ ಬಿ. ಎಸ್, ೨೦೦೧, **ಸಮಾಜ ವಿಜ್ಞಾನಗಳಲ್ಲಿ ಸಂಶೋಧನ ವಿಧಾನಗಳು**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೬. ಜೋಳದ ರಾಶಿ ದೊಡ್ಡನಗೌಡ, ೧೯೭೯, ೯೮, **ನಂದೇ ನಾನೋದಿದೆ**, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

೪೭. ಜೀನ್ಪಾಲ್ ಸಾರ್ತ್ರ್, ಅನು: ಕೆ.ಎಚ್.ಶ್ರೀನಿವಾಸ, ೨೦೦೩, **ಪದಚರಿತ**, ಸಾಹಿತ್ಯ ಅಕಾಡೆಮಿ, ದೆಹಲಿ.

೪೮. ಡೊಮಿನಿಕ್ ಡಿ., ೨೦೦೫, **ಕರ್ನಾಟಕದ ಜಾತಿಗಳ ಸಾಂಸ್ಕೃತಿಕ ಪ್ರತಿನಿಧೀಕರಣ ಮತ್ತು ವಸಾಹತುಶಾಹಿ ಅನುಭವ**, ಮಂಗಳೂರು ವಿ.ವಿ.ಗೆ ಸಲ್ಲಿಸಿದ ಸಂಶೋಧನಾ ಪ್ರಬಂಧ (ಅಪ್ರಕಟಿತ)

೪೯. ತುಂಬಾಡಿ ರಾಮಯ್ಯ, ೧೯೯೯, **ಮಣೆಗಾರ**, ಬೋಧಿಶ್ರೀ ಪ್ರಕಾಶನ, ತುಮಕೂರು.

೫೦. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ(ಸಂ), ೧೯೯೪, **ಸ್ತ್ರೀವಾದಿ ಸಾಹಿತ್ಯವಿಮರ್ಶೆ**, ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ, ಬೆಂಗಳೂರು.

೫೧. ದಾದಾ ಸಾಹೇಬ್ ಮಲ್ಲಾರೀ ಮೋರೆ, ಅನು: ದು. ನಿಂ.ಬೆಳಗಲಿ, ೧೯೯೫, **ಗಬಾಳ**, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೫೨. ದೊರೆಸ್ವಾಮಿ ಹೆಚ್. ಎಸ್., ೨೦೦೩, **ನೆನಪಿನ ಸುರುಳಿ ತೆರೆದಾಗ**, ಸಾಹಿತ್ಯ ಮಂದಿರ, ಬೆಂಗಳೂರು.

೫೩. ನಟರಾಜ್ ಪಿ, ೧೯೮೧, ೯೩, ೨೦೦೩, ೦೯, **ಸಾಮಾಜಿಕ ಮನೋವಿಜ್ಞಾನ**, ಶ್ರೀನಿವಾಸ್ ಪಬ್ಲಿಕೇಶನ್, ಮೈಸೂರು.

೫೪. ನಟರಾಜ ಹುಳಿಯಾರ್ ೨೦೧೪, **ಇಂತೀ ನಮಸ್ಕಾರಗಳು**, ಪಲ್ಲವ ಪ್ರಕಾಶನ, ಚನ್ನಪಟ್ಟಣ.

೫೫. ನರೇಂದ್ರ ಜಾಧವ್, ೨೦೦೫, **ಬಹಿಷ್ಕೃತ ಒಂದು ನೆನಪು**, ನವಕರ್ನಾಟಕ ಪಬ್ಲಿಕೇಷನ್ಸ್ ಬೆಂಗಳೂರು.

೫೬. ನರಸಿಂಹಯ್ಯ ಎಚ್., ೨೦೦೬, **ಹೋರಾಟದ ಹಾದಿ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೫೭. ನಾಗಲೋಟಿಮಠ ಸ.ಜ., ೨೦೦೩, ೦೬, **ಬಿಚ್ಚಿದ ಜೋಳಿಗೆ**, ಡಿ.ವಿ.ಕೆ.ಮೂರ್ತಿ ಪ್ರಕಾಶಕರು, ಮೈಸೂರು.

೫೮. ನೆಬ್ಬೂರು ನಾರಾಯಣ ಭಾಗವತ, ಸಂ, ನಿರೂ: ಡಾ. ಈ ಎಸ್ ಭಟ್, ೨೦೦೭, **ನೆಬ್ಬೂರಿನ ನಿನಾದ**, ನೆಬ್ಬೂರರ ಷಷ್ಟ್ಯಬ್ಧ ಅಭಿನಂದನಾ ಸಮಿತಿ, ಶಿರಸಿ.

೫೯. ಪರಶಿವಮೂರ್ತಿ ಎಂ.ಎಸ್., ೨೦೦೯, **ಗೆರೆ ದಾಟಿದ ಮೇಲೆ**, ರೂಪ ಪ್ರಕಾಶನ, ಮೈಸೂರು.

೬೦. ಪರಮಹಂಸ ಯೋಗಾನಂದ, ೨೦೦೬, ೦೭, **ಯೋಗಿಯ ಆತ್ಮಕತೆ**, ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾ/ ಸೆಲ್ಫ್ ರಿಯಲೈಸೇಷನ್ ಫೆಲ್ಲೋಶಿಪ್‌ನ ಒಂದು ಅಧಿಕೃತ ಪ್ರಕಾಶನ, ಜೈಕೋ ಪಬ್ಲಿಷಿಂಗ್ ಹೌಸ್.

೬೧. ಪ್ರತಿಭಾ ನಂದಕುಮಾರ, ೨೦೧೨ **ಅನುದಿನದ ಅಂತರಗಂಗೆ**, ಅಹರ್ನಿಶಿ ಪ್ರಕಾಶನ ಶಿವಮೊಗ್ಗ

೬೧. ಪಾರ್ವತಮ್ಮ ಮಾಲಿಂಗ ಶೆಟ್ಟಿ, ೧೯೯೮, **ಹೆಣ್ಣಿನ ದೃಷ್ಟಿಯಲ್ಲಿ ಈ ಶತಮಾನ**, ಐ ಬಿ ಹೆಚ್ ಪ್ರಕಾಶನ, ಬೆಂಗಳೂರು ಬಾಮ, ಅನು: ಎಸ್ ಪ್ಲೋಮಿನ್ ದಾಸ್, ೨೦೦೯, **ಸಂಗತಿ**, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೬೨. ಪುಟ್ಟಯ್ಯ ಬಿ. ಎಂ., ೧೯೯೯, **ಆತ್ಮಕತೆಗಳಲ್ಲಿ ಕರ್ನಾಟಕದ ಕಥೆ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೪. ಪ್ರೊತಿಮಾ ಬೇಡಿ, ಅನು: ರವಿ ಬೆಳಗೆರೆ, ೧೯೯೯, **ಟೈಮ್‌ಪಾಸ್**, ಭಾವನಾ ಪ್ರಕಾಶನ, ಬೆಂಗಳೂರು.

೬೫. ಬಸವರಾಜ್ ಕಲ್ಗುಡಿ, ಆತ್ಮಕಥನ: ವಾಗ್ವಾದ ಮತ್ತು ಸಂವಾದ ಮತ್ತು...., ೧೯೯೯, **ನಕ್ಷೆ ನಕ್ಷತ್ರ**, ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ, ಬೆಂಗಳೂರು.

೬೬. ಬಾಮ, ಅನು: ಎಸ್ ಪ್ಲೋಮಿನ್ ದಾಸ್, ೨೦೦೯, **ಸಂಗತಿ**, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೬೭. ಬೀಚಿ, ೧೯೭೬, ೯೩, ೯೭, **ನನ್ನ ಭಯಾಗ್ರಫಿ**, ಎಸ್.ಬಿ.ಎಸ್ ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.

೬೮. ಬೇಬಿ ಹಾಲ್ದಾರ್, ೨೦೦೯, **ನೋವು ತುಂಬಿದ ಬದುಕು**, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.

೬೯. ಬೇಬಿತಾಯಿ ಕಾಂಬಳೆ, ಅನು: ಚಂದ್ರಕಾಂತ ಪೋಕಳೆ, ೨೦೦೯, **ಬದುಕು ನಮ್ಮದು**, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.

೭೦. ಬೆಳಗಲಿ ದು ನಿಂ (ನಿರೂ), ೧೯೯೯, **ನನ್ನ ಬಣ್ಣದ ಬದುಕು**(ನಾಟ್ಯಭೂಷಣ ಏಣಗಿ ಬಾಳಪ್ಪನವರ ಆತ್ಮಕಥನ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೧. ಭೈರಪ್ಪ ಎಸ್.ಎಲ್, ೧೯೯೬, ೯೭, ೨೦೦೦, ೦೬, ೦೭, **ಭಿತ್ತಿ**, ಸಾಹಿತ್ಯ ಬಂಢಾರ ಪ್ರಕಾಶನ.

೭೨. ಮನು ಚಕ್ರವರ್ತಿ ಎಸ್.(ಸಂ), ೧೯೯೩, **ಭಾರತೀಯ ಸ್ತ್ರೀವಾದ**, ಅಕ್ಷರ ಪ್ರಕಾಶನ, ಸಾಗರ.

೭೩. ಮರಕಿಣಿ ಎಂ.ಬಿ ೨೦೧೨, **ಅಲೆಮಾರಿ ವೈದ್ಯನ ಆತ್ಮಕತೆ**, ಶ್ರೀನಿವಾಸ ಪುಸ್ತಕ ಪ್ರಕಾಶನ ಬೆಂಗಳೂರು

೭೪. ಮಧುರಚೆನ್ನ, ಸಂ: ಗುರುಲಿಂಗ ಕಾಪಸೆ, ೧೯೯೮, ೨೦೦೪, **ಆತ್ಮ ಶೋಧ**, ಚೆನ್ನಬಸವ ಪ್ರಕಾಶನ, ವಿಜಾಪುರ.

೭೫. ಮಾಧವಿ ದೇಸಾಯಿ, ಅನು: ಚಂದ್ರಕಾಂತ ಪೋಕಳೆ, ೧೯೯೭, **ಕುಣಿಯೇ ಘುಮಾ**, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೭೬. ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ೧೯೬೮, ೭೯, **ಭಾವ ೧**, ಪ್ರಗತಿ ಪ್ರಕಾಶನ, ಬೆಂಗಳೂರು.

೭೭. ಮಾಲತಿಶ್ರೀ, ನಿರೂ: ಗುಡಿಹಳ್ಳಿ ನಾಗರಾಜ, ೨೦೦೬, **ತೆರೆ ಸರಿದಾಗ**, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ, ಬೆಂಗಳೂರು.

೭೮. ಮೀರಾ ಎಲ್.ಜಿ., ೨೦೦೪, **ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ**, ಶಕ್ತಿ ಪ್ರಿಂಟರ್ಸ್ ಎಂಡ್ ಪಬ್ಲಿಷರ್ಸ್, ಬೆಂಗಳೂರು.

೭೯. ಮುನಿವೆಂಕಟಪ್ಪ ವಿ(ಸಂ)., ೧೯೯೮, **ದಲಿತ ಚಳುವಳಿ: ಒಂದು ಅವಲೋಕನ**, ವಿಚಾರವಾದಿ ಪ್ರಕಾಶನ, ಮೈಸೂರು.

೮೦. ಮೈತ್ರೇಯಿ ಮುಖ್ಯೋಪಾಧ್ಯಾಯ, ಅನು: ವೈದೇಹಿ, ೧೯೭೫, **ಬೆಳ್ಳಿಯ ಸಂಕೋಲೆಗಳು** (ಭಾರತದಲ್ಲಿ ಹೆಂಗಸಿನ ಸ್ಥಿತಿ ಗತಿ ಅಧ್ಯಯನ), ಅಕ್ಷರ ಪ್ರಕಾಶನ, ಸಾಗರ

೮೧. ಮೂಡ್ನಾಕೂಡು ಚಿನ್ನಸ್ವಾಮಿ, ೨೦೧೦, **ಬುದ್ಧ ಬೆಳದಿಂಗಳು**, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೮೨. ಮೋಹನದಾಸ ಕರಮಚಂದ ಗಾಂಧಿ, ಅನು: ಗೊ.ರಾ.ಅಯ್ಯಂಗಾರ್, ೧೯೯೫, ೧೯೯೭, **ನನ್ನ ಸತ್ಯಾನ್ವೇಷಣೆ**, ನವಜೀವನ ಪ್ರಕಾಶನ ಮಂದಿರ, ಅಹಮದಾಬಾದ್.

೮೩. ರಹಮತ್ ತರೀಕೆರೆ, ಆತ್ಮಕತೆ: ಕನ್ನಡ ಗದ್ಯದ ಅಧೋಲೋಕ, **ದೇಶಕಾಲ**, ಸಂಚಿಕೆ ೧೪, ಜುಲೈ ಸೆಪ್ಟೆಂಬರ್, ೨೦೦೮.

೮೪. ರಾಜರತ್ನಂ ಜಿ.ಪಿ., ೧೯೯೮, **ನನ್ನ ನೆನಪಿನ ಬೀರು**, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.

೮೫. ರಾಜಶೇಖರ್ ವಿ.ಟಿ, ೨೦೦೫, **ಜಾತಿ ರಾಷ್ಟ್ರದೊಳಗೊಂದು ರಾಷ್ಟ್ರ**(ಅಹಿಂಸಾತ್ಮಕ ಕ್ರಾತಿಗೆ ತಯಾರಿ ಯೋಜನೆ), ಬುಕ್ಸ್ ಫಾರ್ ಚೇಂಜ್ ಆಕ್ಷನ್ ಏಡ್ ಕರ್ನಾಟಕ ಯೋಜನೆಗಳ ಒಂದು ಘಟಕ.

೮೬. ರಾಮಚಂದ್ರನ್ ಸಿ.ಎನ್., ೨೦೧೩ ನೆರಳುಗಳ ಬೆನ್ನುಹತ್ತಿ, ಅಂಕಿತ ಪ್ರಕಾಶನ ಬೆಂಗಳೂರು.

೮೭. ರಾಯ್ ಎಂ.ಎನ್., ಅನು: ಬಿ ಸುಜ್ಞಾನಮೂರ್ತಿ, ೨೦೦೩, **ಬೆಕ್ಕಿನ ಆತ್ಮಕತೆ**, ಸಿ.ವಿ. ಜಿ.ಪಬ್ಲಿಕೇಶನ್ಸ್, ಬೆಂಗಳೂರು.

೮೮. ರ್‍ಯಾಂಡಿ ಪಾಶ್ ಮತ್ತು ಜೆಫ್ರಿ ಝಸ್ಲೊ, ಅನು: ಎಸ್.ಉಮೇಶ್, ೨೦೦೮, **ದಿ ಲಾಸ್ಟ ಲೆಕ್ಚರ್**, ಧಾತ್ರಿ ಪ್ರಕಾಶನ, ಮೈಸೂರು

೮೯. ರೇವತಿ, ಅನು:ದು.ಸರಸ್ವತಿ ೨೦೧೧, **ಬದುಕು ಬಯಲು**, ಲಂಕೇಶ ಪ್ರಕಾಶನ, ಬೆಂಗಳೂರು.

೯೦. ಲಂಕೇಶ್ ಪಿ, ೧೯೯೭, **ಹುಳಿಮಾವಿನ ಮರ**, ಪತ್ರಿಕೆ ಪ್ರಕಾಶನ, ಬೆಂಗಳೂರು.

೯೧. ಲಕ್ಷ್ಮಣ್, ೨೦೦೩, **ಸಂಬೋಳಿ**, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ

೯೨. ಲಕ್ಷ್ಮಣ ಗಾಯಕವಾಡ, ಅನು:ಚಂದ್ರಕಾಂತ ಪೋಕಳೆ, ೧೯೯೪,

೯೩. ಲಕ್ಷ್ಮೀಪತಿ ಸಿ.ಜಿ, ೨೦೦೭, **ಕ್ಯಾಸ್ಟ್ ಕೆಮಿಸ್ಟ್ರಿ**, ಸಖಿ ಪ್ರಕಾಶನ, ಹೊಸಪೇಟೆ.

೯೪. ಲಕ್ಷ್ಮಣ ಗಾಯಕವಾಡ, **ಉಚಲ್ಯಾ**, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೯೫. ಲಿಂಗದೇವರು ಹಳೇಮನೆ, ೨೦೦೭, **ರಾಷ್ಟ್ರ ಕವಿ ಡಾ॥ ಜಿ ಎಸ್ ಶಿವರುದ್ರಪ್ಪ**, ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ, ಮೈಸೂರು.

೯೬. ಲಿವಿಂಗ್ ಸ್ಮೈಲ್ ವಿದ್ಯಾ, ಅನು: ಡಾ॥ ತಮಿಳ್ ಸೆಲ್ವಿ, ೨೦೦೮, **ನಾನು ಅವನಲ್ಲ ಅವಳು**, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೯೭. ಲೋಕೇಶ್, ನಿರೂ: ಡಿ ಸುಮನಾ ಕಿತ್ತೂರು, ೨೦೦೫, **ಲೋಕೇಶ್ ಪರಸಂಗ**, ಅಗ್ನಿ ಪ್ರಕಾಶನ, ಬೆಂಗಳೂರು.

೯೮. ವನಜ ವೆಂ., ೨೦೦೬, **ಶೂನ್ಯವಾದವಳು**, ಮಾನಸ ಪ್ರಕಾಶನ, ಬೆಂಗಳೂರು.

೯೯. ವಿಜಯಲಕ್ಷ್ಮಿ ಕೆ.ಎಂ., ೨೦೦೫, **ಸ್ತ್ರೀವಾದ ಸಾಹಿತ್ಯದ ಒಂದು ಚಳುವಳಿ**, ಗೀತಾಂಜಲಿ ಪಬ್ಲಿಕೇಶನ್

೧೦೦. ವಿಡಂಬಾರಿ, ೧೯೯೫, **ಅಂಚೆಪೇದೆಯ ಆತ್ಮಕಥನ**, ಶ್ರೀರಾಘವೇಂದ್ರ ಪ್ರಕಾಶನ ಅಂಬಾರ ಕೊಡ್ಲ, ಅಂಕೋಲಾ.

೧೦೧. ವಿಶ್ವನಾಥ್ ಎಚ್., ೨೦೦೭, **ಹಳ್ಳಿಯ ಹಕ್ಕಿಯ ಹಾಡು**, ಅಂಕಿತ ಪುಸ್ತಕ, ಬೆಂಗಳೂರು.

೧೦೨. ವಿಶ್ವೇಶ್ವರಯ್ಯ ಎಂ., ಅನು: ಡಾ॥ ಗಜಾನನ ಶರ್ಮ, ೨೦೦೫, ೨೦೦೭, ೨೦೦೯, **ನನ್ನ ವೃತ್ತಿ ಜೀವನದ ನೆನಪುಗಳು**, ಅಂಕಿತ ಪುಸ್ತಕ, ಬೆಂಗಳೂರು.

೧೦೩. ವೀಣಾ ಶಾಂತೇಶ್ವರ್ ಎನ್.ಬಿ., ಚಂದ್ರಮೋಹನ್, ಎಚ್.ಎಸ್.ರಾಘವೇಂದ್ರರಾವ್(ಸಂ), **ಅನಿಕೇತನ**(ಅನುವಾದ ಸಾಹಿತ್ಯಕ್ಕೆ ಮೀಸಲಾದ ತ್ರೈಮಾಸಿಕ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೦೪. ವ್ಯಾಸರಾಯ ಬಲ್ಲಾಳ, ೨೦೦೩, **ಮುಂಬಯಿ ದಿನಾಂಕ**, ನವಕರ್ನಾಟಕ ಪ್ರಕಾಶನ, ಬೆಂಳೂರು

೧೦೫. ವೀಣಾ ಬನ್ನಂಜೆ, ೨೦೦೭, **ಸತ್ಯಕಾಮ: ಬದುಕಿನ ಭಾರ ಇಳಿಸಿದವರು(ಆತ್ಮಕತೆ)**, **ಎಚ್ಚರದ ಕನಸು**, ರವೀಂದ್ರ ಪುಸ್ತಕಾಲಯ, ಶಿವಮೊಗ್ಗ.

೧೦೬. ವೀರಭದ್ರಪ್ಪ ಕುಂ., ೨೦೦೮, **ರಾಯಲಸೀಮಾ**(ಆತ್ಮಕಥನದ ತುಣುಕುಗಳು), ಅಂಕಿತ ಪುಸ್ತಕ, ಬೆಂಗಳೂರು.

೧೦೭. ವೀರಭದ್ರಪ್ಪ ಕುಂ., ೨೦೧೦, **ಗಾಂಧೀ ಕ್ಲಾಸು**, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೧೦೮. ಶರಣಕುಮಾರ ಲಿಂಬಾಳೆ, ಅನು: ದು.ನಿಂ.ಬೆಳಗಲಿ, ೧೯೯೨, **ಅಕ್ರಮ ಅಂತಾನ**, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೧೦೯. ಶರಣಮ್ಮಾ ಗೋರೇಬಾಳ, ೨೦೦೨, **ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ**, ದಲಿತ ಸಾಹಿತ್ಯ ಪರಿಷತ್, ಗದಗ.

೧೧೦. ಶಂಕರ್‌ರಾವ್ ಚ.ನ., ೨೦೦೫-೬, **ಭಾರತೀಯ ಸಮಾಜ**(ಸಂರಚನೆ ಮತ್ತು ಪರಿವರ್ತನೆ), ಜೈ ಭಾರತ್ ಪ್ರಕಾಶನ, ಮಂಗಳೂರು.

೧೧೧. ಶಾಮಾಚರಣ ದುಬೆ, ಅನು:ಅನಂತರಾಮಯ್ಯ ಆರ್.ಎಲ್., ೧೯೯೪, **ಭಾರತೀಯ ಸಮಾಜ**, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯ, ದೆಹಲಿ.

೧೧೨. ಶಾಂತಾ ಹುಬಳೀಕರ, ಅನು: ಕೆ.ಎಸ್. ಕುಲಕರ್ಣಿ, ೧೯೯೫, **ನಾಳೀನ ಚಿಂತ್ಯಾಕ**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೩. ಶಿವರಾಜ್ ಕುಮಾರ್, ನಿರೂ: ಸದಾಶಿವಶೆಣೈ, ೨೦೦೭, **ಮುತ್ತುರಾಜನ ಮುತ್ತು**(ನಟ ಶಿವರಾಜ್ ಕುಮಾರ ಆತ್ಮಕಥನ), ಗೌರವ್ ಪ್ರಕಾಶನ, ಬಸವೇಶ್ವರನಗರ, ಬೆಂಗಳೂರು.

೧೧೪. ಶಿವರಾಮ ಕಾರಂತ, ೧೯೮೪, **ಹುಚ್ಚು ಮನಸ್ಸಿನ ಹತ್ತು ಮುಖಗಳು**, ಅಕ್ಷರ ಪ್ರಕಾಶನ, ಸಾಗರ.

೧೧೫. ಶಿವರಾಮ ಕಾರಂತ, ೧೯೭೮, ೧೯೮೬, **ಸ್ಮೃತಿ ಪಟಲದಿಂದ**, ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು.

೧೧೬. ಶಿವರುದ್ರಪ್ಪ ಜಿ.ಎಸ್., ೧೯೮೬, **ಚತುರಂಗ ಅಸಮಗ್ರ ಆತ್ಮಕತೆ**, ಶಾರದಾ ಪ್ರಕಾಶನ, ಬೆಂಗಳೂರು.

೧೧೭.ಶಿವಾನಂದ ವಿರಕ್ತಮಠ, ಜನವರಿ, ಡಿಸೆಂಬರ್ ೨೦೦೪, **ಮಹಿಳಾ ಅಧ್ಯಯನ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೮.ಶ್ರೀಮತಿ ಎಚ್.ಎಸ್., ೨೦೦೪, **ಹೆಣ್ಣು, ಹೆಂಗಸು**,, ಬ್ಯಾಲದ ಕೆರೆ ಪ್ರಕಾಶನ, ಮಂಡ್ಯ

೧೧೯.ಶ್ರೀಮತಿ ಎಚ್.ಎಸ್., ಶಿವಾನಂದ ವಿರಕ್ತಮಠ, ಕೃಷ್ಣ ಜೆ (ಸಂ), ೨೦೦೭, **ಹೆಣ್ಣು ಮತ್ತು ಭಾಷೆ**, ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೨೦.ಶ್ರೀರಂಗ, ೧೯೬೪, **ಸಾಹಿತಿಯ ಆತ್ಮಜಿಜ್ಞಾಸೆ**, ಅಕ್ಷರ ಪ್ರಕಾಶನ, ಸಾಗರ.

೧೨೧.ಶೈಲಜಾ ನಾಗರಘಟ್ಟ, ೨೦೦೫, **ಕಿಚ್ಚಿಲ್ಲದ ಬೇಗೆ**, ಊರು ಕೇರಿ ಪ್ರಕಾಶನ, ತಿಪಟೂರು.

೧೨೨.ಸವಿತಾ ಎನ್ ಒಡೆಯರ್, ಮಾರ್ಗದರ್ಶಕರು: ಮಧುವೆಂಕಾರೆಡ್ಡಿ, ೨೦೦೧, **ಆತ್ಮಚರಿತ್ರೆಗಳ ಸಾಂಸ್ಕೃತಿಕ ಅಧ್ಯಯನ**(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ), ಕರ್ನಾಟಕ ವಿ.ವಿಗೆ ಸಾದರ ಪಡಿಸಿದ ಸಂಶೋಧನಾ ಪ್ರಬಂಧ (ಅಪ್ರಕಟಿತ).

೧೨೩.ಸಮಾತಾ ದೇಶಮಾನೆ, ೨೦೦೯, **ಒಡಲಿನ ಬೆಂಕಿ**, ಶ್ರೀಸಾಯಿ ಸಾಹಿತ್ಯ ಪ್ರಕಾಶನ, ಬೆಂಗಳೂರು.

೧೨೪.ಸಬಿಹಾ ಭೂಮಿಗೌಡ(ಸಂ), ೨೦೦೭, **ಮಹಿಳಾ ಆತ್ಮಕತೆಗಳು: ಅನುಸಂಧಾನ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೨೫.ಸಬೀಹಾ ಭೂಮಿಗೌಡ, ೨೦೦೬, **ಮಹಿಳಾ ಸಾಹಿತ್ಯ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೨೬.ಸಂಧ್ಯಾ ರೆಡ್ಡಿ ಕೆ.ಆರ್.(ಸಂ), ೨೦೦೭, **ನಮ್ಮ ಬದುಕಿನ ಪುಟಗಳು**,, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೧೨೭.ಸರಸ್ವತಿ ದು., ೨೦೦೧, **ಈಗೇನ್ ಮಾಡೀರಿ**, ಮಾನಸ, ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು.

೧೨೮.ಸಾರಾ ಅಬೂಬಕರ್, ೧೯೮೫, ಚಂದ್ರಗಿರಿಯ ತೀರದಲ್ಲಿ ಪತ್ರಿಕೆ ಪ್ರಕಾಶನ ಬೆಂಗಳೂರು.

೧೨೯.ಸ್ವಾಮಿ ಬಿ.ಈ.ಎಲ್., ೨೦೦೩, **ಪ್ರಾಧ್ಯಾಪಕನ ಪೀಠದಲ್ಲಿ**, ಕಾವ್ಯಾಲಯ ಪ್ರಕಾಶನ ಮೈಸೂರು.

೧೩೦.ಸ್ವಾಮಿ ವಿವೇಕಾನಂದ, ೧೯೯೯, **ಧ್ಯಾನ ಮತ್ತು ಏಕಾಗ್ರತೆ**, ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

೧೩೧. ಸ್ವಾಮಿ ಬುಧಾನಂದ, ೨೦೦೦, **ಮನಸ್ಸು ಮತ್ತು ಅದರ ನಿಗ್ರಹ**, ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

೧೩೨. ಸಿಂಪಿ ಲಿಂಗಣ್ಣ, ೧೯೯೮, **ಬಾಳ ಸಂಜೆಯ ಹಿನ್ನೋಟ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೩೩. ಸಿಮೊನ್ ದಿ ಬೊವಾ, ಅನು: ಎಚ್ ಎಸ್ ಶ್ರೀಮತಿ, ೨೦೦೭, **ದ ಸೆಕೆಂಡ್ ಸೆಕ್ಸ್** (ಒಂದು ಕನ್ನಡ ಓದು), ಅಧ್ಯಯನ ಮಂಡಲ, ಬೆಂಗಳೂರು.

೧೩೪. ಸಿದ್ಧಲಿಂಗಯ್ಯ, ೧೯೯೬, **ಊರು ಕೇರಿ**, ಅಕ್ಷರ ಪ್ರಕಾಶನ, ಸಾಗರ.

೧೩೬. ಸಿದ್ಧಲಿಂಗಯ್ಯ, ೨೦೦೬, ೦೯, **ಊರು ಕೇರಿ-೨**, ಸಿ.ವಿ.ಜಿ ಪ್ರಕಾಶನ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

೧೩೭ ಸೀತಾರಾಮಯ್ಯ ವಿ., **ಮುಂಬಯಿವಾಸ ನೆನಪುಗಳು**, ಬಾಪ್ಕೊ ಪ್ರಕಾಶನ, ಬೆಂಗಳೂರು.

೧೩೮. ಸುಜಾತ ಅಕ್ಕಿ, ೨೦೦೨, ಆತ್ಮಕತೆ, **ದಶಕದ ಕನ್ನಡ ಸಾಹಿತ್ಯ**, ಎಫ್.ಟಿ.ಹಳ್ಳಿಕೇರಿ, ರವೀಂದ್ರನಾಥ ಕೆ.(ಸಂ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩೯. ಸುಮಾ ಬಿ.ಯು., ೨೦೦೮, **ಡಾ|| ಬಿ ಆರ್ ಅಂಬೇಡ್ಕರ್ ವರ್ತಮಾನದೊಂದಿಗೆ ಮುಖಾಮುಖಿ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೪೦. ಸುಶೀಲಾ ರಾಯ್, ಅನು: ಜಿ ಕುಮಾರಪ್ಪ, ೨೦೦೯, **ನಿರಕ್ಷರಿಯ ಆತ್ಮಕತೆ**, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೧೪೧. ಹರ್ಡೇಕರ ಮಂಜಪ್ಪ, ೧೯೯೬, **ಹರ್ಡೇಕರ ಮಂಜಪ್ಪ**, ಪ್ರಗತಿ ಗ್ರಂಥ ಪ್ರಚಾರ ಸಮಿತಿ, ಬೆಳಗಾವಿ.

೧೪೨. ಹಾಲಪ್ಪ ಎನ್ ಅಸ್, ೨೦೦೭, **ಸಾಮಾನ್ಯನ ಸಂಕ್ರಮಣ**, ಆದಿಮ, ಕೋಲಾರ.

ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ